ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಪ್ರಶ್ನೆ

ಯು.ಆರ್. ಅನಂತಮೂರ್ತಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಪ್ರಶ್ನೆ

ಯು.ಆರ್. ಅನಂತಮೂರ್ತಿ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**PRASHNE -** (Kannada) A Collection of Short Stories by **Dr. U.R. Anantha Murthy**; Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XXII + ೧೬೮
ಬೆಲೆ : ರೂ. ೫೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**



## ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦



# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯು ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ


**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮುನ್ನುಡಿ

ಸಣ್ಣಕತೆಯ ತೀವ್ರ ರೀತಿಯ ಸೂಕ್ಷ್ಮವೇದಿತ್ವವನ್ನು ಪಡೆದುಕೊಂಡ ಮತ್ತು ಅದಕ್ಕೆ ಬಲಿಯಾದ ಈ ಯುಗದ ಒಂದು ಫಲ. ಈ ಸೂಕ್ಷ್ಮವೇದನೆ ಒಂದು ದಿಕ್ಕಿನಲ್ಲಿ ನಮ್ಮ ಅತ್ಯುತ್ತಮ ಕವಿಗಳ ಸ್ವಪ್ರಜ್ಞೆಯಾಗಿ, ಅಲ್ಲದೆ ಇನ್ನೊಂದು ದಿಕ್ಕಿನಲ್ಲಿ ಅಸಂಖ್ಯಾತ ಜನರ ದ್ವಂದ್ವ–ವ್ಯಕ್ತಿತ್ವ, ಚಿತ್ತೋನ್ಮಾದದಂತಹ ಮನೋವಿಕಾರಗಳಾಗಿ ಕಾಣಿಸಿಕೊಂಡಿವೆ. ಒಂದೇ ಮೂಲದಿಂದ ಉದ್ಭವವಾದ ಈ ವೈಪರೀತ್ಯಗಳು ಬೇರೆ ಬೇರೆಯಾಗಿಯೇ ಉಳಿಯಬೇಕೆಂದಿಲ್ಲ; ಒಂದು ಇನ್ನೊಂದಾಗಿ ಪರಿಣಮಿಸ ಬಹುದು, ಒಂದರ ವೇಷದಲ್ಲಿ ಇನ್ನೊಂದು ಪ್ರಚ್ಛನ್ನವಾಗಿ ಇರಬಹುದು. ಸೂಕ್ಷ್ಮ ವೇದನೆಯಿಂದ ಒದಗಿದ ಈ ಸ್ವಪ್ರಜ್ಞೆ ಮತ್ತು ಮನಸ್ಸಿನ ಅಸ್ವಸ್ಥತೆಗಳ ವಿಚಿತ್ರ ಮಿಶ್ರಣ ಸಾಹಿತಿಗೊಂದು ವಿಶೇಷ ಸಮಸ್ಯೆಯಾಗಿದೆ, ಸಾಹಿತ್ಯಕ್ಕೊಂದು ಹರಿತವಾದ ದೃಷ್ಟಿಯನ್ನು ತಂದಿದೆ. ಪರಿಣಾಮವಾಗಿ ಮೊಂಡುಬಿದ್ದ ಸಾಹಿತ್ಯ–ಪ್ರಾಕಾರಗಳ ಮತ್ತು ಭಾವನೆಗಳ ರೂಢಿಜಾಡ್ಯ ನಾಶವಾಗಿದೆ.

ಅನುಭವಸೂಕ್ಷ್ಮತೆ, ವಿಸ್ಮಯ, ಚೂಪಾದ ಬರವಣಿಗೆ– ಇವು ಸಣ್ಣ ಕತೆಯ ವೈಶಿಷ್ಟ್ಯಗಳು. ಆದರೆ ಈ ಸೂಕ್ಷ್ಮ ಗುಣಗಳನ್ನು ಪಡೆಯುವ ಏಕಮಾತ್ರ ಉದ್ದೇಶದಲ್ಲಿ ಸಣ್ಣ ಕತೆ, ಭಾವಸಂಕೀರ್ಣತೆಗಳನ್ನು ಅಲಕ್ಷಿಸಿದ, ಸರಳ ದೃಷ್ಟಿಯ, ಕೃತಕವಾದ, ನಾಜೂಕಿನ ಬರವಣಿಗೆಯಾಗಿಬಿಡುವುದು ಸಾಧ್ಯ. ಅಲ್ಪ ಉದ್ದೇಶ, ಆದ್ದರಿಂದ ಅಲ್ಪವಾದ ಸಿದ್ಧಿ– ಸಾಮಾನ್ಯವಾಗಿ ಸಣ್ಣಕತೆಯ ಮುಖ್ಯ ಪರಿಮಿತಿಗಳು. ಅಚ್ಚುಕಟ್ಟಿನ ಕೃತಕವಾದ ನವೀನತೆಯನ್ನು ತಯಾರಿಸುವ ಕುಶಲ ಕಲೆಗಾರಿಕೆಯಲ್ಲಿ ಕತೆಗಾರ ತನ್ನ ಅನುಭವದ ಗಾಢತೆಗೆ ಆಕಾರವನ್ನು ಕೊಡುವ ಮುಖ್ಯ ಪ್ರಯತ್ನವನ್ನು ಮರೆಯಬಹುದು; ನಾಜೂಕು, ನಯದ ಗುಣಗಳನ್ನಷ್ಟೆ ಯಥೇಚ್ಛವಾಗಿಸಿಕೊಂಡು, ಅವುಗಳ ನೆವವನ್ನೊಡ್ಡಿ, ವಿಮಶೆಯ ತೀಕ್ಷ್ಣ ಪರಿಶೀಲನೆಯಿಂದ ಜಾರಿಕೊಳ್ಳಬಹುದು. ಹೀಗೆ ಜೀವನದ ಅಂಚಿನಲ್ಲೇ ಸುಳಿದಾಡುವ ಸಣ್ಣಕತೆಯ ಸ್ವಭಾವದ ಬಗ್ಗೆ ಸಾಕಷ್ಟು ಚಿಂತನೆಯಾಗಿಲ್ಲ. ಸಣ್ಣಕತೆಯ ಕಾದಂಬರಿ ಹಾಗೂ ಕವಿತೆಯ ಜೊತೆ ನಿಲ್ಲಬೇಕಾದರೆ, ಅವುಗಳು ಎದುರಿಸುವ ಎಲ್ಲ ಸವಾಲನ್ನೂ ಎದುರಿಸಿ, ಬಾಳಿನ ಮೂಲ ದ್ರವ್ಯಗಳನ್ನೇ ವಸ್ತುಗಳನ್ನಾಗಿ ಮಾಡಿಕೊಳ್ಳಬಲ್ಲ ತಾಕತ್ತನ್ನು ಪಡೆಯಬೇಕು; ಪರಸ್ಪರ ವಿರುದ್ಧ ಮೌಲ್ಯಗಳಾದ ಸಮಗ್ರತೆ ಮತ್ತು ಸಾವಯವ ಸತ್ವಪೂರ್ಣತೆಗಳ ಹೊಂದಾಣಿಕೆಯನ್ನು ತಂದುಕೊಳ್ಳಬೇಕು.



ಈ ದೃಷ್ಟಿಯಿಂದ ನೋಡಿದರೆ ಸಣ್ಣಕತೆಯ ಪ್ರಾಕಾರವನ್ನು ಜೀವನದ ದಟ್ಟವಾದ ಅನುಭವಗಳ ಅಭಿವ್ಯಕ್ತಿಗೆ ಒಗ್ಗಿಸಿಕೊಳ್ಳುವುದರಲ್ಲಿ ಮತ್ತು ಕಥನಕ್ರಮದ ನಿಷ್ಠುರತೆಯಲ್ಲಿ ಶ್ರೀ ಅನಂತಮೂರ್ತಿಯವರ ಕತೆಗಳ ಪ್ರಾಮುಖ್ಯವಿದೆ. ಇವರ ಉತ್ತಮ ಬರವಣಿಗೆಯಲ್ಲಿ ಜೀವನಾನುಭವ ಸಂಪೂರ್ಣ ಆಘಾತವನ್ನು ಧೈರ್ಯವಾಗಿ ಎದುರಿಸುವ ಗುಣ ಕಾಣುತ್ತದೆ. ಸಣ್ಣಕತೆಗಳ ವಿಮರ್ಶೆಯಲ್ಲಿ ಚರ್ವಿತವರ್ವಣವಾದ ಸಂಕ್ಷಿಪ್ತತೆ ಅಥವಾ ಏಕತೆಯ ನೆವದಲ್ಲಿ ಯಾವ ರೀತಿಯ ಕಣ್ಣುಮುಚ್ಚಾಲೆಯನ್ನೂ ಈ ಕತೆಗಾರರು ಆಡುವದಿಲ್ಲ. ಅಂದರೆ ಇವರ ಯಶಸ್ಸು ಎಲ್ಲ ಕತೆಗಳಲ್ಲೂ ಒಂದೇ ದರ್ಜೆಯದೆಂದಲ್ಲ. ತುಳಿದ ಜಾಡನ್ನೇ ತುಳಿಯದ ಪ್ರಯೋಗಶೀಲ ಲೇಖಕರಲ್ಲಿ ಇದು ಸಹಜವೆ. ಆದರೆ ಇವರು ಅನುಭವದ ಜೊತೆ ಮತ್ತು ಭಾಷೆಯ ಜೊತೆ ನಡೆಸುವ ಸೆಣಸಾಟ ಯಾವಾಗಲೂ ಕುತೂಹಲ ಕೆರಳಿಸುತ್ತದೆ; ಇವರ ಸೋಲು ಪ್ರಗತಿಯ ದಿಕ್ಕಿನಲ್ಲಿಟ್ಟ ಹೆಜ್ಜೆಯೆನ್ನಿಸುತ್ತದೆ.

ಈ ಸಂಕಲನದ ಕತೆಗಳಲ್ಲಿ ಅನುಭವದ ಮೊನಚು ಮತ್ತು ಸಮಗ್ರತೆಗಳು ವಿವಿಧ ಮಟ್ಟಗಳಲ್ಲಿ ಬೆಸೆದುಕೊಳ್ಳುತ್ತವೆ. ಕಥನರೀತಿಯಲ್ಲಿ ಸಾಂಕೇತಿಕತೆ ಮತ್ತು ವಾಸ್ತವಿಕತೆಯನ್ನು ಒಮ್ಮೆಗೇ ತರುವ ಪ್ರಯತ್ನ ಕಾಣುತ್ತದೆ. ಉದಾಹರಣೆಗೆ, 'ಪ್ರಕೃತಿ'ಯಲ್ಲಿ ಸಂಕಪ್ಪಯ್ಯ ಹುಲಿಯನ್ನು ಎದುರಾಗುವ ಸಂದರ್ಭ:

"ಅಬ್ಬರಿಯ ತಳದಲ್ಲಿ ಕಂತಿದ್ದ ಸಂಕಪ್ಪಯ್ಯನ ಕಣ್ಣುಗಳು ಚಿಕ್ಕದಾದುವು, ದೊಡ್ಡದಾಗಿ ಅರಳಿದವು, ಮತ್ತೆ ನಿಧಾನವಾಗಿ ಮುಚ್ಚಿದವು. ಕಂಡದ್ದನ್ನು ಮೈತುಂಬ ತುಂಬಿಕೊಂಡು ನಡುಗಿದರು. ಮತ್ತೆ ಕಣ್ಣು ತೆರೆದು ನೇರವಾಗಿ, ನಿರ್ಭಯವಾಗಿ ನೋಡಿದರು. ಕೆಂಡದಂತೆ ಉರಿಯುತ್ತ ಅಬ್ಬರಿಯ ತಳದಲ್ಲಿ ಮಲಗಿದ್ದ ಹುಲಿಯೂ ಅವರನ್ನು ನೋಡಿತು. ಹೌದು. ಅವರ ಹಾಗೇ ಕಣ್ಣಗಲಿಸಿ–ನಿರ್ಭಯವಾಗಿ– ಯಾವ ಎಗ್ಗಿಲ್ಲದೆ, ನಿಶ್ಚಯ– ಅದು ನಿಶ್ಚರ್ಯ...

–ಇದು ಒಂದು ಅಪೂರ್ವ ಭೇಟಿಯ ವಾಸ್ತವಿಕ ವರದಿಯೇನೋ ನಿಜ. ಆದರೆ ಈ ವಾಸ್ತವಿಕತೆಯಲ್ಲೇ ಸಂಕೇತಾರ್ಥಗಳು ಇಣುಕುತ್ತವೆ. ಓದುತ್ತಿರುವ ಹಾಗೆ ಹುಲಿ ಬರಿಯ ಹುಲಿಯಾಗಿ ಉಳಿಯದೆ ಸಂಕಪ್ಪಯನ ಪ್ರಚಂಡ ಇಚ್ಛಾ ಶಕ್ತಿಯ ಅವತಾರವಾಗಿಬಿಡುತ್ತದೆ. ಈ ಭೇಟಿಯು ತರುವ ಸ್ತಬ್ಧಭಾವ ಗಮನಾರ್ಹ ವಾಗಿದೆ.

ಹಾಗೆಯೇ 'ಘಟಶ್ರಾದ್ಧ'ದಲ್ಲಿ ಇಷ್ಟೇ ಶಕ್ತಿಪೂರ್ಣವಾದ ಆದರೆ ಇನ್ನೂ ನಿರ್ದಿಷ್ಟವಾದ ಸಾಂಕೇತಿಕತೆಯಿದೆ. ನಾಣಿ ಮತ್ತು ಶಾಸ್ತ್ರಿಯ ಸಂಬಂಧದ ಘಟನೆಗಳು ಯಮುನಕ್ಕ ಮತ್ತು ಮೇಷ್ಟ್ರರ ಸಂಬಂಧದ ಮುಖ್ಯ ವೃತ್ತಕ್ಕೆ ಸಾಂಕೇತಿಕ ಕಥನ ವಾಗುತ್ತದೆ. ಯಮುನಕ್ಕ ಪತಿತಳಾದ, ಕ್ರಮೇಣ ದುಷ್ಟಶಕ್ತಿಗಳಿಗೆ ಸಂಪೂರ್ಣ ಶರಣಾಗತಳಾಗುವ ಜೀವನದ ಭೀಕರ ರುದ್ರನಾಟಕವನ್ನು, ನಾಣಿಯ ಮುಗ್ಧತೆಯನ್ನು

ಶಾಸ್ತ್ರಿ ನಾಶಮಾಡಲು ಪ್ರಯತ್ನಿಸುವ ಕಥೆಯಲ್ಲಿಯೂ ಸೂಚ್ಯವಾಗಿ ಕಾಣಬಹುದು. ಶಾಸ್ತ್ರಿ ತನಗಿಂತ ಕಿರಿಯನಾದ ನಾಣಿಯನ್ನು ಪ್ರಲೋಭಿಸುತ್ತಾನೆ, ಕಿಚಾಯಿಸುತ್ತಾನೆ, ದೇವರ ಪ್ರತಿಮೆಯನ್ನು ಅವನಿಂದ ಮುಟ್ಟಿಸಿ ಅವನನ್ನು ವಶಪಡಿಸಿಕೊಳ್ಳುತ್ತಾನೆ. ನಾಣಿ ಮತ್ತು ಶಾಸ್ತ್ರಿಯ ಸಂಬಂಧದ ಈ ವಿಕೃತಿ ಕೊನೆಯಲ್ಲಿ ವಿಕೃತವಾಗುವ ಯಮುನಕ್ಕ, ಮೇಷ್ಟ್ರರ ಸಂಬಂಧದ ಮೇಲೆ ವಿಶೇಷ ಬೆಳಕನ್ನು ಚೆಲ್ಲುತ್ತದೆ. ಈ ಸಂಬಂಧದ ಕೇಂದ್ರ ಸಂಗತಿ ಬಲಾತ್ಕಾರದ ಗರ್ಭಪಾತ. ಮೂಢನಂಬಿಕೆಯ ಚಿತ್ರಣ ಬಾಲಸಹಜವಾದ ನಾಣಿಯ ನಡುವಳಿಕೆಯಲ್ಲಿ ಮಾತ್ರ ನೇರವಾಗಿ ಕಥಿತವಾದರೆ ಯಮುನಕ್ಕನ ಜೀವನದಲ್ಲಿ ಅದು ಸಾಂಕೇತಿಕವಾಗುತ್ತದೆ: ಅವಳು ಸಮಾಜದ ಮೂಢನಂಬಿಕೆಗೆ ಬಲಿಯಾಗುತ್ತಾಳೆ. ಕೊನೆಯಲ್ಲಿ ವೃದ್ಧರಾದ ಉಡುಪರು ಸಣ್ಣ ಹುಡುಗಿಯೊಬ್ಬಳನ್ನು ಮದುವೆಯಾಗುವುದು ವಿಕೃತವೂ ಅನ್ಯಾಯವೂ ಆದರೂ ಈ ಕಲ್ಯಾಣ ಸಮಾಜದ ಮೂಢನಂಬಿಕೆಯನ್ನು ತೃಪ್ತಿಪಡಿಸಲು ಅವಶ್ಯಕವಾದದ್ದು, ಆದ್ದರಿಂದ ಗ್ರಾಹ್ಯವಾದದ್ದು ಎಂಬುದು ಧ್ವನಿತವಾಗುತ್ತದೆ. ಹೀಗೆ ಮೂಢನಂಬಿಕೆ ಮೂರು ಮಟ್ಟಗಳಲ್ಲಿ ಪ್ರಮುಖ ಪಾತ್ರ ವಹಿಸುವುದರ ಸಾಂಕೇತಿಕ ನಿರೂಪಣೆ ಕಥೆಯಲ್ಲಿ ಬಂದಿದೆ.

ಶ್ರೀ ಅನಂತಮೂರ್ತಿಯವರು ತಮ್ಮ ಸಣ್ಣಕತೆಗಳಲ್ಲಿ ಜೀವನಾನುಭವದ ಒಳ–ಹೊರಗುಗಳನ್ನು ಮನೋವಿಶ್ಲೇಷಣೆ ಮತ್ತು ಸೂಕ್ಷ್ಮಾವಲೋಕನದ ಮಟ್ಟ ಗಳಲ್ಲಿಯೂ ಪ್ರತ್ಯಕ್ಷವಾಗಿಸಿಕೊಳ್ಳಲು ಹೆಣಗುತ್ತಾರೆ. ಹೀಗೆ ಒಳ–ಹೊರ ಕ್ರಿಯೆಗಳನ್ನು ಒಟ್ಟಿಗೆ ಬೆಸೆಯುವ ಪ್ರಯತ್ನಕ್ಕೆ 'ಪ್ರಶ್ನೆ' ಮತ್ತು 'ಕಾರ್ತೀಕ' ಉತ್ತಮ ಉದಾಹರಣೆಗಳು. ಈ ವಿಧಾನ 'ಪ್ರಶ್ನೆ'ಯಲ್ಲಿ ಕೆಲವು ಕಡೆ ಅತಿರೇಕಕ್ಕೆ ಹೋಗಿದೆ; ಆದರೆ 'ಕಾರ್ತೀಕ'ದಲ್ಲಿ ಅನುಭವಕ್ಕೆ ತಕ್ಕದಾದ ಶ್ರುತಿಸ್ವನಗಳ ಹದ್ದಿನಲ್ಲಿದೆ. ಈ ವಿಧಾನಕ್ಕೆ ಸಹಜವಾದ ಅತಿ ಕುಶಲತೆಯ ಜೊತೆಗೇ, ಶ್ರಮಸಾಧಿತ ಆತ್ಮನಿರೀಕ್ಷಣೆಯಿರುವಲ್ಲಿ ತನ್ನನ್ನು ಕಂಡು ತಾನೇ ನಗುವ ಹಾಸ್ಯ– ಅಪಹಾಸ್ಯ ಕೂಡ– ಬರುತ್ತದೆ. 'ಪ್ರಶ್ನೆ'ಯಲ್ಲಿ ರಂಗನಾಥನ ಆತ್ಮನಿರೀಕ್ಷಣೆ 'ಲಾರೆನ್ಸಿ'ನ ಸ್ಪಷ್ಟ ಪ್ರತಿಧ್ವನಿಗಳು ಕೇಳಿಸುವಷ್ಟರ ಮಟ್ಟಿಗೆ ಬರಿ ಬುದ್ಧಿ ಜನ್ಯ ಬರವಣಿಗೆಯಾಗಿಬಿಡುತ್ತದೆ:

"ಶಾರದೆ ಬಟ್ಟೆ ಬಿಚ್ಚಿದರೂ ಬೆತ್ತಲೆಯಾಗುವದಿಲ್ಲ. ಬಲಿಗೆ ಹೋಗುವ ಪ್ರಾಣಿಯಂತೆ ಕಾಣುತ್ತಾಳೆ. ಲಚ್ಚಿ ಬಟ್ಟೆ ತೊಟ್ಟರೂ ಬೆತ್ತಲೆ. ಒಬ್ಬಳನ್ನು ಹಗಲಿಗೆಂದು, ಆತ್ಮದ ಸಹವಾಸಕ್ಕೆಂದು ದೇವರು ಸೃಷ್ಟಿಸಿದ; ಇನ್ನೊಬ್ಬಳನ್ನು ಕತ್ತಲಿನ ಸುಖಕ್ಕೆಂದು ಸೃಷ್ಟಿಸಿದ..."

ಆದರೆ ಇದನ್ನು ತಿದ್ದಿ ಒಟ್ಟು ದೃಷ್ಟಿಯನ್ನು ಕಾಯುವ ಯಥಾದರ್ಶನಕ್ಕೆ ಅಗತ್ಯವಾದ ವ್ಯಂಗ್ಯ ಚಿಂತನೆ ಕತೆಯಲ್ಲಿದೆ. ಗೋಪಾಲನದು ಮುಖ್ಯವಾಗಿ ರಂಗನಾಥನನ್ನು ಖಂಡಿಸುವ ಕೆಲಸ:



"ತಿಂಡಿಢ, ತಿಂಡಿಢ, ತಿಂಡಿಢ... ಈಗ ಯಾವ ಪುಸ್ತಕ ಓದುತ್ತಿದ್ದೀ ಹೇಳು. ಲಾರೆನ್ಸ್ ಓದಲು ಪ್ರಾರಂಭಿಸಿದಿಯಾ?... ಅದರ ಬದಲು ಹೆರಿಗೆ ಆಸ್ಪತ್ರೆಗೆ ಒಂದು ಸಾರಿ ಹೋಗಿ ಬಂದರೆ ಗೊತ್ತಾಗುತ್ತೆ... ಔಷಧಿ ಸೀಸೆಗಳನ್ನು ಹಿಡಿದು ಕ್ಯೂ ನಿಂತ ಬಸುರಿ ಹೆಂಗಸರನ್ನು ನೋಡಿದರೆ ನಿನ್ನ ಪಿತ್ಥವಷ್ಟು ಇಳಿದೀತು..."

ಆದರೆ ಅತಿಬುದ್ಧಿಜನ್ಯತೆಯ ಭಾವನೆಗಳನ್ನು ತಿದ್ದುವ ಪ್ರಯತ್ನವನ್ನು ಬರಿ ಹೇಳಿಕೆಗಳ ಮೂಲಕ ಮಾಡುವುದರಿಂದ ಈ ವಾದ–ವಿವಾದದ ಮಾರ್ಗ ಸಂಪೂರ್ಣ ಯಶಸ್ವಿಯಾಗುವುದಿಲ್ಲ. ಅಲ್ಲದೆ ಗೋಪಾಲನ ಪಾತ್ರ ಖಂಡಿಸುವ, ತಿದ್ದುವ ಕಾರ್ಯವನ್ನು ಮಾಡುವಷ್ಟಕ್ಕೆ ಮಾತ್ರ ಪರಿಮಿತವಾಗಿದೆ; ಅವನಿಗೆ ಕತೆಯಲ್ಲಿ ಬೇರೆ ಪ್ರಮಾದಗಳಿಲ್ಲ; ರಂಗನಾಥನಿಗೆ ಪ್ರತಿಪಾತ್ರವಾಗಿ ಮಾತ್ರ ಬರುತ್ತಾನೆ. ಆದರೆ ಕತೆಗಾರರು ಹೇಗೆ ಅನುಭವವನ್ನು ಹತೋಟಿಯಲ್ಲಿಟ್ಟು, ತೂಗಿ ನೋಡಿ, ಪರ–ವಿರೋಧಗಳಿಂದ ವಿವೇಚಿಸಿ, ಅದರ ಸತ್ಯವನ್ನು ಒರೆಗೆ ಹಚ್ಚಿ ಪರಾಮರ್ಶಿಸುವ ಸತತ ಹೋರಾಟದಲ್ಲಿ ತೊಡಗಿರುತ್ತಾರೆಂಬುದಕ್ಕೆ ಮೇಲಿನ ಉದಾಹರಣೆ ದ್ಯೋತಕವಾಗಿದೆ. ಚುರುಕುಗೊಳಿಸುವ, ಶುದ್ಧಗೊಳಿಸುವ ರೀತಿಯ ಪ್ರಮಾಣಿಕತೆ ಈ ಲೇಕಕರದ್ದು. 'ಪ್ರಸ್ತ'ದಲ್ಲಿ ಅತಿ ಸಲೀಸಾದ ಬೆಳವಣಿಗೆಯನ್ನು ಸನ್ನಿವೇಶದ ನಿರ್ದಯ ಅಣಕ ಗಟ್ಟಿ ನೆಲಕ್ಕೆಳೆದು ತರುತ್ತದೆ. ಸೀತಕ್ಕ ಮತ್ತು ಶೀನಪ್ಪಯ್ಯ ರಾಜಿಯಾಗಿದ್ದಾರೆ. ಅವನ ಕಾಲನ್ನು ಇವಳು ಒತ್ತುತ್ತಿದ್ದಾಳೆ. ರಂಗ ಸಜ್ಜಿತವಾಗಿದೆ– ಈ ಸನ್ನಿವೇಶ ವಿಳಂಬವಾದರೂ ಮೃದುವಾದ ಪ್ರಣಯದಲ್ಲಿ ಅಂತ್ಯವಾಗ ಬಹುದು. ಅಥವಾ ಸಮಾಜ ಪದ್ಧತಿಯ ಖಂಡನೆಗೆ ಅವಕಾಶಮಾಡಿಕೊಡು ವಂತಹ ಸಾಧನವಾಗಬಹುದು. ಆದರೆ ನಡೆಯುವ ಸಂಗತಿ ಮಾತ್ರ ಅಷ್ಟು ಸರಳವಾಗಿರದೆ ಹೆಚ್ಚು ಸಂಕೀರ್ಣವೂ ಪ್ರಾಮಾಣಿಕವೂ ಆಗಿದೆ. ಕತೆಗಾರರು ನಡೆದದ್ದನ್ನಷ್ಟೇ ಹೇಳುತ್ತಾರೆ:

"ತಾನು ಇಟ್ಟುಕೊಂಡ ಸೂಳೆಗಿಂತ ಈ ಸೀತಕ್ಕ ತುಂಬ ಚಿಕ್ಕವಳಲ್ಲದೆ, ಇನ್ನೂ ಮುಟ್ಟಾಗುತ್ತಿರಬಹುದು ಇವಳು ಎಂದುಕೊಂಡು ಶೀನಪ್ಪಯ್ಯ ಮೆತ್ತಗೆ ಸೀತಕ್ಕನ ಕೈಹಿಡಿದು ಎಳೆಯಹೋದರು... ಸೀತಕ್ಕ ಒದ್ದುಕೊಳ್ಳುತ್ತ ಅಲ್ಲಿಂದ ನಡುಮನೆಗೆ ಓಡಿದಳು."

ರೂಢಿಜಾಡ್ಯವಾಗಿಬಿಟ್ಟಿರುವ ಪತಿವಂಚಿತ ಪತ್ನಿಯ ಭಾವಾತಿರೇಕವನ್ನಿಲ್ಲಿ ಲೇಖಕರು ತೊಡೆದುಹಾಕಿದ್ದಾರೆ. ಸೀತಕ್ಕ ಒದ್ದುಕೊಳ್ಳುತ್ತ ನಡುಮನೆಗೆ ಓಡಿದಳೆಂಬ ಮಾತಿನಲ್ಲಿ ಕೆಚ್ಚಲು ಬತ್ತಿದ ಹಸುವಿನ ಪ್ರತಿಕ್ರಿಯೆಯಿದೆ. ನಮ್ಮ ಸಹಾನುಭೂತಿ, ತೀರ್ಪುಗಳು ಪರಾಮರ್ಶೆಗೆ ಒಳಗಾಗಬೇಕಾಗುತ್ತವೆ.

ಪುರಾಣ ಮತ್ತು ವಿಧ್ಯುಕ್ತ ಕ್ರಿಯೆಗಳು (ಸಂಸ್ಕಾರಶಾಸ್ತ್ರ ಅಥವಾ ಆಚಾರ ವಿಧಿಗಳು) ಶ್ರೀ ಅನಂತಮೂರ್ತಿಯವರು ಉಪಯೋಗಿಸಿಕೊಳ್ಳುವ ಇನ್ನೆರಡು

ಕ್ಷೇತ್ರಗಳು. ತಮ್ಮ ಕತೆಗಳನ್ನು ಮಲೆನಾಡಿನ ಜೀವನದ ಪರಿಸರದಲ್ಲಿ ಮೂರ್ತಗೊಳಿಸುವುದರ ಜೊತೆಗೆ ಕಾಲಾತೀತವಾದ ಪರಂಪರೆಯ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನದಲ್ಲಿ ಇವುಗಳ ಉಪಯೋಗ ಕಂಡುಬರುತ್ತದೆ. 'ಪ್ರಶ್ನೆ'ಯಲ್ಲಿ ಸಾಕುಂತಲ, ಯಯಾತಿ ಉಪಾಖ್ಯಾನಗಳನ್ನು, ನಿದ್ರಿಸಿದ ರಾಜಕುಮಾರಿಯ ಜಾನಪದ ಕಥೆಯನ್ನು ಉಪಯೋಗಿಸಿಕೊಂಡಂತೆಯೇ ವಾಮಾಚಾರಗಳನ್ನು ಬಳಸಿಕೊಂಡಿದ್ದಾರೆ. ಈ ಕಥೆಯಲ್ಲಿ ಲೇಖಕರು ತಮ್ಮ ಎಲ್ಲ ಶಕ್ತಿಯನ್ನು ದುಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆಂದರೆ ಇಲ್ಲಿ ಅಪ್ರಸ್ತುತವಾಗಲಾರದು. 'ಪ್ರಶ್ನೆ' ಸುಯೋಜಿತವಾದ ಒಳ್ಳೆ ಕಥೆಯಾದರೂ ಲೇಖಕ ಇಲ್ಲಿ ತನ್ನ ಶಕ್ತಿಪ್ರದಶ್ನ ಮಾಡಿಕೊಂಡಿದ್ದಾರೆ ಎನ್ನಿಸುತ್ತದೆ. ಕಥೆಯ ಯಶಸ್ಸಿರುವುದು ಅದರ ಜಟಿಲವಾದ ಬೌದ್ಧಿಕ ವ್ಯಾಪಾರದಲ್ಲಿ, ಜೀವನದ ಮತ್ತು ಚಿಂತನೆಯ ಹೊಸ ರಂಗಗಳನ್ನು ಅನ್ವೇಷಿಸುವ ಯತ್ನದಲ್ಲಿ, ವೃದ್ಧಾಪ್ಯ ಮತ್ತು ಯೌವನಗಳ ನಡುವಿನ ಸಂಬಂಧಗಳ ಮೂಲಕ ಭೂತ ವರ್ತಮಾನಗಳ ಸಂಬಂಧವನ್ನು ವ್ಯಕ್ತಗೊಳಿಸುವುದರಲ್ಲಿ ಈ ಸಂಕಲನದ ಕಥೆಗಳಲ್ಲೆಲ್ಲ ನಗರ ಪ್ರಜ್ಞೆಯಿರುವ ಪ್ರಮುಖ ವ್ಯಕ್ತಿಯೆಂದರೆ ರಂಗನಾಥ ಎಂಬುದು ಗಮನಾರ್ಹ ಸಂಗತಿ. ಆದರೆ ಈ ಗುಣಗಳ ಚಿತ್ರಣ ಸ್ವಲ್ಪ 'ಅತಿ'ಗೆ ಹೋಗುವದೇ ಕಥೆಯ ಸೋಲಿಗೆ ಕಾರಣ. ಸಹಜವಾದ ಸಂಕೀರ್ಣತೆ ಯಾವುದು ಮತ್ತು ಅನ್ಯಪ್ರಾಪ್ತವೂ ಕೃತಕವೂ ಆದದ್ದು ಯಾವುದು ಎನ್ನುವುದರ ಬಗ್ಗೆ ಕೆಲವು ಕಡೆ ಗೊಂದಲ ಹುಟ್ಟುತ್ತದೆ.

ಪುರಾಣಕ್ಕಿಂತ ವಿಧ್ಯುಕ್ತ ಕ್ರಿಯೆಗಳ ಉಪಯೋಗ ಶ್ರೀಅನಂತಮೂರ್ತಿಯವರ ಕಥೆಗಳಲ್ಲಿ ಹೆಚ್ಚು ಸತ್ವಪೂರ್ಣವಾಗಿದೆ. ಪುರಾಣದ ಉಪಯೋಗ 'ಪ್ರಶ್ನೆ'ಯಲ್ಲಿ ಅಪೂರ್ಣವಾಗಿದೆ; ಪ್ರಜ್ಞಾಪ್ರವಾಹಿನಿಗಷ್ಟೇ ಪರಿಮಿತವಾಗಿದೆ. ಆದರೆ ವಿಧ್ಯುಕ್ತ ಕ್ರಿಯೆಗಳು ಕಥೆಗಳ ಹೆಸರೇ ಸೂಚಿಸುವಂತೆ 'ಪ್ರಸ್ತ' ಮತ್ತು 'ಘಟಶ್ರಾದ್ಧ'ದ ರೂಪುರೇಷೆಯಾಗಿವೆ. ಬಿಡಿಯಾದ ಘಟನೆಯನ್ನು ವಿಧ್ಯುಕ್ತವಾದ ಶಾಶ್ವತ ಘಟನೆಯ ಜೊತೆ ಸಮತೂಗಿಸಿ ಅಂಕೆಯಲ್ಲಿಡುವ ಸಾಧನ ಇದು. ವಿಧ್ಯುಕ್ತಕ್ರಿಯೆ ವಿಡಂಬನೆಗೊಂದು ಹದವನ್ನು ತರಲು ಬರುವುದೂ ಉಂಟು. ಬುದ್ಧ ಅರಮನೆಯನ್ನು ತ್ಯಜಿಸಿ ಮಧ್ಯರಾತ್ರೆ ಹೊರಟ ಕ್ರಮದ ಹಿನ್ನೆಲೆಯಲ್ಲಿ 'ಖೋಜರಾಜ'ದ ಈ ಸಂಗತಿ ಬರುತ್ತದೆ. ರಾಜಣ್ಣ ತನ್ನ ದ್ವಂದ್ವವನ್ನು ಕಳೆದುಕೊಳ್ಳಲೆಂದು, ಕಾಮ–ಪ್ರೇಮದ ಸಹಜ ಜೀವನವನ್ನು ನಡೆಸಲೆಂದು, ಸೂಟು–ಕೇಸಿಗೆ ಯಾವುದನ್ನೂ ಮರೆಯದೆ ತುಂಬಿ ಮಧ್ಯರಾತ್ರೆ ಹೊರಡುತ್ತಾನೆ.

"...ಹತ್ತು ವರ್ಷ ನಿಂತಿದ್ದು ನಡೆಯತೊಡಗುವ ವಾಚನ್ನು ನೋಡಿದ. ಅರ್ಧ ಘಂಟೆ ನಡೆದರೆ ರೈಲ್ವೆಸ್ಟೇಷನ್ನು. ಹನ್ನೊಂದುವರೆಗೆ ಎದ್ದುನಿಂತ. ಬೂಟ್ಸ್‌ಲೇಸು ಬಿಗಿದು, ಕನ್ನಡಿ ನೋಡಿ, ಕ್ರಾಪನ್ನು ತಿದ್ದಿ– ಪ್ಲಾಸ್ಟರ್ ಆಫ್ ಪ್ಯಾರೀಸು ಬುದ್ಧಕನ ಕಡೆಗೊಮ್ಮೆ ಹೊರಳಿ– ಓದಿದ ಕವನವೊಂದನ್ನು ನೆನೆದು ಹೊಸಲು ದಾಟಿ, ಬಾಗಿಲಿಗೆ ಬೀಗ ಬಲವಾಗಿ ಹಾಕಿ (ಬೀಗ ಬಿದ್ದಿತೋ ಇಲ್ಲವೊ ಎಂದು ಇನ್ನೊಮ್ಮೆ ಪರೀಕ್ಷಿಸಿ) ಹೊರ...! ಹೊರಟ ಹೊರಟೇ ಹೊರಟ ಹೊರಟನೆತ್ತೊ!..."



ಹೀಗೆಯೇ 'ಖೋಜರಾಜ'ದಲ್ಲಿ ವಾಚನ್ನು ರಿಪೇರಿ ಮಾಡುವ ವರ್ಣನ–ಸಂಗತವಾಗಿ ರಾಜಣ್ಣ ತನ್ನೊಳಗೆ ಬಿಚ್ಚುವ ಜೋಡಿಸುವ ರಿಪೇರಿ–ವಿಡಂಬನಾತ್ಮಕ ವಿಧ್ಯುಕ್ತಕ್ರಿಯೆಯಾಗುತ್ತದೆ. ಎಲ್ಲವುದಕ್ಕಿಂತ ಹೆಚ್ಚಾಗಿ 'ಕಾರ್ತೀಕ' ವಿಧ್ಯುಕ್ತಕ್ರಿಯೆಗಳ ಅತ್ಯಂತ ಸಫಲ ಉಪಯೋಗವನ್ನು ಮಾಡಿಕೊಳ್ಳುತ್ತದೆ; ದೀಪಾವಳಿಯಶಾಸ್ತ್ರ ಪರಂಪರೆಯಲ್ಲಿ ಅಡಗಿದ ಕಲ್ಯಾಣಶಕ್ತಿಯ ಸೂಚನೆಯನ್ನು ಕಥೆಯ ಲೋಕಕ್ಕೆ ತರುತ್ತದೆ. ಎಳೆಯವನಾದ ರಾಘವನ ಭಾವನೆಗಳು ಘರ್ಷಣೆಗೆ ಸಿಕ್ಕಿವೆ; ತಾಯಿ ಮತ್ತು ರಾಗಜ್ಜನ ನಡುವೆ ಅವನ ನಿಷ್ಠೆ ತುಯ್ಯುತ್ತದೆ. ರಾತ್ರಿ ಊಟದ ಹೊತ್ತಿಗೆ ಪರಿಸ್ಥಿತಿ ವಿಕೋಪಕ್ಕಿಟ್ಟುಕೊಳ್ಳುತ್ತದೆ. ಲೇಖಕರು ಮಧ್ಯಮ ವರ್ಗದ ಕುಟುಂಬಗಳಲ್ಲಿ ಸಾಮಾನ್ಯವಾದ ಭಾವೋದ್ರೇಕದ ರಂಪವನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ರಾಗಜ್ಜನ ಎಂಜಲಾದ ಬಣ್ಣದ ಸೌತೆ ಹೋಳನ್ನು ರಾಘವ ತಿನ್ನಲು ಹೋದಾಗ ತಾಯಿ ಬೇಡವೆಂದು ಕಣ್ಣುಸನ್ನೆ ಮಾಡುವುದು, ಅಜ್ಜಿ ಅದಕ್ಕೆ ರೇಗುವುದು, ಅಜ್ಜ ಆಪೋಶನ ತೆಗೆದುಕೊಂಡು ಊಟ ಬಿಟ್ಟೇಳುವುದು, ತಂದೆ ಬಂದು ರೂಲುದೊಣ್ಣೆಯಲ್ಲಿ ತಲೆ ಚಚ್ಚಿಕೊಳ್ಳುವುದು, ತಾಯಿ ಬಾವಿಗೆ ಹಾರುತ್ತೇನೆಂದು ಓಡುವುದು– ದೀರ್ಘ ವಾಕ್ಯಗಳಲ್ಲಿ ವೇಗವಾಗಿ ಚಿತ್ರಿತವಾಗಿದೆ. ಬಣ್ಣದ ಸೌತೆ–ಹೋಳಿನ ನೆವದಿಂದ ಶುರುವಾಗಿ ಕುಟುಂಬ ಒಡೆದು ವಿಕ್ಷುಬ್ಧವಾಗುತ್ತದೆ. ಸದಾ ಗೊಣಗುವ ಈ ವರ್ಗದ ಜನರ ಸಪ್ಪೆ ಜೀವನದಲ್ಲಿ ಇಂತಹ ರಾದ್ಧಾಂತಗಳು ಮಾತ್ರ ಆವೇಶಕ್ಕೆ ಎಡೆಮಾಡಿಕೊಡುತ್ತವೆ. ಕೊನೆಗೆ ರಾಘವ ಮತ್ತು ಅವನ ತಾಯಿ ಇಬ್ಬರೇ ಉಳಿಯುತ್ತಾರೆ. ಆರಿದ ಅನ್ನದ ಮೇಲೆ ಕೈಯಿಟ್ಟು ದಿಗ್ಭ್ರಾಂತನಾಗಿ ರಾಘವ ಕೂತಿರಲು ಅವನ ತಾಯಿ ಭಣಗುಟ್ಟುವ ಮೌನದಲ್ಲಿ ಎಣ್ಣಿ ಎಣ್ಣಿ ಅಳುತ್ತಾಳೆ. ಅದರ ಮಾರನೆಯ ಪ್ರಾತಃಕಾಲ ದೀಪಾವಳಿ. ಮನೆಮಂದಿಗೆಲ್ಲ ಎಣ್ಣೆಶಾಸ್ತ್ರ ಅಭ್ಯಂಜನವಾಗಬೇಕು– ಶುಭಸೂಚಕ ವಿಧ್ಯುಕ್ತ ಶಾಸ್ತ್ರಗಳು ಇವು. ರಾಘವನ ತಾಯಿ ನಸುಕಿನಲ್ಲೆದ್ದು ಎಲ್ಲರನ್ನೂ ಎಬ್ಬಿಸುತ್ತಾಳೆ. ಹಿಂದಿನ ರಾತ್ರೆಯ ಕಹಿ ಅವಳ ನಡತೆಯಲ್ಲಿ ಕಾಣಿಸುವುದಿಲ್ಲ; ಪರಸ್ಪರ ಕೋಪತಾಪಗಳು ಮರೆಯಲಾಗಿವೆ. ಅಥವಾ ಮುಂದೆ ಹಾಕಲಾಗಿವೆ. ಇವತ್ತು ಜಗಳಾಡುವುದು ಅಶುಭ. ಕಥೆ ಇಲ್ಲಿಂದ ಇನ್ನೊಂದು ದಿಕ್ಕಿಗೆ ಹರಿದು ಈ ಶುಭದ ಅಂಶವನ್ನು ಬೆಳೆಸಿಕೊಂಡು ಹೋಗುತ್ತದೆ. ಕೊನೆಗೆ ಬಾಲಕನ ಉತ್ಕಟ ಆನಂದದ ಅನುಭವದಲ್ಲಿ ಶಿಖರ ಮುಟ್ಟುತ್ತದೆ.

'ಪ್ರಸ್ತ' ಮತ್ತು 'ಘಟಶ್ರಾದ್ಧ'ದ ಘಟನೆಗಳಿಗೊಂದು ಆಕಾರ ಬರುವುದು ವಿಧ್ಯುಕ್ತಕ್ರಿಯೆಯಿಂದ 'ಪ್ರಸ್ತ'ದಲ್ಲಿ ನಿಷೇಕ–ಶಾಸ್ತ್ರದ ಸುತ್ತ ಗಂಡುಹೆಣ್ಣಿನ ವಿವಿಧ

ರೀತಿಯ ಸಂಬಂಧಗಳನ್ನು ಹೆಣೆಯುವದು ಬರಿ ಚಮತ್ಕಾರವಾಗಿಬಿಡುತ್ತದೆ. ಆದರೆ 'ಘಟಶ್ರಾದ್ಧ'ದಲ್ಲಿ ಶ್ರಾದ್ಧಕರ್ಮ ಇನ್ನಷ್ಟು ಸಾವಯವವಾಗಿ ಬಂದಿದೆ. ಒಂದಲ್ಲ ಒಂದು ರೀತಿಯಲ್ಲಿ ಶ್ರಾದ್ಧದ ವಿಷಯ ಬರುತ್ತದೆ; ಯಮುನಕ್ಕನ ಆತ್ಮಹತ್ಯೆಯ ಪ್ರಯತ್ನದಲ್ಲಿ, ಅದು ನಿರರ್ಥಕವಾಗಲು ಭ್ರೂಣಹತ್ಯೆಯಲ್ಲಿ ಮತ್ತು ಅಂತಿಮವಾಗಿ ಸಮಾಜದ ಒಂದು ಘಟಕವಾದ ಅವಳನ್ನು ಹೊರಹಾಕುವ ಘಟಶ್ರಾದ್ಧದಲ್ಲಿ, ಕಥೆಯ ಬೆಳವಣಿಗೆ ವೇಗವಾಗಿ ನಿರಾಯಾಸವಾಗಿ ಸಾಧಿತವಾಗಿದೆ. ನೇರವಾದ ಕಥನವನ್ನು ಪ್ರಯತ್ನಿಸಿ ಲೇಖಕ ಯಶಸ್ವಿಯಾಗಿದ್ದಾರೆ. ಒಂದೇ ರೀತಿಯ ದೃಷ್ಟಿಯಿಂದ ಚರ್ವಿತ ಚರ್ವಣವಾದ ಗರ್ಭಿಣಿ ವಿಧವೆಯ ಕಥಾವಸ್ತು ಒಂದು ಮಗುವಿನ ಪ್ರಜ್ಞೆಯ ಮೂಲಕ ಇಲ್ಲಿ ದಾಖಲಾಗುವುದರಿಂದ ಕತೆ ಬರಿಯ ಸಾಮಾಜಿಕ ವಿಡಂಬನೆಗೊಂದು ಸಾಧನವಾಗದೆ ತನ್ನ ಸತ್ವವನ್ನು ಉಳಿಸಿಕೊಂಡಿದೆ, ಅಲ್ಲದೆ ನಾಣಿ ಯಮುನಕ್ಕರ ಸಂಬಂಧದ ಚಿತ್ರಣದಲ್ಲಿ ವಿಶೇಷ ಸಂಕೀರ್ಣತೆಯಿದೆ. ಒಳಸಂಚು ಎಂದರೆ ಬಾಲಕನ ನಿಷ್ಕಪಟ ಪ್ರವೃತ್ತಿಗೆ ಆಗದು. ಒಳಸಂಚುಗಳಿಗೆ ಕಾರಣಳಾಗುತ್ತಾಳೆಂದು ಯಮುನಕ್ಕನ ಬಗ್ಗೆ ಅವನಿಗೆ ಕೆಲವು ಸಾರಿ ದ್ವೇಷವೂ ಹುಟ್ಟುತ್ತದೆ. ಬ್ರಹ್ಮರಾಕ್ಷಸ ರಾತ್ರಿ ಮನೆ ಸುತ್ತುತ್ತದೆಂದು ದಿಗಿಲು ಬೇರೆ. ಜೊತೆಗೆ ತನ್ನ ಮನೆಗೆ ಹೋಗಬೇಕೆಂಬ ಆಸೆ, ಯಮುನಕ್ಕನ ನಿಸ್ಸಹಾಯಕ ದುಃಖಸ್ಥಿತಿ ಆತನನ್ನು ವಶಪಡಿಸಿಕೊಳ್ಳಲು ಕಾರಣ ಬಾಲಕನ ಅಶಕ್ತ ಸಹಾಯಕ ಬುದ್ಧಿಯಲ್ಲ; ಬಾಲ್ಯ ಸಹಜವಾದ ಜೀವನದ ಖುಷಿಯಿರುವ ನಾಣಿಗೆ ನಡೆಯುವ ಘಟನೆಗಳು ಕೊಳಕಾಗಿಯೂ ಅಸಹ್ಯ ರಗಳೆಗಳಾಗಿಯೂ ಕಾಣುವುದರಿಂದ, ನಾಣಿ ಅವನ ಜಾಗೃತ ಮನಸ್ಸಿನ ಭಾವನೆಗಳಿಗೆ ಅತೀತವಾದ ಕಾರಣಗಳಿಂದಾಗಿ ಆಕೆಯ ಜೊತೆ ಭಾಗಿಯಾಗಿ ನಿಲ್ಲುತ್ತಾನೆ.

ಕಥೆಗಳು ಅಚ್ಚಾದ ಅನುಕ್ರಮದ ದೃಷ್ಟಿಯಿಂದಲೂ 'ಘಟಶ್ರಾದ್ಧ' ಅರ್ಥಪೂರ್ಣವಾಗಿದೆ. ಇದು ಕಡೆಯ ಕಥೆ. ಕಥೆಗಳನ್ನು ಬರೆದ ಕಾಲವನ್ನು ಗಮನಿಸಿದರೆ ಮತ್ತು 'ಖೋಜರಾಜ' 'ಘಟಶ್ರಾದ್ಧ'ಗಳನ್ನು ಹೋಲಿಸಿ ನೋಡಿದರೆ ಬೆಳವಣಿಗೆ ಸ್ಪಷ್ಟವಾಗುತ್ತದೆ. ಈ ಲೇಖಕನ ಬೆಳವಣಿಗೆ ಛಿದ್ರವಾದ್ದಲ್ಲ, ಸಮಗ್ರವಾದದ್ದು. ಸಾಹತಿಯ ಸೃಷ್ಟಿಯೆಂದರೆ ಶ್ರೀಮಂತವಾದ ಅನುಭವಕ್ಕೊಂದು ಆಕಾರವನ್ನು ತರುವ ಪ್ರಯತ್ನವಾದರೆ, ಸಾಹಿತಿ ತನ್ನ ಅನುಭವದ ನಿಧಿಗೆ ಮತ್ತೆ ಮತ್ತೆ ಕೈಚಾಚುವುದು ಸಹಜ. ಬೆಳೆಯುತ್ತಿರುವ ಲೇಖಕ ತನ್ನ ಅನುಭವದ ವಿವಿಧ ಪದರುಗಲನ್ನು ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಅರಿತುಕೊಳ್ಳಬಲ್ಲ. 'ಘಟಶ್ರಾದ್ಧ'ದಲ್ಲಿ ಬರುವ ಹಾವಿನ ಸಂಗತಿ ಲೇಖಕರ ಪುನರಾವರ್ತನೆಗೊಳ್ಳುವ ಕಾಳಜಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಯಮುನಕ್ಕ ಅತ್ಯಂತ ಸಂದಿಗ್ಧದಲ್ಲಿರುವಾಗ ಹಾವು ಹರಿದುಬರುತ್ತದೆ. ಅವಳನ್ನು ಭ್ರಷ್ಟಳನ್ನಾಗಿ ಮಾಡಿದ ಪ್ರಣಯಿಯ ಜೊತೆಗಿನ ಅವಳ ಭೇಟಿಯನ್ನು



ಅದು ಕೊನೆಗೊಳಿಸುವುದರ ಜೊತೆ ನಾಣಿಯ ನಿಷ್ಠೆ ಯಾವ ಕಡೆಗೆ ಎಂಬುದನ್ನು ತೀರ್ಮಾನಿಸುತ್ತದೆ. 'ಖೋಜರಾಜ'ದಲ್ಲೂ ಹಾವು ರಾಜಣ್ಣನ ಕಾಮೋದ್ದೀಪ್ತ ಘಳಿಗೆಯಲ್ಲಿ ಬಂದು ಕಾಡುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಆದರೆ ಮೊದಲಿನ ಕಥೆಯಾದ 'ಖೋಜರಾಜ'ದಲ್ಲಿ ಇದು ಹಗಲುಗನಸಿನ ಒಂದು ಅಂಶ. ಕಡೆಯ ಕಥೆಯಲ್ಲಿ ನಿರ್ಣಾಯಕವಾಗಿ ಬರುವ ಕತೆಯ ಅಖಂಡಾಂಶ. ಈ ರೀತಿ ಪ್ರತೀಕದ ಬಳಕೆಯಲ್ಲಾಗುವ ಬದಲಾವಣೆ ಶ್ರೀ ಅನಂತಮೂರ್ತಿಯವರ ಸಂವೇದನಾಶಕ್ತಿಯ ಬೆಳವಣಿಗೆಗೆ ದ್ಯೋತಕವಾಗಿದೆ. ಮೊದಲಿನದು ಚುರುಕಾದ ಬೌದ್ಧಿಕ ಕ್ರಿಯೆಯ ಮೂಲಕ ಜೀವನದ ಜೊತೆಗೆ ಪಡೆದ ಸಂಬಂಧವಾದರೆ, ಈಗಿನದು ಇನ್ನಷ್ಟು ಹೆಚ್ಚು ಘನವಾದ ರೀತಿಯಲ್ಲಿ ಅನುಭವದ ಸಮಗ್ರತೆಯನ್ನು ಗ್ರಹಿಸಲೆಂದು ಹೆಣಗುವ ಸಾಹಸ.

ಮೇಲುಮೇಲಿನ ಹುರುಳಿಲ್ಲದ ಜಾಣತನದ ಪ್ರಯತ್ನ ಇವರಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ– 'ಖೋಜರಾಜ'ದಂತಹ ಕಥೆಯೂ ಕೂಡ ಪ್ರಬುದ್ಧತೆಯ ದಿಕ್ಕಿನಲ್ಲಿದೆ. ಎರಡನೆಯ ಕಥೆಯಾದ 'ಪ್ರಕೃತಿ'ಯಲ್ಲಿಯೇ ಕಥೆಯ ಕೇಂದ್ರಪ್ರಜ್ಞೆಯಾದ ಸಂಕಪ್ಪಯ್ಯನ ಮುಖಾಂತರ ಜೀವನದ ದ್ವಂದ್ವಪ್ರವೃತ್ತಿಗಳನ್ನು ನಿರೂಪಿಸುವ ಪ್ರಬುದ್ಧತೆಯನ್ನು ಕಾಣುತ್ತೇವೆ. ಪ್ರಕೃತಿಯ ವಿರುದ್ಧ ಸಂಕಪ್ಪಯ್ಯ ಹೋರಾಡುತ್ತಾನೆ; ಲಕ್ಷ್ಮಿ ಮತ್ತು ಕಿತ್ತಳೆ ತೋಟದ ಜೊತೆ ಅವನಿಗಿರುವ ಸಂಬಂಧದಲ್ಲಿ ಈ ಹೋರಾಟ ಚಿತ್ರಿತವಾಗುತ್ತದೆ. ಲಕ್ಷ್ಮಿ ಬಾಲವಿಧವೆ– ಒತ್ತಾಯಕ್ಕೆ ಸಫಲವಾಗಬೇಕಾದ್ದು. ನಿಸರ್ಗದ ನಿಯಮಕ್ಕೆ ವಿರೋಧವಾಗಿ ಸಂಕಪ್ಪಯ್ಯನು ತನ್ನ ಇಚ್ಛಾಶಕ್ತಿಯನ್ನೆಲ್ಲ ತಪ್ಪು ದಿಕ್ಕಿಗೆ ಹರಿಸುತ್ತಾನೆ. ಕೊನೆಯಲ್ಲಿ ಅವನ ಸೋಲು ಮತ್ತು ನಿಸರ್ಗದ ಜಯ ಜೀವನೋನ್ಮುಖ ಶಕ್ತಿಯ ಗೆಲುವಿಗೆ ಸಂಕೇತವಾಗಿದೆ. ಒಟ್ಟು ಶಿಲ್ಪದ ದೃಷ್ಟಿಯಿಂದ 'ಪ್ರಕೃತಿ' ಕ್ಲಾಸಿಕ್ ಪಂಗಡಕ್ಕೆ ಸೇರುತ್ತದೆ. ದ್ವಂದ್ವ ಪ್ರವೃತ್ತಿಗಳನ್ನು ಹೆಣೆದು, ಸಮತೂಗಿಸಿ, ಹೊಂದಿಸಿದ ರೀತಿ ಅದ್ಭುತವಾಗಿದೆ.

ಶ್ರೀ ಅನಂತಮೂರ್ತಿಯವರ ಮೊದಲನೆಯ ಕಥಾಸಂಕಲನ 'ಎಂದೆಂದೂ ಮುಗಿಯದ ಕಥೆ' ಅವರ ಕಥನತಂತ್ರದ ಸಾಮರ್ಥ್ಯ ಪ್ರಯೋಗಶೀಲತೆಗಳನ್ನು (ಉದಾಹರಣೆ: 'ಹುಲಿಯ ಹೆಂಗರುಳು'), ಮತ್ತು ನವಿರಾದ ಮಾರ್ಮಿಕವಾದ ಭಾವಗೀತೆಯ ಗುಣವನ್ನು (ಉದಾಹರಣೆ: 'ತಾಯಿ'), ಸಾಕಷ್ಟು ತೋರಿಸಿತ್ತು. ಅಷ್ಟೆ ಅಲ್ಲ: 'ಹುಲಿಯ ಹೆಂಗರುಳು' ಇವರ ಸಂಕೀರ್ಣ ಪ್ರತಿಕ್ರಿಯೆಯ ಸಾಮರ್ಥ್ಯದಲ್ಲಿ ಹೆಚ್ಚು ಭರವಸೆಯನ್ನು ಕೆರಳಿಸುವಂತಿತ್ತು. ಉದಾಹರಣೆಗೆ, ತಾನು ಕೊಂದ ತನ್ನ ಹೆಂಡತಿಯ ಉಪಪತಿಯಾದ ಸೀನಸೆಟ್ಟಿಯನ್ನು ಮಳೆಯಲ್ಲಿ ದೋಣಿ ಬಿಟ್ಟುಕೊಂಡು ಹೋದ ಸಿದ್ದ ಉಳಿಸುವಾಗಿನ ಅವನ ಮನಸ್ಸಿನ ಹೋರಾಟವನ್ನು ನೋಡಿ:

"ತೇಂಕಿ ತೇಂಕಿ ಸಿದ್ದ ಒದರಿದ:

**‘ಆಹ್! ಸೀ…ನ ಸೆಟ್ಟೀ!’**
**ಬಂಡೆಯ ಮೇಲಿನ ಜೀವ–ಜಂತು–**
**(ಇಶ್ಶಿ! ಬದುಕೇ!!)– ಕುರಿಯಂತೆ– (ಥೂ!)–**
**ಮಿಲುಕಾಡಿತು– (‘ಅಮ್ಮಾ! ನೋಡಲಾರೆನಮ್ಮ!!’)**
**‘ಆ…ಆ…ಬೆಬೆಬೇ !!…(ಬ್ಯಾ…ಬ್ಯಾ)…**
**ಬಡ ಜೀವಿಯ ಅಂಗ ಅಂಗವೂ ಪ್ರಾಣಭಿಕ್ಷೆ ಯಾಚಿಸಿತು.**
**(‘ಅಯ್ಯೋ! ಅವ್ವಾ! ಅವ್ವಾ!… ಕುರಿ ಕಡಿಯಬೇ’ …‘ಬ್ಯಾ…ಬ್ಯಾ…’ …‘ಅಯ್ಯೋ!’…)’’**

“ಪ್ರಶ್ನೆ” ಸಂಕಲನದ ಕಥೆಗಳು ಆ ಭರವಸೆಯನ್ನು ಊಹಿಸಿದ್ದಕ್ಕಿಂತ ಹೆಚ್ಚಾಗಿ ಸಫಲಗೊಳಿಸಿರುವುದನ್ನು ಈ ಕಥೆಗಾರರ ಗಾಢವಾಗುತ್ತಿರುವ ಪ್ರಾಮಾಣಿಕತೆಯಲ್ಲಿ ಕಾಣಬಹುದು. ಸಣ್ಣಕಥೆ ಇಲ್ಲಿ ಪ್ರಬುದ್ಧ ಅವಸ್ಥೆಯನ್ನು ಪಡೆದಿದೆ.

೨೪ ಸೆಪ್ಟೆಂಬರ್, ೧೯೬೨. **–ರಾಜೀವ ತಾರಾನಾಥ**



# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ಮುನ್ನುಡಿ | x |
| ೧. ಖೋಜರಾಜ | ೧ |
| ೨. ಪ್ರಕೃತಿ | ೨೩ |
| ೩. ಕಾರ್ತೀಕ | ೩೭ |
| ೫. ಪ್ರಸ್ತ | ೮೦ |
| ೬. ಘಟಶ್ರಾದ್ಧ | ೧೦೬ |

# ಪ್ರಶ್ನೆ

# ಖೋಜರಾಜ

"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"

– ಗೀತೆ

ರಾತ್ರಿಯ ಕತ್ತಲಿನಲ್ಲಿ ಯಾರ ಕಣ್ಣಿಗೂ ಬೀಳದೆ ಎಲ್ಲೆಲ್ಲಿಂದಲೂ ಹೊಲಸು ಕೊಚ್ಚೆ ಗುಂಡಿಗಳಿಂದ ಗೊಟರು ಹಾಕುವ ಗೊಂಟರು ಕಪ್ಪೆಗಳ ಶ್ವಾಸಕೋಶ ಎಂಥದಿರಬೇಕೆಂದು ಯೋಚಿಸುತ್ತ ನಿದ್ದೆ ಬಾರದೆ ರಾಜಣ್ಣ ಎದ್ದು ಕೂತ. ಎಷ್ಟು ದಿನ, ಎಷ್ಟು ದಿನವೆಂತ ಹೀಗೆ ಯಾಂತ್ರಿಕವಾಗಿ ತೋಡಿ ಸಂತೋಷಪಡುವುದಕ್ಕೂ ಅಸಾಧ್ಯವಾದ, ಜೀವ ಹಿಚುಕುವ ಬೇಸರವನ್ನು ತಾಳಿಕೊಂಡಿರುವುದು – ಎನ್ನುವ ಯೋಚನೆಯನ್ನು ಹೇಗೆ ಕವನದ ಸಾಲುಗಳಾಗಿ ಬರೆಯಬಹುದೆಂದು ತಲೆಕೆರೆದುಕೊಂಡ. ಹಾರ್ಲಿಕ್ಸ್, ಗ್ಲೂಕೋಸ್, ಮಲ್ಟಿವಿಟಮಿನ್ ಮಾತ್ರೆ, ಜೀವನವೆಷ್ಟು ದುಃಖಮಯ ಎನ್ನುವ ವೇದಾಂತ, ಸಂಜೆ ಇಸ್ಪೀಟು, ಬೀರು, ಇಷ್ಟಿದ್ದರೆ ಸಾಕು – ಸತ್ತೂ ನೂರು ಶರದೃತುಗಳನ್ನು ನೋಡಿ ಮನೆಯಿಂದ ಲೈಬ್ರರಿಗೆ ಲೈಬ್ರರಿಯಿಂದ ಮನೆಗೆ ರ್‍ಯಾಲಿ ಸೈಕಲ್ಲಿನ ಮೇಲೆ ತಿರುಗುತ್ತಿರಬಹುದಲ್ಲವೆ ? ಎಂದು ಯೋಚಿಸಿ... ನಕ್ಕ. ಹೀಗೆಯೇ ರಾತ್ರಿ ಹನ್ನೆರಡು ಘಂಟೆಗೆ 'ಕೋಟು ತೊಟ್ಟು ಚಪ್ಪಲಿ ಮೆಟ್ಟಿ' ಹೊರಟರೆ ಎನ್ನಿಸಿ – ಹದಿನೈದು ರೂಪಾಯಿಗೆ ಕೊಂಡಿದ್ದ ಬುದ್ಧನ ಪ್ಲಾಸ್ಟರ್ ಆಫ್ ಪ್ಯಾರಿಸ್ ಪ್ರತಿಮೆ ನೋಡಿ – ಟೌನಿನಲ್ಲಿ ಈ ಹೊತ್ತಲ್ಲದ ಹೊತ್ತಿನಲ್ಲಿ ಯಾವ ಹೋಟೆಲಾಗಲೀ ಚಿತ್ರ ಮಂದಿರವಾಗಲೀ ತೆರೆದಿರುತ್ತವೆಯೋ ಎಂದು ಸುಮ್ಮನಾದ. ಲೈಬ್ರರಿಯಲ್ಲಿ – ಬೆಳಿಗ್ಗೆ, ಮಟಮಟ ಮಧ್ಯಾಹ್ನ, ಸಂಜೆ ಎನ್ನದೆ – ಮೂರುಹೊತ್ತು ಅಕ್ಷರಗಳಿಗೆ ಕಣ್ಣು ಹತ್ತಿಸಿ ಕೂತವರ ಜೊತೆ ದಿನಂಪ್ರತಿ ತಾನೂ ಕೂತಿರುವುದರ ಚಿತ್ರ ಬರೆದರೆ ಅದಕ್ಕೆ "I had not thought Death had undone so many" ಎಂಬ ಶೀರ್ಷಿಕೆ ಕೊಟ್ಟರೆ ಹೇಗೆ, ಎಂದು ಸಿಗರೇಟು ಹಚ್ಚಿದ. ಕಿಟಕಿಯ ಕೊರೆಯುವ ಕಬ್ಬಿಣದ ಸರಳುಗಳನ್ನು ಹಿಡಕೊಂಡು ಸೀನಿದ. ಕತ್ತಲಿನ ಭಯಂಕರ ಮೌನದ ಶ್ವಾಸಕೋಶದಿಂದ ಗೊಂಟರು ಕಪ್ಪೆಗಳ ಈ ಆರ್ತತೆ ('Voices of desire from the depths of darkness') ಬರುತ್ತಿದೆ ಎನ್ನುವುದು ತಾನು ಬರೆಯಲಿರುವ ಕವನಕ್ಕೆ ಒಂದು ಒಳ್ಳೆಯ ಪ್ರತೀಕವಾದೀತೆಂದು

ದೀಪ ಹೊತ್ತಿಸಿ ಕನ್ನಡಿಯಲ್ಲಿ ಮುಖ ನೋಡಿಕೊಂಡ. ಬೇಸರ, ಸಂಕಟ, ನೋವು, ಮೃತ್ಯು, (ಸಾವೂ ಕೂಡ) ಎಲ್ಲವೂ ಕವಿಯ ಕುಲುಮೆಯಲ್ಲಿ ಚೆಲುವಾಗುತ್ತವಲ್ಲವೇ ? ಅಭಿವ್ಯಕ್ತಿಯೆಂದರೆ ಮತ್ತೇನು ? – ಎಂದು ಥೀಸಿಸ್‌ನಲ್ಲಿ ಬರೆಯಬೇಕೆಂದುಕೊಂಡು ಕಾಲಗಂಟಿನ ಮೇಲೆ ಎದ್ದಿದ್ದ ಎಕ್ಸಿಮಾವನ್ನು ತುರಿಸಿಕೊಂಡ – ಯಾರದೋ ಎಂಜಲು ಅದು ಎನ್ನಿಸಿದರೂ ಯಾರಿಗೂ ಗೊತ್ತಾಗಲಿಕ್ಕಿಲ್ಲವೆಂದು ಸಮಾಧಾನ ಪಟ್ಟು ಮತ್ತೆ ಹಾಸಿಗೆಯ ಮೇಲೆ ಕುಳಿತ. ಬೆನ್ನು ತುರಿಸಿಕೊಂಡ. ಮತ್ತೆ ಕತ್ತಿನ ಬಳಿ ತುರಿಕೆಯಾಯಿತು. 'Candel in the thighs' ಎಂಬ (ಯಾರ ಕವನದ ?) ಒಂದು ಕವನದ ಸಾಲಿನ  ನೆನಪಾಗಿ ಹೊಕ್ಕಳನ್ನು ಕೆರೆದು ಕೊಳ್ಳುತ್ತ – ಹೊಕ್ಕಳ ಬಳ್ಳಿ ಗರ್ಭದಿಂದ ಹರಿಯುವುದೇ ದುರಂತ ಎನ್ನಿಸಲು ನಿತ್ಯವೂ ಹಿಂದೂ ಪತ್ರಿಕೆಯ ಅಡ್ವರ್ಟೈಸ್‌ಮೆಂಟಿನಲ್ಲಿ ಹೇಳುವಂತೆ ತುರಿಕೆಗೆ ಲೈಫ್‌ಬಾಯ್ ಸೋಪನ್ನು ನಾಳೆ ನೆನಪುಮಾಡಿ ತರಬೇಕೆಂದುಕೊಂಡ. ಅವನು ವಿಮರ್ಶಿಸಲೆಂದು ಓದುತ್ತಿದ್ದ ಕಾದಂಬರಿಯಲ್ಲಿ ಬರೆದಂತೆ ಈ ಊರಲ್ಲೂ ಸೂಳೆಯರು ಇದ್ದಾರೆ ? – ಎಲ್ಲಿ ? – ಥೂ ! ಆದರೆ ಆ ಕಾದಂಬರಿ ಕಲಾತ್ಮಕವಾಗಿಲ್ಲ – ಎಂದು ಗೊಣಗಿ.

ಲಘುವಾಗಿ ಏನನ್ನಾದರೂ ಕಲ್ಪಿಸತೊಡಗಿದರೆ ನಿದ್ದೆ ಬರಬಹುದೆಂದು ಪಾರ್ಕಿಗೆ ಅರುಂಧತಿಯ ಜೊತೆ ಹೋದ. ಅರುಂಧತಿಯ ಮೋರೆ ಲೈಬ್ರರಿಯಲ್ಲಿ ಮೊನ್ನೆ ಎದುರು ಕುಳಿತಿದ್ದವಳ ಬಟ್ಟಲು ಮುಖದಷ್ಟು ಚೆನ್ನಾಗಿಲ್ಲದಿದ್ದರೇನಂತೆ – ಅವಳ ಎದೆ ಮೃದುವಾಗಿ ಉಬ್ಬಿ ಬೆಳೆದಿದೆ ಎಂದು ಸಮಾಧಾನಪಟ್ಟ. ಹಸಿರು ಹುಲ್ಲಿನ ಮೇಲೆ ಹಿತವಾದ ಬೆಳದಿಂಗಳು ಚೆಲ್ಲಿದಾಗ ಅವಳ ಕೋಮಲವಾದ ಮೈ ತಬ್ಬಿ ಮೃದು ಕೈಯನ್ನು ಮೃದುವಾಗಿ ಹಿಸುಕಿದರೆ – ಹುಟ್ಟಿದ ಮಕ್ಕಳಿಗೆ ಹಾರ್ಲಿಕ್ಸ್ ತರಲು ಸಂಬಳ ಸಾಲದು ಎನ್ನಿಸಿತು – ಹಾಗಾದರೆ ಅರುಂಧತಿ ಕಳುಹಿಸಿದ ಕೀಟ್ಸ–ಕವನಗಳ ಉಡುಗೊರೆಗೆ ಬದಲಾಗಿ ಸಂತಾನ ನಿಯಂತ್ರಣದ ಬಗ್ಗೆ ಒಂದು ವೈಜ್ಞಾನಿಕ ಗ್ರಂಥವನ್ನು ಕಳುಹಿಸಿದರೆ ಹೇಗೆ ? ಸುಖಕ್ಕೆ ಸುಖ – ಜೊತೆಗೆ ದೇಶಸೇವೆ, (ದೇಶಸೇವೆಯೇ ಈಶಸೇವೆ !), ಅರುಂಧತಿ ಈಗಲೇ ಪೆಚ್ಚು ಮೋರೆ – ಮಕ್ಕಳಾದ ಮೇಲೆ ಅಲಮೇಲಮ್ಮನಂತಾದರೆ – ಸಂತಾನ ನಿಯಂತ್ರಣದಲ್ಲಿ ತಪ್ಪೇನು ಎಂದು ಪಾರ್ಕಿನಲ್ಲಿ ಮತ್ತೆ ಅವಳನ್ನು ತಬ್ಬಿ ಬೆನ್ನು ಸವರಿದ. ಯಾವ ಪಾರ್ಕು ಉತ್ತಮ ? ಎಲ್ಲದಕ್ಕೂ ಹಾಳು ಜನ ಬರುತ್ತಾರಲ್ಲಾ – ಸಂಜೆಯೇರಿದ ಮೇಲೆ ಅಶೋಕವನ ನಿರ್ಜನವಾಗಿರುತ್ತದಲ್ಲವೆ ? ಆದರೆ ಅರುಂಧತಿಯ ಅಪ್ಪ ಅವಳಿಗೆ ವಾಕಿಂಗ್ ಹೋಗಲು ಬಿಟ್ಟಾರೆ ? ಆ ಉದ್ದ



ಮೂಗಿನ ಗೃಧ್ರ ಗೊತ್ತಾಗಿ ಮದುವೆಮಾಡಿಕೋ ಎಂದು ಜಿಗಣೆ ಹಿಡಿದರೆ ಏನು ಸಾಯುವುದು ? – ಥೂ ಆ ಹುಟ್ಟುವ ಚಿಳ್ಳೆ ಪಿಳ್ಳೆ – ಎಂದುಕೊಂಡು ಮತ್ತೆ ಅರುಂಧತಿಯನ್ನು ಕಾಲುಗಳಿಂದ ಬಿಗಿದು ಅವಳ ಕತ್ತಿನ ಮೇಲೆ ಬಾಯಿಟ್ಟು ಕಣ್ಣುಗಳನ್ನು ಮೃದುವಾಗಿ ಚುಂಬಿಸಿ ಯಾರಾದರು ನೋಡಿ ಬಿಟ್ಟಾರೋ ಎಂದು ಆ ಕಡೆ ಈ ಕಡೆ ನೋಡಿ,

ಯಾರೂ ಇಲ್ಲ – ಮಕ್ಕಳಾಗುವುದೂ ಇಲ್ಲ – ಕಣ್ಣು, ಕತ್ತು, ಮೃದು ಎದೆ, ತೊಡೆ, ಸೊಂಟ, ಹೊಕ್ಕಳು, ಜಘನ ಮುತ್ತಿಟ್ಟು – ಸವರಿ, ವೆಲ್ವೆಟ್ ಮೃದು ಬಟ್ಟೆ ಸರಿಸಿ, ಬೆತ್ತಲಾಗಿ, ಕತ್ತಲಾಗಿ, ನುಗ್ಗಿ, ಕೆನ್ನೆಗೆ ಕಾವನ್ನು ಒತ್ತಿ, ಪುಡಿಪುಡಿಮಾಡಿ ಅಪ್ಪಿ ಅವಚಿ, ಸತ್ತು, ಹೊರಳಿ, ಹಾರಿ ಹಾಗೇ – ಹಸಿರು ಹುಲ್ಲಿನ ಮೇಲೆ ಎಂಥ ಸರ್ಪ !... ಅವನ ಕೈಗೆ ಸುತ್ತಿಯೇ – ಅಲ್ಲ ಅವಳ ಕಾಲಿಗೆ ಕಚ್ಚದೆ ಸುತ್ತಿ – ಸೊಂಟದ ಮೇಲೆ ನಿಧಾನ ತಣ್ಣಗೆ ಹರಿದು – ಅಲ್ಲ ಕೈಗೆ ಸುತ್ತಿ ಹೆಡೆಯೆತ್ತಿದಾಗ ತುಟಿ ಕಚ್ಚಿ ತಡವರಿಸದೆ ಹಲ್ಲಿನ ಬಾಯನ್ನು ಬಿಗಿಮುಷ್ಟಿಯಲ್ಲಿ ಹಿಡಿದೆಳೆದು, ನೆಲಕ್ಕೆ ಪಠಾರನೆ ಬಡಿದು – ಹಾಸಿಗೆಯಲ್ಲಿ ಹೊರಳುತ್ತ – ನುಚ್ಚು ನೂರು ಮಾಡಿ, ದೂರ ಬಿಸಾಕಿ, ಅರುಂಧತಿಯ ಎದುರು ಗಂಡುತನದ ಪೌರುಷ ತೋರಿಸುತ್ತಾ ನಿಂತಾಗ – ಅಯ್ಯೋ ಮತ್ತೆ ಅದೇ ಸರ್ಪ... ಇಲ್ಲ ... ಬರಲಿಲ್ಲ – ಯಾರೂ ಇಲ್ಲ – ಬೆಲ್ಟ್ ಬಿಚ್ಚಿ, ಸರ್ಜ್‌ಸೂಟ್ ಒಗೆದು, ಏನೂ ಆಗದಂತೆ ಯಾರಿಗೂ ಗೊತ್ತಾಗದಂತೆ, ಪಾರ್ಕಿನಲ್ಲಿ ಬೇಡ ಆಕಾಶದಲ್ಲಿ ತೇಲಿ ತೇಲಿ – ಥೂ ಮತ್ತೆ ಮೋಡದಲ್ಲೂ ಮಿಂಚು ಹಾವು ಸುಳಿ ಸುಳಿ,... ಪಳ್ ಪಳ್ ಎಂದು ಮಿಂಚಿ – ಗುಡುಗಿ –

‘ನೂರುಸಾರಿ ಕೊಂದಿದ್ದೇನೆ – ಚೂರಚೂರು ಮಾಡಿ ಒಗಿದಿದ್ದೇನೆ – ಆದರೂ ತಿರುಗಿ ಜೀವ ಬರುತ್ತದೆ – ಕಡಿಯದಂತೆ ಕಾಡುತ್ತದೆ – ಹಗಲುಗನಸಿನಲ್ಲೂ ಹೀಗೆ ನಾಗರಕಾಟಕ್ಕೆ ಮನೋವಿಜ್ಞಾನದಲ್ಲಿ ಏನೆನ್ನಬಹುದೆ’ಂದು ಅಂಗಾತನೆ ಮಲಗಿ ರಾಜಣ್ಣ ಚಿಂತಾಕ್ರಾಂತನಾದ. 'Are my lungs really weak?' (ಕಣ್ಣು ಪಿಳಿ ಪಿಳಿ ಮಾಡಿ ಎದೆ ಮುಟ್ಟಿ ಹೃದಯದ ಹೊಡೆತ ಎಣಿಸಿ) 'Have I blood-pressure too' ಎಂದು ಅರುಂಧತಿಯ ಕಣ್ಣಿನ ಕರುಣರಸದ ತಂಪು ಬಿಂದುಗಳಿಂದ ತನ್ನ ಕೆನ್ನೆ ತೋಯಿಸಿಕೊಂಡು

ಹಾವು ಸಾಯಬಾರದು – ಕೋಲು ಮುರಿಯಬಾರದು ಎಂದರೆ ಹೇಗೆ ಸಾಧ್ಯವಾದೀತು ಎಂದುಕೊಂಡು ಅರುಂಧತಿಯನ್ನು ಮತ್ತೆ ಹಾವು ಎಣೆಕಟ್ಟಿ ಕೊಳ್ಳುವಂತೆ ಮೈಗೆ ಮೈ ಬಿಗಿದು ಹಾಸಿಗೆಯಲ್ಲಿ ಹೊರಳಿದ. ನಿದ್ದೆ

ಬರದಿರಲುಕಾರಣ ಇನ್ ಸೋಮ್ನಿಯಾವೆ? – ಟಾಲ್‌ಸ್ಟಾಯಿಗೂ ಕೆಲವು ಕಾಲ ಹೀಗಾಗಿತ್ತಂತೆ ನಿಜವೆ ? ಅವನ ಹಾಗೆ ಲೆಕ್ಕವಿರದಷ್ಟು ಪತ್ರಿಕೆಗಳಲ್ಲಿ ಅವನ ಫೋಟೋ ಅಚ್ಚಾಗಿ ಬಂದು ಎಲ್ಲರೂ ಬೆರಳುಮಾಡಿ ತನ್ನ ಕಡೆ – ಅರುಂಧತಿಯನ್ನು ಬಿಗಿದು ಬಿದ್ದುಕೊಂಡಾಗ ಯುಗದ ಮೇಲೆ ಯುಗ ಹೊರಳಿದರೂ ಪಾರ್ಕಿನಲ್ಲಿ ಕತ್ತಲಾದ್ದರಿಂದ ಯಾರಿಗೂ ಕಾಣದೆ – ಮೈ ನೂರು ಸಾವಿರ ಲಕ್ಷ ಕೋಟಿ ಕೋಟಿ ಹೊಸ ಹೊಸದಾಗಿ ಮರಳಿ ಹೊರಳಿ, ಎಲ್ಲ ಬೆರಳುಗಳೂ ಮೆಚ್ಚಿಕೆಯಲ್ಲಿ – ಲಕ್ಷಾಂತರ ಬೆರಳುಗಳು ಪೂರ್ವ ಪಶ್ಚಿಮ ದಕ್ಷಿಣ ಉತ್ತರ ಭೂಲೋಕ ಭುವರ್ಲೋಕ ಪಂಜರ ಹೆಣೆದು – ತಾನು ಮಹಾಕವಿ ರಾಜಣ್ಣ ಎಲ್ಲೋ ಮಧ್ಯೆ – ಪಾರ್ಕಿನಲ್ಲಿ ಭಿಕ್ಷೆಗೆ ಬಂದ ಕುರುಡು ಮುದುಕನ ಸುಕ್ಕುಗಟ್ಟಿದ ಮುಖಕ್ಕೆ ಮೂರು ಕಾಸು ಭಿಕ್ಷೆ ಎಸೆದು ('ಹೋಗಾಚೆ') – ಕಾಮಪೂರ್ಣ ವಿರಾಮ ಏನಿರದ ವಾಕ್ಯದಂತೆ ಉದ್ದ ಉದ್ದ ಜೀವನದುದ್ದ ಹಾಳೆ ಹಾಳೆ ಹರಿದೂ ಕೊನೆಯಾಗದೆ – ಮೃದುವಾದ ತೊಡೆಯನ್ನು ಕಬ್ಬಿಣದಂತಹ ತೊಡೆಗಳಿಂದ ಅವಚಿ ಅವಚಿ – ಹಾಸಿಗೆಯ ಪಕ್ಕದಲ್ಲಿ ಹಾವು ಹರಿದರೆ ಕತ್ತರಿಸಿ, ತುಂಡರಿಸಿ, ಸೀಳಿ ಸೀಳಿ ಸಿಗಿದು, ಕೊಚ್ಚಿ, ಕಡೆದು, ಆ ಗೃಧ್ರ ಅಪ್ಪನ ಕಣ್ಣಿಗೆ ಮಣ್ಣೆರಚಿ... ಮುಖ ಅಡಿಯಾಗಿ ಮಲಗಿದರೆ ನಿದ್ದೆ ಬಂದೀತೆಂದು ರಗ್ಗನ್ನು ಎಳೆದುಕೊಂಡು ಕೌಂಚಿ ಮಲಗಿದ. ನಿದ್ದೆಯಿರದ ಗೊಂಟರುಕಪ್ಪೆಗಳು ಗೊಟರು ಹಾಕುತ್ತಲೇ ಇದ್ದವು...

* * * * *

ಬೆಳಿಗ್ಗೆ ಎಂಟು ಗಂಟೆಗೆ ಸಕ್ಕರೆ ಕಂಪನಿ ಶಿಳ್ಳೆ ಹೊಡೆಯಲು ಎದ್ದುಕೂತು ಮೈ ಮುರಿದುಕೊಂಡ. ಬ್ರಷ್ಷಿಗೆ ಪೇಸ್ಟ್ ಅಂಟಿಸುತ್ತಿದ್ದಂತೆ ಪ್ರಾತಃಕಾಲಕ್ಕಿಂತ ಮುಂಚೆ ಎಚ್ಚರವೂ ಅಲ್ಲ ನಿದ್ದೆಯೂ ಅಲ್ಲದ ಹೊತ್ತಲ್ಲದ ಹೊತ್ತಿನಲ್ಲಿ ಯಾವ ಮಸಕು ಮಸಕು ಏನು ಅಸ್ಪಷ್ಟವಾಗಿ ಆಡಿತು ಎಂದು ಹುಡುಕತೊಡಗಿದ. "ಅಲ್ಲ ನನ್ನ ಹೆಸರು ರಾಜಣ್ಣ" ಎಂದಿದ್ದಕ್ಕೆ ನಕ್ಕಂತೆ ನೆನಪು – ಹಾಗೆಯೇ ಮಾಯವಾಗುತ್ತ ಮಸುಕು ಮಸುಕು ಮುಖ (ಯಾರಿರಬಹುದು) ಏನೆಂದಿತು? "ಹದಿನೈದರ ತನಕ ರಾಜಣ್ಣ. ಆಮೇಲೆ ಹೈಸ್ಕೂಲು ಸೇರಿದ ಮೇಲೆ ಭೋಜಣ್ಣ" ಇದರ ಅರ್ಥವೇನಿರಬಹುದು? ರಿಚರ್ಡ್ ಗ್ರಿನೋನ ಕಥೆಯನ್ನು ಓದಿದ್ದಕ್ಕೆ ಹಾಗಾಗಿರಬಹುದೆ? ಇವತ್ತೆ ಕ್ಷೌರ ಮಾಡಿಕೊಳ್ಳಲೊ – ಸಾಹಿತಿಗಳು ಕೂದಲು ಬಿಡುವುದು ಇತ್ತೀಚಿನ ಫ್ಯಾಷನ್ನು – ಹೀಗೆಯೇ ಇರಲಿ – ಎಂದು ಸ್ನಾನದ ಮನೆಗೆ ಹೋದ.



ಎರಡು ರೂಪಾಯಿ ಕೊಟ್ಟು ತಂದು ಓದಿದ "ಸೈಕಾಲಜಿ ಫಾರ್ ದಿ ಕಾಮನ್ ಮ್ಯಾನ್"ನಲ್ಲಿ ಬರೆದಿದ್ದಂತೆ ತಾನು ಹಾಗಾದರೆ 'ಸ್ಪ್ಲಿಟ್ ಪರ್ಸನಾಲಿಟಿ' ಇರಬಹುದೆ? ಎಂದು ಮೈಗೆ ಸೋಪು ಹಚ್ಚಿಕೊಳ್ಳುತ್ತ ಮಧ್ಯಾಹ್ನ ಲೈಫ್‌ಬಾಯ್ ಸೋಪು ಕೊಳ್ಳಬೇಕೆಂದು ಮತ್ತೆ ನೆನಪುಮಾಡಿಕೊಂಡ. ಹಾವಿನಂತೆಯೇ ಕಾಡಲು ಆ ಮಾತುಗಳು – "ಹದಿನೈದರ ತನಕ ರಾಜಣ್ಣ" – ಹೌದು ಪಾಠಗಳ ಮೇಲೆ ಅಷ್ಟು ಇಂಟರೆಸ್ಟ್ ಇರಲಿಲ್ಲ – "ಹೈಸ್ಕೂಲು ಸೇರಿದ ಮೇಲೆ" – ಇದ್ದಕ್ಕಿದ್ದಂತೆ ಎಷ್ಟು ಬುದ್ಧಿವಂತನಾದೆ? ಅವತ್ತು ಅಪ್ಪ ಮೈಮುರಿಯ ಹೊಡೆದ ಮೇಲೆ ಬುದ್ಧಿ ಬಂದು ಹೆಡ್‌ಮಾಸ್ಟರರೂ ಆದರ್ಶವಾದಿ ತರುಣ ಎಂದು ಸರಸ್ವತೀ ಪೂಜೆಯ ದಿನ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರ ಎದಿರು ಹೊಗಳಿದಾಗ ಎಷ್ಟು ಮೈ ಉಬ್ಬಿತ್ತು? ಆಮೇಲೆ ಉಪನಯನವಾದ ಮೇಲೆ ಎರಡನೇ ಜನ್ಮ ಪಡೆದು ಬ್ರಹ್ಮಚರ್ಯದ ಅವಶ್ಯಕತೆಯನ್ನು ಹೆಣ್ಣು ಮುಖದ ನಾಣಿಗೆ ಮನದಟ್ಟು ಮಾಡಿ ಅವನ ಸಂಗ ತೂರೆಯಲು ಪ್ರಯತ್ನಿಸಿದ್ದೂ ಆಗಲೆ – ಆದರೂ ಹುಡುಗರೆಲ್ಲ ಎಷ್ಟು ಗೇಲಿಮಾಡುತ್ತಿದ್ದರು? ತನಗೊಂದು ಅಡ್ಡ ಹೆಸರು – ಕಲ್ಲುಗುಡ್ಡ – ಕಲ್ಲುಗುಡ್ಡ – ನಾಣಿಯ ಜೊತೆ ಗುಟ್ಟಾಗಿ ಕೂಡುತ್ತಿದ್ದ ಜಾಗ, ಯಾರು ಪತ್ತೆಮಾಡಿದ್ದೊ! ಒಂದೂ ಆಟವಾಡುತ್ತಿರಲಿಲ್ಲ. ಪೋಲಿ ಮಾತುಗಳನ್ನು ಕಿವಿಗೂ ಹಾಕಿಕೊಳ್ಳುತ್ತಿರಲಿಲ್ಲ. ಒಬ್ಬಂಟಿಗನಾಗಿ ಸ್ವಾಮಿ ರಾಮಕೃಷ್ಣ, ವಿವೇಕಾನಂದ, ಶಿವಾನಂದರನ್ನು ಓದಿ ಊರ್ಧ್ವಾಭಿಮುಖ ಚೇತನಿಯಾಗಿ ಬೆಳೆಯಲು ವಿಶ್ವಪ್ರಯತ್ನ ಪಡುತ್ತಿದ್ದಾಗಲೂ ಆ ನಾಣಿಯಿಂದ ಅಂಟಿದ ಪಾಪ ಎಷ್ಟು ಕಾಡುತ್ತಿತ್ತು ? ಅವನ ಬ್ರಹ್ಮಚರ್ಯ, ಆದರ್ಶ ಜೀವನ ಮನಸಾರಿ ಹೊಗಳುತ್ತಿದ್ದ ಹೆಡ್ ಮಾಸ್ಟರಿಗೆ ಎರಡನೇ ಹೆಂಡತಿಯಿಂದ ಐವತ್ತನೆಯ ವಯಸ್ಸಿನಲ್ಲೂ ಯಾಕೆ ಮಗುವಾಯಿತು? – ಹುಡುಗರು ಗುಸುಗುಸು ಮಾತನಾಡಿ ಹಾಸ್ಯ ಮಾಡುತ್ತಿದ್ದರೂ ಅವನು ಮಾತ್ರ ಗುರುದೇವೋಭವ ಎಂದು ಸುಮ್ಮನಾಗಿದ್ದ. ಹೆಡ್ ಮಾಸ್ಟರರ ಆದರ್ಶಮಯತೆಗಿಂತ ಹೆಚ್ಚು ಆಕರ್ಷಕಳಾಗಿದ್ದ ಅವರ ಮಗಳಾದ ಅರುಂಧತಿಗೆ ಆಗ ವಯಸ್ಸು ಹದಿಮೂರು, ಕಚ–ದೇವಯಾನಿ ಕಥೆ ಓದುತ್ತಿದ್ದ ಅವನಿಗೆ ತಾನು – ಅವಳು ಹಾಗೆ ಎನ್ನಿಸಿ 'ಪದ್ಯ ಬರೆಯಲೇ' ಎನ್ನಿಸುವಷ್ಟು ದುಃಖವಾಗಿತ್ತು. ಆದರೆ ಭಟ್ಟಿವಿಕ್ರಮಾದಿತ್ಯವಿಜಯ ಕದ್ದು ಓದುತ್ತಿದ್ದ ಅರುಂಧತಿಗೆ ಮನೆಗೆ ಬರುತ್ತಿದ್ದ ರಾಜಣ್ಣನ ಬಗ್ಗೆ ಏನು ಏನೋ ಅನ್ನಿಸುತ್ತಿತ್ತು. ಪುಸ್ತಕಗಳ ನಡುವೆ ಅದಲು ಬದಲಾದ ಪತ್ರಗಳಲ್ಲಿ ಸೂಚಿತವಾದಂತೆ ಹೆಡ್ಮಾಸ್ಟರಿಲ್ಲದ ಒಂದು ದಿನ ಇಬ್ಬರೂ ಗುಟ್ಟಾಗಿ ಸಂಧಿಸಿದಾಗ ಗುರುಪುತ್ರಿ ಸಹೋದರಿ ಇದ್ದಂತೆ ಎಂದು ಬೋಧಿಸಿದ.

“ನಿರ್ವ್ಯಾಜ ಪ್ರೇಮದಿಂದ ನಿನಗೆ ಮುತ್ತಿಡುತ್ತೇನೆ" ಎಂದು ಅವಳನ್ನು ತುಟಿಯ ಮೇಲೆ ಚುಂಬಿಸಿ ಸ್ವಂತ ಸಹೋದರಿಯಿಂದ ಎಂದೂ ಬಯಸದಿದ್ದ ಸುಖ ಪಡೆದ – ಆಗಾಗ ಸಮಯ ಸಿಕ್ಕಾಗ ಪಡೆಯುತ್ತಿದ್ದ. ಜೊತೆಗೆ ತಾನು ಕಾಮದ ಕೆಸರಿನಿಂದ ಅರುಂಧತಿಯನ್ನು ಮೇಲಕ್ಕೆತ್ತಿದ ಕಥೆಯನ್ನು, ಅದರಲ್ಲಿ ತಾನು ತೋರಿಸಿದ ಸಂಯಮವನ್ನು ಗೆಳೆಯರ ಇದಿರು ನೀರು ತುಂಬಿದ ಕಣ್ಣಿನಿಂದ ಹೇಳುತ್ತಿದ್ದಾಗ – ಆ ಸಂಜೆ – ಕ್ರಿಕೆಟ್ ಛಾಂಪಿಯನ್ ಕಿಟ್ಟಿ – ಹೋ ಹೋ ಎಂದು ಬಿದ್ದು ಬಿದ್ದು ನಕ್ಕ... ಏನೆಂದಿದ್ದ? ಟರ್ಕಿಟವಲಿನಿಂದ ಮೈ ಒರಸಿಕೊಳ್ಳುತ್ತ ದೋಬಿ ಇನ್ನೂ ಯಾಕೆ ಬಟ್ಟೆ ತರಲಿಲ್ಲವೆಂದು ಯೋಚಿಸುತ್ತಿದ್ದ ರಾಜಣ್ಣನಿಗೆ ಪಕ್ಕನೆ ಕನಸಿನಲ್ಲಿ ನಕ್ಕಿದ್ದ ಮಸಕು ಮಸಕು ಮುಖ ಸ್ಪಷ್ಟವಾಯಿತು.

ಮೂರು ಮಕ್ಕಳ ತಂದೆಯಾಗಿ ಎಲ್ಲೋ ಕ್ಲಾರ್ಕ್ ಆಗಿರುವ ಕಿಟ್ಟುವೆಲ್ಲಿ? ಅವನೆಲ್ಲಿ? ಅವನು ವಿಶ್ವವಿದ್ಯಾಲಯ ಪದವೀಧರನಾಗಿ, ಬಂಗಾರದ ಪದಕವನ್ನು ಪಡೆದು ಉದ್ದಾಮಸಾಹಿತಿಯಾಗುವ ಭವಿಷ್ಯವನ್ನು ಎದುರಿಗಿಟ್ಟುಕೊಂಡು ಈಗ ಇಲ್ಲಿ ಕನ್ನಡಿಯ ಎದಿರು ಕ್ರಾಪನ್ನು ಓರಣವಾಗಿ ಬಾಚಿಕೊಳ್ಳುತ್ತಿದ್ದಾನೆ. ಕಿಟ್ಟುವೆಲ್ಲಿ? ಅವನೆಲ್ಲಿ? – ಎಲ್ಲಿ ಎಂದು ಹುಡುಕಿ ಕೋಟಿನ ಜೇಬಿನಿಂದ ವಾಚು ತೆಗೆದ.

ನೋಡಿದಾಗ ಅದು ಹನ್ನೆರಡಕ್ಕೇ ನಿಂತಿತ್ತು. ಕೂಡಲೇ ಹಳೆಯ ಟ್ರಂಕಿನೊಳಗೆ ಹತ್ತು ವರ್ಷಗಳಿಂದ ಮುಟ್ಟದ ಒಂದು ಹಳೆಯ ದುಂಡನೆಯ ವೆಸ್ಟ್ ಎಂಡ್ ಕೀಪ್‌ಸೇಕ್ ವಾಚಿದೆ ಎಂದು ನೆನಪಾಯಿತು. ಹಳೆಯ ವಸ್ತುಗಳನ್ನು ನೋಡಬೇಕೆನಿಸುವಾಗ ಅನ್ನಿಸುವ ಸಂತೋಷದಿಂದ ಅದನ್ನು ಹುಡುಕಿ ತೆಗೆದ. ಅದೂ ಹನ್ನೆರಡಕ್ಕೆ ಯಾಕೆ ನಿಂತಿದೆ ಎಂದು ಆಶ್ಚರ್ಯವಾಯಿತು. “ಕೀ ಕೊಟ್ಟುದಿದಕ್ಕೆಷ್ಟು ಜನ್ಮ ದಾಚೆ” ಎಂದು ಕವನ ಒಂದರ ಸಾಲನ್ನು ಚಪ್ಪರಿಸುತ್ತ ಕೀ ಕೊಟ್ಟರೂ ಹಳೆಯ ವಾಚು ನಡೆಯಲಿಲ್ಲ.

ಮೇಜಿನ ಮೇಲಿದ್ದ ಡಾಕ್ಟರೇಟ್ ಥೀಸಿಸ್ಸನ್ನು ತೆಗೆದು ಬೀರುವೊಳಗಿಟ್ಟ. ಗಾಜಿನ ಹರಳೊಂದನ್ನು ಮೇಜಿನ ಮೇಲಿಟ್ಟು ಟ್ರಂಕಿನಿಂದ ಐಗ್ಲಾಸ್ ತೆಗೆದು ಕಣ್ಣಿಗೆ ಸಿಕ್ಕಿಸಿ ವಾಚನ್ನು ವಿಚಿತ್ರ ಸಂತೋಷದಿಂದ ಬಿಚ್ಚತೊಡಗಿದ. ಎಂಟು ಹತ್ತು ವರ್ಷಗಳಿಂದ ಮುಟ್ಟದಿದ್ದ ಹತಾರಿಗಳನ್ನು ಹಿಡಿಯುವುದೇ ಎಷ್ಟೋ ಖುಷಿಯಾಗಿ ವಾಚಿನ ಅವಯವಗಳ ವಿಚಿತ್ರಸಂಗದಲ್ಲಿ ಏಕಾಗ್ರಚಿತ್ತನಾದ. ಆಗ ಅವನ ಚಿತ್ತದ ಇನ್ನೊಂದು ಅಂಚು ಅರುಂಧತಿಗೂ ಅವನಿಗೂ ನಡುವೆ ನಡೆದಿದ್ದ ಪ್ರಣಯಪ್ರಸಂಗದ ಹಾಳೆಗಳನ್ನು ಓದತೊಡಗಿತು.

ಓದತೊಡಗಿತು – ಯಾಕೆಂದರೆ ನಡೆದದ್ದೆಲ್ಲ ಕಾಗದಗಳ ಮುಖಾಂತರವೆ.



ಇಂಟರ್ ಮೀಡಿಯೆಟ್ ಕಾಲೇಜಿನ ಐನೂರಕ್ಕೂ ಮೇಲೆ ಸೇರುತ್ತಿದ್ದ ಚರ್ಚಾ ಗೋಷ್ಠಿಗಳಲ್ಲಿ ಕೈಚಪ್ಪಾಳೆ ಸೇವೆ ಪಡೆಯುತ್ತಿದ್ದ ಗುಂಗುರಕೂದಲಿನ ಟೊಮ್ಯಾಟೋ ಕೆಂಪಿನ ಕೆನ್ನೆಗಳ ಮುದ್ದು ಮುಖದ ರಾಜಣ್ಣನನ್ನು ಅರುಂಧತಿ ಕಣ್ಣಿನ ನೋಟದಲ್ಲಿ ಕುಡಿಯುತ್ತಿದ್ದಳು. ಅಜಾತಶತ್ರು – ಸದಾ ನಗುಮುಖ – ಆದರ್ಶ ಜೀವಿ – ಯಾರಿಗೂ ನೋವು ಮಾಡಲಾರದ ಕೋಮಲತೆ – ಸರ್ವಗುಣಸಂಪನ್ನ – ಪೋಲಿಗಳ ಕಾಟಕ್ಕೆ ಬೇಸರಕೊಂಡಿದ್ದ ವಿದ್ಯಾರ್ಥಿನಿಯರ ಕಣ್ಣು ಗೊಂಬೆ – ಇತ್ಯಾದಿ ಬಿರುದಾಂಕಿತನಾಗಿದ್ದ ರಾಜಣ್ಣ ಕವನ ಸಂಗ್ರಹಗಳ ನಡುವೆ ‘ಅಯ್ಯೋ ಹಾಳು ಸಮಾಜ ನಮ್ಮಿಬ್ಬರ ಕಾಮಕಲುಷಿತವಲ್ಲದ ಪ್ರೇಮವನ್ನು ಅರ್ಥಮಾಡಿಕೊಳ್ಳಲಾರದಲ್ಲ !’ ಎಂದು ಅವನ ಮುದ್ದಾದ ತಿಳಿಗನ್ನಡದಲ್ಲಿ ಬರೆದಿಟ್ಟ ಕಾಗದಕ್ಕೆ ಪ್ರತಿಯಾಗಿ ಅವಳು – ‘ಹೌದಲ್ಲಾ’ ಎಂದು ಕಣ್ಣೀರಿಡುತ್ತಿದ್ದಳು. ‘ಕಮ್ಯೂನಿಸ್ಟ’ನಾಗಲೇ ಎಂಬ ಅವನ ನವ್ಯರೀತಿಯಿಂದ ಅಭಿವ್ಯಕ್ತವಾಗುತ್ತಿದ್ದ ದುಗುಡಕ್ಕೆ “ನೀವು ಏನಾದರೂ ನಿಮ್ಮ ಹಿಂದೆ ನಾನಿರುತ್ತೇನೆ” ಎಂದು ಅವಳು ಹೆಣ್ಣು ಅಬಲೆಯಲ್ಲ ಎನ್ನುವ ಆಶ್ವಾಸನೆಯಿತ್ತಳು. ಇತ್ಯಾದಿ ಇತ್ಯಾದಿಗಳ ನಡುವೆ ಧೈರ್ಯ ಮಾಡಿ ಅನುಮಾನಪಡುತ್ತ ತಮ್ಮ ಗುರುದೆಸೆ ಕಳೆದುಕೊಂಡ ಹೆಡ್‌ಮಾಸ್ಟರರ ಮನೆಗೆ ಹೋದ. ಅವ್ಯಾಜಪ್ರೇಮದ ಸಂಕೇತವಾಗಿ ಶೆಲ್ಲಿಯ ಕವನಗಳನ್ನು ಓದತೊಡಗಿದ. ಆಗ ಬೊಗಸೆ ಕಣ್ಣುಗಳಿಂದ ಅವನನ್ನು ಕುಡಿಯುತ್ತಿದ್ದ ಅರುಂಧತಿಯನ್ನು ಸುಮ್ಮನೆ ನೋಡಲಾರದೆ ಕವನಸಂಗ್ರಹ ಕೈ ಜಾರಲು ಹಠಾತ್ತನೆ ಎದ್ದು ತಬ್ಬಿಕೊಂಡು ಅವಳು ನೋವಿನಿಂದ ‘ಹಾಯ್’ ಎನ್ನುವಷ್ಟು ಅವಳ ಕೆಂಪು ತುಟಿಗಳನ್ನು ಯಾಕೆ ಕಚ್ಚಿದೆನೋ ಏನೋ ! ಆಗ ಅವಳು ಭಯಚಕಿತ ಹರಿಣಿಯಂತೆ ಬಿಡಿಸಿಕೊಂಡು ಸೀರೆಯ ಸೆರಗನ್ನು ಸರಿಮಾಡಿಕೊಂಡು, ಕೆದರಿದ ಕೂದಲನ್ನು ಹಿಂದಕ್ಕೆ ತಳ್ಳಿ, ಕುಂಕುಮ ಅಳಿಸಿತೇ ಎಂದು ಎಚ್ಚರಿಕೆಯಿಂದ ಬೆರಳಿಟ್ಟು ನೋಡಿ ‘ಅಯ್ಯೋ ಅಣ್ಣ ನೋಡಿದರೆ ಏನು ಗತಿ’ ಎಂದಳು. ಆಗ ನಿರುಪದ್ರವಿ, ಅಜಾತಶತ್ರು, ಆದರ್ಶಜೀವಿ ಇತ್ಯಾದಿ ರಾಜಣ್ಣ ‘ಈ ಕಾಮದಿಂದ ಜೀವವಿಡೀ ಪಾರಾಗಲಾರದ ಈ ಪಾಪಿಯನ್ನು ಕ್ಷಮಿಸು’ ಎಂದು ಗದ್ಗದ ಕಂಠದಿಂದ ಬೇಡಿಕೊಂಡು ಅರುಂಧತಿಗೆ ಅವಮಾನ (ಜೊತೆಗೆ ಅಸಮಧಾನವೂ) ಆಗುವಂತೆ ಮಾಡಿದ. ಇತ್ಯಾದಿ ಇತ್ಯಾದಿಗಿಂತ ಹೆಚ್ಚೇನೂ ನಡೆಯದೆ ಕಾಲ ಸುಗಮವಾಗಿ ಕಳೆಯಿತಲ್ಲವೆ ?...

ಎಂದು ಯೋಚಿಸುತ್ತ ವಾಚಿನ ಒಂದೊಂದೇ ಮಳೆಯನ್ನು ಜೋಡಿಸುತ್ತಿದ್ದ ರಾಜಣ್ಣನಿಗೆ ತಮ್ಮ ಪ್ರಣಯ ಆಮೇಲೆ ಅನ್ನಮಯ ಕೋಶದಿಂದ ಆನಂದಮಯ

ಕೋಶಕ್ಕೆ ಕಂಬಳಿ – ಹುಳ ಬಣ್ಣ ಬಣ್ಣದ ಚಿಟ್ಟೆಯಾಗುವಂತೆ ಬದಲಿಸಿತು ಎಂದು ಸಮಾಧಾನವಾಯಿತು. ಇವನು ಡಿಕನ್ಸ್, ವರ್ಡ್ಸ್‌ವರ್ತ್ ಇತ್ಯಾದಿ ಬರಹಗಾರರನ್ನು ಓದಿ ಅವಳಿಗೂ ಓದಿಸಿದ. ಗಂಡು ಹೆಣ್ಣುಗಳ ಮಿಲನದಿಂದ ಸಂತಾನ ಉಂಟಾಗುವುದು ಎಂದು ಎಲ್ಲರಿಗೂ ಗೊತ್ತಿರುವ ಸತ್ಯವನ್ನು ಅರಿತುಕೊಂಡು ಅರುಂಧತಿಯ ಜೊತೆ ಬರೆ ಕಲ್ಪನಾವಿಹಾರಿಯಾದ. ಅಲೆಯುವ ಕಣ್ಣುಗಳು ಒಮ್ಮೊಮ್ಮೆ ಅರುಂಧತಿಗಿಂತಲೂ ಚೆಲುವೆಯರು ಇದ್ದಾರೆ ಎಂದು ಗುರುತಿಸಿದರೂ ಅರುಂಧತಿಯಿಂದ ಪಡೆಯಲು ಸಾಧ್ಯವಾದಂತಹ ನಿರ್ವ್ಯಾಜ ಪ್ರೇಮ ಅವರಿಂದ ದೊರಯಲಾರದು ಎಂದು ಸುಮ್ಮನಾದ. ಎರಡು ವರ್ಷಗಳ ಕೆಳಗೆ ಅವಳಿಂದ ದೂರವಾಗುವ ದುಃಖಮಯ ಸನ್ನಿವೇಶ ಒದಗಿದಾಗ "ನಮ್ಮ ಪ್ರೇಮ ಪವಿತ್ರವಾದುದು. ಮದುವೆಯಾಗಿ ಅದನ್ನು ಸಾಂಸಾರಿಕ ಕೊಚ್ಚೆಗೆ ಎಳೆಯುವುದು ಬೇಡ" ಎಂದು ಬರೆದಿದ್ದ. ಆದರೂ ಕೆಲವೊಮ್ಮೆ ಅವಳು ಬೇರೆ ಯಾವ ಬಕರನನ್ನಾದರೂ ಮದುವೆಯಾಗುವಂತಹ ಕೆಳಮಟ್ಟಕ್ಕಿಳಿದರೆ ಏನು ಗತಿ ಎನ್ನುವ ಭಯ ಅವನಿಗೆ ಯಾಕೆ ಬರುತ್ತಿತ್ತೊ ಏನೋ ! ಆದರೆ ಸಂಶಯಕ್ಕೆ ಆಸ್ಪದ ಕೊಡದಂತೆ ಅವಳು, "ಹಾಗಾದರೆ ನಾವಿಬ್ಬರೂ ಹೀಗೆಯೇ ಮದುವೆಯಾಗದೆ ಒಂಟಿಯಾಗಿರೋಣ" ಎಂದು ಅಹಲ್ಯೆ, ದ್ರೌಪದಿ, ಸೀತೆ, ತಾರೆ, ಮಂಡೋದರಿಯರನ್ನು ಮೀರಿಸಿದ್ದಳು. ಆಮೇಲೆ ಅವರಿಬ್ಬರ ನಡುವೆ ಮನಸ್ಸು ಆತ್ಮ ಅಂತರಾತ್ಮರಿಗೆ ಸಂಬಂಧ ಪಟ್ಟಂತೆ – ಪ್ರಕಟವಾದರೆ ಕೀಟ್ಸನ ಪ್ರಣಯಪತ್ರಗಳನ್ನೂ ಮೀರಿಸುವಂತಹ ಅನೇಕ ಕಾಗದಗಳು ಆಗಿಹೋದವು. ಇವೆಲ್ಲ ವಿಷಯಗಳನ್ನೂ, ತಾನು ಬರೆದ ಕಾಪಿ ಎತ್ತಿಕೊಂಡಿದ್ದ ಕಾಗದಗಳನ್ನೂ ಸಹ, ಅನೇಕ ಬಾರಿ ಆತ್ಮೀಯ ಗೆಳೆಯರ ಎದುರಿಗೆ ಭಾವನಾವೇಶದಿಂದ ಬಿಚ್ಚಿತೋರಿಸಿ ಸಂತೋಷಪಡುತ್ತಿದ್ದ. ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿದ್ದ ತನ್ನ ಇತ್ತೀಚಿನ ಕವನಸಂಗ್ರಹದಲ್ಲಿ ತಮ್ಮ ಪ್ರಣಯಕ್ಕೆ ಉದಾತ್ತ ಅಭಿವ್ಯಕ್ತಿಯನ್ನು ಕೊಟ್ಟಿದ್ದ. ವಾರಪತ್ರಿಕೆಯೊಂದು ವಿಮರ್ಶೆಯಲ್ಲಿ ಆ ಕವನಗಳ ಹಿಂದಿರುವ ಪ್ರೇಮ ಸ್ವರ್ಗೀಯವೆಂದು ಮೆಚ್ಚಿ ಎಲ್ಲರ ಮನೆಯಲ್ಲೂ ಇರಬೇಕಾದ ಪುಸ್ತಕವಿದು ಎಂದಿತ್ತು.

ವಾಚು ರಿಪೇರಿ ಮುಗಿಯುತ್ತಿದ್ದಂತೆ ಮನಸ್ಸು ಮತ್ತೆ ಹಿಂದೆ ಹಿಂದೆ ಹೈಸ್ಕೂಲಿಗೂ ಹಿಂದೆ ಹೋಗಿ ತಂದೆಯ ಕುಪಿತ ಮುಖವನ್ನು ನೋಡಿತು. "ಏನು ಮಾಡ್ತಿದಿಯೋ ಮುಂಡೇದೆ. ಕ್ಲಾಸಿಗೆ ಚಕ್ಕರ್ ಹಾಕಿ ಸೈಕಲ್ ರಿಪೇರಿ ಮಾಡ್ತ ಕೂತಿದೀಯಾ – ನಿನ್ನ ಮೂಳೆ ಪುಡಿ ಪುಡಿ ಮಾಡ್ದೆ ಇರ್ತೀನಿಂತ



ತಿಳ್ಕಿದಿಯಾ" ಎಂದು ಬೆನ್ನಿನ ಮೇಲೆ ಕತ್ತಿನ ಮೇಲೆ ಕಾಲಿನ ಮೇಲೆ ಸೊಂಟಕ್ಕೆ 'ಅಯ್ಯೋ' ಎನ್ನುವಷ್ಟು ಏಟು ಬಿದ್ದಿತು. ಆಮೇಲೆ ನಾನು ಈ ರಿಪೇರಿ ಕೆಲಸಕ್ಕೆ ಕೈ ಹಾಕಲಿಲ್ಲ ಅಲ್ಲವೆ ಎಂದು ಯೋಚಿಸಿ ತಲೆ ಕೆರೆದುಕೊಳ್ಳುತ್ತ ವಾಚನ್ನು ಕೈಗೆತ್ತಿಕೊಂಡ. ಆದರೂ ಹತ್ತು ವರ್ಷದ ಕೆಳಗಿದ್ದ ರಿಪೇರಿಯಲ್ಲಿನ ಆಸಕ್ತಿ ಇನ್ನೂ ತನ್ನಿಂದ ಹೋಗಿಲ್ಲವಲ್ಲ ಎಂದು ಸಮಾಧಾನ ಪಟ್ಟು ವಾಚಿಗೆ ಕೀ ಕೊಟ್ಟ.

ಕಿವಿಯ ಹತ್ತಿರ ಹಿಡಿದು ಕುಲುಕಿದ. ಹತ್ತು ವರ್ಷ ನಿಂತಿದ್ದ ವಾಚು ಮತ್ತೆ ನಡೆಯತೊಡಗಿತು.

ಇದ್ದಕ್ಕಿದ್ದಂತೆ ಒಂದು ದುಷ್ಟ ಯೋಚನೆ ಲಗ್ಗೆ ಹತ್ತಿ ನಿಧಾನ ಮನಸ್ಸಿಗೆ ಒಳಗೆ ಕಳ್ಳಹೆಜ್ಜೆ ಹಾಕಿತು. "ಕೀಟ್ಸ್ ಕವಿಯ 'ಓಡು'ಗಳನ್ನು ಓದುವುದಕ್ಕಿಂತಲೂ ವಾಚು ರಿಪೇರಿ ಮಾಡುವುದೇ ಹೆಚ್ಚು ಸಂತೋಷ ತರುತ್ತದಲ್ಲ, ಯಾಕೆ?" ಕಳ್ಳ ಹೆಜ್ಜೆ ಹಾಕುತ್ತ ಬಂದುದು ಮಂಗನಂತೆ ಪೀಠವನ್ನೂ ಏರಿ ಕೂತೇಬಿಟ್ಟಿತು. ಹೋಗೆಂದರೂ ಹೋಗಲಿಲ್ಲ. ಕಲಿತುಕೊಂಡಿದ್ದ ಮನೋವಿಶ್ಲೇಷಣೆಯ ಸಹಾಯದಿಂದ ಏನಿರಬಹುದೆಂದು ವಿಮರ್ಶಿಸಿದ. "ವಾಚು ರಿಪೇರಿಯಲ್ಲಿ ಖುಷಿಯಾಗುವವನು ರಾಜಣ್ಣನೆ ? – ಆದರೆ ಅರುಂಧತಿಯ ಪವಿತ್ರ ಪ್ರೇಮದಲ್ಲಿ, ಎಂ.ಎ., ಪದವಿ ತಂದ ಸಾಹಿತ್ಯದಲ್ಲಿ, ಆಸಕ್ತಿ ಇರುವವನು, ಅಜಾತಶತ್ರು, ನಿರುಪದ್ರವಿ ಇತ್ಯಾದಿ ಬಿರುದಾಂಕಿತನಾದ ಖೋಜಣ್ಣನಿರಬಹುದೆ?" ಆದರೆ – ಈ ಮನೋವಿಶ್ಲೇಷಣೆಯ ಮಾರ್ಗವನ್ನಾದರೂ ಒಪ್ಪುವುದು ಹೇಗೆ? ಅದು ಸಂಕೀರ್ಣವೂ ಜಟಿಲವೂ ಆದ ಮನುಷ್ಯನ ಚೇತನವನ್ನು ಅತಿ ಸುಲಭ ಮಾಡಿ ನೋಡುತ್ತದಲ್ಲವೆ? – ಎಂದು ಮತ್ತೊಂದು ವಾದ ಮುಂದೆ ಬಂದಿತು.

ವಾಚನ್ನು ಕೈಗೆ ಕಟ್ಟಿಕೊಂಡ. 'ಟಿಕ್‌ಟಿಕ್' ಎಂದು ಅದು ಚೆನ್ನಾಗಿ ಸೆಕೆಂಡು ನಿಮಿಷ ಗಂಟೆ ಎಲ್ಲ ಮುಳ್ಳುಗಳಲ್ಲೂ ಸರಿಯಾಗಿ ಕೆಲಸಮಾಡುತ್ತಿತ್ತು. ಆಟೋಮ್ಯಾಟಿಕ್ ವಾಚುಗಳ ಯಂತ್ರ ಹೇಗಿರಬಹುದು ಎಂಬ ಯೋಚನೆ ಬಂದಿತು. ಲೈಬ್ರರಿಗೆ ಹೋಗಲು ಮನಸ್ಸಾಗಲಿಲ್ಲ. ಸೈಕಲ್ಲಿಗೆ ಓವರ್‌ಆಯಿಲ್ ಮಾಡದೆ ಬಹಳ ದಿನವಾಯಿತು ಎಂದು ನೆನಪಾಯಿತು. ಸ್ಪ್ಯಾನರನ್ನು ತೆಗೆದು ಸೈಕಲ್ಲಿನ ಪಾರ್ಟುಗಳನ್ನು ಬಿಚ್ಚುತ್ತ ಅದರಲ್ಲೆ ಏಕಾಗ್ರಚಿತ್ತನಾಗಿ ಕೂತುಬಿಟ್ಟ.

* * * * *

ಮಾರನೆ ದಿನ ಬೆಳಿಗ್ಗೆ ಸಕ್ಕರೆ ಕಂಪೆನಿ ಸೀಟಿ ಹಾಕುವುದಕ್ಕಿಂತಲೂ ಮುಂಚೆ ಎದ್ದು ಒಳಗಿನಿಂದ ನಿಧಾನವಾಗಿ ತನ್ನಲ್ಲಿ ಏನೋ

ಪರಿವರ್ತನೆಯಾಗುತ್ತಿದೆಯಲ್ಲವೆ ಎಂದು ಯೋಚಿಸುತ್ತ ಕಾಲುಗಂಟಿನ ಮೇಲಿನ ಎಕ್ಸಿಮಾವನ್ನು ತುರಿಸಿಕೊಂಡ. ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದ ಇನ್ಸ್‌ಪೆಕ್ಟರನ್ನು ಕಂಡಾಗ ನಮಸ್ಕಾರ ಎಂದು ಎಂದಿನಂತೆ ಹಲ್ಲು ಕಿರಿಯುವ ಮನಸ್ಸೇ ಆಗಲಿಲ್ಲ. ಆ ಅಲ್ಪನನ್ನು ಮೆಚ್ಚಿಸಿ ನನಗೇನಾಗಬೇಕಾಗಿದೆ ಎಂದು ಹಲ್ಲುಜ್ಜಿಕೊಳ್ಳುತ್ತ ಹಿತ್ತಿಲ ಬಾಗಿಲಲ್ಲಿ ನಂತಿದ್ದವನಿಗೆ ಅವರ ಹೆಂಡತಿ ಸ್ನಾನದ ಮನೆಗೆ ಹೋದುದು ಕಾಣಿಸಿತು. ನಿಂತಲ್ಲಿಂದಲೆ ಸ್ನಾನದ ಮನೆಯ ಒಳಭಾಗ ಕಾಣುವಂತಿದ್ದರೆ ಎಂದು ಆಕೆ ಬೆತ್ತಲೆಯಾಗುವ ಚಿತ್ರ ಕಲ್ಪಿಸಿಕೊಂಡು ಜೊಲ್ಲು ಸುರಿಸಿದ. ಇನ್ಸ್‌ಪೆಕ್ಟರರು ಡ್ಯೂಟಿಗೆ ಹೋದಾಗ ಆಕೆ ಮನೆಯಲ್ಲಿ ಒಬ್ಬಳೇ ಇರುತ್ತಾಳೆ ಎನ್ನಿಸಿ ಸಂತಾನ ನಿಯಂತ್ರಣದ ಅವಶ್ಯಕತೆಯೂ ಇಲ್ಲ ಎಂದು ಸಮಾಧಾನಗೊಂಡ. ಅರುಂಧತಿಗಿಂತ ಎಲ್ಲ ಹೆಂಗಸರೂ ಯಾಕೆ ಚೆನ್ನಾಗಿ ಕಾಣಿಸುತ್ತಾರೆಂದು ಯೋಚಿಸುತ್ತ ನಿತ್ಯದಂತೆ ನುಣ್ಣಗೆ ಮುಖಕ್ಷೌರಮಾಡಿಕೊಂಡು, ಮೂತಿಯನ್ನು ಮಂಗನಂತೆ ಚೂಪುಮಾಡಿ ಕನ್ನಡಿಯಲ್ಲಿ ಸ್ವರೂಪ ನೋಡಿಕೊಳ್ಳತೊಡಗಿದ – ಇಷ್ಟು ದಿನಗಳ ತನಕವೂ ನನಗೆ ನಾನೇ ಮೋಸ ಮಾಡಿಕೊಂಡೆನಲ್ಲಾ ಎಂದು ಅತೀವವಾಗಿ ಸಂಕಟವಾಗಿ, ಕಾಫಿ ಕುಡಿದು, ಬಂದು ಬಿದ್ದಿದ್ದ ವಾರಪತ್ರಿಕೆಯಲ್ಲಿ 'ಇಂದಿನ ನಾಗರಿಕತೆಗೆ ಬುದ್ಧನ ಸಂದೇಶ' ಎಂಬ ತಾನು ಬರೆದ ಲೇಖನವನ್ನು ನೋಡಿದ. ಲೇಖಕರನ್ನು ಪರಿಚಯ ಮಾಡಿಕೊಡುತ್ತ ಸಂಪಾದಕರು, "ಕನ್ನಡಿಗರಿಗೆ ಚಿರಪರಿಚಿತರಾದ ರಾಜಣ್ಣನವರು ಚಿಕ್ಕ ವಯಸ್ಸಿನಲ್ಲಿಯೇ ಇಂಗ್ಲಿಷ್ ಕನ್ನಡ ಸಂಸ್ಕೃತಗಳಲ್ಲಿ ಆಳವಾದ ಪಾಂಡಿತ್ಯವನ್ನು ಸಂಪಾದಿಸಿದ್ದಾರೆ.... ಸದ್ಯಕ್ಕೆ ಡಾಕ್ಟರೇಟ್‌ಗೆ ಸುಪ್ರಸಿದ್ಧ ಕನ್ನಡ ಸಾಹಿತಿ ಡಾಕ್ಟರ್ ದ್ವಾರಕಾನಾಥರಂತಹ ಮೇಧಾವಿಗಳ ಕೆಳಗೆ ಓದುತ್ತಿದ್ದಾರೆ... ಸ್ನೇಹಶೀಲರೂ ಸಜ್ಜನರೂ ಆದ ರಾಜಣ್ಣನವರಿಗೆ ಉಜ್ವಲ ಭವಿಷ್ಯವಿದೆ ಎಂದರೆ ತಪ್ಪಾಗಲಾರದು. ಸಿರಿಗನ್ನಡಂಗೆಲ್ಗೆ..." ಇತ್ಯಾದಿ ಬರೆದಿದ್ದರು – ಲೇಖನವನ್ನು ಅರುಂಧತಿ ಓದಿ ಮೆಚ್ಚಿಕೊಳ್ಳಬಹುದಲ್ಲವೆ ಎನ್ನಿಸಿ ರಾಜಣ್ಣನಿಗೆ ಖುಷಿಯಾಯಿತು.

ಆದರೆ ಕೂಡಲೇ ಮತ್ತೊಂದು ಹಾಳು ಯೋಚನೆ ಹುಗಿದ ಹೆಣದ ಮೇಲಿನ ಕೆಮ್ಮಣ್ಣನ್ನು ನಾಯಿ ಕೆದರುವಂತೆ ಮನಸ್ಸನ್ನು ತೋಡಿತು. "ಇದು ನಿಜವಾಗಿ ನನ್ನ ಲೇಖನವೆ? ಅವರಿವರ ಎಂಜಲನ್ನು ಖೋಜಣ್ಣ ಜನಪ್ರಿಯವಾಗಲೆಂದು ಹೆರಕಿ ಬರದಿದ್ದಲ್ಲವೆ" ಎಂದು ಜಿಗುಪ್ಸೆಯಾಗಿ ಪತ್ರಿಕೆಯನ್ನು ತನ್ನ ಲೇಖನಗಳು ಅಚ್ಚಾಗಿದ್ದ ಇತರ ಪತ್ರಿಕೆಗಳ ಜೊತೆ ಜೋಪಾನವಾಗಿಟ್ಟ. ಕೈ ಗಂಟನ್ನು ನೀಟಾಗಿ ಹಾಕಿಕೊಂಡು ಆಕಾಶಬಣ್ಣದ ಸೂಟ್ ತೊಟ್ಟು ಸೈಕಲ್ ಹತ್ತಿ ಹೊರಟ.



ಆದರೆ ದಾರಿಯಲ್ಲಿ ಎಂದಿನಂತೆ "ರಸಾನುಭವ – ಕಾವ್ಯಸತ್ಯ – ಅನ್ನಮಯ ಪ್ರಾಣಮಯ ವಿಜ್ಞಾನಮಯ ವಿವಿಧಕೋಶಾವಸ್ಥೆ – ಸತ್ಯ, ಸೌಂದರ್ಯ – ಜನಪ್ರಿಯತೆ – ಇಬ್ಸನ್ನಿನ ನಾಟಕಗಳಲ್ಲಿ ಪಾಪ – ಕಲ್ಪನೆ, ಮಹಾಯುದ್ಧವಾದರೆ ಮಾನವನಗತಿಯೇನು?" ಇತ್ಯಾದಿ ಯೋಚನೆಗಳ ಬದಲು "ಅರುಂಧತಿಯ ಎದೆ ಚೆನ್ನಾಗಿದೆ – ಫ್ರಿವೀಲ್, ಆಕ್ಸೆಲ್, ಡಸ್ಟ್‌ಕ್ಯಾಪ್, ಬಾಲ್ಸ್, ಒಂದು ಪೋಲಿ ಜೋಕು, ಸೈಕಲ್ಲಿನ ಸ್ಪೋಕ್ಸ್ ಸಂಖ್ಯೆ ಕಡಿಮೆಮಾಡುವುದು ಸಾಧ್ಯವೆ ; ಬ್ಯಾಲನ್ಸ್ ವೀಲ್ – ಹೇರ್‌ಸ್ಪ್ರಿಂಗ್ ಇನ್ನೂ ನಾಜೂಕಾಗಲಾರದೆ?" ಎಂಬ ಯೋಚನೆಗಳು ಯಾಕೆ ಬರುತ್ತಿದ್ದಾವೆಂದು ರಾಜಣ್ಣನಿಗೆ ಅರ್ಥವಾಗಲಿಲ್ಲ.

* * * * *

ಎಣ್ಣೆಗಪ್ಪು ಮೂತಿಯ ಹಸುವಿನಂತಹ ಮನಸ್ಸಿನ (ಪಾಪ ಅವನೂ ಖೋಜ!) 'ಬೆಣ್ಣೆ' ಎಂಬ ಅಡ್ಡ ಹೆಸರಿನ ಶಾಮಣ್ಣನ ನಮ್ರತೆಯನ್ನು ಸ್ವೀಕರಿಸುತ್ತ ಡ್ರಾಯಿಂಗ್ ರೂಮಿನಲ್ಲಿ ಕರಿಯ ಸೂಟು ತೊಟ್ಟು ಡಾಕ್ಟರ್ ದ್ವಾರಕನಾಥ್, M.A., D.Litt. (London) ಕಣ್ಣಿಗೆ ಕಟ್ಟುವಂತೆ ಕೂತಿದ್ದರು.

"ಸಾರ್ ಮೊನ್ನೆ ನಿಮ್ಮ ರೇಡಿಯೋ ಟಾಕ್ ತುಂಬ ತುಂಬ ಚೆನ್ನಾಗಿತ್ತು" ಎಂದು ಶಾಮಣ್ಣ ತನ್ನ ಪ್ರಾಮಾಣಿಕವಾದ ಮೆಚ್ಚಿಗೆಯನ್ನು ಗುರುವಿಗೆ ಒಪ್ಪಿಸುತ್ತಿದ್ದಂತೆ ರಾಜಣ್ಣ ಒಳಗೆ ಹೋಗಿ, ಸ್ಥಾನಮಾನಗಳಿಂದ ಭೂಷಿತರಾದವರ ಎದುರಿಗೆಲ್ಲ ಅಪ್ರಯತ್ನದಿಂದ ಅಥವಾ ತನ್ನ ಅಧೀನದಲ್ಲಿ ಇಲ್ಲದಿದ್ದ ದುಂಡು ಮುಖದ ಕೆಲವೊಂದು ಮಾಂಸಖಂಡಗಳ ವಿಚಿತ್ರವರ್ತನೆಯಿಂದ ಏರ್ಪಡುತ್ತಿದ್ದ ನಗುವಿನೊಡನೆ 'ನಮಸ್ಕಾರ' ಎಂದ.

ಡಾಕ್ಟರರು ನಗುಮುಖದಿಂದ ಸ್ವಾಗತಿಸಿ, ಕಣ್ಣುಗಳ ರೆಪ್ಪೆಯನ್ನು ಪಟಪಟನೆ ಹುಚ್ಚು ಗೂಬೆಯಂತೆ ಬಡಿದು –

"ಏನು ಬದಲಾಯಿಸಿಬಿಟ್ಟಿದ್ದೀರಲ್ಲ – ಆರೋಗ್ಯವಿಲ್ಲವೆ ? ನೆನ್ನೆ ಯಾಕೆ ಬರಲಿಲ್ಲ?" ಎಂದರು.

"ಏನೂ ಇಲ್ಲ ಸಾರ್, ನೆನ್ನೆ ಸೈಕಲ್ ಓವರ್‌ಆಯಿಲ್ ಮಾಡಿದೆ. ವಾಚಿನ ಹೇರ್‌ಸ್ಪ್ರಿಂಗ್ ಕೆಟ್ಟೋಗಿತ್ತು. ರಿಪೇರಿ ಮಾಡ್ತಾ ಕೂತೆ. ಹಾಗೇ ಹೊತ್ತಾಯ್ತು. ಕ್ಷಮಿಸಿ" ಎಂದು ಇನ್ನೂ ಏನೋ ಗಂಟಲಲ್ಲೇ ಉಳಿದು ರಾಜಣ್ಣ ಸುಮ್ಮನಾದ. "Oh ! That is extremely interesting ! ನೋಡ್ರಿ ನಂಗೂ ಎಷ್ಟೋ ಸಾರಿ ಅನ್ಸಿದೆ : Educated people ನಲ್ಲಿ dignity of labour ಹೊರ್ಟು ಹೋಗಿದೇಂತ. ಅದಕ್ಕೇ ಪಾಪ ಆ ಮುದ್ಕ ನೂಲು ತೆಗೀರಿ ಅಂತ ಅಷ್ಟು ಬಡ್ಕೋತಿದ್ದಿದ್ದು.

Body ಮತ್ತು Intellect ಎರಡರಲ್ಲೂ harmonious development ಇರ್ಬೆಕ್ರಿ. ಇಲ್ದಿದ್ರೆ..." ಎಂದು ಡಾಕ್ಟರರು ಸೂಚಿಸಿದ ಮೆಚ್ಚಿಗೆಗೆ ಅಷ್ಟು ಹೊತ್ತೂ ಸುಮ್ಮನಿದ್ದ ಶಾಮಣ್ಣ ಕನ್ನಡಕ ತೆಗೆದು ಕರ್ಚೀಫಿನಿಂದ ಒರಸುತ್ತ ಗಂಟಲು ಕೆರೆದು ಕೊಂಡು–

"ಅದನ್ನೇ ಅಲ್ವೆ ಸಾರ್ ಲಾರೆನ್ಸ್ ಹೇಳೋದು. ನಂಗೂ ಹಾಗೇ ಅನ್ಸಿದೆ–" (ನಾಚಿಕೊಳ್ಳುತ್ತ) "ಅಲ್ಲದೆ ನಂಗೆ ಜಾತಕ ನೋಡಕ್ಕೂ ಬರುತ್ತೆ ಸಾರ್. In my opinion that is a Science Sir" ಎಂದ.

"Oh really ! That is wonderful, I say. Do you know that I can cook very well ?" ಎಂದು ದ್ವಾರಕಾನಾಥರು ಕಣ್ಣುಗಳ ಸುತ್ತಲಿನ ಪುಟ್ಟ ಪುಟ್ಟ ಮಾಂಸಖಂಡಗಳನ್ನು ಸಿಂಡರಿಸಿ ಮಾತಿಗೊಮ್ಮೆ ತೋರಬೆರಳೆತ್ತಿ ಬಲಗೈಗೆ ಕಟ್ಟಿಕೊಂಡಿದ್ದ ವಾಚಿನ ಚಿನ್ನದ ಚೈನನ್ನು ಬಿಚ್ಚುವುದು ಹಾಕುವುದು ಶುರುಮಾಡಿದರು.

ರಾಜಣ್ಣನಿಗೆ ಫಕ್ಕನೆ ಅವರ ವಾಚಿನ ಕಡೆ ಕಣ್ಣುಹೋಯಿತು. "ಎಲ್ಲಿ ನಿಮ್ಮ ವಾಚ್ ನೋಡೋಣ ಕೊಡಿ ಸಾರ್" ಎಂದ. ಡಾಕ್ಟರಿಗೆ ಕೂಡಲೆ ಏನು ಮಾಡಬೇಕೋ ತೋಚದೆ ಕಂಗಾಲಾಗಿ ವಾಚನ್ನು ಬಿಚ್ಚಿಕೊಟ್ಟರು. ರಾಜಣ್ಣ ಅದರ ಮುಚ್ಚಳ ತೆಗೆದು ಏಕಾಗ್ರತೆಯಿಂದ ಅದನ್ನು ದೃಷ್ಟಿಸಿದ. ಸ್ವಲ್ಪ ತಡೆದ ಮೇಲೆ – ಉತ್ಸಾಹದಿಂದ.

"ಸಾರ್ ಇದರ ಮೆಕ್ಯಾನಿಸಂ ನಂಗೆ ತುಂಬ ಹೊಸದು. ಆಟೋಮ್ಯಾಟಿಕ್ ವೈಂಡಿಂಗ್ ಹೇಗಾಗುತ್ತದೆ ಈಗ ಗೊತ್ತಾಯ್ತು. ವಂಡರ್‌ಫುಲ್ – ವಂಡರ್‌ಫುಲ್" ಎಂದು ಮತ್ತೆ ಏಕಾಗ್ರಚಿತ್ತನಾಗಿ ನೋಡತೊಡಗಿತು.

ಡಾಕ್ಟರರು ಪೈಪ್ ಹಚ್ಚಿ ಚಿಂತಾಕ್ರಾಂತರಾದರು. ಮತ್ತೆ ಇಲಿಯನ್ನು ಕಂಡ ತಕ್ಷಣ ಅರೆಮುಚ್ಚಿ ಕಾಯುತ್ತಿದ್ದು ಕಣ್ಣು ತೆರೆದು ಮೇಲೆ ಹಾರುವ ಬೆಕ್ಕಿನಂತೆ – ಥಟ್ಟನೆ –

"ಯಾಕೋ ಈಚಿಗೆ ನನಗೆ memory fail ಆಗ್ತಿದೇರಿ – ವಾಚನ್ನು modern poet ಒಬ್ಬ ಫೈನ್ ಇಮೇಜಾಗಿ ಉಪಯೋಗಿಸಿಕೊಂಡಿದಾನೆ – ಯಾರವನು ? ನೆನಪಿದೆಯೋ ?" ಎಂದರು.

ಶಾಮಣ್ಣ ಆ ಪ್ರಶ್ನೆಗೆ ಏನು ಉತ್ತರ ಕೊಟ್ಟನೋ ರಾಜಣ್ಣನಿಗೆ ಕೇಳಿಸಲೇ ಇಲ್ಲ. ವಾಚಿನಿಂದ ಮುಖವೆತ್ತಿ ಗಂಭೀರವಾಗಿದ್ದ ಡಾಕ್ಟರನ್ನು ನೋಡಿ –

"ಸಾರ್ ತಾವು ಯುರೋಪಿಗೆ ಹೋದಾಗ ಸ್ವಿಡ್ಸರ್ಲೆಂಡಿನಲ್ಲಿ ವಾಚುಗಳನ್ನು ಹೇಗೆ ತಯಾರಿಸುತ್ತಾರೆ ನೋಡಿದ್ದೀರಾ ಸಾರ್? ಸ್ವಿಡ್ಸರ್ಲೆಂಡಿನ ಕೋಳಿಮೊಟ್ಟೆ. – That is how we were taught in the middle school ಹಿ ಹಿ" ಎಂದು



ಹಲ್ಲು ಕಿರಿದ.

ಡಾಕ್ಟರ್ ದ್ವಾರಕಾನಾಥರು ಆಶ್ಚರ್ಯದಿಂದ ರಾಜಣ್ಣನ ಕಡೆ ನೋಡಿದರು. ಯಾವಾಗಲೂ ಗಂಭೀರ ವಿಷಯಗಳನ್ನೇ ಚರ್ಚಿಸುತ್ತಿದ್ದ ಅವನ ಮುಖದಲ್ಲಿ ಏನೋ ಬದಲಾವಣೆಯಾಗಿದೆ ಎನ್ನಿಸಿತು. ರಾಜಣ್ಣನೂ ಹಾಗೆಯೇ ತನ್ನ ಬಗ್ಗೆ ಅನಾವಶ್ಯವಾಗಿ ಅಸೂಯೆ ಪಡುತ್ತಿದ್ದ ಶಾಮಣ್ಣನನ್ನೂ ಎಂದೂ ನೋಡದ ದೃಷ್ಟಿಯಲ್ಲಿ ನೋಡಿದ.

ಪಾಪ ಎನ್ನಿಸಿತು. ವಾಚುಗಳನ್ನು ಮಾರುವ ಒಂದು ಅಂಗಡಿಯನ್ನು ಇಟ್ಟಿದ್ದರೆ ಅವರು ತುಂಬಾ ಸುಖಿಗಳಾಗುತ್ತಿರಲಿಲ್ಲವೇ ಎಂದು ಕರುಳು ಮರುಗಿತು. Thinkers Club, ಕಾಲೇಜು, ಲೈಬ್ರರಿ, ಪೇಪರಿನಲ್ಲಿ ಹೆಸರು, 'ಓ ಡಾಕ್ಟರ್ ನಮಸ್ಕಾರ', aesthetic sense ಎಲ್ಲ ಮಸಲತ್ತು ಮಾಡಿ ಅವರನ್ನು ಕೊಂದುಬಿಟ್ಟುವಲ್ಲ ಎಂದು ಮರುಕ ಹುಟ್ಟಿತು. "ಸಾರ್ ನೀವೊಂದು ವಾಚು ಮಾರುವ ಅಂಗಡಿ ಇಡಿ. ಶಾಮಣ್ಣ ಕ್ಯಾನ್ವಾಸ್ ಮಾಡ್ತಾನೆ. ನಾನು ಪಕ್ಕದಲ್ಲಿ ರಿಪೇರಿ ಅಂಗಡಿ ಇಡುತ್ತೇನೆ. ಜನರ ಮೆಚ್ಚಿಗೆಗೇಂತ ಹಾಕಿಕೊಂಡಿರುವ ಈ ವೇಷ ಬಿಸಾಕೋಣ" ಎಂದುಬಿಡಲೇ ಎನ್ನಿಸಿದರೂ ಧೈರ್ಯ ಸಾಕಾಗದೆ ಅಪ್ರಯತ್ನದಿಂದ ಮುಖದ ಮೇಲೆ ತಯಾರಾಗುತ್ತಿದ್ದ ಮಂದಹಾಸ ಮತ್ತೆ ತನ್ನಲ್ಲಿ ಉಂಟಾಗುತ್ತಿದೆ ಎಂದು ಅರಿವಾಯಿತು. ಮಂದಹಾಸದ ಜೊತೆಗೆ ಎತ್ತಿದ ಕತ್ತಿನಲ್ಲಿ ಗಾಂಭೀರ್ಯ, ಕಟ್ಟಿಕೊಂಡ ಕೈಗಳಲ್ಲಿ ದೈನ್ಯ, ತೀಕ್ಷ್ಣವಾದ ಕಣ್ಣುಗಳಲ್ಲಿ ಡಾಕ್ಟರರ ಜ್ಞಾನವನ್ನು ಹೀರಬೇಕೆಂದೆನಿಸುವ ಕಾತುರ ಹಿಂತಿರುಗಿತು. ಡಾಕ್ಟರರಿಗೂ ಚಿರಪರಿಚಿತ ಮುಖವನ್ನು ಮತ್ತೆ ಕಾಣುವಂತಾಯಿತಲ್ಲ ಎದು ಗೆಲುವಾಗಿ ಒಳಗಿನಿಂದ ಕಾಫಿ ತರಿಸಿ ಕುಡಿದು ಮೂವರೂ ಮತ್ತೆ ತತ್ವಜಿಜ್ಞಾಸೆಯಲ್ಲಿ ತೊಡಗಿ ಕಾಂಪೌಂಡಿನಲ್ಲಿ ಒಳಗಿದ್ದ ಹೂದೋಟದಲ್ಲಿ ತಿರುಗತೊಡಗಿದರು.

ರಾಜಣ್ಣನೂ ಚಿಂತಾಕ್ರಾಂತನಾದ – ಆದರೆ ಎಂದಿಂತಲ್ಲ. ಡಾಲಿಯಾ ಹೂಗಳು ತುಂಬಾ ಚೆನ್ನಾಗಿವೆಯಲ್ಲವೆ ಎಂದು ಡಾಕ್ಟರರು ಕೇಳಿದ್ದಕ್ಕೆ ಮುಖದ ಮಂದಹಾಸ ಹೌದೆನ್ನುತ್ತಿತ್ತು. ರಸಾನಂದ, ವಿವಿಧಕೋಶಾವಸ್ಥೆ, ಸೂಯೇಜ್ ಕಾಲುವೆಯ ಸಂಗತಿ ಎಲ್ಲದರ ಬಗ್ಗೆಯೂ ನಾಲಿಗೆ ಕಲಿತದ್ದನ್ನೆಲ್ಲಾ ಮುಗ್ಗಿ ಹೇಳುವ ಪ್ರೈಮರಿ ಹುಡುಗನಂತೆ ಒಪ್ಪಿಸುತ್ತಿತ್ತು. ಆದರೆ ಡಾಕ್ಟರರು "ನನಗೆ ಸುಂದರಿಯಾದ ಒಬ್ಬ ಹುಡುಗಿಯನ್ನು ನೋಡಿದರೆ ಮಾಡಬೇಕು paint ಎನ್ನಿಸುತ್ತೆ" ಅಂದಾಗ ರಾಜಣ್ಣನಿಗೆ ಯಾವುದೋ ಮಾತು ಗಂಟಲಲ್ಲೆ ಉಳಿದು 'ಹೌದು' ಎಂದುಬಿಟ್ಟ. ಕಲ್ಲುಬೆಂಚಿನ ಮೇಲೆ ಹೊಂಗೆ ಮರದ ತಂಪಾದ ನೆರಳಿನಲ್ಲಿ

ಕೂತು ಎಂದಿನಂತೆ ಮಾತನಾಡುತ್ತಿದ್ದಾಗ ಕೈ ಆಲ್ಸೇಶನ್ ನಾಯಿಯ ಮೈಯನ್ನು ತಡುವುತ್ತಿದ್ದಂತೆ – ರಾಜಣ್ಣ ಡಾಕ್ಟರರ ಮಾತಿಗೆ ಹೂಗುಟ್ಟಲು ಬೆಣ್ಣೆ ಶಾಮಣ್ಣನನ್ನು ಬಿಟ್ಟು ಯೋಚಿಸತೊಡಗಿದ.

ಅದೊಂದು ರೀತಿಯ ಕಾಳಗ. ಮನೋವಿಜ್ಞಾನಿಗಳಿಗೆ ಅರ್ಥವಾಗುವಂತಹುದು. ತಮಿಳು ಸಿನಿಮಾದಲ್ಲಿ ನಟ ಕನ್ನಡಿಯ ಎದಿರು ನಿಂತಾಗ ಬಿಂಬ ಪ್ರತಿಬಿಂಬಗಳ ನಡುವೆ ನಡೆಯುತ್ತದಲ್ಲ ಅಂಥದು –

"ಎಲವೋ ಖೋಜಣ್ಣ – ನಿನ್ನ ಸಾಹಿತ್ಯವಿಮರ್ಶೆ, ಮುಖದ ಮೇಲಿನ ಮಂದಹಾಸ – ಸಾವಿರಾರು ಮೈಲಿ ಆಚಿನ ವಿಷಯಗಳಲ್ಲಿ ನಿನ್ನ ಆಸಕ್ತಿ ಎಲ್ಲವೂ ನಿಜವೇನೊ? ಬೇರೆಯವರ ಕಣ್ಣಿನಲ್ಲಿ ಆಕರ್ಷಕವಾಗಿ ಕಾಣಲೆಂದು ನನ್ನನ್ನು ಬಲಿಗೊಟ್ಟೆಯಲ್ಲ ! ಸಾಮಾಜಿಕ ಗೌರವಕ್ಕಾಗಿ ನನ್ನನ್ನು ಇಷ್ಟು ದಿನ ಹುಗಿದು ಬಿಟ್ಟೆಯಲ್ಲ ! ಅರುಂಧತಿಗೆ ಮುತ್ತು ಕೊಡಲು ಪ್ರಯತ್ನಿಸಿದರೂ ನೀನು ಅಡ್ಡ ಬಂದಿಯಲ್ಲ ! ವಾಚು ರಿಪೇರಿ ಮಾಡಲು ಬಿಡಲಿಲ್ಲವಲ್ಲ ! – ಯಾವ ಸಂತೋಷಕ್ಕೆಂದು ಹೀಗೆ ಮಾಡಿದೆ !" –

"ರಾಜಣ್ಣ... ನೀನು ಸಣ್ಣವನು. ನಿನಗೆ ತಿಳುವಳಿಕೆಯಲ್ಲ. ಪ್ರಾಣಿತನದ ಮಣ್ಣಿನ ಮೇಲೆ ಬಿಟ್ಟ ಹೂವೇ ಸಂಸ್ಕೃತಿ. ಅದನ್ನು ನಾನು ಗಳಿಸಿಕೊಂಡಿದ್ದೇನೆ."

"ಹೂವಲ್ಲ ಪಾಚಿ !"

"ಮುಚ್ಚು ಬಾಯ್! ನಿನ್ನ ಮಾತು ಕೇಳಿದ್ದರೆ ನಾನು ವಾಚು ರಿಪೇರಿಮಾಡಿ ಕೊಂಡಿರಬೇಕಿತ್ತು. ಅಪ್ಪ ಹೊಡೆದರೂ ನಿನಗೆ ಬುದ್ಧಿ ಇನ್ನೂ ಬಂದಿಲ್ಲವಲ್ಲ. ಎಷ್ಟು ದಿನ ಓದಿದರೂ ನೀನು ಬದಲಾಗಲಿಲ್ಲವಲ್ಲ, ನಿನಗೆ ನಾಚಿಕೆಯಾಗುವುದಿಲ್ಲವೆ? ಇಷ್ಟು ಜನ ಹೆಂಗಸರ ಪವಿತ್ರ ಪ್ರೇಮ, ದ್ವಾರಕಾನಾಥರಂತಹ ಜ್ಞಾನಿಗಳ ಸಹವಾಸದಲ್ಲೂ ನೀನು ಪಳಗಲಿಲ್ಲವೆ? ಥೂ ನಿನ್ನ ಮುಖಕ್ಕಿಷ್ಟು ಬೆಂಕಿಯಿಕ್ಕಿತು."

"ಅಯ್ಯೋ ಹುಚ್ಚೆ? ಹೆಂಗಸರು ನೀನು ನಿರುಪದ್ರವಿಯಾದ್ದರಿಂದ – ಅರ್ಥಾತ್ ಅವರ ಪವಿತ್ರಾತ್ಮವನ್ನು ಮಾತ್ರ ಬಯಸುವನಾದ್ದರಿಂದ – ಏನೋ ಖುಷಿಗೆ ನಿನ್ನ ಜೊತೆ ಇರುತ್ತಾರೆ. ಒಳಗೊಳಗೇ ನಿನ್ನ ಬಗ್ಗೆ ಎಷ್ಟು ಜಿಗುಪ್ಸೆ ಪಡುತ್ತಾರೆ ಗೊತ್ತೇನು? ಇನ್ನು ಪಾಪ ದ್ವಾರಕಾನಾಥರು ! ವ್ಯಾಪಾರಿಗಳಾಗಿದ್ದರೆ ಇನ್ನೂ ಎಷ್ಟು ಹರ್ಷಚಿತ್ತರಾಗಿರುತ್ತಿದ್ದರೋ... ಇಲ್ಲಿ ನೋಡು – ನನ್ನ ಮಾತು ಕೇಳು..."

– ಇತ್ಯಾದಿ ಇತ್ಯಾದಿ ಅವನ ಮನಸ್ಸಿನಲ್ಲಿ ನಡೆಯುತ್ತಿದ್ದಂತೆ ಸೌಂದರ್ಯ ಸತ್ಯದ ಜಿಜ್ಞಾಸೆ ಅಂತಿಮ ಘಟಕ್ಕೆ ಬಂದಿತ್ತು. ಎಲ್ಲರಿಗೂ ಹಸಿವಾಗುತ್ತಿತ್ತು.



ರಾಜಣ್ಣ ನಮಸ್ಕಾರ ಹೇಳಿ ಹೊರಟ.

* * * * *

ಮನೆಗೆ ಹಿಂತಿರುಗುವಾಗ ಲೈಫ್‌ಬಾಯ್‌ಸೋಪು ಕೊಳ್ಳಲು ಮರೆಯದೆ ಹತ್ತು ವರ್ಷದ ಹಿಂದಿನಿಂದ ಹಾಳಾಗಿ ಬಿದ್ದಿದ್ದ ವಾಚನ್ನು ರಿಪೇರಿಮಾಡುವ ಗೊಡವೆಗೇ ಹೋಗದಿದ್ದರೆ ಚೆನ್ನಾಗಿತ್ತು ಎನ್ನಿಸಿತು. ಆದರೂ ಮಾಡಿನ ಹೆಂಚು ಕಿತ್ತು ಒಳಗೆ ಧುಮುಕುವ ಮಂಗಗಳಂತೆ ಯೋಚನೆಗಳು ದಂಡುಕಟ್ಟಿ ಮನಸ್ಸಿನೊಳಗೆ ಇಳಿಯತೊಡಗಿದುವು.

ಅರುಂಧತಿಯ ಜೊತೆ ಕುಳಿತು ಕೀಟ್ಸ್ ಕವನ ಓದುವುದಕ್ಕಿಂತ ಅವಳನ್ನು ತಬ್ಬಿ ಮಲಗಿಕೊಳ್ಳುವುದೇ ಹೆಚ್ಚು ಸುಖವಲ್ಲವೆ? ನನ್ನ ಸ್ವಭಾವಕ್ಕೆ ಸೌಂದರ್ಯ ಅಧ್ಯಯನಕ್ಕಿಂತ ವಾಚು ರಿಪೇರಿಯೇ ಹೆಚ್ಚು ಒಳ್ಳೆಯದಲ್ಲವೆ? ಸೂಯೆಜ್ ನಾಲೆ ಏನಾದರೆ ನನಗೇನು? – ಪೊಲೀಸರ ಕೈಗೆ ಸಿಕ್ಕದಂತೆ ದ್ವಾರಕಾನಾಥರನ್ನು ಕೊಲ್ಲುವುದು ಸಾಧ್ಯವೆ? – ವಾಸುದೇವಾಚಾರ್ಯರ ಶಾಸ್ತ್ರೀಯ ಸಂಗೀತ ಆವಾರಾ ಸಂಗೀತಕ್ಕಿಂತ ಉತ್ತಮವೆಂದು ಮೊನ್ನೆ ಸಾಧಿಸಿದೆನಲ್ಲ ಅದು ನಿಜವಾಗಿ ನನಗನಿಸಿದ್ದೆ?– ರೋರಿಕ್ಕನ ಚಿತ್ರಗಳನ್ನು ನೋಡಿ ಹೋದ ಭಾನುವಾರ ಯಾಕೆ ತಲೆದೂಗಿದೆ?....

ಮನೆಗೆ ಹಿಂತಿರುಗಿದವನೆ ಎಂದಿನಂತೆ ಅವನು ಬರೆಯುವ ಮೇಜಿನ ಎದಿರು ಕುಳಿತು. ಪೆನ್ನು ಹಿಡಿದುಕೊಂಡ. ಅಪ್ರಯತ್ನವಾಗಿ ಸಾಲುಗಳು ಹೀಗೆ ಹರಿದುವು –

"ಪ್ರಿಯ ಅರುಂಧತಿ, ನಿನ್ನಿಂದಲೇ ಈಗ ನಾನು ಬದುಕಬೇಕು... ಇನ್ನು ಮೇಲೆ ಹಿಂದಿನಂತೆ ಬೇಡ... ಎಲ್ಲ ಮೋಸ... ಅರ್ಪಿಸಿಕೊಳ್ಳಬೇಕು... Superficial ಆಗಿ ಬದುಕದೆ ನಿನ್ನ ಜೊತೆಗಾದರೂ "Vital relationship" ಇಟ್ಟುಕೊಳ್ಳಬೇಕೆಂಬ ಬಯಕೆ... ರಾಜಣ್ಣನಿಗೆ ನಿನ್ನ ಮೇಲಿದ್ದ ಬಯಕೆಯನ್ನು ಕಂಡು ಹೆದರಿ ಖೋಜಣ್ಣ ಕಸಿದುಕೊಂಡ. ಅವನನ್ನು ನಾನು ದ್ವೇಷಿಸುತ್ತೇನೆ. ಎಲ್ಲರಂತೆ ನೀನೂ ಅವನನ್ನು ಪ್ರೀತಿಸಿ ಬೆಳೆಸಬೇಡ. ನಿನ್ನ ಜೊತೆಗೆ ಮಲಗಬೇಕೆಂದು ನನಗೆ ವಿಪರೀತ ಆಸೆ... ವಾಚು ರಿಪೇರಿ ಮಾಡುವ ಅಂಗಡಿ ಇಡಲೆ..." – 'ಸಾಯುತ್ತೇನೋ ಏನೊ? – ನನ್ನ ಶ್ವಾಸಕೋಶಗಳನ್ನು ಕ್ರಿಮಿಗಳು ಉಣ್ಣುತ್ತಿದ್ದಾವೆಂದು ಭಯ' ಎಂದು ಅವಳ ಮಸ್ಸು ಕರಗುವಂತೆ ಬರೆದು ಕೊನೆಯ ಮಾತುಗಳಾಗಿ ಎಲಿಯಟ್ಟನ "The awful daring of a moments Surrender, by this and this only we have existed" ಎಂದು ಬರೆಯಲೇ

ಎನ್ನಿಸಿತು. ಥೂ ! ಮತ್ತೆ ಖೋಜಣ್ಣ ರಾಜಣ್ಣನ ಅಭಿಪ್ರಾಯ ಆಕರ್ಷಕವಾಗುವಂತೆ ಮಾಡಲು ಯತ್ನಿಸುತ್ತಿದ್ದಾನಲ್ಲಾ ಎಂದು ನಾಚಿಕೆಯಾಯಿತು –

ಬರೆದ ಕಾಗದವನ್ನು ಹರಿದ. ಹಸಿವಾಯಿತು – ಊಟ ಮಾಡಿದ. ಸುಸ್ತಾಗಿತ್ತು – ಹಾಸಿಗೆಯ ಮೇಲೆ ಒರಗಿದ. ಮೈಕೈಯನ್ನೆಲ್ಲ ತುರಿಸಿಕೊಂಡ. ಮತ್ತೆ ಎದ್ದ. ಇನ್ನೊಂದು ಕಾಗದ ಬರೆದ – ಹರಿದ – ಸಂಜೆಯಾಯಿತು. ಕಾಫಿ ಕುಡಿದ. ಶ್ರೀ...ಯವರು ಸಿಕ್ಕರು "ಸ್ವಾಮಿ ನಿಮ್ಮ ಇತ್ತೀಚಿನ ಕವನದಲ್ಲಿ ಒಳ್ಳೆಯ ಕಲ್ಪನೆಯಿದೆ. ಆದರೆ ಕವನದಲ್ಲಿ ಬಿಗಿ ಸಾಲದು. ನಿಮಗೆ ನಿಜವಾಗಿ ಉತ್ತಮ ಭವಿಷ್ಯವಿದೆ" ಎಂದ. ತಾನು ಯಾಕೆ ಹಾಗೆಂದುಬಿಟ್ಟೆನೆಂದು ತಲೆ ಕೆರೆದುಕೊಂಡ. ನಗಬೇಕೆನಿಸಿ ನಕ್ಕ. ಮನೆಗೆ ಹೋಗಿ ಊಟ ಮಾಡಿದ. ಹಾಸಿಗೆಯ ಮೇಲೆ ಒರಗಿದ. ನಿದ್ದೆ ಬರಲಿಲ್ಲ. ಆಕಳಿಸುತ್ತ ಎದ್ದು ಕೂತ.

ಅರುಂಧತಿ ಇರುವ ಊರಿಗೆ ಹೋಗುವ ರೈಲುಬಂಡಿ ರಾತ್ರೆ ಹನ್ನೆರಡಕ್ಕೆ ಹೊರಡುವುದು ಎಂದು ನೆನಪಾಯಿತು. ರೋಡಿನಲ್ಲಿ ಬ್ಯೂಕ್ ಕಾರು ಗಂಭೀರವಾಗಿ ಚಲಿಸಿತು. ಷಾಪಸಂದ್ ಗಾಡಿ ಕಟಕಟ ಎಂದು ಹೋಯಿತು. ನಕ್ಷತ್ರಗಳು ನಿಶ್ಚಲವಾಗಿ ಉರಿದರೂ ಅಧೋಲೋಕದ ಕೊಚ್ಚೆ ಕತ್ತಲಿನಿಂದ ಗೊಂಟರು– ಕಪ್ಪೆಗಳ ರಗಳೆ ಕರ್ಣಪಿಶಾಚಿಯಾಗಿ ಕಾಡುತ್ತಿತ್ತು. ರಾಜಣ್ಣ ಸಿಗರೇಟು ಹಚ್ಚಿ ಕೆಮ್ಮಿದ. ಎದೆ ಸವರಿಕೊಂಡು ಚಿಂತಿಸಿದ. ಪುಪ್ಪುಸ ಶ್ವಾಸಕೋಶಗಳಲ್ಲಿ ಸಿಗರೇಟಿನ ಹೊಗೆ ಏನು ಮಾಡುತ್ತದೆಂದು ರೀಡರ್ಸ್ ಡೈಜೆಸ್ಟ್‌ನಲ್ಲಿ ಬರೆದದ್ದು ನಿಜವೆ? Are my Lungs also weak? – ಕೀಟ್ಸ್ ಪಾಪ ಎಷ್ಟು ಕೊರಗಿ ಸತ್ತ – ನಾನೂ ಹಾಗೆಯೇ ಎಲ್ಲಿಯಾದರೂ?...

ಹುಚ್ಚಾಸ್ಪತ್ರೆಗೆ ಸೇರಿ,

ಓ ನನ್ನ ಬಿಡಿ ಬಿಡಿ ಡಾಕ್ಟರ್ – ಯಾಕ್ರೀ ನನ್ನ ಹಿಂಗೆ ಹಿಂಸಿಸ್ತಿದೀರಿ? ನಾನು ಖಂಡಿತ ಸ್ಕಾಲರ್ ಅಲ್ಲ ಸಾರ್ – ಪಾಪದವ ಸಾರ್ – ವಾಚ್ ರಿಪೇರಿ ಮಾಡೋವ್ನು ಸಾರ್ – ನೆಗಿಬೇಕೂಂತ ಅನ್ನಿಸ್ತದೆ, ಕಿರುಚಬೇಕೂಂತ ಅನ್ನಿಸ್ತದೆ, ನಿಮ್ಮ ನಿಮ್ಮ ದಗಾನ್ನೆಲ್ಲ ಕಂಡು ಗಹಗಹ ನಗಬೇಕೂಂತ ಅನ್ನಿಸ್ತದೆ – ಏನು ಮಾಡ್ತಿದೀರಿ? ನನ್ನನ್ನು ನನ್ನ ಪಾಡಿಗಷ್ಟು ಬಿಟ್ಬಿಡಿ – ಅಲ್ಲ ಡಾಕ್ಟರ್ ನಾನು ವಾಚ್ ರಿಪೇರಿ ಮಾಡಿದರೆ ನಿಮ್ದೇನು ಕಿತ್ಕೋತದೆ ಅಂತ – ರೇಗಬೇಡಿ – ಸುಮ್ನೆ ಅಂದೆ. ಹೊರಟ್ ಹೋಗಿ, ಹೂ, ಹೇಳಿದ್ದು ಕೇಳಿಸ್‌ಲಿಲ್ವೆ? – ಹೊರಟ್ ಹೋಗಿ ಅಂದೆ. "ಅಯ್ಯೋ ಪಾಪ, ಹೇಗೆ ಪಾಪ ನರಳ್ತಿದಾನೆ ನೋಡಿ. ಸರಿಯಾಗಿ ಇದ್ದ, ಹೇಗೆ ತಲೇ ಕೆಡ್ತೊ! ಕನ್ನಡ ಸಾಹಿತ್ಯದ ತುಂಬ ಒಳ್ಳೇ ವಿದ್ಯಾರ್ಥಿ ಕಂಡ್ರೀ. ಗುಣವಾಗಬಹುದು ಅಲ್ವೆ ? ಅಂತೂ ಕಷ್ಟ. ಇವನಿಗೇನು ಸ್ಕಿಸೋಫ್ರೇನಿಯಾನೇ? ಪಾಪ. ಪಾಪ." "Doctor, is it true my lungs are weak ? ಸತ್ತೋಗಿ ಬಿಡ್ತೀನಿ. ಕೀಟ್ಸ್‌ನ ಹಾಗೆ ಪಾಪ ಸತ್ತು ಹೋಗಿ ಬಿಡ್ತೀನಿ. X-Ray ತೆಗೆಸಲೆ? ಅಯ್ಯೋ ಕ್ರಿಮಿಗಳೇ – ಒಳಗೊಳಗೇ ಶ್ವಾಸಕೋಶಗಳ ಒಳಗೇ – ಯಾವ ಪೂರ್ವಜನ್ಮದ ಪಾಪ ಡಾಕ್ಟರ್ – ಈಗೇನು ಮಾಡ್ಲಿ ಹೇಳಿ." "ಏನೋ ರಾಜ? ಖೊ, ಖೊ, ಖೋ,... ಜ. ರ, ರ, ರಾ, ಜ" "ಕಿ, ಕಿ, ಕಿ, ಟ್ವಿ." ಖೊ, ಖೊ, ಖೋ...ಜ"



ರಾಜ – ತಲೆಯಾಡಿಸಿದ. ಸಿಗರೇಟು ಬೂದಿ ಕೆಡವಿ ಮತ್ತೊಮ್ಮೆ ತಲೆಯಾಡಿಸಿದ. ಇಲ್ಲ – ಸಾಧ್ಯವಿಲ್ಲ. ಇಷ್ಟೆಲ್ಲ ಆದ ಮೇಲೆ ವಾಚು ರಿಪೇರಿ ಕೆಲಸ ಶುರು ಮಾಡಿದರೆ ಹುಚ್ಚಾಸ್ಪತ್ರೆಯೇ ಗತಿ – ಹಾಗಾದರೆ ಮುಕ್ತಿ? ಗ್ರೀಕರು ಹೇಳಿದಂತೆ ಇದಕ್ಕೂ ಒಂದು ಸುವರ್ಣಮಧ್ಯಮದ ದಾರಿಯಿಲ್ಲವೆ? ಇದೆಯೆ?

Yes ! ಲಾರೆನ್ಸ್ ಹೇಳುವ ಹಾಗೆ ಒಂದು Vital relationship ಬೆಳೆಸಬೇಕು. (ಥೂ ! ಮತ್ತೆ ಖೋಜಣ್ಣ quote ಮಾಡತೊಡಗಿದ) ಹೌದು ಬೆಳೆಸಿಕೊಳ್ಳಬೇಕು. ಒಂದು ವ್ಯಕ್ತಿಯ ಜೊತೆಯಾದರೂ ದೇಶಾವರಿ ವೇಷ ಹಾಕದೆ ನಿಜಸ್ವರೂಪದಲ್ಲಿ ವ್ಯವಹರಿಸುವುದು. ಸದ್ಯಕ್ಕೆ ಸ್ವಲ್ಪಕಾಲವಾದರೂ ಹೊರಗಿನ ಮಟ್ಟಿಗೆ ಈಗಿದ್ದ ಹಾಗೇ ಇರುವುದು. ಪರಿಸ್ಥಿತಿ ಇನ್ನೂ ವಿಪರೀತಕ್ಕಿಟ್ಟುಕೊಂಡಿಲ್ಲ. ಈಗಲೇ ನರಗಳು ಸಡಲಿ ಮನೋದೌರ್ಬಲ್ಯದಿಂದ ಹುಚ್ಚು ಹಿಡಿದೀತೆನ್ನುವ ಭಯ ಅಷ್ಟು ನಿಜವಲ್ಲ. ಆದರೂ ಏನಾದರೂ ಮಾಡಲೇ ಬೇಕು. ಏನು? Psycho-analyse ಮಾಡಿಸಿ ಕೊಂಡರೆ ಹೇಗೆ? ಅಥವಾ –

ಮತ್ತೊಂದು ಸಿಗರೇಟು ಹಚ್ಚಿ ಎಕ್ಸಿಮಾ ತುರಿಸಿಕೊಳ್ಳುತ್ತಿದ್ದಂತೆ ಏನೋ ಅಸ್ಪಷ್ಟವಾಗಿ ಎನ್ನಿಸಿ ಕೈಚಿಟಿಕಿ ಹೊಡೆದು 'ಅದೇ ಸರಿ' ಎಂದುಕೊಂಡ.

* * * * *

"ನನ್ನ ಮೇಲೆ ನೂರು ಕಾರುಗಳು ಹರಿದುವು. ರೈಲಿನ ಚಕ್ರಗಳು ನನ್ನ ಬೆನ್ನೆಲುಬನ್ನು ನುಚ್ಚುನೂರು ಮಾಡಿದವು. Encyclopoedia Britannica ಓದಿಸಿ ನನ್ನನ್ನು ಕೊಂದರು. ಇದು ಸಂಸ್ಕಾರವೆಂದರು. ಬಲಿಯಾದವನನ್ನು ಹೂಳಿದರು. ಬಲಿತು ಬಂದವನಿಗೆ ಜಯಮಾಲೆ ಹಾಕಿ ಹೊಗಳಿ ಹಾಡಿದರು. ತ್ಯಾಗಕ್ಕೆ 'ಬೇಷ್' ಎಂದು ಎಂ.ಎ. ಪದವಿ ಕೊಟ್ಟರು – ಇನ್ನು ಡಾಕ್ಟರೇಟ್..." ಎಂದುಕೊಳ್ಳುತ್ತ ಸೂಟ್‌ಕೇಸಿಗೆ ಒಂದು ಟವಲ್, ಸೋಪ್‌ಬಾಕ್ಸ್, ಬ್ರಷ್, ಪೇಸ್ಟ್, ಬೂದುಬಣ್ಣದ ಸೂಟು, ಎರಡು ಬಿಳಿಶರ್ಟ್, ಮಜೆಂಟಾ ಟೈ, ಪಿರಮಿಡ್ ಕರ್ಚೀಫ್, ಹೇರ್

ಆಯಿಲ್, ಶೇವಿಂಗ್ ಸೆಟ್ ಯಾವುದನ್ನೂ ಮರೆಯದೆ ತುಂಬಿದ. ಡಾಕ್ಟರೇಟ್ ಥೀಸಿಸ್ಸು ಬೀರುವಿನೊಳಗಡೆ ಜೋಪಾನವಾಗಿದೆಯೇ ನೋಡಿಕೊಂಡ. ಹತ್ತು ವರ್ಷ ನಿಂತಿದ್ದು ನಡೆಯ ತೊಡಗಿದ ವಾಚನ್ನು ನೋಡಿದ. ಅರ್ಧಘಂಟೆ ನಡೆದರೆ ರೈಲ್ವೆಸ್ಟೇಷನ್ನು – ಹನ್ನೊಂದುವರೆಗೆ ಎದ್ದು ನಿಂತ. ಬೂಟ್ಸ್‌ಲೇಸು ಬಿಗಿದು, ಕನ್ನಡಿ ನೋಡಿ, ಕ್ರಾಪನ್ನು ತಿದ್ದಿ ಪ್ಲಾಸ್ಟರ್ ಆಫ್ ಪ್ಯಾರೀಸು ಬುದ್ಧನ ಕಡೆಗೊಮ್ಮೆ ಹೊರಳಿ – ಓದಿದ್ದ ಕವನವೊಂದನ್ನು ನೆನೆದು ಹೊಸಲು ದಾಟಿ, ಬಾಗಿಲಿಗೆ ಬೀಗ ಬಲವಾಗಿ ಹಾಕಿ (ಬೀಗ ಬಿದ್ದಿತೋ ಇಲ್ಲವೋ ಎಂದು ಇನ್ನೊಮ್ಮೆ ಪರೀಕ್ಷಿಸಿ) ಹೊರಟ...! "ಹೊರಟ ಹೊರಟೇ ಹೊರಟ ಹೊರಟನೆತ್ತೊ !"....

ಬೆಳಗಿನ ಝಾವ – ಸ್ಟೇಷನ್ ತಲುಪಿ ಟ್ಯಾಕ್ಸಿಹತ್ತಿ ಹನ್ನೆರಡನೇ ಕ್ರಾಸಿನಲ್ಲಿದ್ದ ೩೬೪ನೇ ನಂಬರ್ ಮನೆಯ ಇದಿರು ಇಳಿದ. ತಟ್ಟನೆ ಒಳಗೆ ಹೋಗಲು ಹೆದರಿಕೆಯಾಯಿತು. ಯಾಕೆ ಬಂದೆಯೆಂದು ಹೆಡ್‌ಮಾಸ್ಟರರು (ಆ ಗೃಧ್ರ) ಕೇಳಿದರೆ ಏನು ಹೇಳಬೇಕೆಂದು ದಾರಿಯುದ್ದಕ್ಕೂ ಯೋಚಿಸದಿದ್ದ ತನ್ನ ಹೆಡ್ಡತನವನ್ನು ಶಪಿಸಿಕೊಂಡ. ಒಡ್ಡ ಧೈರ್ಯ ಮಾಡಿ ಒಳಗೆ ಹೋದ.

ನಾಯಿ ಬೊಗಳಿತು. ಬಾಗಿಲು ತೆರೆಯಿತು. ನೊಸಲಿಗೆ ವಿಭೂತಿ ಧರಿಸಿ ಶಾಲು ಹೊದ್ದು ಮೂಗಿನಲ್ಲಿ ಯಾರು ಎನ್ನುತ್ತ ಕೈಯಿಂದ ನಸ್ಯ ಕೊಡವಿ ಹೆಡ್ಮಾಸ್ಟರರು ಬಾಗಿಲು ತೆರೆದರು. "Oh come in" ಎಂದು ದೇಶಾವರೀ ನಕ್ಕು ರಾಜಣ್ಣನಿಗೆ ಕೂರಲು ಕುರ್ಚಿ ತೋರಿಸಿದರು. ರಾಜಣ್ಣನೂ ಅಗಲವಾಗಿ ನಗುತ್ತ "ಮನೇಲೆಲ್ಲ ಆರೋಗ್ಯವೇ ?" ಎಂದು ಸುತ್ತಲೂ ಕಣ್ಣು ಹೊರಳಿಸಿದ. ಅವನು ಹೆದರಿದ್ದ. ಹೆಡ್ಮಾಸ್ಟರರ ಪ್ರಶ್ನೆಗೆ ಸಮಯಸ್ಫೂರ್ತಿಯಿಂದ "ಇಲ್ಲಿಯೇ ವಾರಪತ್ರಿಕೆಯ ಸಂಪಾದಕರ ಹತ್ತಿರ ಕೆಲಸವಿತ್ತು ಬಂದೆ" ಎಂದು ನಿಭಾಯಿಸಿಕೊಂಡ. "ಊಟಕ್ಕೆ ಇಲ್ಲೇ ಇರಿ" ಎನ್ನುವ ಉಪಚಾರಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಬೇಡ ಎಂದ.

ಕಾಫಿ ಕುಡಿಯುತ್ತ ಮತ್ತೊಮ್ಮೆ ಸುತ್ತಲೂ ನೋಡಿದ. ಹೆಡ್ಮಾಸ್ಟರರು ಒಳಗೆ ಹೋದರು. ಅಂತೂ ಕೊನೆಗೆ ಅರುಂಧತಿ ಹೊರಬಂದಳು. ರಾಜಣ್ಣನ ಎದೆ ಜಗ್ಗೆಂದಿತು. ಅವಳ ಸೀರೆಯ ಸೆರಗಿನ ಮಾಸಿದ ಜರಿಯಿಂದ ಕಣ್ಣು ಕೀಳಲಾರದೆ ಕ್ಷಣ ತಬ್ಬಿಬ್ಬಾದ...

ಅಂತೂ ಧೈರ್ಯಮಾಡಿ "ಈ ಕ್ರಾಸಿನ ಕೊನೆಯಲ್ಲಿ ನಿನಗಾಗಿ ಹತ್ತೂವರೆ ಗಂಟೆಗೆ ಕಾಯುತ್ತಿರುತ್ತೇನೆ – ಸಿಗುತ್ತೀಯಾ ?" ಎಂದ. ಅವನ ಮೃದುಕಂಠದಿಂದ ಎಂದೂ ಕೇಳದಿದ್ದ ಗೊಂಟರು ಕಪ್ಪೆಗಳ ಗೊಟರಿನಂತಹ ಗಡಸು ಗೊಗ್ಗರು



ಧ್ವನಿ ಕೇಳಿ ಇದ್ದಕ್ಕಿದ್ದಂತೆ ಅರುಂಧತಿಗೆ ಭಯವಾಯಿತು. ಬೆಚ್ಚಿದ ಅವಳು ಉತ್ತರ ಕೊಡುವುದರೊಳಗೆ ಹೆಡ್ಮಾಸ್ಟರರು ಒಳಗಿನಿಂದ ಹೊರಬಂದರು.

"ನಮಸ್ಕಾರ" ಎಂದು ಅಗಲವಾಗಿ ನಕ್ಕು ಎದ್ದು ನಿಂತ.

"ಮತ್ತೆಂದು ಈಕಡೆ? ದೇವರು ನಡೆಸಿದರೆ ಎರಡು ತಿಂಗಳ ನಂತರ ನೀವು ಈ ಕಡೆ ಒಂದು ದಿನದ ಮಟ್ಟಿಗಾದರೂ ಬರಲೇಬೇಕಾಗಬಹುದು" ಎಂದು ನಸ್ಯವೇರಿಸಿ ಹೆಡ್ಮಾಸ್ಟರು ಅರುಂಧತಿಯ ಕಡೆ ನೋಡಿ ನಕ್ಕರು. ಅರುಂಧತಿ ಬಿಳಚಿ ಬೆವರಿ ಒಳಗೆ ಹೋದಳು. ರಾಜಣ್ಣನಿಗೆ ಏನೋ ಅನ್ನಿಸಿ, ಮೈ ಬೆವರಿ, ಕೂಡಲೇ ಅಲ್ಲಿಂದ ಹೊರಟು, ಬೀದಿಯ ತುದಿಗೆ ಅರುಂಧತಿ ಕಾಲೇಜಿಗೆ ಬರುವುದನ್ನು ಕಾಯುತ್ತ ನಿಂತ.

ಜೀವದಲ್ಲಿ ಜೀವ ಹಿಡಿದು ವಾಚಿನ ಕಡೆ ಮತ್ತೆ ಮತ್ತೆ ನೋಡಿದ. ಅಂತೂ ಹತ್ತೂವರೆಯಾಯಿತು. ದೂರದಿಂದ ಅರುಂಧತಿ ಬರುವುದು ಕಾಣಿಸಿತು. ಆದರೆ ಗೆಳತಿಯರನ್ನ ಕೂಡಿಕೊಂಡು ತಾನು ಕಾಯುತ್ತಿರುವುದು ಕಂಡೂ ಕಾಣದವಳಂತೆ ಬರುತ್ತಿದ್ದಾಳೆ. ಅವಳು ಮುಖವನ್ನು ಅತ್ತ ಇತ್ತ ತಿರುಗಿಸಿ ಕಪ್ಪುಸೀರೆಯ ನಿರಿ ಚಿಮ್ಮಿಸಿ ನಗುತ್ತಾ ನಡೆಯುವುದು ಅವನ ಕರುಳಿಗೆ ಸೂಜಿಯಂತೆ ಚುಚ್ಚಿತು. ಎದೆ ಹಾರಿಕೊಳ್ಳುತ್ತಿದ್ದರೂ ಅವಳ ಬಳಿ ಹೋದ. 'ನಮಸ್ಕಾರ' ಎಂದು ಅಗಲವಾಗಿ ನಕ್ಕ. ಅರುಂಧತಿ ಬೆಚ್ಚಿ – (ಅಲ್ಲ ಹಾಗೆ ನಟಿಸಿ) 'ಓ ನೀವಾ !' ಎಂದು ಗೆಳತಿಯರಿಗೆ 'a minute please' ಎಂದು ಕೇಳಿ ರಾಜಣ್ಣನ ಬಳಿ ಬಂದಳು. ಉದ್ದುದ್ದ ಕಾಗದ ಬರೆಯುವುದು ಸಾಧ್ಯವಿದ್ದರೂ ಏಕೋ ಎದಿರುಬದಿರಾಗಿ ನಿಂತಾಗ ಇಬ್ಬರಿಗೂ ಬಾಯಿ ಕಟ್ಟಿಬಿಟ್ಟಿತು.

"ಏನು ಅರುಂಧತಿ ನಿನ್ನಿಂದ ಇತ್ತೀಚೆಗೆ ಕಾಗದವೇ ಇಲ್ಲ..." ಸರ್ವಾಂಗ ಬೆವರುತ್ತ ಕೇಳಿದ.

"ನಿಮ್ಮ ಹುಟ್ಟುಹಬ್ಬಕ್ಕೆಂದು ಕಳಿಸಿದ ಕೀಟ್ಸ್ ಸಿಕ್ಕಿತೆ?..." ಅರುಂಧತಿ ಗೆಳತಿಯರ ಕಡೆಗೊಮ್ಮೆ ತಿರುಗಿ ನಿಲ್ಲಿ ಎನ್ನುವಂತೆ ಸನ್ನೆಮಾಡಿ ಹೇಳಿದಳು. ರಾಜಣ್ಣನಿಗೆ ಬೆಂಕಿಯಮೇಲೆ ನಿಂತಂತೆನಿಸಿ –

"Oh thank you!..." ಎಂದ. ಇದ್ದಕ್ಕಿದ್ದಂತೆ ಅವನ ಮುಖದಲ್ಲಿ ಎಂದಿನಂತೆ ಮಂದಹಾಸ ಮೂಡಿದನ್ನು ನೋಡಿ ಅರುಂಧತಿಗೆ ಹಗುರವೆನಿಸಿತು. ರಾಜಣ್ಣನೂ ತನ್ನ ಪ್ರಯತ್ನವಿಲ್ಲದೇ ಮುಖದ ಮಾಂಸಖಂಡಗಳಲ್ಲಿ ಆಗುತ್ತಿದ್ದ ಮಾರ್ಪಾಡುಗಳನ್ನು ಶಪಿಸಿಕೊಂಡ–

"ನಿನ್ನನ್ನು ಒಂದು ವಿಷಯ ಕೇಳಲು ಬಂದೆ" ಎಂದ.

ಅರುಂಧತಿ ಮತ್ತೆ ಬೆಚ್ಚಿದಳು. ಹುಡುಗಿಯರು ಕಾಯುತ್ತ ನಿಂತಿರುವುದು ರಾಜಣ್ಣನಿಗೆ ಅಸಹನೀಯವಾಯಿತು. 'ನಿನ್ನ ಗೆಳತಿಯರು ಹೋಗಲಿ ಬಿಡು, ನೀನು ನನ್ನ ಜೊತೆ ಬಾ' ಎನ್ನಲೇ ಎಂದು ಎನ್ನಿಸಿದರೂ ಮಾತು ಗಂಟಲಲ್ಲೇ ಉಳಿಯಿತು. ಅರುಂಧತಿ ಬೆವರುತ್ತ ಯಾರಾದರೂ ನೋಡಿದರೆ ಏನು ಗತಿ ಎಂದು ಪಾಪಕಾರ್ಯ ಒಂದನ್ನು ಮಾಡುತ್ತಿರುವವಳಂತೆ ಅತ್ತ ಇತ್ತ ನೋಡಿದಳು. ಬಿಗಿಯಾಗಿ ಕಟ್ಟಿದ್ದ ಬಿಳಿಯ ಕುಪ್ಪಸ ಅವನನ್ನು ನಿಂದಿಸುವಂತೆ ಭಯದ ಉಸಿರಾಟಕ್ಕೆ ಏರಿಳಿಯುತ್ತಿತ್ತು. ಮರ್ಯಾದಸ್ಥಳಂತೆ ಅವಳ ಸೆರಗನ್ನು ಮೈಮುಚ್ಚುವಂತೆ ಎಳೆದು ಮತ್ತೆ ನೆಲ ನೋಡಿದಳು. ರಾಜಣ್ಣನ ಎದೆ ಕುಸಿಯಿತು. "ಎರಡು ಗಂಟೆಗೆ ನಿನಗೆ ಬಿಡುವಾದರೆ ಕಾಲೇಜು ಲೈಬ್ರರಿಯ ಹತ್ತಿರ ಸಿಗಲೆ?..." ಎಂದು ಅಂತೂ ಕೊನೆಗೆ ಉಗುಳು ನುಂಗುತ್ತ ಎಂದ.

ಯಾವುದರಿಂದಲೋ ಪಾರಾದವಳಂತೆ ಅರುಂಧತಿ 'ಹೂ' ಎಂದು ತಿರುಗಿ ನೋಡದೆ ಹೊರಟುಬಿಟ್ಟಳು.

ರಾಜಣ್ಣನಿಗೆ ಸುಸ್ತಾಗಿ ಬಿಟ್ಟಿತು. ಏನು ಏನೋ ಶಂಕೆಗಳು – ಮತ್ತೆ ಯಾಕೆ ಹಾಗೆ ಕಾಗದ ಬರೆಯುತ್ತಾಳೆ? ಇವಳೂ 'ರಾಜಣ್ಣ'ನನ್ನು ಒಪ್ಪಿಕೊಳ್ಳಲಾರಳೆ? ಇಲ್ಲ – 'ರಾಜಣ್ಣ' ಎಂದೂ ಕಾಗದ ಬರದೇ ಇಲ್ಲ – ನಾನೇ ಅಲ್ಲವೆ ಇದಕ್ಕೆಲ್ಲ ಕಾರಣ? ಡಾಕ್ಟರಲ್ಲಿ, ಶಾಮಣ್ಣನಲ್ಲಿ ಕೊನೆಗೆ ಅರುಂಧತಿಯಲ್ಲೂ – ಎಲ್ಲೆಲ್ಲೂ ! – ರಾಜಣ್ಣನಿಗೆ ಎಲ್ಲೂ ಆಶ್ರಯವಿಲ್ಲವೇ? – ಬದುಕಿನಲ್ಲಿ ಎಂದೂ ಅನುಭವಿಸಿರಲಿಲ್ಲ ಎನ್ನಿಸುವಂತಹ ಯಾತನೆ ತನಗಾಗ ಆಗುತ್ತಿದೆ ಎಂದು ಮೈಯೆಲ್ಲ ನರಗಳಾಗಿ ಸಂಕಟಪಟ್ಟು, (ಚಹಾ ಕುಡಿಯುತ್ತ) ಎರಡು ಗಂಟೆಯವರೆಗೂ ಕಾದ. ಮನಸ್ಸನ್ನು ಒಂದು ನಿರ್ಧಾರಕ್ಕೆ ತಂದು ಬಿಗಿದು ಕೊಂಡು ಲೈಬ್ರರಿಯ ಎದಿರು ನಿಂತ.

ಎರಡಾಯಿತು, ಎರಡೂಕಾಲಾಯಿತು, ಎರಡೂ ಇಪ್ಪತ್ತೈದು ಆಯಿತು. ಅರುಂಧತಿ ಮತ್ತೆ ಗೆಳತಿಯರ ಜೊತೆ ಕ್ಲಾಸಿನ ಕಡೆ ಹೋಗುತ್ತಿದ್ದಳು. ನಿರ್ಬಲವಾದ ಕಾಲುಗಳನ್ನು ಎಳೆದುಕೊಂಡು ಹೋಗಿ ಅವಳೆದುರು ನಿಂತ. ಬೆಚ್ಚಿ ಪೆಚ್ಚಾದರೂ ಏನೂ ನಡೆಯಲಿಲ್ಲವೆಂಬಂತೆ ನಕ್ಕು ಅರುಂಧತಿ ಹತ್ತಿರ ಬಂದಳು. "ಓ ಮರತೇ ಬಿಟ್ಟಿದ್ದೆ – Very Sorry – ಈ ಕ್ಲಾಸಿಗೆ ಬಹಳ ದಿನದಿಂದ ಚಕ್ಕರ್ ಹೊಡೆದೂ ಹೊಡೆದೂ ಬೇಜಾರಾಗಿದೆ. ನೀವು ಈಗ್ಲೇ ಹೊರಡಬೇಕಾ?" ಎಂದು ಕತ್ತು ಕೊಂಕಿಸಿದಳು. ಅವನನ್ನು ದಿಟ್ಟಿಸಿ ನೋಡದಿದ್ದರೂ ಎತ್ತಿದ ಕಣ್ಣು, ನಗುತ್ತಿದ್ದ ಪುಟ್ಟ ಬಾಯಿ, ಕೊಂಕಿದ ಕತ್ತು, ಸೀರೆ ಸೆರಗನ್ನು ಬಲಭುಜದ ಮೇಲೆ ಎಳೆದು



ಕೊಳ್ಳುವ ಜಾಗರೂಕತೆ – ಎಲ್ಲದರ ಹಿಂದೆ ಯಾವುದೋ ಭಯ ಅವಳಲ್ಲಿ ಅರಳುತ್ತಿದೆ ಎಂದು ರಾಜಣ್ಣನಿಗೆ ಅನ್ನಿಸಿತು.

ಹೋಟೆಲಲ್ಲಿ ಕೂತು ಗಳಿಸಿದ್ದ ಶಕ್ತಿಯನ್ನೆಲ್ಲಾ ಗಂಟಲಿಗೆ ತಂದು ರಾಜಣ್ಣ "ಹಾಗಾದ್ರೆ ಸಂಜೆ ಅಶೋಕವನದಲ್ಲಿ ಒಬ್ಬಳೇ ಸಿಗ್ತೀಯಾ?" ಎಂದುಬಿಟ್ಟ. ಕಿವಿ ಗೊಯ್ ಎಂದು ಊರೆಲ್ಲ ಸುತ್ತತೊಡಗಿತು.

ತುಟಿ ನಡುಗಿದರೂ, ತೊಡೆಗಡುಗುಟ್ಟಿದರೂ, ಮೈಬೆವರಿದರೂ (ಕೆಳಗೆ ಬೀಳದೆ) ಅರುಂಧತಿ ತಗ್ಗಿಸಿದ ಮುಖವನ್ನು ಎತ್ತಲೇ ಇಲ್ಲ. ಕಷ್ಟಪಟ್ಟು ಕಣ್ಣೀರನ್ನು ತಡೆದುಕೊಂಡಳು. ನಿಸ್ಸಹಾಯಕಳಾಗಿ, ಅಬಲೆಯಾಗಿ, ಗಡಸು ಕಂಠದ ಹೊಸಬನೆದುರು ಏನು ಹೇಳಲೂ ತೋಚದೆ ತತ್ತರಿಸಿದಳು. ಐದಾರು ವರ್ಷಗಳ ಮೇಲೂ ರಾಜಣ್ಣ ಬದಲಾಯಿಸಲಿಲ್ಲವೆ? ಎಂದು ಹಿಂದಿನ ಘಟನೆಯೊಂದನ್ನು ನೆನೆದು ಕಣ್ಣುಕತ್ತಲೆ ಕಟ್ಟಿ ಬರಲು ಮರಕ್ಕೆ ಒರಗಿ ನಿಧಾನವಾಗಿ ಕಣ್ಣು ತೆರೆದು ರಾಜಣ್ಣನನ್ನು ಆರ್ತಳಾಗಿ ನೋಡಿದಳು. ಏನೋ ಹೇಳಲು ಹೊರಟು ಹೇಳಲಾರದೆ ಒಣಗಿದ ಗಂಟಲನ್ನು ಎಂಜಲು ನುಂಗಿ ಒದ್ದೆ ಮಾಡಿಕೊಂಡಳು.

ರಾಜಣ್ಣನ ಧೈರ್ಯ ದ್ವಿಗುಣವಾಯಿತು. ಅರುಂಧತಿಯನ್ನು ಸೀಳುವಂತೆ ನೋಡಿದ. ಪ್ಯಾಕಿನಿಂದ ಸಿಗರೇಟು ತೆಗೆದು ಬೆಂಕಿಪೊಟ್ಟಣದ ಮೇಲೆ ಕುಟ್ಟಿ ಇನ್ನೂ ಗಡಸಾಗಿ –

"If you don't want to meet me, why don't you say so frankly?" ಎಂದ.

ಅರುಂಧತಿ ಕೆಳತುಟಿಯನ್ನು ಬೆರಳಲ್ಲಿ ಕ್ಲಿಪ್ಪಿನಂತೆ ಹಿಡಿದು ಮಡಚಿ, ಕತ್ತು ತುರಿಸಿಕೊಂಡು ಧೈರ್ಯ ತಂದುಕೊಳ್ಳತೊಡಗಿದಳು (ಯಾವಾಗಲೂ ಅವಳು ಹಾಗೆ ಮಾಡಿದಾಗ ರಾಜಣ್ಣನಿಗೆ ಅಸಹ್ಯವಾಗಿ ಬೇರೆ ಯಾರಾದರೂ ಹುಡುಗಿಯ ಹತ್ತಿರ ಓಡಿ ಹೋಬೇಕೆನಿಸುತ್ತಿತ್ತು). ಸಿಗರೇಟು ಹೊತ್ತಿಸಿ "ಹೂ... ಹೇಳು" ಎಂದು, ಅವನಿಂದ ತಪ್ಪಿಸಿಕೊಂಡು ಎತ್ತಲೋ ನೋಡುತ್ತಿದ್ದ ಅವಳ ಕಣ್ಣುಗಳನ್ನು ಹುಡುಕಿದ. ಹುಬ್ಬುಗಂಟಿನ ಕೆಳಗೆ ಅರೆಮುಚ್ಚಿದ ರೆಪ್ಪೆಗಳ ಹಿಂದೆ ತೀಕ್ಷ್ಣವಾದ ಅವನ ಕಣ್ಣುಗಳನ್ನು ನೋಡಲಾರದೆ ಮುಖ ತಗ್ಗಿಸಿಯೇ ಕಣ್ಣುಗಳನ್ನು ಅರ್ಧ ಮುಚ್ಚಿ ಉಗುರು ಕಚ್ಚುತ್ತ, ಅರುಂಧತಿ ಅಂತೂ ಪ್ರಯತ್ನಿಸಿ –

"ನಾನು ಹೇಗೆ ಅಲ್ಲಿ ನಿಮ್ಮನ್ನ ಒಬ್ಬಳೇ ನೋಡಲಿ? – ಜನ ಏನೆಂದು ಕೊಳ್ಳುತ್ತಾರೆ? Oh ! you don't know how awkward, how difficult it is for a woman" ಎಂದಳು.

"Allright-Good bye then!" ಎಂದು ನಕ್ಕು (ನಕ್ಕನೆ?) ರಾಜಣ್ಣ ಹೊರಟುಬಿಟ್ಟ. ಅರುಂಧತಿಯೂ ಮುಖ ತಿರುಗಿಸಿ ಹೋಗಿಯೇ ಬಿಟ್ಟಳು.

ಅವಳು ಕರೆದಾಳೋ ಏನೋ ಎಂದು ಆಸೆಯಾದರೂ ಅವನು ಹಿಂದಿರುಗಿ ನೋಡಲಿಲ್ಲ.

ಕ್ಲಾಸೊಳಗೆ ಹೋಗಿ ಕೂತಮೇಲೆ ಅರುಂಧತಿಗೆ ಹೃದಯವೆಷ್ಟೋ ಹಗುರವೆನಿಸಿರಬಹುದಲ್ಲವೆ ಎಂದು ರಾಜಣ್ಣನ ಹುಬ್ಬು ಗಂಟಿಕ್ಕಿತು.

* * * * *

ರಾತ್ರೆ ಬಹಳ ಹೊತ್ತು ಹಾಳು ಗೊಂಟರು ಕಪ್ಪೆಗಳ ಗೊಟರಿನಿಂದ ರಾಜಣ್ಣನಿಗೆ ನಿದ್ದೆ ಬರದೆ ಹಾಸಿಗೆಯಲ್ಲಿ ಹೊರಳಿದ. ಗಡಿಯಾರ ನೋಡಿದ. ಹನ್ನೆರಡು ತೋರಿಸುತ್ತಿತ್ತು. ಬರೇ ಹನ್ನೆರಡೇ ಎಂದು ಕಿವಿಗೆ ಹಿಡಿದ. ವಾಚು ನಿಂತಿತ್ತು !

ಸಿಗರೇಟು ಹೊತ್ತಿಸಿದ. ಈಗೇನು ಮಾಡಲಿ ಎಂದು ಎಕ್ಸಿಮಾ ತುರಿಸಿಕೊಂಡ. 'ವಿಷ ಕುಡಿಯಲೆ ?' ಎನ್ನುವ ಯೋಚನೆಯೂ ಬಾರದೆ ಇರಲಿಲ್ಲ. ಆದರೆ ಅದು ತನ್ನ ಕೈಯಿಂದ ಸಾಧ್ಯವಿಲ್ಲ ಎಂದೂ ಅನ್ನಿಸದೆ ಇರಲಿಲ್ಲ...

ತಾನೊಬ್ಬ ಭಗ್ನ ಪ್ರಣಯಿ 'ಯಾರಂತೆ?' ಎಂದು ಓದಿದ್ದ ಕಥೆಗಳನ್ನು ನೆನಪುಮಾಡಿಕೊಂಡ. ಲಾರೆನ್ಸಿನ 'Modern Lover" ಕಥೆಯಂತೆ ಇದನ್ನು ಕುರಿತು ಒಂದು ಕಥೆ ಬರೆಯಬಹುದಲ್ಲವೇ ಎಂದು ಅನ್ನಿಸಿತು. ಹಾಗೆಯೇ ಯೋಚಿಸುತ್ತ ರಗ್ಗನ್ನು ಎಳೆದುಕೊಂಡು ಕೌಂಚಿ ಮಲಗಿದ

೧೮-೮-೧೯೫೬



# ಪ್ರಕೃತಿ

ಬಾಯಲ್ಲಿ ಅರಳು ಹೊಟ್ಟಿದಂತೆ ಮಾತಾಡಿದರೆ ಏನು ಬಂದ ಹಾಗೆ ? ಒಂಟಿ ಕಾಲಿನ ಮೇಲೆ ಕಂಬಕ್ಕೊರಗಿ ನಿಂತಿದ್ದ ನಾರಾಯಣ ನಡುಗುತ್ತಿದ್ದ – ಗಣ ಬಂದವನಂತೆ. ತಗ್ಗಿಸಿದ ಸೊಡ್ಡು ನೋಡಿ 'ಭೇಷ್' ಎನ್ನಬೇಕೆನಿಸಿತು ಸಂಕಪ್ಪಯ್ಯನಿಗೆ. ಅಂತೂ ಪರವಾಯಿಲ್ಲ – ಮಗ ದಾರಿಗೆ ಬಂದ. ಹುಟ್ಟಿಸಿದವನಿಗೆ ಎದುರಾಡುವಷ್ಟು ಧೈರ್ಯ ಬಂದಿತ್ತಲ್ಲವೆ ? ಏನು ಮೇಲಕ್ಕೆ ಬಾಚಿದ ಕ್ರಾಪು ! ಅದೇನು ಪೇಟೆಯ ಲಫಂಗನಂತೆ ಕತ್ತಿಗೆ ಸುತ್ತಿದ ಮಫ್ಲರ್ ! ಪ್ಯಾಶನ್ ಎಂದರೆ ಇದಯ್ಯ ! ಕಿಸೆಯಲ್ಲಿ ಬೀಡಿಕಟ್ಟು ಬೆಂಕಿಪೊಟ್ಟಣ ಬೇರೆ ಇರಬಹುದೊ ಏನೊ!

ಸಂಕಪ್ಪಯ್ಯ ಮೂದಲಿಸುತ್ತ ಅಡಿಕೆ ಕತ್ತರಿಸಿದರು.

ಗಂಡ, ಮಗ ಎದುರುಬದಿರಾಗಿ ನಿಂತಿದ್ದನ್ನು ಅಡಿಗೆಮನೆಯಿಂದ ಸೀತಮ್ಮ ಹಣಿಕಿ ನೋಡಿ ಒಳಗೆ ಮತ್ತೆ ಕಾಯಿ ತುರಿಯಲು ಹೋದರು. ಅಂಗಳಲ್ಲಿ ಸೆಂಡಿಗೆ ಒಣಹಾಕಿ ಪಡಸಾಲೆಗೆ ಬಂದ ಲಕ್ಷ್ಮಿ ನಿಂತಳು. ಅಪ್ಪನ ಕಣ್ಣಿಗೆ ಎದುರಾಗಲಾರದೆ ಕರ್ಚೀಫಿನಿಂದ ಬೆವರೊರೆಸಿಕೊಳ್ಳುತ್ತ ನಿಂತ ಅಣ್ಣನ ಒಂಟಿಕಾಲಿನ ವಿಚಿತ್ರ ಭಂಗಿ ಕಂಡು ಅಂಜಿ, ಅಡಿಗೆಮನೆಗೆ ಹೋಗಿ 'ಏನಮ್ಮ ವಿಷಯ' ಎಂದಳು. ಆಲಿಸುತ್ತಿದ್ದ ಸೀತಮ್ಮ 'ಶ್' ಎನ್ನಲು ಸುಮ್ಮನಾದಳು.

ಲಂಗದ ನಿರಿ ಹಿಡಿದೆತ್ತಿ ಓಡಿಬಂದಳು ಶಾಂತ. ಇದೇನು ಅಪ್ಪ ಅಣ್ಣ ಎದುರು ಬದಿರು ನಿಂತ ಗಮ್ಮತ್ತು ಅರ್ಥವಾಗದೆ ಸಂಕಪ್ಪಯ್ಯನ ಹೆಗಲಿನ ಮೇಲೆ ಗಲ್ಲ ಊರಿದಳು. ಕಿವಿಯ ಹತ್ತಿರ ತುಟಿ ತಂದು 'ಸುಣ್ಣ ತರಬೇಕೆ ಅಪ್ಪ?' ಎಂದು ಅಣ್ಣನನ್ನು ತುಂಟ ಕಣ್ಣುಗಳಿಂದ ನೋಡಿದಳು – ಜಂಬಕ್ಕೆ ಜೇಬಲ್ಲಿ ನೋಡು ಬುಕ್ಕು, ಪೆನ್ನು ! ವಾರಕ್ಕೊಂದು ದಿನ ಕೈಯಲ್ಲಿ ಬ್ಯಾಟರಿ ಹಿಡಿದು ತನ್ನನ್ನು ಜೊತೆಗೆ ಕರೆದುಕೊಳ್ಳದೆ ಪೇಟೆಗೆ ಸಿನಿಮ ನೋಡಿ ಬರಲು ಹೋಗುವುದು ಬೇರೆ ! ಆದರೆ ಅಪ್ಪ ಕಣ್ಣು ಬಿಟ್ಟರೆ ಸಾಕು – ಹೇಗೆ ಅಳುಬುರುಕ ಮುಖ ಮಾಡುತ್ತಾನೆ ! ನಗಬೇಕೆನಿಸಿತು. ಆದರೆ ಅಪ್ಪನಿಗೆ ಕಾಣದಂತೆ ಗುದ್ದಿಯಾನೆಂದು ಸುಮ್ಮನಾದಳು.

* * * * *

ಪಡಸಾಲೆಗೆ ಕೇಳುವಂತೆ ಅಡಿಗೆಮನೆಯಲ್ಲಿ ಸಾಗುತ್ತಿದ್ದ ಅಮ್ಮ ಅಣ್ಣನ ಮಾತಿಗೆ ಶಾಂತ ಸಂಕಪ್ಪಯ್ಯನ ಜುಟ್ಟು ಬಿಚ್ಚುತ್ತ ಅಂದಳು. 'ಉತ್ತರದ ಪೌರುಷ ಒಲೆ ಮುಂದೆ'. ಮತ್ತೆ ನಕ್ಕವಳು ಅಪ್ಪನ ಮುಖ ನೋಡಿ ಪೆಚ್ಚಾದಳು.

['ಅಮ್ಮ ! ನಾನು ಈಗಲೇ ಹೇಳಿಬಿಡ್ತೀನಿ ಕೇಳು, ಅಪ್ಪ ಮಾಡಿದ ೨೦,೦೦೦ ರೂ. ಸಾಲಕ್ಕೆ ಅವನೇ ಮುಂಡಮೋಚಿಕೊಳ್ಳಲಿ, ಈ ಕೊಂಪೇಲಿ ಕೊಳೆಯೋಕೆ ನಾನು ಹುಟ್ಟಿಲ್ಲ. ನಿನ್ನ ಅಣ್ಣ ಶಿವಮೊಗ್ಗದಲ್ಲಿ ಹೋಟೆಲು ನಡೆಸೋಣ ಬಾ ಅಂದಿದಾನೆ. ಇಗೊ ಉಟ್ಟ ವಸ್ತ್ರದಲ್ಲೇ ಹೊರಟೇಂತ ತಿಳಿಕೊ. ಕಡಿದುಹೋಯ್ತು ನನ್ನ ನಿಮ್ಮ ಸಂಬಂಧ']

ತನ್ನ ಮೀಸೆ ಹುರಿಮಾಡುತ್ತಿದ್ದ ಶಾಂತಳ ಕೈ ತಳ್ಳಿ ಸಂಕಪ್ಪಯ್ಯ ಎದ್ದು ನಿಂತರು. ಮೊದಲೇ ಪೆಚ್ಚಾಗಿದ್ದ ಶಾಂತ ಏನು ಮಾಡಲು ತೋಚದೆ ಬೆರಳು ಕಡಿಯುತ್ತ ಅಪ್ಪನನ್ನು ನೋಡಿದಳು.

['ನನ್ನ ಮೇಲೆ ಯಾಕೆ ರೇಗ್ತಿಯೊ ನಾಣಿ? ನನ್ನ ಮಾತಿಗೆ ಅವರ ಹತ್ತಿರ ಏನಾದರೂ ಬೆಲೆ ಇದೆಯ? ನಿನಗೇ ಗೊತ್ತಿದೆ. ಆ ಹಾಳು ಕಿತ್ತಲೆ ತೋಟದ ಹುಚ್ಚಿಗೆ ಸಾವಿರಗಟ್ಟಳೆ ಸುರಿದಾಯ್ತು. ಊರಿಗೆ ಊರೇ ಬೇಡವೆಂದರೂ ಕೇಳಿದರ? ತಾನುಂಟೊ ಮೂರು ಲೋಕ ಉಂಟೊ ಎಂತ ತನ್ನ ಮೂಗಿನ ನೇರಕ್ಕೆ ನೋಡುವ ಒರಟು ಅವರದು. ಆರು ವರ್ಷವಾಯ್ತು. ಒಂದು ಬೆಳೇನೂ ಸರಿಯಾಗಿ ಕೈ ಹತ್ತಲಿಲ್ಲ'

'ಆ ಹಾಳು ನೆಲದಲ್ಲಿ ಕಿತ್ತಳೆ ಬೆಳೆಯಲ್ಲಾಂತ ಶಾನುಭೋಗರು ಗಿಣಿಗೆ ಹೇಳುವಂತೆ ಅಪ್ಪನಿಗೆ ಬುದ್ಧಿ ಹೇಳಲಿಲ್ಲವೇನಮ್ಮ !'

'ನಿತ್ಯ ಒಂದೇ ಕಥೆ ಈ ಹಾಳು ಕೊಂಪೇಲಿ. ನನಗೂ ಹೆಣಗಿಹೆಣಗಿ ಸಾಕಾಯ್ತು ನಾಣಿ. ಇವತ್ತು ಈ ದನಾನ ಹುಲೀ ಹಿಡಿತು, ನಾಳೆ ನಾಯೀನ ಕುರ್ಕ ಹೊತ್ತು ಕೊಂಡು ಹೋಯಿತು, ಒಂದೊ ಎರಡೊ ? ಕೊಗ್ಗ ಹೇಳುತ್ತಿದ್ದ, ಕಾಡಾನೆಯೊಂದು ಬೇರೆ ಬಂದು ಸೇರಿಕೊಂಡಿದೆಯಂತೆ. ಅಷ್ಟು ಸಾಲದೆಂದರೆ ಕೊಳೆ ರೋಗ, ಆ ರೋಗ, ಈ ರೋಗ, ಮಲೇರಿಯಾಂತೆ ಮತ್ತೆ ಸಾವಿರ. ಕೈಗೆ ಮೂರು ಕಾಸು ಹತ್ತದ ಮೇಲೆ ಇಲ್ಲೆ ಯಾಕೆ ಸಾಯಬೇಕು ಹೇಳು'.

'ಅಲ್ಲವೇನಮ್ಮ ? ನಾನು ಹೇಳೋದೂ ಅದೆ. ಶಾನುಭೋಗರಿಂದಾದರೂ ಇವರು ಯಾಕೆ ಬುದ್ಧೀ ಕಲೀಬಾರದು ? ಅವರ ಮಗ ಕಿಟ್ಟಣ್ಣನಿಗೆ ನನ್ನ ಜೊತೆ ಹೋಟೆಲಿಡಲು ಒಪ್ಪಿಗೆ ಕೊಟ್ಟಿದ್ದಾರೆ. ಅವನೆ ಪುಣ್ಯಾತ್ಮ...'

'ಅಷ್ಟಲ್ಲದೆ ಇನ್ನೇನು ಹೇಳು. ಯಾವ ಪಾಪಮಾಡಿ ನಾನಿವರ ಕೈ ಹಿಡಿದೆನೊ



– ನೀನೇಕೆ ನನ್ನ ಹೊಟ್ಟೆಯಲ್ಲಿ ಹುಟ್ಟಿದೆಯೋ ನಾ ಬೇರೆ ಕಾಣೆ ನಾಣಿ – ನನ್ನ ಅಪ್ಪ ಕೊಟ್ಟ ನಾಲ್ಕೆಳೆ ಅವಲಕ್ಕೀ ಸರ, ಬುಗುಡಿ, ಬಂಗಾರದ ಪಟ್ಟಿ ಉಳಿದಿದೆಯೋ ಎಂದರೆ ಅದೂ ಆ ಕಿತ್ತಳೆ ತೋಟದ ಹುಚ್ಚಿಗೆ ಬ್ಯಾಂಕು ಸೇರಿತು. ಇದ್ದಿದ್ದರೆ ಅದನ್ನಾದರೂ ಏನಾದರೂ ಮಾಡಿಕೊಂಡು ಸುಖವಾಗಿರಪ್ಪ ಎಂದು ನಿನಗೆ ಕೊಡುತ್ತಿದ್ದೆ...'

'ಅಷ್ಟೆಲ್ಲ ಸುಲಭವಲ್ಲಮ್ಮ. ಇದು ಪಿತ್ರಾರ್ಜಿತ ಆಸ್ತಿ. ನನಗೂ ಹಕ್ಕಿದೆ. ಗೊತ್ತಾಯ್ತ ? ಅಪ್ಪ ತಿಳಕೊಂಡು ಮಾತಾಡಲಿ'.]

– ಅಣ್ಣ ಆಡುವ ಮಾತಿಗೆ ಕಪಾಳಕ್ಕೆರಡು ಏರಿಸದೆ ಅಪ್ಪ ಯಾಕೆ ಸುಮ್ಮನೆ ನಿಂತಿದ್ದಾನೆಂದು ಆಶ್ಚರ್ಯದಿಂದ ದೊಡ್ಡ ಕಣ್ಣುಗಳನ್ನಗಲಿಸಿ ಶಾಂತ ಸಂಕಪ್ಪಯ್ಯವನ್ನು ನೋಡುತ್ತ ನಿಂತುಬಿಟ್ಟಳು.

['ಈ ಭಾಗ್ಯವೊಂದು ಸಾಲದೂಂತ – ಮದುವೆಯಾಗಿ ಆರು ತಿಂಗಳಾಗಲಿಲ್ಲ – ಲಕ್ಷ್ಮಿ ಗಂಡ ಸತ್ತು ಮತ್ತೆ ಇಲ್ಲಿಗೆ ಹಾಳು ಹಣೆಹೊತ್ತು ಬಂದಳು. ನಾನೂ ಹೇಳಿದೆ – ಆ ದೇವರಯ್ಯನ ಮಗನ ಕೊರಳಿಗೆ ಕಟ್ಟಬೇಡಿ ಮಗಳನ್ನ ಅಂತ. ನನ್ನ ನಿನ್ನ ಮಾತಿಗೊಂದು ಈ ಮನೇಲಿ ಬೆಲೆ ಇದ್ದರೆ ಅಲ್ವ ?... ಮಗಳ ಗಂಡ ಸತ್ತಾಂತ ಸುದ್ದಿ ಕೇಳಿದಾಗಲೂ ಅಬ್ಬ ! ಅವರ ಕಣ್ಣಲ್ಲಿ ಒಂದು ಹನಿ ನೀರು ಬಿತ್ತ ? ಜಪ್ಪಯ್ಯ ಅನ್ನದೆ ಸೀದ ಹಾಳು ಕಿತ್ತಲೆ ತೋಟಕ್ಕೆ ಹೋದರು. ನಾನು ಹೇಳುತ್ತೀನಿ ಕೇಳು. ಇವರು ಮಾಡಿದ ಪಾಪ ಏಳೇಳು ಜನ್ಮಕ್ಕೂ ತೀರದು. ಮನೆಯವರ ಸುಖಕ್ಕೆ ಆಗದ ಬೇಸಾಯ ಯಾಕೆ ಮಾಡಬೇಕೋ, ಹೀಗೇಕೆ ಮಕ್ಕಳನ್ನು ಗೋಳು ಹುಯ್ಯಬೇಕೋ ಪರಮಾತ್ಮನೇ ಬಲ್ಲ...'

'ನೀನ್ಯಾಕೆ ಕಣ್ಣೀರು ಹಾಕುತ್ತಿ ಅಮ್ಮ?']

ರಂಜದ ಹೂವಿನ ಒಣಗಿದ ಸರವನ್ನು ಕೂದಲಿನ ಸಿಕ್ಕಿನಿಂದ ಬಿಡಿಸಿಕೊಳ್ಳುತ್ತಿದ್ದ ಶಾಂತ ಕುತೂಹಲದಿಂದ ಅಪ್ಪನ ಮುಖ ಗಂಟಿಕ್ಕಿದ್ದನ್ನು ನೋಡಿದಳು. ಸಂಕಪ್ಪಯ್ಯ ಸರ್ರನೆ ಮೈಮೇಲೆ ಏರಿಬರುವವರಂತೆ ಹೋಗಿ ಬಾಗಿಲಬಳಿ ಕೈಕಟ್ಟಿ ನಿಂತಿದ್ದ ಕೊರಗನಿಗೆ ಕೆಲಸಕ್ಕೆ ಹೋಗಬಾರದೇನೋ?' ಎಂದು ದನಿ ಎತ್ತಿ ಗದರಿಸಿ ಪಡಸಾಲೆಯಲ್ಲಿ ಶತಪಥ ತಿರುಗಿದರು. ಮತ್ತೆ ಏನೋ ಜ್ಞಾಪಿಸಿಕೊಳ್ಳುವವರಂತೆ ನಿಂತರು.

['ಲಕ್ಷ್ಮಿಗೂ ಮಿಕ್ಕ ಹೆಂಗಸರಂತೆ ಸುಖವಾಗಿರಬೇಕೆಂಬ ಆಸೆ ಇಲ್ಲವಾಂತ ಯೋಚಿಸಿದರೆ ಕರುಳು ಹಿಂಡಿಬರುತ್ತೆ ನಾಣಿ, ಅಪ್ಪನ ಮುಖ ನೋಡಿಕೊಂಡಿದ್ದರೆ ಸಾಲಾದಾಂತ ಇವರು ಯೋಚಿಸಬಹುದು – ನೀನೇ ಹೇಳಿ ನೋಡಪ್ಪ ನಾಣಿ,

ಅಂತೂ ನೀ ಹೋದಲ್ಲಿ ನಾನಿದೇನೆ ಅಂತ ತಿಳಕೊ. ಇವರ ಕಾಲಬುಡದಲ್ಲಿ ಕಸಕ್ಕಿಂತ ಕಡೆಯಾಗಿ ಬಿದ್ದುಕೊಂಡು ಇನ್ನು ನಾನು ಗೇಯಲಾರೆ. ನನಗೂ ನಾಕು ದಿನವಾದರೂ ಈ ಕೊಂಪೆವಾಸ ಬಿಟ್ಟು ಮಗನ ಜೊತೆ ಸುಖವಾಗಿರಬೇಕೆಂಬ ಆಸೆ ಇದೆ'.

'ನಾನು ನೋಡಿಕೋತೀನಮ್ಮ. ಇವರ ಒಣ ಜಬರದಸ್ತು ಇನ್ನು ನನ್ನ ಮೇಲೆ ನಡೆಯದು. ನಾನು, ಕಿಟ್ಟಣ್ಣ ಶಿವಮೊಗ್ಗದಲ್ಲಿ ನಿನ್ನ ಅಣ್ಣನ ಜೊತೆ ಹೋಟೆಲಿಟ್ಟೆ ಸೈ. ಆಕಾಶ ತಲೇ ಮೇಲೆ ಕಳಚಿಕೊಳ್ಳಲಿ ಬೇಕಾದರೆ. ಹೆದರ್ತಿನಂತ ತಿಳಕೊಂಡಿದೀಯ?']

ನಾರಾಯಣನ ಮಾತು ಬಂದಾಯಿತು – ಸಂಕಪ್ಪಯ್ಯ ಬಂದು ನಿಂತ ಬಿರುಸಿಗೆ. ಹಿತ್ತಲಬಾಗಿಲಿಂದ ಒಂದೊಂದೇ ಹೆಜ್ಜೆ ಹಿಂದೆ ಜಾರತೊಡಗಿದ ಅಣ್ಣನ ಪೇಚಾಟ ನೋಡಿ ಶಾಂತ ನಕ್ಕಳು. ಸೀತಮ್ಮ ಗಂಡ ನಿಂತ ಗತ್ತು ನೋಡಿ ತಲೆಬಗ್ಗಿಸಿ ಕಾಯಿ ಮುಗಿದ ಬರಿ ಕರಟ ತುರಿಯತೊಡಗಿದರು. ಕರ್ಕಶ ಶಬ್ದಕ್ಕೆ ಮೈ ಕೈ ಪರಚಿದಂತಾಗಲು ಹೆಂಡತಿಯ ತಲೆಬುರುಡೆ ಜಪ್ಪಬೇಕೆನಿಸುವಷ್ಟು ರೋಷವನ್ನು ಕಡಗೋಲು ಕಂಬದ ಮೇಲೆ ಕೈಯೂರಿ ಸಂಕಪ್ಪಯ್ಯ ತಡೆದುಕೊಂಡರು.

'ನಾರಾಯಣ ! ನಿಲ್ಲು' ಎಂದರು ಎತ್ತರದ ಸ್ವರದಲ್ಲಿ. 'ಹೋಟೆಲು ಇಡಲು ದುಡ್ಡು ಕೊಡದಿದ್ದರೆ ಏನು ಮಾಡಬೇಕೂಂತಿದಿ ?' ಎಂದು ಕಡಗೋಲಿನಿಂದ ನೆಲವನ್ನೊಂದು ಸಾರಿ ಕುಟ್ಟಿದರು.

ದಾವಾ ಹಾಕಿ ನನ್ನ ಪಾಲು ಕೇಳ್ತೇನೆ ಎಂದು ಗಂಟಲು ದಾಟದ ಯೋಚನೆಯನ್ನು ನಾರಾಯಣ ನುಂಗಿಕೊಂಡು ತಲೆತಗ್ಗಿಸಿದ.

'ಇವರು ಗಟ್ಟಿಯಾಗಿ ಮಾತಾಡಿದರೆ ಹಂಚೇ ಹಾರಿಹೋಗುತ್ತದೊ ಏನೋ!' ಎಂದು ಯೋಚಿಸುತ್ತಿದ್ದ ಹೆಂಡತಿಯ ಕಡೆ ತಿರುಗಿ, ಮೆತ್ತಗಾಗಿದ್ದರೂ ಸಿಟ್ಟಳಿಯದ ಸ್ವರದಲ್ಲಿ ಕೇಳಿದರು–

"ಲಕ್ಷ್ಮಿಯಾಗೇ ನಿನ್ನ ಹತ್ತಿರ ಅಪ್ಪನ ಜೊತೆ ಇದ್ದರೆ ಯಾವ ಭಾಗ್ಯ ಬಂದ ಹಾಗಾಯ್ತು ಎಂದಳಾ ? ಅಥವ ಅದು ನಿನ್ನ ತಲೆಹರಟೆಯ ?... ಹೂ ಒದರು".

ಬರೀ ಕರಟ ತುರಿಯುತ್ತ ಹೆಂಚಿನ ವಿಷಯ ಯೋಚಿಸುತ್ತಿದ್ದ ಸೀತಮ್ಮನ ಉರಿಸೊಡ್ಡು ನೋಡಿ ಅವರಿಗೆ ಹೇಸಿಗೆಯಾಯಿತು. ಇವಳಿಷ್ಟು ಕುರೂಪಿ. ಆದರೂ ಕೈ ಹಿಡಿದ ಹೆಂಡತಿಯಲ್ಲವೆ, ಎಷ್ಟಾದರೂಂತ ಬೇರೆ ಯಾವ ಹೆಂಗಸನ್ನೂ



ಮೋಹಿಸಿರಲಿಲ್ಲ. ಆದರೂ ಅವಳೇ ಈಗ ಮಗನನ್ನು ಕೂಡಿಕೊಂಡು ತಿರುಗಿ ನಿಂತಳಲ್ಲ ಎಂದು ಜಿಗುಪ್ಸೆಯಲ್ಲಿ 'ತತ್' ಎಂದಷ್ಟೆ ಅಂದು ಪಡಸಾಲೆಗೆ ಬಂದರು. ಪಾಣಿ ಪಂಚೆಯಿಂದ ಬೆವರಿದ ಕಂಕುಳನ್ನು ಒರಸಿಕೊಳ್ಳುತ್ತ ವಿಪರೀತ ಮೃದುವಾದ ಸ್ವರದಲ್ಲಿ 'ಲಕ್ಷ್ಮಿ ! ಎಲ್ಲೆ ಶಾಂತ' ಎಂದು ಕೂಗಿದರು.

* * * * *

ದೇವರ ಮನೆ ಹಾಯಿವಾಗ ಕೇಳಿಸುವಂತೆ ಅಂದರು. ಇಲ್ಲ ಸಾಧ್ಯವಿಲ್ಲ. ಲಾಗ ಹಾಕಲಿಬೇಕಾದರೆ. ವರ್ಷದಲ್ಲಿ ಬರುವ ಅನಂತನವ್ರತ, ಗೌರಿ, ಗಣೇಶ ಎಲ್ಲ ಹಬ್ಬಗಳನ್ನು ಮನೆತನದ ಮುಖ್ಯಸ್ಥರಾಗಿ ನಡೆಸುವ ಅವರು ಈಗ ಈ ಚೋಟುದ್ದದ ಹುಡುಗ, ಆಸೆಬುರುಕ ಹೆಂಡತಿ ಮಾತು ಕಟ್ಟಿಕೊಂಡು ವಂಶಪಾರಂಪರ್ಯವಾಗಿ ಗುಡ್ಡಗಳ ಜೊತೆ ಸೆಣಸಿ ಬೆಳೆಸಿದ ತೋಟ ಗದ್ದೆ ಪರಭಾರೆ ಮಾಡುವುದೆ? ಅದೂ ಶಿವಮೊಗ್ಗದಲ್ಲಿ ವೈದಿಕ ಬ್ರಾಹ್ಮಣನಿಗೆ ಅಯೋಗ್ಯವಾದ ಅನ್ನವಿಕ್ರಯಕ್ಕಾಗಿ, ಆದದ್ದಾಗಲಿ ನೋಡಿಯೇ ಬಿಡುವ !

ಸೊಂಟಕ್ಕೆ ಕತ್ತಿ ಸಿಗಿಸಿ ಹೊರಗೆ ಹೋಗುವಾಗ ರಂಜದ ಹೂವಾರಿಸುತ್ತ ನಿಂತಿದ್ದ ಶಾಂತ 'ಅಪ್ಪ ನಾನು ನಿನ್ನ ಜೊತೆ ಬರಲ?' ಎನ್ನುವ ಆಸೆಯಿಂದ ಮುಖ ಮಾಡಿದ್ದು ನೋಡಿ ಅವರ ಜೀವಕ್ಕಷ್ಟು ನೆಮ್ಮದಿಯೆನಿಸಿತು. ನನ್ನವರು ಎನಿಸಿಕೊಂಡ ಒಬ್ಬರೂ ಇಲ್ಲದಿದ್ದರೂ ಕೂಡ ಕಾಲಹಾಕುತ್ತೇನೆ ನಾನಿಲ್ಲಿ ಎಂದುಕೊಂಡರು. ಅದು ಶಪಥ; ಪರೀಕ್ಷೆ ಮಾಡಿ ನೋಡಲಿ ಬೇಕಾದರೆ ; ಇವನು ಬೀಡಿ ಸೇದಿ ಪೇಟೆ ತಿರುಗುವ ನರಪೇತಲ, ನಾನು ಮೂರು ಗಾಡಿ ಕಟ್ಟಿಗೆ ಕಡದು ಒಟ್ಟಬಲ್ಲ ತಾಕತ್ತುಳ್ಳ ಬಲಿಷ್ಠ, ಹೆಸರು ತರುವ ಮಗನೇನಯ್ಯ ಈ ಭ್ರಷ್ಟ? ಹಲ್ಲು ಹಿಡಿದು ಮಾತಾಡದಿದ್ದರೆ ಇನ್ನೊಮ್ಮೆ ಕುತ್ತಿಗೆ ಕೈ ಹಾಕಿ ದಬ್ಬಿಯೇ ಸೈ, ಬಾಯಿ ಮುಚ್ಚಿಕೊಂಡು ಸಹಿಸುತ್ತೇನೆಂದು ತಿಳಿದನೋ ಇವ ಎಂದುಕೊಳ್ಳುತ್ತ ಬೀಸಾಗಿ ಮನೆಯ ಹಿಂದಿನ ಗುಡ್ಡ ಹತ್ತುತ್ತ ನಡೆದರು.

ಮತ್ತಿಸೊಪ್ಪು ಕೊಯ್ಯುತ್ತ ನಿಂತಿದ್ದ ಲಕ್ಷ್ಮಿಯನ್ನು ಕಂಡು ನಿಂತರು. ಅದೇನು ಕೇಳಬೇಕೆಂದೆನಿಸಿತು? 'ನೀನು ಸಕೇಶಿಯಾಗಿ ಮನೆಗೆ ಸೇರುವಂಥಾದ್ದು ನನ್ನ ತಪ್ಪೆ ಲಕ್ಷ್ಮಿ?' ಎಂದೆ. 'ಗಂಡ ಸತ್ತರೇನು ನಿನಗೆ ಯಾವುದಕ್ಕೂ ಕಡಿಮೆಯಾಯಿತು ಎನ್ನಿಸದಂತೆ ನೋಡಿಕೊಳ್ಳುವ ನನ್ನಂತಹ ತಂದೆಯಿಲ್ಲವೆ?' ಎಂದೆ, ಮಾತು ಹುಡುಕುವವರಂತೆ ಸುಮ್ಮನೆ ಅವಳ ಹಾಳು ಹಣೆ ನೋಡಿದರು. 'ಬಿಸಿಲಲ್ಲಿ ಒಬ್ಬನೇ ಎಲ್ಲಿ ಹೊರಟಿಯೊ ಅಪ್ಪ?' ಎಂದು ಕೇಳಿದಳೆಂದು ಸಂತೋಷವಾಯಿತು. ನಿನ್ನೆ ಅವಳು ಶಾಂತ ಸೇರಿ ಒತ್ತಾಯ ಮಾಡಿ ಮೈಗೆ ಎಣ್ಣೆ ತಿಕ್ಕಿದ್ದರು. ಬಾನಿಯಲ್ಲಿ

ಕೂರಿಸಿ ನೀರು ಹಾಕಿದ್ದರು. ಎರೆದುಕೊಂಡಾದ ಮೇಲೆ ಹಾಸಿಗೆ ಹಾಸಿ ಎರಡು ಕಂಬಳಿ ಹೊದಿಸಿ 'ಚೆನ್ನಾಗಿ ಬೆವರಲಿ ಅಪ್ಪ' ಎಂದು ಪಕ್ಕದಲ್ಲಿ ಕೂತ ಲಕ್ಷ್ಮಿಗೆ ಏನು ಹೇಳಬೇಕೆಂದಿನಿಸಿತ್ತು ? ಹೆಂಡತಿ, ಮಗ, ನೆಂಟರು, ಇಷ್ಟರು ಯಾರಿಗೂ ಹೇಳಬೇಕೆಂದು ಎನ್ನಿಸದೆ ಇರುವುದನ್ನು ಹೇಗೆ ಹೇಳುವುದು ? 'ಲಕ್ಷ್ಮಿ, ಈ ಸಾರಿ ಅಡಿಕೆ ಧಾರಣೆ ಏರಿ ೫–೬ ಸಾವಿರವಾದರೂ ಸಿಕ್ಕರೆ, ಕಿತ್ತಳೆ ಫಸಲೂ ಕೈಗೆ ಹತ್ತಿದರೆ, ಸಾಲ ತೀರಿಸಿ ಮನೆ ಚೊಕ್ಕಮಾಡಿ...' ಅನ್ಯ ಮನಸ್ಕಳಾಗಿದ್ದರೂ ಅಪ್ಪನಿಗೆ ಪ್ರಿಯವಾಗಲೆಂದು ಹೂಗುಡುತ್ತಿದ್ದ ಲಕ್ಷ್ಮಿ ಥಟ್ಟನೆ ನಡುವೆ ಅಂದಳು, 'ಅಪ್ಪ, ನೀನಿದನ್ನೆಲ್ಲ ಅಮ್ಮ ಅಣ್ಣನ ಹತ್ತಿರವೂ ಯಾಕೆ ಹೇಳಬಾರದೊ ?' ಛೇ! ಇದಲ್ಲ ಹೇಳಬೇಕೆಂದುಕೊಂಡಿದ್ದು ಎನ್ನಿಸಿತ್ತು. ಮಾತನಾಡಹೋದರೆ ಪ್ರತಿಸಾರಿಯೂ ಹಾಗೆ ; ಅನ್ನಿಸಿದೊಂದು ಆಡ್ಡಿದ್ದೊಂದು. ಹೃದಯದಲ್ಲಿರುವುದು ಬಾಯಿಗೆ ಬರದಂತಹ ಬಿಗಿ ಒಳಗೆ. 'ಊಟದ ಹೊತ್ತಿಗೆ ಬರ್ತೀನಿ. ಮತ್ತಿಸೊಪ್ಪು ನೆನೆಹಾಕಿ ನೀನು ಶಾಂತ ಎರಕ್ಕೊಳ್ಳಿ. ಅಬ್ಬಿ ನೀರು ಬೇಕಾದರೆ ಬಿಟ್ಟು ಬರ್ತೀನಿ' ಎಂದು ಎಡಕ್ಕೆ ತಿರುಗಿದರು. ಲಕ್ಷ್ಮಿ 'ಬೇಡ ಅಪ್ಪ' ಎಂದಿದ್ದಕ್ಕೆ 'ನೀರು ಹಾಕಿಕೊಳ್ಳದಂಥ ಧಾಡಿ ಏನು ಬಡಿದಿದೆ ನಿನಗೆ ?' ಎಂದು ಗದರಿಸಿ ಉತ್ತರಕ್ಕೆ ಕಾಯದೆ ನಡೆದುಬಿಟ್ಟರು.

* * * * *

ಎಂಟು ವರ್ಷಗಳ ಕೆಳಗೆ ಡಿ. ಸಿ. ಸಾಹೇಬರೆ ಸ್ವತಃ ಮಲೆನಾಡಿನ ಒಬ್ಬ ಅತ್ಯುತ್ತಮ ಬೇಸಾಯಗಾರನೆಂದು ಕೊಟ್ಟ ಬೆಳ್ಳಿಯ ಪದಕವನ್ನು ಪೆಟ್ಟಿಗೆಯಿಂದ ತೆಗೆದು 'ಲಕ್ಷ್ಮಿ, ನೀನಿದನ್ನು ಜೋಪಾನವಾಗಿಟ್ಟುಕೊ' ಎಂದು ಕೊಟ್ಟರೆ ಹೇಗೆ ? ಸಂತೋಷಪಟ್ಟಾಳು ಹುಡುಗಿ. ಶಾಂತ ಈಗ ಜೊತೆಯಲ್ಲಿದ್ದಿದ್ದರೆ ಚೆನ್ನಾಗಿತ್ತು. ಗುಡುಗುಡು ಓಡುತ್ತೋಡುತ್ತ ಹಣ್ಣೊಪಣ್ಣೊ ಕಿತ್ತುಕೊಳ್ಳುತ್ತ ಹರಟುತ್ತಿದ್ದಳು. ಲಕ್ಷ್ಮಿಗಿರಲಿ, ಆ ಹಸುಳೆಗೂ ಕೂಡ ಅರ್ಥವಾಗುತ್ತೆ, ಇದೇನು ದುಡ್ಡಿನ ರಾವಿಗೆ ಮಾಡೋದೆ ? ಹುಚ್ಚೆದ್ದು ಕುಣಿಯುವ ಇಂದ್ರಿಯಗಳನ್ನು 'ತೆಪ್ಪಗಿರು ನನ್ನ ಕೊಂಕುಳಲ್ಲಿ' ಎಂದು ಅದುಮಿಟ್ಟ ಹಾಗೆ ಇದೂ ಒಂದು ನಿಗ್ರಹ, ಆಗ್ರಹ. ಏನು ಸಂತೋಷವಿದೆ ಕಚ್ಚೆ ಹರುಕರಿಗೆ ಗೊತ್ತೆ ? ಶಿಖಂಡಿ ನರಪೇತಲಗಳು ಹೋಟೆಲಿಟ್ಟಂತಲ್ಲ. ತಿಳಕೊಳ್ಳಲಿ ಸೊಂಟದಲ್ಲಿ ದಮ್ಮಿರದ ಈ ಬೇವರ್ಸಿಗಳು. ಅಡಿಕೆ ಮಾಡಿ ಬಂದ ಹಣದಲ್ಲಿ ಉಳಿದದ್ದು ಕಿತ್ತಳೆ ತೋಟಕ್ಕೆ ಹಾಕಿದರೆ ಯಾಕೆ ಈ ನೆಲದಲ್ಲೂ ಕಿತ್ತಳೆಯಾಗದು ನೋಡಿಯೇ ಬಿಡುವ ! ಅದೇನು ಕೊಡಗಿನವರಿಗೆ ಮಾತ್ರ ಕಟ್ಟಿಟ್ಟ ಗಂಟೆ ? ೩–೪ ವರ್ಷಕಷ್ಟೆ ಕಷ್ಟ. ಆ ಮೇಲೆ ಸಾಲ ತೀರಿಸಿ ಮಿಕ್ಕ



ದುಡ್ಡಲ್ಲಿ ಮನೆಯ ಹಿಂದಿನ ಕೆರೆಗೆ ಕೃಷ್ಣಭಟ್ಟರು ಹಾಕಿಸಿದಂತೆ ಪಂಪು ಹಾಕಿಸಿದರೆ ಮನೆಯ ಎಡಕ್ಕೆ ಹಾಳು ಬಿದ್ದ ಜಾಗದಲ್ಲಿ ಏನೇನು ಸಾಧ್ಯವೋ ಎಲ್ಲ ಬೆಳೆಸಬಹುದು. ಕೆರೆ ಹತ್ತಿರ ನಿಂತು ಅದಕ್ಕೆ ಲಕ್ಷ್ಮಿ ಏನೆಂದಾಳೆಂದು ಕಲ್ಪಿಸಿಕೊಳ್ಳುತ್ತ [ಬೋಳು ಹಣೆ ನೆನೆದು ಎರಕೊಳ್ಳಲೆಂದು ನೀರು ಬಿಡುವವರು] ನಾನು ಗಟ್ಟಿಮುಟ್ಟಾಗಿರುವವರೆಗೆ ಗಂಡ ಸತ್ತರೇನು ಯಾರು ಸತ್ತರೇನು ಅವಳೇಕೆ ಕೊರಗಬೇಕೆಂದುಕೊಂಡರು : ಮತ್ತೆ ಶಾಂತ ಆರಿಸಿ ತಂದ ರಂಜದ ಹೂ ಪೋಣಿಸುತ್ತ ಲಕ್ಷ್ಮಿ ಯಾರಿಗೂ ಕಾಣದಂತೆ ಕಣ್ಣೊರಸಿಕೊಂಡದ್ದು ನೆನಪಾಗಲು ನೀರು ಬಿಟ್ಟವರು ಕ್ಷಣ ಉಸಿರು ಬಿಗಿ ಹಿಡಿದು ನಿಂತರು. ನೈಸರ್ಗಿಕ ಬಯಕೆ ಇರಬಹುದು, ಆದರೆ ಅವಳೂ ಯಾಕೆ ನನ್ನಂತೆ ಕೆಚ್ಚಿನಿಂದ ಹೋರಾಡಿ ನಿಗ್ರಹಿಸಿಕೊಳ್ಳಬಾರದೆಂದು ತಿರುಗಿ ತೋಟದ ಕಡೆ ಹೊರಟರು. ಇಲ್ಲ, ಕೆಚ್ಚಿರುವವರೆಗೂ ಹೋರಾಟ ವ್ಯರ್ಥವಲ್ಲ. ಕಿತ್ತಳೆ ತೋಟದಲ್ಲಿ ಯಾಕೆ ಹಣ್ಣಾಗದೊ ನೋಡಿಯೇ ಬಿಡುವ. ಹೋಟೆಲಿಟ್ಟು ದುಡ್ಡು ಸಂಪಾದಿಸುತ್ತಾರಂತೆ, ಸುಲಭವಂತೆ, ನನ್ನನ್ನು ನಡುಗಿಸುವ ದಮ್ಮಿದೆಯೆ ಇವರಿಗೆ ?

ಚೌಡಿಬನ ಹೊಕ್ಕವರು ತಲೆಗೆ ಸುತ್ತಿದ್ದ ಪಾಣಿಪಂಚೆಯನ್ನು ಬಿಚ್ಚುತ್ತ – ನಾನಿನ್ನು ಮುಂದೆ ಲಕ್ಷ್ಮಿ ಮಾಡಿದ ಅಡಿಗೆಯನ್ನೆ ಉಣ್ಣುವುದೆಂದುಕೊಂಡರು. ಹೆಂಡತಿ ಮಗ ಹಾಳಾಗಿ ಹೋಗಲಿ, ಬೇಕಾದರೆ, ಜೀವವಿನ್ನೂ ಗಟ್ಟಿಯಾಗಿದೆ. ಈ ಸಾರಿ ಅಡಿಕೆ ಧಾರಣೆ ಏರಿದರೆ ಎಲ್ಲ ಸರಿಹೋದೀತು. ಆದರೆ ಎಲ್ಲಿಯಾದರೂ ಸೋದರ ಮಾವನ ಮಾತು ಕೇಳಿಕೊಂಡು ಹಿತ್ತಾಳೆ ಕಿವಿಯ ನಾರಾಯಣ ಪಾಲು ಕೇಳಲು ಕೋರ್ಟಿಗೆ ಹೋದರೆ ವಂಶದಲ್ಲಿ ಯಾರೂ ಕೋರ್ಟು ಮೆಟ್ಟಿಲು ಹತ್ತದಿದ್ದಾಗ ಈ ಗುಂಯ್ಯ ನನ್ನ ಹೆಸರು ಬೀದಿಗೆಳೆದರೆ ಎಂದು ಯೋಚಿಸುತ್ತ (ನಡಿಗೆಯ ವೇಗ ಕಡಿಮೆಯಾಗಲು) 'ಅಬ್ಬಾಡೆ ಹೊಟ್ಟೆಯಲ್ಲಿ ಹುಟ್ಟಿದ ಮಗ, ಕೈಹಿಡದ ಹೆಂಡತಿಯೇ ಎದೆ ಸೆಟೆಸಿ ನಿಲ್ಲುವಂತಾಗಿ ಬಿಟ್ಟರಲ್ಲ' ಎಂದು (ಕಾಲಿಗೆ ಹತ್ತಿಕೊಳ್ಳುತ್ತಿದ್ದ ಜಿಗುಣೆಗಳನ್ನು ಕೊಡುವುತ್ತ) ನಿಟ್ಟಸಿರಿಟ್ಟರು. ಆದದ್ದಾಗಲಿ ನನ್ನ ಹಟವನ್ನೂ ನೋಡಿಯೇ ಬಿಡುವುದು – ಬೇಕಾದರೆ ಲಕ್ಷ್ಮಿಯನ್ನೂ ಒಂದು ಮಾತು ಕೇಳಿ ನೋಡಿ ಬಿಡುವುದು – "ಇದು ಸರಿಯೇ ಲಕ್ಷ್ಮಿ –" ಅವಳ ಬೆಂಬಲವಿರುವ ತನಕ ಇವರ ನಾಲಗೆ ಹೇಗೆ ಉದ್ದವಾದೀತು ನೋಡಿಯೇ ಬಿಡುವ. ಸಿಗಿದು ಹಾಗಿದರೂ ಪಾಪವಿಲ್ಲ ಇಂಥವರನ್ನು ....

* * * * *

ಕಾನಿನ ನಡುವೆ ಇದ್ದ ಅಬ್ಬರಿಯ ಅಂಚಲ್ಲಿ ನಿಂತವರಿಗೆ ಪ್ರಪಾತದ

ತಳವನ್ನೊಮ್ಮೆ ನೋಡಬೇಕೆನಿಸಿತು. ಚಿಕ್ಕವರಾಗಿದ್ದಾಗ ಅವರಪ್ಪ ಅಲ್ಲಿಗೆ ಅವರನ್ನು ಕರೆತಂದು – 'ಭೂಮಿ ಒಮ್ಮೊಮ್ಮೆ ಪರ್ವತಗಳ ಭಾರ ತಡೆಯಲಾರದೆ ನಡುಗುವುದಂತೆ, ಆಗ ಕುಸಿದು ಅಬ್ಬರಿಗಳಾಗುವುವಂತೆ' ಎಂದಿದ್ದರು. ಶಾಂತಳೂ ಜೊತೆಗಿದ್ದಿದ್ದರೆ ಚೆನ್ನಾಗಿತ್ತು. 'ಭೂಮಿಗೂ ನಡುಕ ಬರುವುದೆ ಅಪ್ಪ' ಎಂದು ತನ್ನಂತೆ ಅವಳ ಚಕಿತಳಾಗಿ ಕೆಳಕ್ಕೆ ಕಣ್ಣಗಲಿಸಿ ನೋಡುತ್ತಿದ್ದಳು. ಜೀವಕ್ಕೆಷ್ಟೋ ಹಾಯೆನಿಸುತ್ತಿತ್ತು.

ಅಬ್ಬರಿಯ ತಳದಲ್ಲಿ ಕಂತಿದ್ದ ಸಂಕಪ್ಪಯ್ಯನ ಕಣ್ಣುಗಳು ಚಿಕ್ಕದಾದುವು – ದೊಡ್ಡದಾಗಿ ಅರಳಿದವು ಮತ್ತೆ ನಿಧಾನವಾಗಿ ಮುಚ್ಚಿದುವು. ಕಂಡದ್ದನ್ನು ಮೈ ತುಂಬ ತುಂಬಿಕೊಂಡು ನಡುಗಿದರು. ಮತ್ತೆ ಕಣ್ಣು ತೆರೆದು ನೇರವಾಗಿ ನಿರ್ಭಯವಾಗಿ ನೋಡಿದರು. ಕೆಂಡದಂತೆ ಉರಿಯುತ್ತ ಅಬ್ಬರಿಯ ತಳದಲ್ಲಿ ಮಲಗಿದ್ದ ಹುಲಿಯೂ ಅವರನ್ನು ನೋಡಿತು. ಹೌದು ಅವರ ಹಾಗೆ ಕಣ್ಣಗಲಿಸಿ ನಿರ್ಭಯವಾಗಿ – ಯಾವ ಎಗ್ಗಿಲ್ಲದೆ, ನಿಶ್ಚಯ – ಅದು ನಿಶ್ಚಯ. ಮೈಮೇಲೆ ಆವೇಶ ಬಂದವರಂತೆ ನಿಂತುಬಿಟ್ಟರು. ಕಿರುಚಿಕೊಳ್ಳಬೇಕೆನಿಸಲಿಲ್ಲವೇಕೆ ? ಹಿಂದಕ್ಕೆ ಕಾಲು ಹಾಕಬೇಕೆನಿಸಲಿಲ್ಲವೇಕೆ ? ಆಶ್ಚರ್ಯ! ಅದು ಆಶ್ಚರ್ಯ. ಯಾರ ಹತ್ತಿರವೂ ಕೊನೆಗೆ ಲಕ್ಷ್ಮಿಯ ಹತ್ತಿರವೂ ಹೇಳಬೇಕೆಂದು ಎನ್ನಿಸದ್ದೊಂದು ಏನು ತನಗೀಗ ಅನ್ನಿಸುತ್ತಿದೆ? ಏನದು ಮೈತುಂಬ ಅಬ್ಬರಿಸಿ ಹರಿಯುತ್ತಿರುವುದು ? – 'ಇದ್ದರೆ ಹುಲಿಯ ಹಾಗಿರಬೇಕೆ'ಂದಷ್ಟೆ ಯೋಚನೆ ಅವರಿಗೆ ಸ್ಪಷ್ಟವಾಯಿತು. ಹಾಗೆಯೇ ಗಟ್ಟಿಯಾಗಿ ಅಂದು – ಅದೇಕೆ ಹಾಗೆಂದೆನೆಂದು ಆಶ್ಚರ್ಯಪಟ್ಟು ನಡೆಯತೊಡಗಿದರು....

* * * * *

ಮೈ ಬೆವರಲು ಎಚ್ಚರವಾಯಿತು. ಅದು ಗದ್ದೆ – ಇದು ಹಲಸು – ಕಾಲಿಗೆ ನೆಟ್ಟದ್ದು ಮುಳ್ಳು – ಎದುರು ನಿಂತದ್ದು ಶಾನುಭೋಗ. ಆದರೆ ಅವನಿಗೆ ಅಬ್ಬರಿಯಲ್ಲಿ ಒಂದು ಹುಲಿ ಕಂಡೆ ಎಂದು ಹೇಳಲಿಲ್ಲ. "ಏನು ಸಂಕಪ್ಪಯ್ಯ ತೋಟದ ಕಡೆ ಹೊರಟಿರ?" – ಸಂಕಪ್ಪಯ್ಯ ತಲೆ ಹಾಕಿದರು ಮಾತ್ರ. ಶಾನುಭೋಗ ನಸ್ಯದ ಡಬ್ಬಿ ತೆಗೆದದ್ದನ್ನು ನೋಡಿ ಏನೋ ಹೆಚ್ಚಿನದು ಮಾತಾಡುವುದಿರಬಹುದೆಂದು ನಿಂತರು ಅನ್ಯಮನಸ್ಕರಾಗಿ –

"ಚಿಕ್ಕವರ ಆಸೆಗೆ ನಾವೇಕೆ ಅಡ್ಡಿಯಾಗಬೇಕು ? ನೋಡಿ ಸಂಕಪ್ಪಯ್ಯ ಯಾಕೆ ಹೇಳಬಂದೇಂದರೆ ನಮ್ಮ ಕೈಯಲ್ಲಾದರೂ ಏನಿದೆ ? ಉದಾಹರಣೆಗೆ ತೆಗೆದುಕೊಳ್ಳಿ – ಲಕ್ಷ್ಮೀಗೆ ಹೀಗಾದೀತೆಂದು ನೀವು ಕನಸುಮನಸಿನಲ್ಲೂ



ಎಣಿಸಿದ್ದಿರ?"

ಅರೆ ಶಾನುಭೋಗ ! ಲಕ್ಷ್ಮೀಗೆ ಏನಾದರೆ ಇವನಿಗೇಕೆ ತಲೆಹರಟೆ? ಸಂಕಪ್ಪಯ್ಯ ಹುಬ್ಬು ಗಂಟಿಕ್ಕಿದರು.

"ವಿಧಿಯ ಬರಹ ತಪ್ಪಿಸಕ್ಕಾಗಲ್ಲ – ಹೋರಾಡೋದು, ಇದು ಹೀಗೆ ಆಗಬೇಕೂಂತ ತಲೆ ಚಚ್ಚಿಕೊಳ್ಳೋದು ವ್ಯರ್ಥಾಂತ ನಾನು ಅದಕ್ಕೇ ಹೇಳೋದು. ಈಗ ಕಿತ್ತಳೆ ತೋಟದ ವಿಷಯಾನೆ ತಗೊಳ್ಳಿ ಬೇಕಾದರೆ, ಸಂಕಪ್ಪಯ್ಯ. ಯಾಕೆ ಹೇಳಬಂದೇಂದರೆ ನಿಮ್ಮ ಮೈದುನ, ನನ್ನ ಮಗ ಕಿಟ್ಟ, ನಿಮ್ಮ ಮಗ ಸೇರಿ ಹೋಟೆಲು ತೆಗೆಯಬೇಕೆಂದಿದ್ದಾರಂತೆ... ಯಾಕೆ ಹೇಳಬಂದೇಂದರೆ ಈ ವ್ಯವಸಾಯದಲ್ಲಿ ಏನೂ ನಫೆ ಇಲ್ಲ. ಗುಡ್ಡಕ್ಕೆ ಸುಮ್ಮನೆ ತಲೆ ಚಚ್ಚಿಕೊಳ್ಳುವುದರ ಬದಲು ಹೋಟೆಲಿಟ್ಟರೇ ಫಾಯಿದೆ ಹೆಚ್ಚು. ಯಾಕೆ ಹೇಳಬಂದೇಂದರೆ..."

"ನಿಮ್ಮ ಕೆಲಸವೇನು ಹೋಗಿ ನೋಡಿಕೊಳ್ಳಿ ಶ್ಯಾನುಭೋಗರೆ – ಯಾಕೆ ಸುಮ್ಮನೆ ಹರಟ್ತೀರಿ?"

"ಅರೆ ಬ್ರಾಹ್ಮಣನ ಒರಟೆ!" ಎಂದು ಶಾನುಭೋಗನ ಮುಖ ಕೃತಕ ನಗೆಯಿಂದ ವಿಕಾರವಾಗಿ ಮತ್ತೆ ಸಂಕಪ್ಪಯ್ಯನ ಕಣ್ಣುಗಳನ್ನು ನೋಡಿ ಪೆಚ್ಚಾಯಿತು. ಅವನು ಚೇತರಿಸಿಕೊಳ್ಳುವುದರೊಳಗೆ (ಕಕ್ಕಡದಂತುರಿದ ಹುಲಿಯ ಕಣ್ಣುಗಳನ್ನು ಧ್ಯಾನಿಸುತ್ತ) ಸಂಕಪ್ಪಯ್ಯ ಅಷ್ಟು ದೂರ ಹೋಗಿಬಿಟ್ಟಾಗಿತ್ತು.

ಸಿಪಾಯಿಯಂತೆ ಕಾಲು ಹಾಕುತ್ತ ಹೋಗುವ ಸಂಕಪ್ಪಯ್ಯನಿಗೆ ಇದ್ದಕ್ಕಿದ್ದಂತೆ ಕೆಂಪು ದಾಸವಾಳದ ಹೂವನ್ನು ಹೊರೆಗಟ್ಟಲೆ ಕಿತ್ತುಕೊಂಡು ಹೋಗಿ ದುರ್ಗಿಯ ಆರಾಧನೆ ಮಾಡಬೇಕೆನಿಸಿತು. ಖುದ್ದು – ಅಂಗಳದಗಲ ಕೆಂಪು ರಂಗವಲ್ಲಿಯ ಮಂಡಳ ಬರೆಯಬೇಕು. ಮಂಡಳದ ನಡುವೆ ಮಹಾಮಾತೆಯನ್ನು ಪ್ರತಿಷ್ಠಾಪಿಸಬೇಕು. ಪೂರ್ವದಿಕ್ಕು ಕೆಂಪಡರಿದಾಗ ಶುದ್ಧವಾಗಿ ಮಂಗಳಸ್ನಾನ ಮಾಡಿರಬೇಕು. ಕೆಂಪು ಪಟ್ಟೆಮಡಿಯುಟ್ಟಿರಬೇಕು. ವಿಭೂತಿ ಧರಿಸಿರಬೇಕು. ರುದ್ರಾಕ್ಷಿ ಮಣಿಸರದಿಂದ ಭೂಷಿತವಾದ ಕೊರಳಿನಿಂದ ಮಂತ್ರಘೋಷ ಮಾಡುತ್ತ ದೇವಿಯನ್ನು ಅರ್ಚಿಸಬೇಕು. ಕಾಡು ನಡುಗುವಂತೆ, ಕೂತ ನೆಲ ನಡುಗುವಂತೆ, ಪಾಪಿಗಳ, ಹೇಡಿಗಳ, ಚಾಂಡಾಲ ಹೃದಯಿಗಳ ಎದೆಗುಂಡಿಗೆ ತಲ್ಲಣಗೊಳ್ಳುವಂತೆ ವೇದಘೋಷ ಮೊಳಗಬೇಕು. ಮೊಳಗಬೇಕು ತುಂಬಿ, ತುಂಬಿ, ವ್ಯಾಘ್ರವಾಹನೆಯಾಗಿ ದೇವಿ ಮಹಾಮಾತೆ ಪ್ರತ್ಯಕ್ಷವಾಗುವ ತನಕ. ಅಪ್ಪಿಕೊಂಡು ಮೈಯೆಲ್ಲ ಮುದ್ದಾಡಿ ನರರಕ್ತ ಮಾಂಸ ಎಲುಬು ಮಜ್ಜೆಯ ಸಹಿತ ತನ್ನನ್ನು ತಿನ್ನುವ ತನಕ....

ಮಡಿಲಂಗವುಟ್ಟ ಶಾಂತ ನೀಲಾಂಜನದಲ್ಲಿ ದೀಪ ಹೊತ್ತಿಸಿ ಗಂಧ ತೇಯುತ್ತ ಹತ್ತಿರ ಕೂತಿರಬೇಕು. ಸಕೇಶಿಯಾದರೆ ಏನಂತೆ ? ಪೀತಾಂಬರವುಟ್ಟು ಧ್ಯಾನಲೀಲಳಾಗಿ ಲಕ್ಷ್ಮಿಯೂ ಮಗ್ಗುಲಲ್ಲಿ ಕೂತಿರಬೇಕು...

ತದೇಕಮಗ್ನರಾಗಿ ಪೂಜಿಸುತ್ತ, ಕಬ್ಬಿಣದ ಗಾಣಕ್ಕೆ ಸಿಕ್ಕ ಕಬ್ಬಿನಂತೆ ಮೈಯನ್ನು ಹಿಂಡಿ ಪೂಜಿಸುತ್ತ, ಹಾಗೆಯೇ ಲಕ್ಷ್ಮಿಯ ಹಣೆಯ ಮೇಲೆ ಕುಂಕುಮ ಕೆಂಪಾಗಿ, ಮಿರುಗುವ ಕೆಂಪಾಗಿ, ರಕ್ತದ ಬೊಟ್ಟಿನಂತೆ ಅಚ್ಚ ಕೆಂಪಾಗಿ ನಗುತ್ತದೆ – ನಕ್ಕೇ ನಗುತ್ತದೆ. ಕಿತ್ತಳೆ ತೋಟಕ್ಕೆ ತೋಟವೆ ಕೆಂಪು ಹಣ್ಣು ತುಂಬಿ ನಿಲ್ಲುತ್ತದೆ. ಮಂತ್ರ ಮುಗ್ಧವಾಗಿ ಕಾಡು ಬೆಟ್ಟ ಕಣಿವೆಗಳು ಕಾಲಿಗೆ ಬಂದು ಬೀಳುತ್ತವೆ – ಬಿದ್ದೇ ಬೀಳುತ್ತವೆ – ಶಿಖಂಡಿಗಳು, ನರಪೇತಲಗಳು ಹೋಳು ಹೋಳಾಗಿ ರಕ್ತ ಕಾರುತ್ತಾರೆ.

ಬಿಕನಾಸಿಯಂತೆ, ಪೂಜೆಯ ಮಧ್ಯದಲ್ಲಿ, ಹೆಂಡತಿಯೆಲ್ಲಾದರೂ ಅಡ್ಡ ಬಂದರೆ ಅವಳ ಕೊರಳಿನ ತಾಳಿ ಹರಿದು ಮಗನ ಜೊತೆ ದಬ್ಬಿಬಿಡುತ್ತೇನೆಂದುಕೊಂಡು ತೋಟಕ್ಕಿಳಿದವರಿಗೆ ಕಣ್ಣುಕತ್ತಲೆ ಕಟ್ಟಿ ಬಂತು.

ಕೂದಲು ಕತ್ತರಿಸಿದ ಮುಂಡೆಯಂತಿದ್ದ ತೋಟವನ್ನು ನೋಡಿದವರ ಸುತ್ತ ಸೊನ್ನೆಗಳು ಮಿಡತೆಗಳಂತೆ ಮುತ್ತಿದ್ದವು. ಅಷ್ಟೆತ್ತರ ಹಸಿರು ಹೊತ್ತು ಬಳಕುತ್ತಿದ್ದ ಅಡಿಕೆಮರಗಳು ಹೀಗೆ ರುಬ್ಬಾರುಬ್ಬಿ ಬೇರುಸಹಿತ ಕಿತ್ತು ಯಾಕೆ ಬಿದ್ದಿವೆ? ಬಾಳೆಯ ಮರಗಳು ಯಾಕೆ ಹೀಗೆ ಕಂಗಾಲಾಗಿವೆ ? ಸಿಂಗಾರದ ಹೂಗಳು, ವೀಳ್ಯದ ಬಳ್ಳಿಗಳು, ಯಾಕೆ ಹೀಗೆ ತುಳಿತಕ್ಕೆ ಸಿಕ್ಕಿ ಅಜ್ಜಿಬಜ್ಜಿಯಾಗಿವೆ? 'ಅಮ್ಮ, ಮೂಕಾಂಬಿಕಾ' ಎಂದರು ಗಟ್ಟಿಯಾಗಿ.

"ಏ ಕರಿಯಾ ಎಲ್ಲಿ ಸತ್ತಿಯೋಽ?" ಎಂದು ಕೂಗಿದರು. ಉತ್ತರವಿಲ್ಲ. "ಓಹೋ ! ಆನೆಹೊಕ್ಕು ಕೆಲಸ ಕೆಟ್ಟಿತಲ್ಲ" ಎಂದು ಅಡಿಕೆಮರಗಳನ್ನು ಎಡವುತ್ತ ಓಡಿದರು......

ಗೊರಕೆ ಹೊಡೆಯುತ್ತ ಅಂಗಳದಲ್ಲಿ ಕರಿಯ ಕುಡಿತದ ಅಮಲಿನಲ್ಲಿ ಬಿದ್ದಿದ್ದ. ಅವನ ತಲೆದೆಸೆಯಲ್ಲಿ ಒಡೆದ ಕೋಳಿಮೊಟ್ಟೆಗಳು, ರೊಟ್ಟಿಯ ಚೂರುಗಳು ಬಿದ್ದಿದ್ದವು. ಅಂಗಳದಲ್ಲೆಲ್ಲೂ ನಿಶ್ಚಿಂತೆಯಿಂದ ಒಗೆದಿದ್ದ ಹಲಸಿನ ಸೇಡೆಗಳು. ಬೀಜಗಳು, ಎಚ್ಚರ ತಪ್ಪಿದ ಮೇಲೆ ಎಸೆದ ಕತ್ತಿ ಇನ್ನೊಂದು ಮೂಲೆಯಲ್ಲಿ. ಗೊರಕೆಹೊಡೆಯುವವನ ಬಾಯಲ್ಲಿ ಸಕ್ಕರೆ ನಿದ್ದೆಯ ಸುಖವನ್ನು ವಾಸನೆ ಸಹಿತ ಹೇಳುವ ಜೊಲ್ಲು...

ಹಲಸಿನ ಸೇಡೆಯ ವಾಸನೆಗೆ 'ವಾಯ್'ಗುಡುತ್ತ ವಯ್ಯಾರದಿಂದ ಬಂದಿತು



ಎಮ್ಮೆ. ಅದರ ಮೈಗೆ ಹತ್ತಿದ ಕೆಸರು ಅವರ ಬಟ್ಟೆಗೆ ಉಜ್ಜಿದ ಮೇಲೆ ಸಂಕಪ್ಪಯ್ಯನಿಗೆ ಎಚ್ಚರ. ಕೈ ಕೂಡಲೆ ಸೊಂಟದಲ್ಲಿನ ಕತ್ತಿಯ ಕಡೆ ಹೋಗಲು ಮತ್ತೊಮ್ಮೆ ತಲೆ ಗಿರ್ರ್ ಎನ್ನಿಸುವಂತೆ ಕಣ್ಣುಕತ್ತಲೆ ಕಟ್ಟಿಬಂತು. ಕ್ಷಣ ಸುಧಾರಿಸಿಕೊಂಡು ಹೆಂಡದ ಹುಳಿ ವಾಸನೆಗೆ ವಾಂತಿ ಬಂದಂತಾಗಿ ಹಿಂದಕ್ಕೆ ಹೆಜ್ಜೆ ಹಾಕಿದರು....

* * * * *

ಮಧ್ಯಾಹ್ನದ ಉರಿಬಿಸಿಲಿನಲ್ಲಿ ನೆತ್ತಿಗೇರಿದ ನಿಶ್ಚಿಂತೆ. ಕತ್ತರಿಸಿ ಒಗೆದ ಅವಯವಗಳಂತಿದ್ದ ಗುಡ್ಡಗಳಲ್ಲಿ, ಮಾವು ನೇರಳೆ ಹಲಸು ದೂರದೂರ ಬೆಳೆದಲ್ಲಿ, ಬಿದಿರು ಹಿಂಡಲುಗಳು ಒತ್ತಾಗಿ ಬೆಳೆದಲ್ಲಿ ; ಚಾಚಿದ ನೆರಳುಗಳಲ್ಲಿ, ಬೆಂಕಿಯನ್ನು ತುಂಬಿಕೊಂಡ ಆಕಾಶದಲ್ಲಿ ನಿಶ್ಚಿಂತೆ–ತೃಪ್ತಿ. ಆಗೀಗ ಕಾಗೆಗೆ ಬಾಯಾರಿಕೆ, ಮರಕುಟುಕನ ಹಕ್ಕಿ ಮರದ ತೊಗಟೆಯಲ್ಲಿ ನೀರು ಹುಡುಕುವುದು. ಹೆಚ್ಚೆಂದರೆ ಜೀರ್ದುಂಬಿಗಳದಷ್ಟೆ ಶಬ್ದ. ಕೆಸರು ಹೊಂಡಗಳಲ್ಲಿ ಮಲಗಿದ್ದ ಎಮ್ಮೆಗಳು ವಾಂಯ್‌ಗುಟ್ಟವು.

ಇದು ಅಲಕ್ಷವೆ ? ಅಥವಾ... ಸಂಕಪ್ಪಯ್ಯ ದಿಗ್ಭ್ರಾಂತರಾಗಿ ಯೋಚಿಸಿದರು. ಎಚ್ಚರದ, ಜೀವ ಪೀಕಲಾಟಕ್ಕೆ ಒಳಗಾಗಬೇಕಾಗದ ಹೊತ್ತಲ್ಲ. ನಿದ್ದೆಯ ಮೈ ಮರೆಯುವ ಹೊತ್ತಿದು. ಅಸ್ತಿಗಳ ಅಂಕುಡೊಂಕುಗಳು ವೃಥಾ ಮಾಂಸಖಂಡಗಳ, ನರಮಂಡಲಗಳ ಮತ್ತೆಂಥದೇನೋ ವಿಚಿತ್ರವಾಗಿರುವ ಹೃದಯ, ಪಿತ್ಥಕೋಶಗಳ ಜೊತೆ ಎಗರಾಡದಿದ್ದರೆ ಮಾತ್ರ ಸಫಲತೆ. ಮೈ ಪರಿವೆಯಿರದ ನಿಷ್ಕ್ರಿಯತೆಯಲ್ಲಿ ಸಂಭವಿಸುವ ಸಫಲತೆ.

ಆನೆ ನುಗ್ಗುತ್ತದೋ ನುಗ್ಗಲಿ – ಭೂಮಿ ಬಾಯಿಬಿಟ್ಟು ಅಣಕಿಸುತ್ತದೊ ಅಣಕಿಸಲಿ – ಎರಡು ಕೈಗಳಲ್ಲೂ ಹೆಂಡತಿ ಮಗನ ಕತ್ತು ಹಿಚುಕಿ ಹಾಕಿ ಬಿಡುತ್ತೇನೆ ಎಂದುಕೊಂಡರು.

ಆದರೆ 'ಕೆಲಸಕೆಟ್ಟಿತು' ಎಂದು ಒಂದು ಮಾತ್ರ ಅವರ ಮನಸ್ಸಿಗೆ ಪುನಃ ಪುನಃ ಬಂದಿತು. ಲಕ್ಷ್ಮಿ 'ಯಾಕಪ್ಪ ಹೀಗಾಗಿದ್ದಿ?' ಎಂದು ಕೇಳಿದರೆ 'ಆನೆ ನುಗ್ಗಿತು – ಕೆಲಸ ಕೆಟ್ಟಿತು' ಎಂದೆನ್ನುವೆನೆಂದುಕೊಂಡರು. ನರಹುಳವೂ ಕಾಣದ ಕಾಡಲ್ಲಿ ನಿಂತು ಹಾಗೆಯೇ ಗಟ್ಟಿಯಾಗಿ ಅಂದರು– "?ಆನೆ ನುಗ್ಗಿ ಕೆಲಸ ಕೆಟ್ಟಿತೆ ಲಕ್ಷ್ಮಿ...."

ದಾರಿಯಲ್ಲಿ ಒಂದಷ್ಟು ಗೇರು ಹಣ್ಣನ್ನು ನೆನಪು ಮಾಡಿ ಲಕ್ಷ್ಮಿಗೆ ಇಷ್ಟವೆಂದು ಕೊಯ್ದರು. ಬಿಳಿಮಾರಳೆ ಹಣ್ಣನ್ನು ನೆನಪು ಮಾಡಿ ಶಾಂತಗೆಂದು ಕೊಯ್ಯುತ್ತ – ಆ ಶಾನುಭೋಗನಾಗಲಿ, ಅವನ ಮಗ ಕಿಟ್ಟನಾಗಲಿ, ಕೊಳಕು ಮೂತಿಯ

ಹೆಂಡತಿಯಾಗಲಿ, ನರಪೇತಲ ಮಗನಾಗಲಿ, 'ತೋಟಕ್ಕೆ ಆನೆಹೊಕ್ಕ ಮೇಲಾದರೂ ಬುದ್ಧಿ ಬಂತ? ನೀವಿನ್ನು ಸಾಲ ತೀರಿಸುವುದಾದರೂ ಹೌದ? ಕಿತ್ತಳೆ ತೋಟದಲ್ಲಿ ಹಣ್ಣಾದರೂ ಆದೀತ ? ಎಂದೇನಾದರೂ ಉಪದೇಶ – ಗಿಪದೇಶ ಮಾಡಬಂದರೆ ಹಲ್ಲು ಮುರಿದು ಬೀಡುತ್ತೆನೆಂದುಕೊಂಡರು. ವಿಪರೀತ ಬಿರುಸಾಗಿ ನಡೆದುದ್ದಕ್ಕೆ ಕಾಲು ಸೋಲುತ್ತಿದೆ ಎಂದುಕೊಂಡರು. ಕಣ್ಣು ಮಂಜು ಮಂಜಾದರೂ 'ಹಾಳು ಬಿಸಿಲಷ್ಟೆ' ಎಂದು ಪಾಣಿಪಂಚೆ ತಲೆಗೆ ಸುತ್ತಿಕೊಂಡರು. ಸಾಲದ ಹಣಕ್ಕಾಗಿ ತಗಾದೆ ಮಾಡಿದರೆ ಕೃಷ್ಣಭಟ್ಟನ ಮುಖದ ಮೇಲೆ ಉಗಿದು ಕಳಿಸುತ್ತೇನೆಂದು ಸೊಂಟದಲ್ಲಿ ನೇತಾಡುತ್ತಿದ್ದ ಕತ್ತಿಯ ಹಿಡಿಯನ್ನು ಮುಷ್ಟಿಯಿಂದ ಬಿಗಿಯಾಗಿ ಹಿಡಿದು ನಡೆದರು.

ಒಣಗಿದ ಗಂಟಲನ್ನು ಎಂಜಲು ನುಂಗಿ ಒದ್ದೆಮಾಡಿಕೊಳ್ಳುತ್ತ – ಹೆಂಡತಿಯನ್ನು ಕರೆದು "ನೀ ಮುಟ್ಟಿದ ನೀರು ನಾ ಕುಡಿಯಲಿಕ್ಕಿಲ್ಲ ನಡಿ ಮನೆಬಿಟ್ಟು, ಲಕ್ಷ್ಮೀ ಶಾಂತ ಇದ್ದಾರೆ, ಅನ್ನ ಬೇಯಿಸಿ ಹಾಕುತ್ತಾರೆ". ಎನ್ನಬೇಕೆಂದು ಮತ್ತೆ ಶಪಥ ಮಾಡಿದವರಿಗೆ ದಾರಿತಪ್ಪಿದೆ ಎಂದು ಗೊತ್ತಾಯಿತು. ಯಾವುದೋ ಗುಡ್ಡದಂಚಿಗೆ ಬಂದು, ಕಂಗಾಲಾಗಿ ನಿಂತು, ಹೀಗೆ ಹೋಗಬೇಕಾದ ದಾರಿ, ಇಷ್ಟು ದಿನ ನಡೆದಿದ್ದರೂ ಯಾಕೆ ಮರೆತುಬಿಟ್ಟೆ ಎಂದು ನಿರ್ಬಲವಾದ ಕಾಲು ಏರಲಾರದ ಎತ್ತರವನ್ನು ನೋಡಿದರು.

'ದಾರಿ ತಪ್ಪಿದೆ' ಎಂದು ಗಟ್ಟಿಯಾಗಿ ಹೇಳಬೇಕೆನಿಸಿತು. 'ದಾರಿ ತಪ್ಪಿದೆ' ಎಂದು ಒಣಗಿದ ಗಂಟಲಲ್ಲಿ ಪಿಸುಗುಟ್ಟಿ ಎಡಕ್ಕಿದ್ದ ಬಿದಿರು ಹಿಂಡಲಿನಾಚೆಗಿನ ಮೊಟ್ಟಿನ ಕಡೆ ಕಣ್ಣು ಹಾಯಿಸಿದರು. ಕೈಯನ್ನು ಬಿಸಿಲಿಗಡ್ಡವಾಗಿ ಹಣೆಗೆ ಹಿಡಿದು, ಹುಲ್ಲು ಆಳೆತ್ತರ ಬೆಳೆದಲ್ಲಿ ಏನದು ಎಂದು ಒಣಗಿದ ಗಂಟಲನ್ನು ಎಂಜಲಿನಿಂದ ಮತ್ತೆ ಒದ್ದೆ ಮಾಡಿಕೊಳ್ಳುತ್ತ ಎರಡು ಮೂರು ಹೆಜ್ಜೆ ಇಟ್ಟರು.

ಮೆಟ್ಟಲು ತಪ್ಪಿ ಮುಗ್ಗರಿಸಿದಂತಾಯಿತು. ಪಾಣಿಪಂಚೆಯಿಂದ ಮುಖ ಮುಚ್ಚಿಕೊಂಡರು.

* * * * *

ಲಕ್ಷ್ಮೀ ಶಾನುಭೋಗನ ಮಗ ಕಿಟ್ಟನನ್ನು ತಬ್ಬಿಕೊಂಡು ಹಾಯಾಗಿ ನೆರಳಿನಲ್ಲಿ ಮಲಗಿದ್ದಳು.

* * * * *

"ದಾರಿ ತಪ್ಪಿದೆನೆ ?"

ಹಣತೆಯ ಬತ್ತಿಯಲ್ಲಿ ನಿಧಾನ ಬೆಳೆದು ಲಂಬವಾಗಿ ಉರಿಯುವ



ದೀಪದಂತೆ ಕೆಂಪು ಚೂಪು ಮಾತು ಮನಸ್ಸಿನ ಕತ್ತಲಲ್ಲಿ ಹೊತ್ತುಕೊಂಡಿತು. ಓರೆ ಕೋರೆ ಸಂದಿಗಳಲ್ಲಿ ಮಂದವಾಗಿ ಹೆಜ್ಜೆ ಹೆಜ್ಜೆಗೂ ಹರಡಿಕೊಂಡಿತು. ಮರದ ಮೇಲಿನಿಂದ ಮಂಗಗಳು ಹಲ್ಲುಕಿರಿದು ಅಣಕಿಸಿದವು.

ದಾರಿ ತಪ್ಪಿದೆನೆ ? – ಅಬ್ಬರಿಯ ಅಂಚಲ್ಲಿ ಮತ್ತೆ ಬಂದು ನಿಂತವರು 'ಇಲ್ಲ' ಎಂದು ಹಲ್ಲುಕಡಿಯುತ್ತ ಪ್ರಪಾತದ ಎದೆ ಭಣಗುಟ್ಟುವ ಶೂನ್ಯವನ್ನು ನೋಡಿದರು. ಆದರೆ ಎಡಕ್ಕೆ ತಿರುಗಿ ಕೃಷ್ಣಭಟ್ಟರ ಮನೆಗೆ ಹೋಗುವುದೆ? ಅಥವಾ ಸೀದ ಮನೆಗೆ ಹೋಗುವುದೆ? – ಕೆಂಪು ಚೂಪು ಮಾತು ಹರಡಿಕೊಳ್ಳುತ್ತಲೇ ಇತ್ತು. ಹೆಜ್ಜೆ ಸಪ್ಪಳವಾಗಲು ಮರದ ಮೇಲಿಂದ ಹಲ್ಲುಕಿರಿದ ಮಂಗನ ಮುಸುಡು ನೆನಪಾಗಿ ಬೆಚ್ಚಿ ಹಿಂದಕ್ಕೆ ತಿರುಗಿ ನೋಡಿದರು. ಅಷ್ಟೆನ್ನಿಸಿಕೊಂಡಿದ್ದು ಸಾಲದೆನ್ನುವ ಹಾಗೆ ನಿಂತಿದ್ದ ಶಾನುಭೋಗ –

"ಕೇಳಿದಿರಾ ಸಂಕಪ್ಪಯ್ಯ ?"

"ಆ ?"

"ಈ ಅಬ್ಬರಿಯ ಕೆಳಗೆ ನಿಶ್ಚಿಂತೆಯಿಂದ ಹುಲಿಯೊಂದು ಮಲಗಿತ್ತಂತೆ ಮಾರಾಯರೆ. ಅದಕ್ಕೇನು ಲೋಕದ ಎಗ್ಗಿತ್ತ ? ಕೊಗ್ಗ ಹಿಂದಿನಿಂದ ಗೊತ್ತಾಗದಂತೆ ಹೋಗಿ ಗುಂಡುಹಾಕಿ ಕೊಂದನಂತೆ ಯಾಕೆ ಹೇಳಬಂದೇಂದರೆ..." ಬಿರುಗಾಳಿಯ ನಂತರ ಎಲೆಎಲೆಯಲ್ಲೂ ನಿಶ್ಚಲವಾಗಿ ನಿಲ್ಲುವ ಮರದಂತೆ ಸಂಕಪ್ಪಯ್ಯ ನಿಂತರು.

ಶಾನುಭೋಗನ ಜೊತೆ ಪಟ್ಟಂಗ ಹೊಡೆಯುವ ಇಷ್ಟವಾಗದೆ ಹೊರಟರು ಸೀದ ಕೃಷ್ಣಭಟ್ಟರ ಮನೆಯ ಕಡೆ.

* * * * *

ಒಂದು ದಿನ ಸಂಜೆ ಸುಮಾರು ೬ ತಿಂಗಳಾದ ಮೇಲೆ ಗದ್ದೆಯಂಚಲ್ಲಿ ಕಾಲೆಳೆದುಕೊಂಡು ಹೋಗುತ್ತಿದ್ದ ಸಂಕಪ್ಪಯ್ಯನನ್ನು ಕಂಡು ಪೇಟೆಯ ಅಹಮ್ಮದ್ ಬ್ಯಾರಿ 'ಸಲಾಂ' ಎಂದ. ಲೋಕಾಭಿರಾಮವಾಗಿ ಮಾತಾಡುತ್ತ, ಒಬ್ಬರೆ ಗದ್ದೆ ಬೇಸಾಯ ಮಾಡಿಕೊಂಡಿದ್ದೀರಂತೆ, ತೋಟ ಮನೆ ಎಲ್ಲ ಕೃಷ್ಣಭಟ್ಟರಿಗೆ ಮಾರಿ ಮನೆಯವರನ್ನೆಲ್ಲ ಶಿವಮೊಗ್ಗಕ್ಕೆ ಕಳಿಸಿಬಿಟ್ಟರಂತೆ ಹೌದ ಎಂದ, ಬೀಡಿ ಎಳೆಯುತ್ತ. ಸಂಕಪ್ಪಯ್ಯ ಮಾತನಾಡದೆ ಹೌದೆಂದು ತಲೆ ಹಾಕಿದರು. ಕಿತ್ತಳೆ ತೋಟದಲ್ಲಿ ಈ ಸಾರಿ ಚೆನ್ನಾಗಿ ಫಸಲಾಗಬಹುದು, ಹೇಗೆ ಹೂವು ಬಿಟ್ಟಿದೆ ನೋಡಿದಿರಾ ಎಂದುದಕ್ಕೂ ತಲೆ ಹಾಕಿದರು. ಕೃಷ್ಣಭಟ್ಟರು ೮೫೦ ಎಂದರು, ನಾನು ೭೦೦ಕ್ಕೆ ಅಂತೂ ಇಂತೂ ಇಳಿಸಿ ವಹಿಸಿಕೊಂಡೆ. ಲುಕ್ಸಾನಾಗಲಿಕ್ಕಿಲ್ಲ ತಾನೆ ಎಂದುದಕ್ಕೆ 'ಆಗಲಿಕ್ಕಿಲ್ಲ' ಎಂದರು. 'ಪಾಪ ಒಬ್ಬರೇ ಇರುವುದು ಬೇಜಾರಲ್ಲವೇ ನಿಮಗೆ ?'

ಎಂದು ಬ್ಯಾರಿ ಗಾಳಿಗೆ ಬೆನ್ನು ಮಾಡಿ ನಿಂತು ಜೋಕೆಯಿಂದ ಆರಿದ ತುಂಡು ಬೀಡಿ ಹೊತ್ತಿಸಿದ. 'ಬೇಜಾರೇಕೆ ?' ಎಂದು ಸಂಕಪ್ಪಯ್ಯ ಗುಡಿಸಿಲಿಗೆ ಬಂದಾಗ ಕತ್ತಲಾಗಿತ್ತು.

ಊಟ ಬೇಡವಾಗಿತ್ತು. ಬೂದಿ ತುಂಬಿದ ತಣ್ಣಗಾದ ಒಲೆ ಹತ್ತಿಸಿ ಅನ್ನ ಬೇಯಿಸುವುದು ಇನ್ನು ಯಾಕೆ? ಗಾಳಿಗೆ ಹಣತೆ ಆರಿಹೋಗಲು ಅಂಗಳಕ್ಕೆ ಬಂದರು, ಕದ್ದಿಂಗಿಳಿನ ಆಕಾಶದಲ್ಲಿ ಮೋಡ ತುಂಬಿ ಒಂದು ಹನಿ ಬೆಳಕಿರಲಿಲ್ಲ.

ರಾತ್ರೆ ೧೨ ಗಂಟೆಯವರೆಗೆ ಕೈಕಟ್ಟಿಕೊಂಡು ಅಂಗಳದಲ್ಲಿ ತಿರುಗುತ್ತಿದ್ದವರು ನಿಂತರು. ಸೊಂಟಕ್ಕೆ ಬಿಗಿದಿದ್ದ ಪಾಣಿಪಂಚೆಯನ್ನು ಬಿಚ್ಚಿ ತಲೆಗೆ ಸುತ್ತಿ, ಮತ್ತೆ ಹಲಸಿನ ಮರದ ಬುಡದಲ್ಲಿದ್ದ ಕಟ್ಟೆಯ ಮೇಲೆ ಒಂದು ಕಾಲಿಟ್ಟು ಅಂದುಕೊಂಡರು. ಎಲ್ಲರೂ ಹೊರಟು ನಿಂತಾಗ ಬಾವಿಕಟ್ಟೆಯ ಮೇಲೆ ಕೈಯೂರಿ 'ನಾನು ನಿನ್ನ ಜೊತೆಯೇ ಇರುತ್ತೇನೆ ಅಪ್ಪ' ಎನ್ನುವಂತೆ ಬೊಗಸೆ ಕಣ್ಣುಗಳಿಂದ ನೋಡುತ್ತ ನಿಂತಿದ್ದ ಶಾಂತಳನ್ನು ಹಾಗೆ ಗದರಿಸಬಾರದಿತ್ತು. ಈಗ ಜೊತೆಗಿದ್ದಿದ್ದರೆ ಮೈಗೊರಗಿ ಕೂತು ತನ್ನ ನೆರೆತ ಮೀಸೆ ಹುರಿ ಮಾಡುತ್ತಿದ್ದಳು. ಕುತ್ತಿಗೆಯ ಹತ್ತಿರ ಉಸಿರಾಡುವವಳ ಕಪ್ಪು ನುಣುಪು ತಲೆಗೂದಲಿನ ಮೇಲೆ ಕೈಯಾಡಿಸಬಹುದಿತ್ತು.

ನಿಂತಿದ್ದ ಸಂಕಪ್ಪಯ್ಯನಿಗೆ ಕಾಲು ಬತ್ತಿಬಂದಂತಾಯಿತು. ದೀರ್ಘವಾಗಿ ನಿಟ್ಟುಸಿರೆಳೆದು ಕೊಳ್ಳುತ್ತ 'ಅಯ್ಯಮ್ಮ' ಎಂದು ಮರಕ್ಕೊರಗಿದರು. ಪಾಣಿಪಂಚೆಯ ಅಂಚಿನಿಂದ ಒದ್ದೆಯಾದ ಕಣ್ಣೊರಸಿಕೊಂಡರು. ಯಾರ ಮನೆಯದೋ ಏನೋ ಒಂದು ಮುದಿ ದನ ಬಂದು ಮುಖ ಮೂಸಲು ಅದರ ಕತ್ತನ್ನು ತುರಿಸಿದರು.

೧೭-೧೧-೧೯೫೬.



# ಪ್ರಶ್ನೆ

ಮುಸ್ಸಂಜೆಯಲ್ಲಿ ಹುಲಿ ಕೂಗಿದ್ದು ನಿಜವೆ, ಅಥವಾ ಹೊತ್ತು ಹೋಗದ ನನ್ನ ಮನಸ್ಸಿನ ಭ್ರಮೆಯೆ ಎಂದು ನೀರು ಸೇದುತ್ತಿದ್ದ ಶಾರದ ಆಲಿಸಿದಳು. ಇದ್ದರೂ ಇರಬಹುದು. ಗಾಯವಾದ ಹುಲಿಯಂತೆ ಕೊರಗ ಹೇಳಿದ್ದ. ಅಂದಗಾರಿನ ಕಾನಿನಲ್ಲಿ ಗುಂಡಿನೇಟು ಬಿದ್ದಿತಂತೆ. ಓಡಿ ಬಂದು ನಮ್ಮ ಕಾನು ಸೇರಿದೆಯಂತೆ. ನಾಕು ದಿನದಿಂದ ಒಂದೇ ಕತೆ.

ಕೊಡವನ್ನು ಎಳೆದು ಕಟ್ಟೆಯ ಮೇಲಿಟ್ಟಳು.

ಮಾವಯ್ಯನಿಗೆ ಹೇಳಿದೆ, ಅಕ್ಕ ಹಾರಿಕೊಂಡ ಬಾವಿಯ ನೀರು ಬೇಡ. ಆಗಲಿ ಮಗಳೇ ಬೇರೆ ಬಾವಿ ತೋಡಿಸೋಣ ಎಂದರು. ಹಗಲು ಬಗ್ಗಿದಾಗ ಮುಖ ಕಾಣಿಸುತ್ತೆ. ನನ್ನ ಮುಖದ ಹಾಗೆಯೇ ಅಕ್ಕನ ಮುಖ, ಹೆದರಿಕೆಯಾಗುತ್ತೆ. ತೊಟ್ಟಿಲಿಗೆ ಒರಳೆ ಹಿಡಿದಿತ್ತು. ಮಾವಯ್ಯನಿಗೆ ಹೇಳಲಿಲ್ಲ – ಮನೆತನದ ತೊಟ್ಟಿಲು ಕಣೇ ಎಂದು ಪರಚಿಕೊಳ್ಳುತ್ತಿದ್ದರು. ಸಂದಿ ಸಂದಿಯಲ್ಲೆಲ್ಲ ಜಿರಳೆಯ ಮೊಟ್ಟೆ. ನಾಳೆ ಬಿಸಿನೀರು ಸುರಿಯಬೇಕು. ಕೊಡದಿಂದ ಸ್ವಲ್ಪ ನೀರನ್ನು ಚೆಲ್ಲಿ ಟೊಂಕದ ಮೇಲಿಟ್ಟುಕೊಂಡಳು.

ಇವತ್ತು ಚತುರ್ದಶಿಯಲ್ಲವೆ ? ಬಿದಿಗೆಗೆ ಮುಟ್ಟಿನ ದಿವಸ. ಗೌರಮ್ಮನಿಗೆ ಅಡಿಗೆಗೆ ಬರಲು ಹೇಳಬೇಕು. ಒಂದಿಷ್ಟು ಅವಲಕ್ಕಿ ಭತ್ತ ಕುಟ್ಟಿಸಬೇಕು. ಹಾಳು ಮರವು ನನಗೆ. ನಿನ್ನೆ ಕೆಟ್ಟ ಕನಸು. ನಾನೇ ಸತ್ತಂತೆ. ಮಾವಯ್ಯ ಹೇಳಿದರು, ಸತ್ತಂತೆ ಕನಸು ಬೀಳೋದು ಒಳ್ಳೆಯದು ಮಗಳೇ, ಆಯುಷ್ಯ ಹೆಚ್ಚತ್ತೆ, ನೀರಿಗೆ ಬಿದ್ದು ಸತ್ತಂತೆ ಕನಸಾದರೆ ಬಹಳ ಒಳ್ಳೆಯ ಫಲ. ಆದರೆ ಇದೆಲ್ಲ ಮೂಢ ನಂಬಿಕೆ ಎನ್ನುತ್ತಾನೆ ರಂಗ. ಭಯವಾಗಿ ಎದ್ದು ಕೂತೆ.

ಕೊಡವನ್ನು ಒಲೆಯ ಹತ್ತಿರವಿಟ್ಟು, ಹೊಗೆ ಮುತ್ತಿದ್ದ ಬೆಂಕಿಯನ್ನು ಊದಿದಳು.

ಇಷ್ಟು ದಿನ ಕಲಿತರೂ ನಾನಿಟ್ಟ ಕಟ್ಟಿಗೆ ಉರಿಯುವುದೇ ಇಲ್ಲ. ರಂಗ ಒಲೆಯೊಳಗೆ ಕಟ್ಟಿಗೆ ಜೋಡಿಸೋದರಲ್ಲಿ ಬಲು ಜಾಣ. ಮಾವಯ್ಯನಿಗೆ ಆಗುವ ಫಲಾಹಾರದಲ್ಲಿ ನನಗೂ ಅಷ್ಟಾದರೆ ಸಾಕು, ಅನ್ನ ಬೇರೆ ಯಾರು ಬೇಯಿಸುತ್ತಾರೆ.

ಬೇಜಾರು. ಯಾರೋ ನನ್ನನ್ನು ನೆನೆಯುತ್ತಿದ್ದಾರೆ, ಆಕಳಿಕೆ, ನೆನೆದರೆ ರಂಗ ನೆನೆಯಬೇಕಷ್ಟೆ.

ಆಕಳಿಸಿದಳು. ಕಡಗೋಲು ಕಂಬಕ್ಕೊರಗಿಸಿಟ್ಟಿದ್ದ ಕನ್ನಡ ಶಾಕುಂತಲವನ್ನು ಎತ್ತಿಕೊಂಡಳು. ಹರಿದು ಹಪ್ಪಾದ ಪುಸ್ತಕ – ಮಾವಯ್ಯನ ಅಪ್ಪನ ಕಾಲದ್ದು.

ಹಾಳು, ಓದಲೂ ಬೇಜಾರು, ಯಾವುದಾದರೂ ಹೊಸ ಪುಸ್ತಕ ಕಳಿಸಲು ಅವನಿಗೆ ಬರೆಯಬೇಕು. ಹಾಳು ಆಕಳಿಕೆ. ಬೇಜಾರು. ನಾಲ್ಕನೆಯ ಅಂಕದಲ್ಲಿ ನಾಲ್ಕು ಶ್ಲೋಕಗಳು – ಓದು ಮಗಳೇ ಕೇಳಬೇಕು ಎಂದರು ಮಾವಯ್ಯ. ಮುಂಚೆ ಅವರ ಅಪ್ಪಯ್ಯ ಓದಿ ಹೇಳುತ್ತಿದ್ದರು. ಈಗ ನಾನು. ಕಾಲ ಕಳೆಯಬೇಕಲ್ಲ.

ಒಲೆಯ ಮೇಲೆ ಕಷಾಯಕ್ಕೆ ನೀರಿಟ್ಟಳು.

ಜೀರಿಗೆ ಕಷಾಯ ಮಾವಯ್ಯನ ಹೊಟ್ಟೆಗೆ ಒಳ್ಳೇದು. ರಂಗ ಬರೇ ಕಾಪಿ ಕುಡಿದು ಕುಡಿದು ಕಡ್ಡಿಯಾಗಿದ್ದಾನೆ. ಪಾತ್ರೆಗಳಿಗೆಲ್ಲ ಕಲಾಯ ಮಾಡಿಸಬೇಕು. ಬುಡನ್ನಿಗೆ ಬರಲು ಹೇಳಿಕಳಿಸಿಬೇಕು. ಹಾಳು ಮರವು ನನಗೆ.

ಮೆಟ್ಟಿಲಿನ ಮೇಲೆ ಮೆಟ್ಟಿನ ಶಬ್ದವಾಯಿತು.

* * * * *

ಪಡಸಾಲೆಯಲ್ಲಿ ಬಂದು ನಿಂತ ಶಾರದೆ ಬಾಯಿ ಕಟ್ಟಿದವಳಂತೆ ರಂಗನಾಥನ ಕಡೆ ನೋಡಿದಳು. ಮೈತುಂಬ ಬಿಳಿಸೀರೆಯ ಸೆರಗನ್ನು ಹೊದ್ದು, ಬಿಚ್ಚಿಹೋದ ಹೆರಳನ್ನು ತಲೆಯ ಮೇಲೊಂದು ಗಂಟಾಗಿ ಬಿಗಿಯುವ ಪ್ರಯತ್ನದಲ್ಲಿ ಭಾವಶೂನ್ಯಳಂತೆ ಕಾಣಲು ಪ್ರಯತ್ನಿಸಿದರೂ ನಾಲ್ಕು ವರ್ಷಗಳ ಕೆಳಗೆ ನಡೆದದ್ದೆಲ್ಲ ನೆನಪಾಯಿತು. ಇವತ್ತು ಮಧ್ಯಾಹ್ನ ಕಾಗೆ ಕೂಗಿತು, ನೆಂಟರು ಯಾರೊ ಬರುತ್ತಾರೆಂದುಕೊಂಡೆ ಎಂದು ಹಾಸ್ಯವಾಗಿ ಹೇಳಬೇಕೆಂದುಕೊಂಡ ಮಾತು ಬರಲಿಲ್ಲ. ತಂದೆ ತಾಯಿಯಿಲ್ಲದ ಪರದೇಶಿಯನ್ನು ಕುರುಡು ಮಾವಯ್ಯ ತಂದು ಹೆತ್ತು ಹೊತ್ತವರಿಗಿಂತ ಹೆಚ್ಚಾಗಿ.... ಇಲ್ಲ – ಈ ಯಾವ ಮಾತನ್ನೂ ರಂಗ ನಂಬುವುದಿಲ್ಲ. ಬೋಗಾರು ದುಃಖದ ಮಾತಾಡಬೇಡ ಎನ್ನುತ್ತಾನೆ. ಮುದಿತನದಲ್ಲಿ ಅವರನ್ನು ತೊರೆಯಲಾರೆ ಎಂದರೆ 'ತೊರೆಯಲಾರೆ', ಆಹಾ ಎಂಥ ಶಬ್ದ 'ತೊರೆಯಲಾರೆ', ಚೆನ್ನಾಗಿದೆ ಎಂದು ಕ್ರೂರವಾಗಿ ನಗುತ್ತಾನೆ. ಎಲ್ಲ ಒಂದು ಥರಾ ನಡೆದುಹೋಗುತ್ತಿತ್ತು. ಹೊಂದಿಕೊಂಡಿದ್ದೆ. ಮತ್ತೆ ಯಾಕೆ ಬಂದ? ಬರುವುದಿಲ್ಲ ಎಂದು ಹೇಳಿ ಹೋಗಿದ್ದ. ಸ್ವಲ್ಪ ಬದಲಾಯಿಸಿದ್ದಾನೆ ಈಗ. ನಡುವೆ ಬೈತಲೆ ತೆಗೆಯುತ್ತಿದ್ದವನು ಓರೆಯಾಗಿ ತೆಗೆದಿದ್ದಾನೆ. ಕೂದಲನ್ನು ಸಣ್ಣಗೆ ಕತ್ತರಿಸಿದ್ದಾನೆ. ಮೀಸೆ ಬಿಡಬೇಡವೆಂದು ಹೇಳಿದ್ದರೂ ಮೀಸೆ ಬಿಟ್ಟಿದ್ದಾನೆ. ಗುರು ಗುರು



ನೋಡುತ್ತಾನೆ ನನ್ನ ಕಡೆಗೇ.

ರಂಗ ಶಾರದೆಯನ್ನು ನಿಷ್ಠುರವಾಗಿ ನೋಡಿದ. ನಿನ್ನ ಮನಸ್ಸಿನಲ್ಲಿ ನಡೆಯುವುದೆಲ್ಲ ನನಗೆ ಗೊತ್ತು, ಎಲ್ಲ ಹಳಸಿದ ಮಾತುಗಳು, ನಿಜವಲ್ಲ ಎನ್ನುವ ತಿರಸ್ಕಾರದ ಭಾವವಿತ್ತು ಅವನು ತುಟಿಗಳನ್ನು ಮುಚ್ಚಿದ್ದ ಕ್ರಮದಲ್ಲಿ. ಏನು ಕಾದಿದೆಯೋ ತನಗೆ ಎಂದು ಶಾರದೆ ನಿರ್ಬಲಳಾಗಿ ಗೋಡೆಗೊರಗಿ ಕೂತು ತನ್ನ ಮಾವಯ್ಯನ ಕಡೆ ನೋಡಿದಳು.

ಕುರುಡು ಕಣ್ಣಿನ ಕತ್ತಲೆಯನ್ನು ರೆಪ್ಪೆಯಿಂದ ಮುಚ್ಚಿ ತೆರೆಯುತ್ತ ಕೂತಿದ್ದ ಶಂಕರಯ್ಯ ರಂಗನಾಥನ ಉತ್ತರಕ್ಕೆ ಕಾಯದೆ ನಡುಗುವ ಸ್ವರದಲ್ಲಿ ಮಾತನಾಡುತ್ತಲೇ ಇದ್ದರು. ಎಳೆದೆಳೆದು ಆಡುವ ಕ್ರಮದಲ್ಲಿ ಮಲೆನಾಡಿನವರಿಗೆ ಸಹಜವಾದ ಒಂದು ರಾಗ, ಮೃದು.

"ಅಮ್ಮ ಹೇಗಿದ್ದಾಳಪ್ಪ? ಗೇಣಿ ವಸೂಲಿಗೆ ಬಂದೆಯ? ಕೊಳೆ ರೋಗದಿಂದ ಈ ಸಾರಿ ಅಡಿಕೆ ಫಸಲು ಬಹಳ ಕಡಿಮೆ. ಧಾರಣೆ ಬೇರೆ ಇಳಿದಿದೆ. ಇವತ್ತು ಇಲ್ಲೆ ನಿಲ್ಲುತ್ತೀಯ? ನಮ್ಮನೇಲಿ ನೀನು ಊಟಮಾಡುವ ಹಾಗಿಲ್ಲಪ್ಪ. ಮಾಡಿದರೆ ಇಬ್ಬರೂ ತಪ್ಪುಕಾಣಿಕೆ ಕಟ್ಟಬೇಕಾಗುತ್ತೆ. ಮುತ್ತಜ್ಜನ ಕಾಲದ ಆಣೇಂತ ಕಡೆಗಾಣಬಾರದು ರಂಗ. ಹೇಳಿದ ಮಾತು ಕೇಳು. ನನ್ನ ಮನೇಲಿ ಊಟಮಾಡಬೇಡಾಂತ ನಾನು ಯಾವ ಬಾಯಲ್ಲಿ ಹೇಳಲಿ? ಅದು ಗೃಹಸ್ಥ ಧರ್ಮವಲ್ಲ – ನಿಜ. ಅಲ್ಲದೆ ನೀನು, ನಿನ್ನ ಅಮ್ಮ, ನಮಗೆ ಬೇಕಾದವರು – ಅದೂ ನಿಜ. ಆದರೆ ಹಿರಿಯರ ಕಟ್ಟು ಒಂದು ಉಂಟಲ್ಲ ಹೇಳು. ನಮ್ಮ ಬಾಳೊಂದು ಸ್ವತಂತ್ರವ?"

ಕಂಬಕ್ಕೊರಗಿ ಕೂತಿದ್ದ ಶಂಕರಯ್ಯನಿಂದ ಮೂಲೆಯಲ್ಲಿ ಮೈಮುದುರಿ ಕೂತ ಶಾರದೆಯ ಕಡೆ ರಂಗ ನೋಡಿದ. ಶಂಕರಯ್ಯನಿಗೆ ಏನು ಉತ್ತರ ಕೊಟ್ಟರೂ ಕೃತ್ರಿಮವಾಗುತ್ತೆ. ಬರಿ ಹೂಗುಡುತ್ತ ಏನು ಮಾಡುವುದು ತೋಚದೆ ಎದ್ದು ನಿಂತು,

ಮಲೆನಾಡಿನ ದಟ್ಟಡವಿಯ ನಡುವಿರುವ ಈ ಪುರಾತನ ಮನೆಯಲ್ಲಿ ಸಾವಿನ ಮಂಕು ಕವಿದಿದೆ. ಆಸುಪಾಸಿನಲ್ಲಿ ಒಂದೆರಡು ಶೂದ್ರರ ಮನೆ. ಆಯಿತು. ಬಿಕೋ ಎನ್ನುತ್ತದೆ. ಗೋಡೆ ಕೊರೆದ ಗೂಡಿನಲ್ಲಿ ಅದೇ ಬೂದುಗಟ್ಟಿದ ಮುರಿದ ಸೊಂಡಲಿನ ಗಣಪತಿ, ಹೊಳೆಯಿಂದ ನಾನು ಹಿಡಿದು ಶಾರದೆಗೆ ತಂದುಕೊಟ್ಟಿದ್ದು. ಎಷ್ಟು ದಿನದಿಂದಲೊ ಗಂಟೆ ಹಿಂದೆ ತೋರಿಸುತ್ತ ಗೋಡೆಗೆ ನೇಣುಬಿದ್ದ ಗಡಿಯಾರ. ಮೂಲೆಯಲ್ಲಿ ಕುಂಕುಮ ಹಚ್ಚಿದ ತಿಜೋರಿ. ತಡವಿ, ತಡವಿ,,

ಕೋಲು ಹಿಡಿದು ನಡೆಯುವ ಶಂಕರಯ್ಯ. ಮನೆಗೆಲಸವೆಲ್ಲ ಮುಗಿದ ಮೇಲೆ, ದಾಸರ ಕೀರ್ತನೆಯಂತಹ ಪದ್ಯಗಳನ್ನು ಬರೆಯುತ್ತ ಕೂರುವ ಅತಿಭಾವುಕ ಶಾರದೆ. ಫ್ರಿಜಿಡ್ ಎನ್ನಲು ಕನ್ನಡದಲ್ಲಿ ಏನು ಶಬ್ದವೋ ಗೊತ್ತಿಲ್ಲ. ಗೊತ್ತಿದ್ದರೆ ಶಾರದೆಗೆ ವಿವರಿಸಿ ಹೇಳಬಹುದಿತ್ತು. ತೊಟ್ಟಿಲು ತೂಗಲಿಲ್ಲ ; ಸೀಮಂತದ ಉಲ್ಲಾಸದಿಂದ ಬಸುರಿ ಹೆಂಗಸು ಓಡಿಯಾಡಿಲ್ಲ ; ಮಕ್ಕಳು ಅಳಲಿಲ್ಲ, ತೊಡೆಯ ಮೇಲೆ ಉಚ್ಚೆ ಹೊಯ್ದಿತೆಂದು ತಾಯಿ ನಗಲಿಲ್ಲ ; ಹಾಡಿಲ್ಲ, ಹಸೆಯಿಲ್ಲ,

ಮಿಯಾವ್ ಎಂದು ಅಟ್ಟದಿಂದ ಬೆಕ್ಕು ಕೆಳಗೆ ಹಾರಿತು. ಕಪ್ಪು ಬೆಕ್ಕು, ಹಾಲು ಕರೆದು ತರಲು ಕೊಟ್ಟಿಗೆಗೆಂದು ಶಾರದೆ ಎದ್ದು ನಿಂತಳು.

“ಲಾಟೀನು ನಾನು ಹಿಡೀತೀನಿ ಕೊಡು” ಎಂದು ರಂಗ ಅವಳ ಜೊತೆ ಹೊರಟ.

* * * * *

ಶಂಕರಯ್ಯ ಬಿಕ್ಕಳಿಕೆ ತಡೆಯಲಾರದೆ ಎದ್ದು ನಿಂತರು.

ಮೂಲೆಯಲ್ಲಿ ಶಾರದೆ ಎಂದಿನಂತೆ ಯಾಕೆ ನೀರಿಟ್ಟಿಲ್ಲ? ಕರೆದರೂ ಉತ್ತರವಿಲ್ಲ. ಕತ್ತಲಾದ ಕಣ್ಣಿಲ್ಲದ ಕುರುಡನನ್ನು ಮನೆಯಲ್ಲೆ ಬಿಟ್ಟು ಕೊಟ್ಟಿಗೆಯಲ್ಲಿ ರಂಗನ ಜೊತೆಗೆ ಪಟ್ಟಂಗ ಹೊಡೆಯುವ ಮನಸ್ಸು ಬಂದಿತಲ್ಲ ಹುಡುಗಿಗೆ. ನನ್ನನ್ನು ಮೂಲೆಗೆ ಬಿಸಾಕಿ ಹೋದರೂ ಹೋದಳೆ. ರಂಗನ ಮೋಡಿ ಯಾವ ತರದ್ದು ಹೇಳಲಿಕ್ಕಾಗಲ್ಲ. ನಿಮಿತ್ತ್ಯ. ಪೂಜೆ, ಪುನಸ್ಕಾರ ಕಲಿತ ಮಾಣಿಯೊಂದನ್ನು ಹುಡುಕಿ ಮದುವೆ ಮಾಡಿಸುತ್ತೇನೆಂದು ಅಂಗಲಾಚಿದರೂ ಶಾರದ ಒಪ್ಪುವ ಹುಡುಗಿಯೆ? ಬೇಡ ಮಾವಯ್ಯ ಎಂದಳು. ಹಾಗಾದರೆ ನಿನ್ನನ್ನು ಸಾಕಿಸಲುಹಿ ಅಶ್ವತ್ಥನ ಮರಕ್ಕೆ ಮದುವೆ ಮಾಡಲಾ ಎಂದು ಕೇಳಿದರೆ ಎದುರುತ್ತರ ಕೊಡಲಿಲ್ಲ. ರಂಗನೇನೂ ಇಲ್ಲಿ ಬಂದು ಕೂರುವ ಮಾಣಿಯಲ್ಲ. ಇಂಗ್ಲಿಷ್ ಕಲಿತವ – ಪೇಟೆ ರುಚಿ ಹತ್ತಿದವ. ಇದ್ದ ತೋಟವನ್ನೂ ಗುತ್ತಿಗೆಗೆ ಕೊಟ್ಟು ತಾಯಿಯ ಜೊತೆ ಮೈಸೂರು ಸೇರಿದ. ಊರು ಬಿಟ್ಟು ನಾಲ್ಕು ವರ್ಷ ಮುಗಿದು ಐದು ಹತ್ತಿತಲ್ಲವೆ? ಹೌದು ವಿಳಂಬಿ, ವಿಕಾಶಾರ್ವರಿ, ಪ್ಲವ, ಶುಭಕೃತು. ವಿಳಂಬಿಯಲ್ಲಿ ಬಿಟ್ಟದ್ದು, ಈಗ ಶುಭಕೃತು ಹಿಡಿದಿದೆ. ದಿನ ಎಣಿಸುವುದೇ ಆಯಿತು ನನ್ನ ಗ್ರಹಚಾರ. ನೀನು ಮುದುಕನಾದ ಮೇಲೆ ಪಿರಿಪಿರಿ ಮಾಡುತ್ತಿರಬಾರದೊ ಶಂಕರ, ಮನಸ್ಸು ಬಿಗಿ ಹಿಡಿಯುವುದು ಕಲಿತುಕೊ ಎಂದು ಅಪ್ಪಯ್ಯ ತಕಲಿ ತಿರುಗಿಸಿ ಜನಿವಾರ ತೆಗೆಯುತ್ತ ಹೇಳುತ್ತಿದ್ದರು. ನಾನು ಇಲ್ಲೆ ಕೂತಿರುತ್ತಿದ್ದೆ, ಕುರುಡ. ಅವರು ಎದುರು ಕೂತಿರುತ್ತಿದ್ದರು. ಕೈ ಸಾಗದಿದ್ದ ಮೇಲೆ ನಾಲಗೆಗೆ



ತುರಿಕೆ. ಅರಳು ಮರಳಾದವನ ಮಾತು ಈಗ ಯಾರು ಕೇಳುತ್ತಾರೆ. ಪೂರ್ವದ ನಿಯತ್ತಿನಿಂದ ನೋಡಿದರೆ ರಂಗ ನನ್ನ ಮನೆ ನೀರೂ ಮುಟ್ಟಬಾರದು. ತಲೆತಲಾಂತರದಿಂದ ರೂಢಿಯಾಗಿ ಬಂದ ಕಟ್ಟು ಮುರಿಯಬೇಡ, ಶ್ರೇಯಸ್ಸಲ್ಲ ಎಂದು ಹೇಳಿದರೆ, ಕೇಳುವರೆ ಈ ಹೊಸ ಕಾಲದ ಹುಡುಗರು? ಅಪ್ಪಯ್ಯ ಹೇಳುತ್ತಿದ್ದರು, ‘ಈ ಲೋಕಕ್ಕೆ ಋತುವೆಂಬುದೊಂದುಂಟು ಶಂಕರ – ಈ ಋತ ದೇವರನ್ನೂ ಆಳುತ್ತದೆ’ ಎಂದು. ಮನುಷ್ಯ ಪ್ರಯತ್ನದಿಂದ ಯಾವುದೂ ಬದಲಾಗಲ್ಲ. ದೇವರ ಇಚ್ಛೆ ನಮ್ಮ ಇಷ್ಟವಾಗಬೇಕು. ಭೀಷ್ಮನಿಗೆ ಇಚ್ಛಾಮರಣದ ವರವಿತ್ತಂತೆ. ತನ್ನ ಕೆಲಸ ಮುಗಿಯಿತೆಂದು ಕಂಡಮೇಲೆ ಕಣ್ಣು ಮುಚ್ಚಿದ. ಏಕಾದಶಿ ಆವತ್ತು, ಜ್ವರದಿಂದ ಮಲಗಿದ್ದ ಅಪ್ಪಯ್ಯ, ದೇವರ ಇಷ್ಟ ನಡೆಯಲೊ ಶಂಕರ ಎಂದು ತಣ್ಣೀರು ಸ್ನಾನ ಮಾಡಿ ಬಂದು ಕಣ್ಣು ಮುಚ್ಚಿದರು. ನನ್ನ ಇಚ್ಛೆಯಂತೆಯೇ ಆಗಬೇಕೆಂದು ಈ ಮುದಿ ಕೊರಡಿಗೇಕೆ ಕೊಬ್ಬು? ಆದರೂ ಉಪ್ಪು ಹುಳಿ ತಿಂದ ಜೀವ ಹಂಬಲಿಸುತ್ತದೆ. ತಿಳಿಯುವುದು ಕಷ್ಟವೊ ಶಂಕರ ಎನ್ನುತ್ತಿದ್ದರು ಅಪ್ಪಯ್ಯ. ಈ ಹುಡುಗಿಯ ಅಕ್ಕನೊಂದು ಬಸುರಾಗಿ ಸತ್ತಿತು. ದೇವರು ಏನೇನು ನೋಡಿ ಸಾಯೆಂದು ಹಣೆಯಲ್ಲಿ ಬರೆದನೊ, ಎಲ್ಲ ನನ್ನ ಕೈಯಲ್ಲಿದೆಯೆಂಬುದೊಂದು ಭ್ರಮೆ. ಕೊರಗನಿಗೆ ನೂರು ಅಡಿಕೆ ಸಸಿ ತಂದು ನಡೊ ಎಂದು ಹೇಳಿದೆ, ಮತ್ತೆ ಇತ್ತ ಸುಳಿದಿಲ್ಲ ಅವ. ಏನೇನು ಅನಿಷ್ಟವೊ – ರಾತ್ರೆ ಹೆಬ್ಬುಲಿಯೊಂದು ಮನೆಯ ಇದಿರೇ ನಿಂತು ಅಬ್ಬರಿಸಿತು. ಮಧ್ಯಾಹ್ನ ಶಾರದೆ ಹುಳಿಗೆ ಉಪ್ಪೇ ಹಾಕಿರಲಿಲ್ಲ. ನನಗಂತೂ ಅರವುಮರವು. ಆದರೆ ಅವಳಿಗೆ? ನನ್ನ ಪಿರಿ ಪಿರಿ ಅವಳಿಗೆ ಬೇಜಾರಾಗಿರಬೇಕು. ಮೈಮೇಲೆ ಸ್ವಾಧೀನ ತಪ್ಪಿದ ಬಳಿಕ ಬದುಕಬಾರದು. ಹಾಸಿಗೆಯಲ್ಲೆ ಹೇಲು ಉಚ್ಚೆಯಾಗುವ ತನಕ ನಾನು ಬದುಕದಿದ್ದರೆ ಅದೇ ನನ್ನ ಪುಣ್ಯ... ದೇವರೇ... ಗೋಡೆ ತಡವುತ್ತ ಅಡಿಗೆ ಮನೆ ಕಡೆ ತಾಯಿ ಕಾಣದ ಮಗುವಿನಂತೆ ಇನ್ನು ಅಂಬೆಗಾಲಿಡಬೇಕು. ಗೋಡೆಯ ಬಿರುಕು ಸವರಿದರೆ ಮತ್ತೆ ಕಂಬ. ಮಾರು ದಾಟಿದರೆ ಹೊಸಲು, ಅಮ್ಮ ಹಾಕಿದ ಹಿಟ್ಟಿನ ರಂಗೋಲೆ ಇನ್ನೂ ಕೈಗೆ ತಾಕುತ್ತದೆ. ಎಡಕ್ಕೆ ತಿರುಗಿದರೆ ದೇವರ ಮನೆ. ರಂಗ ಬಂದ ಸಂಭ್ರಮದಲ್ಲಿ ದೇವರಿಗೆ ಮೂರುಸಂಜೆಯ ಹೊತ್ತು ದೀಪ ಹತ್ತಿಸಲು ಶಾರದೆ ಮರೆತರೂ ಆಶ್ಚರ್ಯವಿಲ್ಲ. ದೇವರ ಪೀಠದ ಮೇಲೆ ಗಂಗೆಯಿರುವ ಗಿಂಡಿ. ಅಪ್ಪ ಅದರ ತೀರ್ಥ ಕುಡಿದು ಕಣ್ಣುಮುಚ್ಚಿದರು. ನನ್ನ ಬಾಯಿಗೆ ಬಿಡಲು ಈ ಹುಡುಗಿಯೊಂದು ಇರುತ್ತದೆಂದು ನಾನು ತಿಳಿದೆ. ಗೋಡೆ ತಡವುತ್ತ ನೇರ ನೇರ ಹೋದರೆ ಕಡಗೋಲು ಕಂಬ. ನಸುಕು

ನಸುಕಿನಲ್ಲೆದ್ದು ಅಮ್ಮ ಅಜ್ಜಿ ಮುತ್ತಜ್ಜಿ ಆ ಕಡಗೋಲು ಕಂಬದೆದುರು ಕೂತು ಮೊಸರು ಕಡೆದಿದ್ದಾರೆ. ಕಡೆಯುವಾಗ ಅವರು ಹಾಡುತ್ತಿದ್ದ ಉದಯರಾಗದ ಹಾಡು ಇನ್ನೂ ನೆನಪಿದೆ. ಏಳು ನಾರಾಯಣನೆ, ಏಳು ಲಕ್ಷ್ಮೀರಮಣ, ಏಳಯ್ಯ ಬೆಳಗಾಯಿತು. ಕಡಗೋಲು ಕಂಬದ ಪಕ್ಕದಲ್ಲಿ ಡಬರಿಯಲ್ಲಿ ನೀರು. ಮೇಲುಗಡೆ ಬೀರುವಿನಲ್ಲಿ ಲೋಟ. ಬಾಲ್ಯದಿಂದ ಎಲ್ಲ ಇದ್ದಂತೆ ಇದೆ. ಶಾರದೆ ಕೈ ಬಿಟ್ಟರೂ ಮೈಗೆ ಹತ್ತಿದ ಮನೆಯ ಸ್ವರೂಪ ಕಣ್ಣಿಲ್ಲದವನಿಗೆ ಮೋಸ ಮಾಡದು. ಶಾರದೇ ಶಾರದೇ ಡಬರೀಲಿ ನೀರೇ ಇಲ್ಲಲ್ಲೆ ಶಾರದೆ.

"ಅಯ್ಯ.... ಅಯ್ಯ"

"ಯಾರು ಲಚ್ಚಿಯಾ ಬಂದದ್ದು..."

"ರಂಗಯ್ಯ ಬಂದಾರೇಂತ ಕೇಳ್ದೆ. ಮೀಯಕ್ಕೆ ಉರಿಹಾಕ್ತೋಳು ಹಾಗೆ ಬಂದೆ..."

*　　*　　*　　*　　*

ಶಂಕರಯ್ಯ ಹೊರಗೆ ತಡವಿಕೊಂಡು ಬಂದು ಹೊಗೆಸಪ್ಪಿನ ಚೀಲಕ್ಕೆ ಕೈ ಹಾಕಿದರು. 'ನಿನ್ನೆ ರಾತ್ರಿ ನಿದ್ದೆ ಬರಲಿಲ್ಲ ಎಂದಿರಿ. ತಲೆಗೆ ಎಣ್ಣೆಯೊತ್ತಲೆ ಅಯ್ಯ' ಎಂದು ಲಚ್ಚಿ ಕೇಳಿದ್ದಕ್ಕೆ 'ಫಲಾಹಾರವಿನ್ನೂ ಆಗಿಲ್ಲ. ಈ ಮುದಿ ಕೊರಡಿಗೆ ಆ ಶುಶ್ರೂಷೆಯೊಂದು ಬೇರೆ. ನಿನಗೆ ಬೇರೆ ಕೆಲಸವಿಲ್ಲ' ಎಂದು ಹೊಟ್ಟೆಯ ಮೇಲೆ ಕೈಯಾಡಿಸಿದರು. ಹಾಳು ವಾಯು ಮೈ ಬೇರೆ. ನಿಟ್ಟುಸಿರಿಟ್ಟರು.

"ಅಂದ ಹಾಗೆ ಕೂಸೇ, ಸಣ್ಣಮ್ಮನ್ನ ರಂಗಯ್ಯನಿಗೇ ಕೊಟ್ಟು ಮದ್ವೆ ಮಾಡ್ಬೇಕಾಗ್ತದೊ ಏನೊ. ಬ್ರಹ್ಮಲಿಪಿ ಹಾಗಿದ್ದರೆ ನಾನು ಬಗೆದಂತೆ ಆಗೋದು ಸಾಧ್ಯವೇ?"

"ನಾನು ಎಂದೊ ನಿಮಗೆ ಹೇಳಲಿಲ್ಲವೆ ಅಯ್ಯ? ಸಣ್ಣಮ್ಮನ್ನ ರಂಗಯ್ಯನಿಗೇ ಕೊಟ್ಟು ಮದ್ವೆ ಮಾಡಿ, ನೀವೂ ಹೋಗಿ ಅವ್ರ ಜೊತೆ ಇರಿ. ನೀವೊಂದು ರಂಗಯ್ಯನಿಗೆ ಭಾರವ? ತೋಟ ಗದ್ದೇಂತ ಯೋಚಿಸಬೇಡಿ. ಅದನ್ನ ನನಗೆ ಗುತ್ತಿಗೆಗೆ ಕೊಡಿ. ನಿಮ್ಮ ಅನ್ನ ತಿಂದು ಕಾದುಕೊಂಡು ಬಿದ್ದಿರುತ್ತೇನೆ. ನಾನೂ ಒಂದು ತರಹದಲ್ಲಿ ನಿಮ್ಮ ಮಗಳಲ್ಲವೆ?"

ಲಚ್ಚಿ ಮಾತು ಹೆಚ್ಚಾಯಿತೊ ಏನೊ ಎಂದು ಸೀರೆಯ ಸೆರಗಿನಿಂದ ಬಾಯಿ ಮುಚ್ಚಿಕೊಂಡಳು.

"ಹಾಗಲ್ಲ ಕೂಸೆ. ಪೂರ್ವದಿಂದ ಬಂದ ಮನೆಯಿದು. ಇಲ್ಲಿಯೇ ನಿಂತು ತೋಟ ಗದ್ದೆ ನೋಡಿಕೊಂಡಿರುವ ಮಾಣಿಯೊಂದನ್ನ ಸಣ್ಣಮ್ಮ...."



"ನಿಮಗೊಂದು ಮಾತು ಹೇಳಲೆ ಅಯ್ಯ?" ಲಚ್ಚಿ ನಡುವೆ ಬಾಯಿಹಾಕಿದಳು. "ದೊಡ್ಡಮ್ಮನ ಗತಿ ಹಾಗಾಯ್ತು. ಆ ಮಾತು ಯಾಕೆ ಬೇಡ. ದೊಡ್ಡಯ್ಯ ಸಣ್ಣಮ್ಮನಿಗೆ ಯಾಕಿನ್ನೂ ಮದುವೆ ಮಾಡಿಲ್ಲಾಂತ ಒಕ್ಕಲು ಮಕ್ಕಳೂ ನಿಮ್ಮ ಮನೆ ವಿಷಯ ಮಾತಾಡಿಕೊಳ್ಳೋ ಹಾಗೆ ಆಗಬಾರದು ನೋಡಿ. ಸಣ್ಣಮ್ಮನ ಇಷ್ಟಕ್ಕೆ ಅಡ್ಡ ಬರಬೇಡಿ. ಮದ್ವೆ ಮಾಡ್ಸಿ ನೀವೂ ರಂಗಯ್ಯನ..."

"ಅದೆಲ್ಲಾಗುತ್ತೆ ಕೂಸೇ, ನಿನಗೊಂದು ಭ್ರಮೆ. ಹುಟ್ಟುಗುರುಡ ನನಗೆ ಈ ಮನೆ ಮೈಗೆ ಹತ್ತಿದೆ. ಇದನ್ನ ಬಿಟ್ಟರೆ ನಾನು ಸತ್ತಂತೆ. ಪರದೇಶಿಯಾಗಿ ಅತಂತ್ರನಾಗೆಂದು ಹೇಳುತ್ತಿಯಾ? ಅಲ್ಲದೆ ನಿನಗೆ ಗೊತ್ತಿರಲಿಕ್ಕೆ ಸಾಕು. ರಂಗಯ್ಯನ ಮುತ್ತಜ್ಜನೂ ನನ್ನ ಅಜ್ಜನೂ ಯಾವುದೊ ಸಣ್ಣ ಜಗಳಕ್ಕೆ ಬಾಯಿತಪ್ಪಿ ಆಣೆ ಹಾಕಿಕೊಂಡರಂತೆ. ನಿಮ್ಮ ಅಕ್ಕನ ಮಗಳಲ್ಲವೆ ಸಣ್ಣಮ್ಮ, ಈ ಆಣೆ ಭಾಷೆ ಅವಳಿಗೇಕೆ ಅಡ್ಡಿಯಾಗಬೇಕು ಎನ್ನುತ್ತೀಯಾ ನೀನು ಎನ್ನು. ಸೈ – ಹಾಗಾಗುವುದಾದರೆ ಆಗಲಿ. ಆದರೆ ನಾನು ಧಾರೆಯೆರೆದು ಕೊಡಲಾರೆ. ಹಿರಿಯರ ಇಚ್ಛೆಗೆ ಅಡ್ಡಿಯಾದರೆ ಪಿತೃಗಳು ನರಕಕ್ಕೆ ಹೋದಾರು ನೋಡು."

ಹಲ್ಲಿ ಲೊಚಗುಟ್ಟಲು ಶಂಕರಯ್ಯ ಸತ್ಯ ಸತ್ಯ ಎಂದರು.

"ಅದೇನು ನೀವು ಆಡೋದಯ್ಯ? ನೀವೇ ಸಾಕಿ ಸಲಹಿದ್ದು ಸಣ್ಣಮ್ಮನ್ನ. ತಂದೆ ಬಿಟ್ಟು ಎಲ್ಲೊ ಓಡಿಹೋದಾಗ ಒಡಹುಟ್ಟಿದವಳ ಮಗಳೆಂದು ತಂದು ನೋಡಿಕೊಂಡಿರಿ. ಈಗ ನಿಮಗೆ ಕರಳು ಬಳ್ಳಿ ಹೆಚ್ಚೊ? ಅಥವಾ ಈ ತೋಟ ಗದ್ದೆ ಮುತ್ತಜ್ಜನ ಕಾಲದ ಆಣೆ ಭಾಷೆ ಹೆಚ್ಚೊ? ನೀವು ಬ್ರಾಂಬ್ರಿಗೆ ಇಲ್ಲದ ಬಡಿವಾರವಪ್ಪ. ಶೂದ್ರರ ಮಕ್ಕಳೇ ವಾಸಿ. ಏನು ತಪ್ಪಾದರೂ ಸರಿಯೆ – ಪಂಜುರ್ಲಿಗೆ ತಪ್ಪು ಕಟ್ಟಿಬಿಡ್ತಾರೆ."

ಯಾವುದು ಹೆಚ್ಚು? ಶಂಕರಯ್ಯ ಯಜ್ಞೋಪವೀತಕ್ಕೆ ಹಾಕಿದ ಉಂಗುರವನ್ನು ಹಿಡಿದು ಯೋಚಿಸಿದರು. ಕೈಗಳಿಂದ ತಡವಿ, ಕಿವಿಯಿಂದ ಸೂಕ್ಷ್ಮವಾಗಿ ಆಲಿಸಿ ಜಗತ್ತಿನ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಶಂಕರಯ್ಯನಿಗೆ ಈ ಪ್ರಶ್ನೆಯನ್ನು ಎದುರಿಸಲಾರೆ ಎನ್ನಿಸಿತು. ಈಗ ಎಲ್ಲ ನಿರ್ಬಲವಾಗುತ್ತಿದೆ. ಸುತ್ತಮುತ್ತಿನ ಜೀವನ ಕೈತಪ್ಪಿ ಹೋಗುತ್ತಿದೆ. ಕಠೋರವಾದ ವೈರಾಗ್ಯ, ಕುದಿಯುವ ಬಯಕೆ ಎರಡೂ ಯೌವನಕ್ಕೆ ಸಾಧ್ಯ ; ಮುದಿಯನಿಗೆ ಬೇಜಾರು, ಚಪಲ ಮಾತ್ರ ಸಾಧ್ಯ. ಸುತ್ತುಮುತ್ತಿನ ಜೀವನ ಕೈತಪ್ಪಿ ಹೋಗುತ್ತಿದೆ. ಒಂದು ಹೆಜ್ಜೆ ಸಪ್ಪಳವಾದರೆ ಸಾಕು, ಅದು ಯಾರು ಎಂದು ತಿಳಿಯಬೇಕೆಂದು ಹಂಬಲ ; ಯಾರೊ ಏನೊ ಮಾತಾಡುತ್ತಿದ್ದಾರೆ ನನಗೆ ಕೇಳಿಸುತ್ತಿಲ್ಲವೆಂದು ಸಂಕಟ. ಹಗಲೊ ರಾತ್ರೆಯೊ ತಿಳಿಯದು. ಅಪ್ಪಯ್ಯ

ಹೇಳುತ್ತಿದ್ದರು 'ಕೈಕಾಲು ಬಲ ಕಳೆದ ಮೇಲೆ ದೇವರ ಪಾದ ಸೇರಬೇಕೊ ಶಂಕರ, ಮಕ್ಕಳಿಗೆ ನಾವು ಭಾರವಾಗಬಾರದು' ನಿಜ – ಯಾವುದೂ ಸಮಂಜಸವೆನಿಸುತ್ತಿಲ್ಲ. ನೂರು ಅಡಿಕೆ ಸಸಿ ತಂದು ನಡೊ ಎಂದರೆ ಕೊರಗನೂ ನನ್ನ ಮಾತು ಕೇಳಲಿಲ್ಲ. ಇನ್ನು ಕಂಡವರ ಕಾಲು ಬಳಿ ಕಸವಾಗಲೆ ? ವಂಶಪಾರಂಪರ್ಯವಾಗಿ ಮನೆತನಕ್ಕೆ ಅನ್ನವಿತ್ತ ತೋಟವಿದೆ, ಮನೆಯಿದೆ. ಮುತ್ತಜ್ಜನ ಅಪ್ಪ ಗುಡ್ಡ ಕಡಿದು ಬೆಳೆಸಿದ ತೋಟವಂತೆ. ಅದನ್ನು ಕಾದು ಬಿದ್ದಿರುವುದೇ ಮೇಲೆಂದು ಹಣೆಯಲ್ಲಿ ಬರೆದಿರಬಹುದು. ಸುಖಾ ಸುಮ್ಮನೆ ಹಲುಬಿದರೂ ಕೈಲಾಗದವ ಮೈಪರಚಿಕೊಂಡಂತೆ. ಯಾರು ಯಾರಿಗೆ ಏನೇನು ಸುಖವೋ ಹಾಗೆ ಮಾಡಲಿ. ಈಗ ಎಲ್ಲ ನಿರ್ಬಲ.

* * * * *

ದನದ ಕೆಚ್ಚಲಿಗೆ ನೀರು ಚಿಮ್ಮಿ ಶಾರದ ಎಂದಳು.

"ಗೌರಿಯ ಎದುರು ಬಿಳಿಬಟ್ಟೆ ತೊಟ್ಟು ನಿಲ್ಲಬೇಡಿ. ದನ ಶುದ್ಧ ತುಡುಗು". ರಂಗ ಶಾರದೆಯ ಪಕ್ಕಕ್ಕೆ ಸರಿದ.

"ನಿನ್ನ ಅಕ್ಕ ಸತ್ತ ವಿಷಯ ತಿಳೀತು. ಅದು ಯಾಕೆ ಬಾವಿಗೆ ಹಾರಿ ಸತ್ತಳೂಂತ ?"

ಶಾರದ ಅಂಜುತ್ತ ಹೇಳಿದಳು.

"ಅವಳಿಗೆ ಮೂರು ತಿಂಗಳಾಗಿತ್ತು."

"ಅಂದರೆ..."

"ಬಸುರಿಯಾಗಿದ್ದಳು."

ರಂಗನನಿಗೆ ಫಕ್ಕನೆ ಮಾತು ತಿಳಿಯದಷ್ಟು ಸಿಟ್ಟು ಬಂತು. ಇವಳ ಅಕ್ಕನ ಆತ್ಮಹತ್ಯೆಯ ಪ್ರೇತವೊಂದು ನಮ್ಮಿಬ್ಬರ ನಡುವೆ ಬಂದಿದೆ. ಗಂಡಸನ್ನು ಕೂಡುವ ಸುಖವೇ ಕೇಡು ಎಂದು ಶಾರದೆಯೀಗ ಅಂದುಕೊಂಡಿದ್ದಾಳೆ. ಮೊದಲೇ ಜೀವನ ವಿಮುಖಿ. ವಿರಾಗಿಣಿ.

"ಕೊಂದದ್ದು ನೀನು ನಿನ್ನ ಮಾವ ಶಾರದ. ಮೈನೆರೆಯುವ ಮುಂಚೆ ಗಂಡ ತೀರಿದ ಹುಡುಗಿ ಬಸುರಾಗಬಾರದ? ಬಸುರು ಮಾಡಿದವನನ್ನೇ ಕಿವಿಹಿಡಿದು ತಂದು ಅವಳ ಕೊರಳಿಗೆ ಕಟ್ಟಿ ಎಲ್ಲಿಗಾದರೂ ಓಡಿಹೋಗಿ ಬದುಕಿಕೊಳ್ಳಿ ಎನ್ನಬಾರದಿತ್ತ? ಅದರ ಬದಲು ನಿನ್ನ ಮಾವ ಏನು ಶಪಿಸಿದರೊ, ನೀವೆಲ್ಲ ಸೇರಿ ಅವಳಿಗೆ ಏನು ಅವಮಾನ ಮಾಡಿದಿರೊ..."

ಹೆಂಗಸಿನ ಕಷ್ಟ ರಂಗ ತಿಳಿಯಲಾರ. ಜ್ವರಗೆಡ್ಡೆಯೆಂದು ಮಾತು ಹಾರಿಸಿ



ಕೆಲವು ದಿನ ಅಕ್ಕ ತಿರುಗಾಡಿದಳು. ಒಂದು ದಿನ ರಾತ್ರೆ ನನ್ನನ್ನು ಅಪ್ಪಿಕೊಂಡು ಅತ್ತಳು. ನಿಜ ಹೇಳಿದಳು. ನನಗೆ ಹೇಸಿಗೆಯಾಯಿತು. ಗಾಬರಿಯಾಯಿತು. ನೀನೂ ನನ್ನನ್ನು ಕಂಡು ಹೇಸುತ್ತೀಯ ಎಂದಳು. ನಾನು ಮಾತಾಡಲಿಲ್ಲ. ಬೆಳಗಾಗುವಾಗ ಸತ್ತಿದ್ದಳು. ಹೊಟ್ಟೆಯಲ್ಲಿ ಮಗುವಿತ್ತೆಂದು ನನಗೆ ಗೊತ್ತು. ಮಾವಯ್ಯನಿಗೆ ಗೊತ್ತು.

"ಅಲ್ಲೆ ಶಾರದ, ಹೇಳು ನನಗೆ. ಕೊನೆಪಕ್ಷ ಯಾರಿಗಾದರೂ ಹೇಳಿ ಬಸುರು ತೆಗೆಸಬಾರದಿತ್ತ ? ಸಾಯುವದಕ್ಕಿಂತ ಅದು ವಾಸಿ. ನನ್ನ ತಂದೆಯ ತಂಗಿಯೊಬ್ಬಳು ಹಾಗೆ ಮಾಡಿಕೊಂಡಿದ್ದಳಂತೆ. ಹೊರಗೆಲ್ಲ ನಮ್ಮ ಬಾಳು ಚೆಂದ, ಅಷ್ಟೆ. ಸತ್ಯಕ್ಕೇಕೆ ನೀವು ಮುಖ ತಿರುಗಿಸುತ್ತೀರಿ?"

ಶಾರದೆಗೂ ರೇಗಿತು.

"ನಿಮಗೆ ಹೀಗೆ ಮಾತಾಡೋದು ಬಹಳ ಸುಲಭ ಅಲ್ಲವ? ಈ ಹಳ್ಳೀಲಿ ನಾಕು ಜನರ ಜೊತೆ ಕಾಲಹಾಕಬೇಕಾದವರು ನಾವು. ನಿಮಗೇನು ಹೇಳಿ? ಕೊನೆಗೆ ವಕ್ಕಲು ಮಕ್ಕಳ ಬಾಯಲ್ಲಿ ನಮ್ಮ ಮನೆತನದ ವಿಷಯ...."

"ಅಯ್ಯೊ ಮನೆತನ, ಮನೆತನ. ಬೆಂಕಿಯಿಡಬೇಕು ನಿಮ್ಮ ಮನೆತನಕ್ಕೆ..."

ಬಾಯಿತೆಗೆದರೆ ಸಾಕು – ಅವರು ಏನೆಂತಾರೆ, ಇವರು ಏನೆಂತಾರೆ ಎನ್ನುವ ಮಾತೆ. ಮೈತುಂಬ ಸೆರಗು ಹೊದ್ದ ಪೆಚ್ಚುಮುಖದ ಬಿಚ್ಚೋಲೆ ಗೌರಮ್ಮನ ಬೋಗಾರು ದುಃಖ. ಚಿಕ್ಕ ವಯಸ್ಸಿನಿಂದ ಕೇಳಿ ಕೇಳಿ, ಆಡಿ ಆಡಿ ಅಭ್ಯಾಸ ಬಿದ್ದು ಹೋದ ಮಾತುಗಳು. ನಿಜ ಜೀವನದ ಅನುಭವವೇ ಬೇರೆ. ಬಾಳಿಗೂ ನಂಬಿಕೆಗೂ ಸಂಬಂಧ ಕಡಿದುಹೋಗಿ, ಬಾಳು ಶುಷ್ಕವಾಗಿದೆ, ನಂಬಿಕೆ ಮೂಢವಾಗಿದೆ. ಹೂಬತ್ತಿ ಹೊಸೆಯುತ್ತ ಮಂಕಾಗಿ ಕೂತಿರುತ್ತಿದ್ದ ಪಾರ್ವತಿ ಯಾವನಿಗೊ ಬಸುರಾಗುವಷ್ಟು ಧೈರ್ಯಮಾಡಿದಳಲ್ಲ – ಅವಳೇ ವಾಸಿ. ನಾನು ಕನಸುಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಬದುಕಿನ ಶುಭ್ರಗಾಳಿ ಶಂಕರಯ್ಯನ ಪ್ರೇತಗೃಹಕ್ಕೆ ಒಂದು ಸಾರಿ ಬೀಸಿತು. ಆದರೆ ಮತ್ತೆ ಅವಳು ಸತ್ತು ಸರ್ವನಾಶ ಮಾಡಿದರು. ಕತ್ತಲಿಗಷ್ಟು ಕತ್ತಲೆ ಸೇರಿಸಿ ಸತ್ತಳು. ನನಗೆ ಶಾರದೆ ದಕ್ಕದಂತೆ ಮಾಡಿದಳು, ಮತ್ತೇನು ಮಾಡಿಯಾಳು ಪಾಪ. ನಾನಿದ್ದಿದ್ದರೆ ಗುಟ್ಟಾಗಿ ಕರೆದುಕೊಂಡು ಹೋಗಿ ಬಸುರು ತೆಗೆಸುತ್ತಿದ್ದೆ. ಅವಳ ಜೀವ ಉಳಿಸುತ್ತಿದ್ದೆ. ಆದರೆ ಇಲ್ಲಿ ಕಂಡಕಂಡವರೆಲ್ಲ ನೀನು ಸಕೇಶಿ, ನಿನ್ನ ಸ್ನಾನಮಾಡಿದ ತಲೆನೀರು ನೆಲಕ್ಕೆ ಬೀಳಬಾರದು, ಮೈಲಿಗೆ ಎನ್ನುತ್ತಿದ್ದರು. ಬದುಕಿದ್ದೆಲ್ಲ ಗಂಡ ಸತ್ತ ಮುಂಡೆಯರ ಜೊತೆ ; ಅಥವಾ ಗಂಡಂದಿರಿಗೆ ಬಡಿಸಿಯಾದ ಮೇಲೆ 'ಉಸ್ಸಪ್ಪ' ಎಂದು

ಎರಡನೆಯ ಪಂಕ್ತಿಗೆ ಕೂರುವ ಹೆಂಗಸರ ಜೊತೆ. ಹೆಣ್ಣಿನ ಹಣೆಬರಹವೆ ಇಷ್ಟೊ ಏನೊ !

ಆದರೆ ನನ್ನ ಶಾರದಾ ಹಾಗಲ್ಲ. ಹೆಂಗಸರ ಜೊತೆ ಕೂತು ಹೆಚ್ಚು ಹರಟುವವಳಲ್ಲ. ಒಂಟಿಯಾಗಿ ಇರುತ್ತಾಳೆ. ದೊಡ್ಡ ಗುಂಪಿನಲ್ಲಿದ್ದರೂ ಕಣ್ಣಿಗೆ ಹೊಡೆಯುವಂತೆ ಇವಳ ನಿಸ್ಸಂಗದ ತೇಜಸ್ಸು. ಏಕಾಂಗಿನಿ ಇವಳು. ಕಣ್ಣೆತ್ತಿ ನೋಡಿದರೆ ಸಾಕು, ಮಾತಾಡಿದಂತೆ. ತುಳಸಿ ಕಟ್ಟೆಯ ಎದುರು ಇವಳು ರಂಗೋಲೆ ಇಡುತ್ತ ಕೂತಿರೋದು ನೋಡಬೇಕು.

ತಲೆಯ ಮೇಲೆ ಬಿಳಿಸೆರಗು ಹೊದ್ದು ಮೈಮುಡಿ ಕಟ್ಟಿ ಹಾಲು ಕರೆಯುತ್ತಿರುವ ಶಾರದ, ಅಮೃತಶಿಲೆಯ ಸುಂದರವಾದ ಗೋರಿ. ಬೆಳ್ದಿಂಗಳಿನಲ್ಲಿ ದೂರ ನಿಂತು ನೋಡಬೇಕು, ಎರಡು ಕಣ್ಣು ಸಾಲದು, ಯಾಕುಂದೇಂದು ತುಷಾರ ಹಾರಧವಳಾ ಯಾಶುಭ್ರವಸ್ತ್ರಾನ್ವಿತಾ, ಬಿಳಿಯ ಕುಂದಪುಷ್ಪ, ಬಿಳಿಚಂದ್ರ, ಬೆಳ್ಳಗಿನ ನೊರೆಹಾರ, ಮೈಮೇಲೆ ಬಿಳಿಯದೊಂದು ದುಕೂಲ, ರಾಗದ ಹಾಗೆ ಬರಿ ಮಾನಸೆ, ಪ್ರಸನ್ನೆ. ಇವಳ ರೂಪ ಶರದೃತುವಿನಂತೆ ಶುಭ್ರ, ಸೌಮ್ಯ, ಚೈತ್ರದುತ್ಸಾಹವಿಲ್ಲ, ರಂಗು ರಂಗಿನ ಬಿಂಕವಿಲ್ಲ. ಕಾರ್ತಿಕದ ಹಣತೆಯ ದೀಪದಂತೆ ಕಣ್ಣುಗಳು. ನೀಳವಾಗಿ, ಪ್ರಸನ್ನವಾಗಿ ಕಣ್ಣೆದುರು ನಿಶ್ಚಲ ಉರಿಯುತ್ತಿರುತ್ತಾಳೆ. ನಾಲ್ಕು ಕಾಲಿನ ಮೇಲಿನ ಅಂಬೆಗಾಲಿನ ಪಶು ಪ್ರಣಯಕ್ಕೆ ಮೈಲಿಗೆಯಾಗುತ್ತಾಳೆ. ಮುಟ್ಟಿದರೆ ಬಾಡುವ ಪಾರಿಜಾತ ಇವಳು. ಲಜ್ಜೆಯ ಮನೆಯಿಂದ ಬಂದವನು ಅಕ್ಕಿ ಆರಿಸುತ್ತ ಕೂತ ಇವಳನ್ನು ನೋಡಿ ಬೆಚ್ಚಿಬಿದ್ದೆ. ಹೇಳಿಕೊಳ್ಳಲು ಬಾಯಿ ಬರಲಿಲ್ಲ. ನೀರಿನ ಮೇಲೆ ಉರಿಯುವ ಕರ್ಪೂರದಂತೆ ನನ್ನ ಬಾಳಿನಲ್ಲಿ ಇವಳು. ಯಾಕೆ ಬಂದಳೊ? ನನ್ನ ಕೊನೆಯ ಗತಿ, ನನ್ನ ವಿಧಿ ಇವಳೇ ಯಾಕೆ ಆಗಬೇಕಿತ್ತೊ ? ಇವಳನ್ನು ಬಿಟ್ಟು ಬದುಕಲಾರೆ ಎನ್ನುವ ಪ್ರಾಣದ ತ್ರಾಣ ಹೀರುವ ಹಂಬಲ ನನ್ನನ್ನು ಯಾಕೆ ಕಾಡುವುದೊ ? ಗಡಸು ಕಂಠದ ಒರಟು ಕೂದಲಿನ ಕಿರಿಕಿರಿ ಕೋಪದ ಗಂಡು ನಾನು. ಪಶು ನಾನು, ಇವಳು ಬರಿ ಮಾನಸೆ... ಶಾರದೆ... ಸೌಮ್ಯೆ... ವೃಂದಾವನದ ಎದುರು ಮೈಮೇಲೆ ಐನೀರಿನ ಒದ್ದೆ ಕೂದಲನ್ನು ಚೆಲ್ಲಿ ಕಣ್ಣುಮುಚ್ಚಿ ಬಾಗಿದ್ದಳು. ಮುಂದೆ ಪುಟ್ಟ ಪುಟ್ಟ ನೀಲಾಂಜನ. ಚುಮುಚುಮೂ ನಸುಕು ಆಗ. ಹೈಸ್ಕೂಲಿನಲ್ಲಿ ಓದುತ್ತಿದ್ದ ನಾನು ಓದಿದ ಒಂದು ಕಥೆಯನ್ನು ಹೇಳಿದೆ. "ಒಂದಾನೊಂದು ಊರಲ್ಲಿ ಒಬ್ಬ ರಾಜಕುಮಾರಿ, ತ್ರಿಪುರಸುಂದರಿ. ಏನೋ ಶಾಪ ಅವಳಿಗೆ. ಹುಟ್ಟಿದ ಕೂಡಲೆ ನಿದ್ದೆ ಹೋಗಿಬಿಟ್ಟಳು. ದೀರ್ಘವಾದ ನಿದ್ರೆ. ಕನ್ನಿಕೆಯಾಗಿಯೇ ಉಳಿದಳು. ದಿನದ ಮೇಲೆ ದಿನ ತುಂಬಿತು. ಕೊನೇಗೊಂದು



ದಿನ ಮುಟ್ಟಿ ಎಬ್ಬಿಸೋಕೆ, ತಟ್ಟಿ ಎಬ್ಬಿಸೋಕೆ ಬರ್‍ತಾನೆ ಒಬ್ಬ ಕುದುರೆ ಹತ್ತಿ..." ಓದಿದ ಕಥೆ ಎಲ್ಲದರ ನಾಯಕ ನಾನು ನಾಯಿಕೆ ಶಾರದೆ ಎಂದು ಭ್ರಮಿಸುತ್ತಿದ್ದ ಕಾಲವದು. ಆದಕ್ಕೆ ಶಾರದೆ 'ಅಂದರೆ' ಎಂದಳು. 'ಒಗಟಿನಂತೆ ಕಾಣುತ್ತೆ' ಎಂದಳು. ನಾನು ನಕ್ಕೆ. ಕಣ್ಣಿನ ಮೇಲೆ ಬಂದ ಕೂದಲನ್ನು ತಳ್ಳುತ್ತ, ಕೈಯಲ್ಲಿ ತುಳಸಿಗೆ ಮುಡಿಸಿದ ಸಂಪಿಗೆಯ ಹೂವೊಂದನ್ನು ಹಿಡಿದು ಎದ್ದುನಿಂತಳು. ಆಗ ಸೂರ್ಯ ಅವಳ ಮೈಯ ಮೇಲೆಲ್ಲ ಬಂಗಾರದ ಒಡವೆಗಳನ್ನು ಚಿಮ್ಮಿದ. ನನಗೆ ಮಾತು ಬರಲಿಲ್ಲ.

"ಹೋಗಲಿ ಬಿಡು ಶಾರದ. ನೀನು ಚೆನ್ನಾಗಿದೀಯ ಹೇಳು. ನಾನಂತೂ ನಾಕು ವರ್ಷದ ಹಿಂದೆ ಹೇಗಿದ್ದೆನೊ ಹಾಗೆ ಇದ್ದೀನಿ."

ಶಾರದೆ ಗೌರಿಯ ಬೆಚ್ಚನೆ ಹೊಟ್ಟೆಗೆ ಹಣೆಯೊಡ್ಡಿ ಬೆವರಿದಳು. ರಂಗ ಇನ್ನೂ ಮದುವೆಯಾಗಿಲ್ಲೆಂದು ನನಗೆ ಸಂತೋಷವಲ್ಲವೆ? ಗೌರಿಯ ಕೆಚ್ಚಲನ್ನು ಸೆಳೆಯುತ್ತಿದ್ದ ಬೆರಳು ಕಂಪಿಸಿತು. ರಂಗನುಟ್ಟ ಪಂಚೆ ಬೆನ್ನು ಸವರಲು ಉಂಗುಷ್ಠದಿಂದ ನೆತ್ತಿಯವರೆಗೆ ಬೆಚ್ಚಗಾಯಿತು. ಬೂದಿ ಮುಚ್ಚಿದ ಕೆಂಡದಂತೆ ಮುದುರಿ ಕೂತವಳನ್ನು ರಂಗ ನಿಷ್ಠುರ ದೃಷ್ಟಿಯಿಂದ ನೋಡಿದ. ಶಾರದೆಯ ಸೆರಗು ಜಾರಿತು. ನಸುಗೆಂಪು ಕತ್ತಿನ ಮೇಲೆ ಹೆಬ್ಬೆಟ್ಟು ಗುರುತಿನಗಲದ ಮಚ್ಚೆ. ಚಿರಪರಿಚಿತವಾದ ನೀಳವಾದ ಹೆಣ್ಣಿನ ದೇಹ. ಶಾರದೆಯೂ ಎಲ್ಲ ಹೆಣ್ಣುಗಳ ಹಾಗೆ ಇನ್ನೊಂದು ಹೆಣ್ಣು ಜೀವ. ಹೊಟ್ಟೆಯಲ್ಲಿ ಕರುಳಿದೆ, ಗರ್ಭಕೋಶವಿದೆ, ಪಿತ್ಥ – ಕೋಶವಿದೆ, ಅಂಡಾಳಯಗಳಿವೆ. ಬರಿ ಮಾನಸೆಯೆಂಬುದೊಂದು ಮನಸ್ಸಿನ ಭ್ರಾಂತಿ. ಚಿಕ್ಕ ವಯಸ್ಸಿನಿಂದಲೂ ಜೊತೆಯಲ್ಲಿ ಬೆಳೆದವರಲ್ಲವೆ? ಹುಡುಗಾಟಿಕೆಯಲ್ಲಿ ಬೆತ್ತಲೆ ನೋಡಿದ್ದುಂಟು; ಗುದ್ದಾಡಿದ್ದುಂಟು. ಚಿರಪರಿಚಿತನಾದ ನನ್ನಲ್ಲಿ ಇವಳಿಗೆ ಬಯಕೆಯಿಲ್ಲವೊ ಏನೊ. ಒಡಹುಟ್ಟಿದ ತಂಗಿಯಂತೆಯೂ ಅಲ್ಲ ; ಕೊನೆಗೆ ಕಾಮಿಸಿದ ಹೆಣ್ಣಿನಂತೆಯೂ ಅಲ್ಲ. ಇವಳ ಜೊತೆ ನನ್ನ ಸಂಬಂಧವೇನು? ಬೇರೆ ಯಾವ ಹುಡುಗಿಯೂ ಇವಳು ಬೇಕು ಎನ್ನಿಸುವ ಹಾಗೆ ಯಾಕೆ ಅನ್ನಿಸುವುದಿಲ್ಲ? ಮೈನೆರದ ದಿನದಿಂದಲೂ ನನ್ನನ್ನು ಹೀಗೆ ಪೀಡಿಸುತ್ತಿದ್ದಾಳೆ. ಒಟ್ಟಿಗೆ ಕೂತು ಭಾರತ ಓದೋಣ, ಅಳೋಣ, ನಿಟ್ಟುಸಿರಿಡೋಣ, ಹಾರುವ ಬೆಳ್ಳಕ್ಕಿಗಳನ್ನೆಣಿಸೋಣ, ರಂಜದ ಹೂವಾರಿಸೋಣ, ಆದರೆ ಮತ್ತೇನೂ ಬೇಡ. ಯಾಕೆ ಬೇಡ?

ದನಕಾಯುವ ಹುಡುಗನೊಬ್ಬ ಜೊತೆಗಾತಿಯೊಬ್ಬಳೊಡನೆ ತುಂಗೆಯ ಮರಳಿನ ಮೇಲೆ ತಬ್ಬಿ ಮಲಗಿದ್ದನ್ನು ನೋಡಿದ ರಂಗ ಹೂವಾರಿಸುತ್ತಿದ್ದ

ಶಾರದೆಯನ್ನು ಹಿಡಿದೆಳದಿದ್ದ ; ಕೆಣಕಿದ್ದ. ಅತ್ತು ಬಿಟ್ಟಳು ಶಾರದೆ. ತಾನೊಬ್ಬ ಮಹಾಪಾತಕಿ, ಹೆಣ್ಣಿನ ದೇಹ ಬಯಸುವ ಕಾಮುಕಿ, ಎನ್ನುವ ಭಾವನೆ ಬರುವಂತೆ ಮಾಡಿದ್ದಳು. ಅವತ್ತಿನಿಂದ ಪ್ರಾರಂಭವಾಯಿತು ಅಸಹಜ ಆದರ್ಶ ಜೀವನ. ರಾತ್ರೆಯೆಲ್ಲ ಕಾಮುಕವಾಗಿ ಶಾರದೆಯ ಬಗ್ಗೆ ಚಿಂತಿಸಿ ಹಗಲು ಜೋಲುಮೋರೆ ಹಾಕಿಕೊಳ್ಳುವುದು, ತಪ್ಪಾಯಿತೆ ಎಂದು ಸಂಕಟ ಪಡುವುದು. ಸ್ವರತಿ ಎಷ್ಟು ಹೀನವಾದದ್ದು ಎನ್ನುವುದನ್ನು ಒಂದು ಪುಸ್ತಕದಲ್ಲಿ ಓದಿ, ವಿಪರೀತ ಅವಮಾನವಾಗಿ, ತನ್ನ ಕಣ್ಣಿನ ಸುತ್ತ ಕಪ್ಪಾಗುತ್ತಿದೆಯೆಂದು ಚಡಪಡಿಸಿದ. ಪುಸ್ತಕ ಹೇಳುವ ಪ್ರಕಾರ, ತುಳಸಿ ತಿಂದ, ಗೋಮೂತ್ರ ಕುಡಿದು ತಲೆಯ ಮೇಲೆ ನಿಂತ, ಟ್ರಂಕಿನ ಮೇಲೆ ಇನ್ನೊಂದು ಟ್ರಂಕಿಟ್ಟು ಕಾಲನ್ನು ಅದರ ಮೇಲಿಟ್ಟು ಜೈ ಹನುಮಾನ್ ಎಂದು ಧ್ಯಾನಿಸುತ್ತ ಮಲಗಿ ರಾತ್ರೆ ಕಳೆದ. ಆದರೂ ವೀರ್ಯ ಊರ್ಧ್ವಾಭಿಮುಖವಾಗಲಿಲ್ಲ, ಮುಖದ ತೇಜಸ್ಸು ಏರಲಿಲ್ಲ. ಎಲ್ಲ ಎಷ್ಟು ಸುಳ್ಳು – ಕೆಲವು ಸಾರಿ ತೋರುಗಾಣಿಕೆ ಬೇರೆ. ಶಾರದೆ ತಲೆಗೂದಲು ಸವರುತ್ತ ಹೇಳುತ್ತಿದ್ದಳು – "ಇಬ್ಬರೂ ಮದುವೆಯಾಗದೆ ಹೀಗೆಯೇ ಇದ್ದು ಬಿಡಬಹುದು ಅಲ್ಲವಾ ?" ಅಕ್ಕ ಮಹಾದೇವಿ, ಪ್ರಭುದೇವ; ಶಾರದಾಮಣಿ ಪರಮಹಂಸ – ಎಲ್ಲ ಆದರ್ಶಗಳನ್ನೂ ಶಾರದೆಯ ಬಾಯಿಂದ ಕೇಳಿದ. "ನನ್ನನ್ನು ಸಾಕಿದ ಕುರುಡು ಮಾವಯ್ಯನ ಶುಶ್ರೂಷೆಯಲ್ಲಿ ನಾನು ಕಾಲ ಹಾಕುತ್ತೇನೆ. ನೀನೊಬ್ಬ ದೊಡ್ಡ ಸಂತನಾಗಿ ಬಾ" ಎಂದ ಶಾರದೆಯ ಮಾತನ್ನು ಒಪ್ಪಿಕೊಂಡ. ಆದರೆ ಶಾರದೆಯ ಸುಂದರವಾದ ಏರು ತಗ್ಗಿನ ಮೈಕಟ್ಟು ತುಂಬಿಕೊಂಡಂತೆಲ್ಲ ಆದರ್ಶಗಳು ಕರಗಿದವು. ಪ್ರತಿಯೊಬ್ಬ ಧ್ಯೇಯವಾದಿ ಭಾರತೀಯ ಯುವಕನಿಗೂ ಸಾಮಾನ್ಯವಾದ ಅನುಭವಗಳಿವು, ನನ್ನನ್ನು ವಿಚಿತ್ರವಲ್ಲ, ನಮ್ಮ ಅಸಹಜ ಸಾಮಾಜಿಕ ಪದ್ಧತಿಯೇ ಇವಕೆಲ್ಲ ಕಾರಣ, ಜೀವನ ವಿಮುಖ ಅಧ್ಯಾತ್ಮಕ್ಕಷ್ಟು ಬೆಂಕಿಯಿಕ್ಕಿತು ಎಂದು ಒಂದು ದಿನ ನಿರ್ಧರಿಸಿ – ನಾಲ್ಕು ವರ್ಷಗಳ ಕೆಳಗೆ ಹೋಗುವವ ಶಾರದೆಗೆ ಹೇಳಿದ.

"ಈ ಆದರ್ಶಗಳೆಲ್ಲ ಅಸಹಜ ಮಾತ್ರವಲ್ಲ ಶಾರದ. ಇವು ನಮ್ಮನ್ನು ಇನ್ನಷ್ಟು ಕ್ರೂರ ಮಾಡುತ್ತವೆ. ನಿನ್ನ ತಂದೆ ನಿಮ್ಮನ್ನ ತೊರೆದು ಓಡಿ ಹೋಗದಿದ್ದರೆ, ಕುರುಡು ಶಂಕರಯ್ಯ ನಿನ್ನನ್ನ ಬೆಳೆಸದಿದ್ದರೆ, ಅವರ ಮನೆಗೂ ನಮಗೂ ಆಣೆ ಭಾಷೆಯಾಗಿರದಿದ್ದರೆ ನೀನು ಹೀಗೆ ಮಾತಾಡುತ್ತಿರಲಿಲ್ಲ. ನಮ್ಮ ಕೈಯಿಂದ ಏನಾದರೂ ಸಾಧ್ಯವಾಗದಿದ್ದಾಗ ನಾವು ಹೀಗೊಂದು ವೇದಾಂತ ಮಾಡಿಕೊಳ್ಳುತ್ತೇವೆ ಶಾರದ. ಪರವಂಚನೆಗಿಂತ ಆತ್ಮವಂಚನೆ ಹೇಸಿಗೆ. ಪರಿಸ್ಥಿತಿ ನಮ್ಮ ಕೈಮೀರಿದೆ ಎಂದು ಒಪ್ಪಿಕೊಳ್ಳಲು ನಿನಗೆ ಅಹಂಕಾರ ಬಿಡುವುದಿಲ್ಲ. ಅದಕ್ಕಾಗಿ ಈ ಅನುಕೂಲ



ವೇದಾಂತವಲ್ಲವೆ? ಇನ್ನು ಮುಂದೆ ನನ್ನನ್ನ ನೀನು ಸುಳ್ಳು ಹೇಳಿ ಮೋಸ ಮಾಡಲಾರೆ. ಹಳೆಯದೆಲ್ಲ ತೊರೆದು ನನ್ನ ಜೊತೆ ಬಾ. ಮಾವಯ್ಯ, ಈ ಮನೆತನ ನಿನ್ನ ಭೂತ; ನಾನು ನಿನ್ನ ಭವಿಷ್ಯ. ಒಪ್ಪಿಕೊ ಅಥವಾ ಇಲ್ಲೆ ಹಳೆಯದಕ್ಕೆ ಗಂಟು ಬಿದ್ದು ಕೊಳಿ..."

ಮೈಸೂರಿಗೆ ಹೋದವನು ಮತ್ತೊಂದು ಕಾಗದ ಬರೆದ.

"ಮುದಿ ಜೀವದ ಶುಶ್ರೂಷೆಗೆಂದು ನಿನ್ನ ಯೌವನವಿರುವುದಲ್ಲ. ನಿನಗಾಗಿ ನೀನು ಬದುಕಬೇಕು ; ನನಗಾಗಿಯೂ ಬದುಕಬೇಕು. ಇಲ್ಲದಿದ್ದರೆ ಕೊನೆಯಲ್ಲಿ ನಿನಗೇ ಜೀವನ ಸಪ್ಪೆಯಾಗಿ ಶುಷ್ಕವಾಗಿ ಕಾಣುತ್ತೆ. ಮೈಯ ಬಯಕೆಯನ್ನು ಧಿಕ್ಕರಿಸಿ ಮೀರಿ ಬದುಕಿದರೆ ಮುದುಕಿಯಾದ ಮೇಲೆ ನೀನು ಶುದ್ಧ ಪಿರಿ ಪಿರಿಯಾಗುತ್ತಿ. ಚಿಕ್ಕ ಹುಡುಗಿಯರ ಜೀವ ಹಿಂಡುವ ಪಿಶಾಚಿಯಾಗುತ್ತಿ. ಇದು ನೈಸರ್ಗಿಕವಲ್ಲ. ದಳ ಚಾಚುವಷ್ಟು ಮಾತ್ರ ಹೂ ಅರಳಬೇಕು. ಮದುವೆಯಾಗುವುದಿಲ್ಲೆಂದು ಹಠ ಹಿಡಿದ ಹೆಣ್ಣುಗಳು ಏನಾಗುತ್ತವೆದು ನಾನಿಲ್ಲಿ ನಿತ್ಯ ನೋಡುತ್ತೇನೆ. ಅವರಲ್ಲಿ ಕೆಲವರು ಯೌವನಕ್ಕೆ ಕಾಲಿಟ್ಟ ಹೆಣ್ಣು ಹುಡುಗಿಯರ ಜೊತೆ ವಿಪರೀತ ಸ್ನೇಹಮಾಡಿಕೊಂಡು ತಿರುಗುತ್ತಾರೆ. ಹೊಲಸು ರೀತಿಯ ಚಿನ್ನಾಟ ಅವರದು. ಅಸಹಜ ಕಾಮ. ಇವರೇ ವಾಸಿ. ಉಳಿದವರು ಮಾನವದ್ವೇಷಿಗಳಾಗುತ್ತಾರೆ. ಪೋಲಿ ಗಂಡಸರನ್ನ ದ್ವೇಷಿಸುವುದೇ ಜೀವನದ ಪರಮಧ್ಯೇಯವೆಂದುಕೊಳ್ಳುತ್ತಾರೆ. ನೀನು ಹಾಗಾಗಿ ಬಿಡಬಾರದು ಶಾರದ. ಒಣಗಿ ಹೋಗಬೇಡ."

ರಂಗನ ಮಾತುಗಳೆಲ್ಲ ಶಾರದೆಗೆ ಮನಸ್ಸಿನ ವಿಕಾರವಾಗಿ ಕಂಡಿದ್ದುವು. ಇವನು ಏನೇನೊ ಹೊಸ ಪುಸ್ತಕಗಳನ್ನು ಪೇಟೆಯಿಂದ ಓದಿಕೊಂಡು ಬಂದು ನನ್ನನ್ನು ಹಿಂಸಿಸುತ್ತಾನೆ. ಮೈಸೂರಿಗೆ ಓದಲು ಹೋಗದಿದ್ದರೆ ಹಳ್ಳಿಯೇ ಸಾಕೆಂದಿರುತ್ತಿದ್ದ. ನೆಮ್ಮದಿಯಿಂದ ಪರಂಪರೆಯಿಂದ ಬಂದುದನ್ನು ನೋಡಿಕೊಂಡಿರುತ್ತಿದ್ದ. ಪೇಟೆಗೆ ಹೋಗಿ ತಲೆಯಲ್ಲಿ ಏನೇನೊ ತುಂಬಿಸಿಕೊಂಡ. ಕೊಪ್ಪಲಿನಲ್ಲಿಯೇ ಇರಲು ಒಪ್ಪಿದ್ದರೆ ಮದುವೆಯಾಗಬಹುದಿತ್ತು. ಎಲ್ಲ ಸಮಂಜಸವಾಗುತ್ತಿತ್ತು. ಮಾವನ ಶುಶ್ರೂಷೆ ಮಾಡಿಕೊಂಡೂ ಇರಬಹುದಿತ್ತು. ಇಲ್ಲ – ರಂಗನಿಗೆ ಎಲ್ಲ ತನ್ನ ಮೂಗಿನ ನೇರಕ್ಕೇ ಆಗಬೇಕು. ಪ್ರೀತಿಸುವಾಗಲೂ 'ಆಹಾ ನಾನೆಷ್ಟು ಪ್ರೀತಿಸುತ್ತೇನೆ ನೋಡಿದೆಯಾ' ಎನ್ನುವ ಅಹಂಕಾರ. ಈಗ ಮತ್ತೇಕೆ ಬಂದನೋ. ಇಷ್ಟೇಕೆ ಕಠೋರವಾಗಿ ಮಾತಾಡುವನೊ. ಮುದುರಿ ದನ ಕರೆಯುತ್ತಿದ್ದ ಶಾರದ ತನಗಿನ್ನೇನು ಕಾದಿದೆಯೊ ಎಂದು ಹೆದರಿದಳು.

"ನಿನ್ನ ಮೊಳಕೈಯಲ್ಲೇನು ಗಾಯ ಶಾರದ ? ಬಿದ್ದಿಯಾ ?"

ಬೆಂಕಿಯುಗುರಿನಂತೆ ಮುಟ್ಟಿದ ಪ್ರಶ್ನೆಗೆ ಕೈಹಂದಿ ಕರೆಯುತ್ತಿದ್ದ ಹಾಲಿನ ಧಾರೆಯೊಂದು ನೆಲದ ಪಾಲಾಯಿತು. ಜಾರಿದ್ದ ಸೆರಗನ್ನು ಮತ್ತೆ ಹೊದ್ದುಕೊಂಡಳು. ರಂಗನ ಒಂದು ಮಾತಿಗೆ ಮನಸ್ಸಿನ ಅಸಹನೀಯ ಬಿಗು ಹೇಗೆ ಮಾಯವಾಯಿತು! ಇಲ್ಲ ಇವನಿಲ್ಲದೆ ನಾನು ಬದುಕಲಾರೆ. ಮಾವಯ್ಯ, ಏನು ಮಾಡಲಿ ಹೇಳಿ. ದೇವರೇ ಹೇಳು. ಲಾಟೀನಿನ ಮೊಗ್ಗಿನಂತಹ ಬೆಳಕನ್ನು ಶಾರದೆಯ ಮುಖಕ್ಕೆತ್ತಿ "ನಿನ್ನ ಕತ್ತಿಗೆ ಒಪ್ಪುತ್ತದೆಂದು ಕರಿಮಣಿ ಸರ ತಂದಿದ್ದೇನೆ ಶಾರದ" ಎಂದ. ಒಂದೊಂದು ಸಾರಿ ಎಷ್ಟು ಮೃದುವಾಗಿ ಸೌಮ್ಯವಾಗಿ ಮಾತಾಡುತ್ತಾನಲ್ಲವೆ ? ಕೆಚ್ಚಲಿನ ಭಾರ ಹಗುರಾಗಲು ತೃಪ್ತಿಯ ಉಸಿರೆಳೆದ ಗೌರಿಯ ಮೈ ಸವರಿ ಹಾಲು ತುಂಬಿದ ಪಾತ್ರೆಯನ್ನ ಶಾರದೆ ಸೆರಗಿನಿಂದ ಮುಚ್ಚಿ ನಿಂತಳು.

"ಕೌಲಿ ಗಬ್ಬದ ಹಸು, ಕೊಟ್ಟಿಗೆಗೆ ಬಂದೇ ಇಲ್ಲ" ಎಂದು 'ಕಟ್ಟುಬಾಯ್ ಕಟ್ಟುಬಾಯ್' ಎನ್ನುತ್ತ ಕೊಟ್ಟಿಗೆಯ ಹೊರಗೆ ಹೋಗಿ ಕೂಗಿದಳು. "ಹಳ್ಳಿಯಲ್ಲೀಗ ಹುಲಿಯ ಕಾಟ ಏನು ಅನಿಷ್ಟವೊ" ಎಂದದ್ದಕ್ಕೆ ರಂಗ "ಊಟವಾದ ಮೇಲೆ ನೋಡಿಕೊಂಡು ಬರೋಣ. ನಾನೂ ಜೊತೆಗೆ ಬರುತ್ತೇನೆ" ಎಂದ. ಶಾರದೆ ಹೂ ಎಂದಳು.

*  *  *  *  *

ಪಡಸಾಲೆಯಲ್ಲಿ ಲಚ್ಚಿ ಕೂತಿರುವುದು ನೋಡಿ ರಂಗ 'ಏನೆ ಲಚ್ಚಿ' ಎಂದ. 'ಯಾವಾಗ ಬಂದಿರಿ ರಂಗಯ್ಯ?' ಎಂದು ಅವಳು ತುಂಬ ಹತ್ತಿರ ಬಂದು ನಿಂತಳು. 'ನಿಮ್ಮನ್ನೇ ನೋಡಲು ಬಂದೆ. ಎಷ್ಟು ವರ್ಷವಾಗಿ ಬಿಟ್ಟಿತಲ್ಲಯ್ಯ' ಎಂದಳು. 'ನಿನ್ನ ಅಮ್ಮ ಸತ್ತಳಂತೆ – ಪಾಪ. ನೀನು ಚೆನ್ನಾಗಿದೀಯ. ಮದುವೆಯಾಯಿತಂತೆ ನಿನಗೆ – ನಿನ್ನ ಗಂಡ ಹೇಗಿದಾನೆ ? ಈಗೇನು ಮಕ್ಕಳ?' ಎಂದು ವಿಚಾರಿಸಿದ. 'ನನ್ನ ಗುಡಿಸಿಲಿಗೂ ಬಂದು ಹೋಗಬಾರದ ? ಬೆಳಿಗ್ಗೆ ಅವರು ತೋಟದ ಕೆಲಸಕ್ಕೆ ಹೋಗುತ್ತಾರೆ, ಒಬ್ಬಳೇ ಇರುತ್ತೇನೆ' ಎಂದು ನಾಚಿದಳು. ಕತ್ತು ಓರೆಮಾಡಿ ಮಾಟವಾದ ಬಾಯಿಯನ್ನ ಸ್ವಲ್ಪ ತೆರೆದು ನಿಂತಳು. ರಂಗ ಶಂಕರಯ್ಯನಿಗೆ ಕೇಳದಂತೆ ಪಿಸುಮಾತಿನಲ್ಲಿ ಹೇಳಿದ. "ಬೇಡ ಲಚ್ಚಿ. ಇನ್ನು ನನಗೆ ಬೇಡ ಲಚ್ಚಿ. ಸಣ್ಣಮ್ಮ ಮದುವೆಯಾಗಲು ಒಪ್ಪುತ್ತಾಳೊ ಕೇಳಲು ಬಂದೆ. ನೀನು ತುಂಬ ಒಳ್ಳೆಯವಳು ಲಚ್ಚಿ". ಲಚ್ಚಿ ಓರೆಯಾಗಿ ನೋಡುತ್ತ ನಕ್ಕಳು. "ನಾನೇನು ಮಹಾ, ಬಿಡಿಯಯ್ಯ – ನೀವು ಒಳ್ಳೇ ಹೇಳ್ತೀರಿ, ನಿಮ್ಮ ಮದುವೆ ಕಣ್ತುಂಬ ನೋಡೋದೆ ನನ್ನ ಆಸೆ ಅಲ್ಲವ ? ಹೋಗಲಿ ಈ ತೋಟವೊಂದನ್ನ



ನನ್ನ ಅಮ್ಮನ ನೆನಪಿಗಾದರೂ ದೊಡ್ಡಯ್ಯ ನಮ್ಮ ಹೆಸರಿಗೆ ಮಾಡಿಸಿ ಕೊಡಲು ಹೇಳಿ. ನಿಮ್ಮ ಹೊಟ್ಟೆ ತಣ್ಣಗಿರಲಿ" 'ನೋಡೋಣ' ಎಂದ ರಂಗ.

ಒಳ್ಳೆಯ ಹುಡುಗಿ ಲಚ್ಚಿ. ತುಂಬ ಒಳ್ಳೆ ಹುಡುಗಿ ಲಚ್ಚಿ. ಎಣ್ಣೆಗೆಂಪು ಬಣ್ಣದ, ಮಾಟವಾದ ಮೂಗಿನ, ತೋರವಾದ ನಿತಂಬದ, ಮೈಯೆಲ್ಲ ಮೃದು ಮೃದು ಹೆಣ್ಣು ಲಚ್ಚಿ. ತೋಟದಲ್ಲಿ ಬಾಳೆಗೊನೆ ಹಿಡಿದು ನಡೆದು ಬರುವಾಗ ಆಹಾಹಾ ಎನ್ನಿಸುತ್ತಾಳೆ. ಚಿಮ್ಮುತ್ತಾಳೆ, ಚಿಗಿಯುತ್ತಾಳೆ. ಬಾಯಿ ಬಿಟ್ಟು ನಗುತ್ತಾಳೆ. ರಸರಸವಾದ ನಡೆ ನುಡಿ. ತಡವಿದರೆ ಕೈತುಂಬ ವೈಯ್ಯಾರ. ಖುಷಿ ಮೋಜು ತಪ್ಪಲ್ಲವೆಂದು ಜೀವಕ್ಕೆ ಹಾಯೆನ್ನಿಸುತ್ತಾಳೆ. ಹೆಣ್ಣಿನ ಸಂಗ ಮಾಡುವಾಗ ಏನೂ ಮಾಡುವದೂ ಹೇಸಿಗೆಯಲ್ಲ ಎಂದು ಮನಸ್ಸಿಗೆ ಎನ್ನಿಸುವ ಚೆಲುವು ಇವಳದು. ಎತ್ತೆತ್ತಿ ಕೊಡುತ್ತಾಳೆ, ನಿನ್ನದು ಎನ್ನಿಸುತ್ತಾಳೆ. ತಂಪೆನ್ನಿಸುತ್ತಾಳೆ. ಮುಗಿದ ಮೇಲೆ ಮೈಲಿಗೆಯಾಯಿತೆಂದು ವಾಕರಿಕೆ ಬರುವುದಿಲ್ಲ. ಪೂರ್ತ ಹೆಣ್ಣು ಇವಳು. ಅಪ್ಪಟ ಹೆಣ್ಣು ಇವಳು. ನೂರಕ್ಕೆ ನೂರು. ಶಾರದೆಯ ಹಾಗಲ್ಲ. ಶಾರದೆ ಬಟ್ಟೆ ಬಿಚ್ಚಿದರೂ ಬೆತ್ತಲೆಯಾಗುವುದಿಲ್ಲ. ಬಲಿಗೆ ಹೋಗುವ ಪ್ರಾಣಿಯಂತೆ ಕಾಣುತ್ತಾಳೆ. ಲಚ್ಚಿ ಬಟ್ಟೆ ತೊಟ್ಟರೂ ಬೆತ್ತಲೆ. ಒಬ್ಬಳನ್ನು ಹಗಲಿಗೆಂದು, ಆತ್ಮದ ಸಹವಾಸಕ್ಕೆಂದು ದೇವರು ಸೃಷ್ಟಿಸಿದ ; ಇನ್ನೊಬ್ಬಳನ್ನು ಕತ್ತಲಿನ ಸುಖಕ್ಕೆಂದು ಸೃಷ್ಟಿಸಿದ. ಅದಿದ್ದರೆ ಇದಿಲ್ಲ ; ಇದಿದ್ದರೆ ಅದಿಲ್ಲ. ಬಟ್ಟೆ ಕಳೆದ ಮೇಲೆ ಆ ಹೆಣ್ಣು, ಈ ಹೆಣ್ಣು, ಎಲ್ಲ ಹೆಣ್ಣು ಒಂದೆ ಎಂದುಕೊಂಡಿದ್ದೆ. ನಾನೂ ಸಂಪೂರ್ಣ ಎಂದೂ ಬೆತ್ತಲೆಯಾದ್ದಿಲ್ಲ. ಆಗಬೇಕು, ಒಂದು ದಿನ ಆಗಿಬಿಡಬೇಕು. ಎಲ್ಲ ತೆಗೆದು ಒಗೆದು, ತೆಗೆದೆ, ಒಗೆದೆ..... ಬೆತ್ತಲೆಯಾಗಲಿಲ್ಲ. ಶಾರೆದೆಗೆ "ಲಚ್ಚಿ ಕೊಡುವ ಸುಖ ನೀನು ಕೊಡು" ಎಂದು ಪೀಡಿಸುವುದು ಮೂರ್ಖತನವಿರಬಹುದು. ನಾಲ್ಕು ಜನರನ್ನು ಸುಖಪಡಿಸಬೇಕೆನ್ನುವ ಆಸೆಯಿರುವ ಹುಡುಗಿ ಲಚ್ಚಿ. ಸ್ನಾನ ಮಾಡುವಾಗ ಒಂದು ದಿನ ಕಂಡುಬಿಡ್ತ ಮಾರಾಯರೆ ಎಂದು ನಾಚಿದಳು. ನಾಳೆ ಬಂದು ಎಣ್ಣೆ ನೀರು ಹಾಕಲಾ, ಕಣ್ಣು ಉರಿಯುತ್ತದೆಂದಿರಿ ಎರೆದುಕೊಳ್ಳಿಯಯ್ಯ ಎಂದಳು. ಕಾಲೊತ್ತಿದಳು. ನೀವು ಜಗಿದ ತಂಬುಲ ಬಾಯಿಯಲ್ಲಿಡಿ ಎಂದಳು. ಕಾಲೊತ್ತಿದಳು. ಬಾಯಿಯನ್ನು ಸ್ವಲ್ಪ ತೆರೆದು ಕೇಳಿದಳು. ನನ್ನನ್ನ ಪೂರ್ತ ಎಂಜಲು ಮಾಡಿ ಎಂದಳು. ನಿಮ್ಮ ಎಂಜಲು ನಾನು ಎಂದಳು. ದೇವರ ಹೆಣ್ಣು ಇವಳು. ಊರ್ವಶಿಯಂತೆ ನೀತಿ ಅನೀತಿಗೆ ಅತೀತಳು – ನಿರ್ದೋಷಿ. ಇವಳ ಸಂಗ ಮಾಡಿದ ಮೇಲೆ ಕಾದ ನೆಲದ ಮೇಲೆ ಶ್ರಾವಣದ ಮಳೆ ಬಿದ್ದಾಗ ಬರುವ ಮಣ್ಣಿನ ವಾಸನೆಯಂತೆ. ಇದೂ ಒಂದು ರೀತಿಯ ಪ್ರಸನ್ನತೆಯೆ. ಪ್ರಸನ್ನತೆ

ಜೀವನದ ಪರಮ ಗುರಿ. ಬಿಗಿದುಕೊಂಡಿರುವುದು ದುಷ್ಟ. ಆದರೆ ಶಾರದೆಯಂತಹ ಹೆಣ್ಣಿನಿಂದಲೇ ಆ ಪ್ರಸನ್ನತೆ ಸಿಗಬೇಕೆಂದು ಯಾಕೆ ಜೀವ ಒದ್ದಾಡುವುದೊ. ಒಂದೆ ಶಯ್ಯೆಯಲ್ಲೆ ಆತ್ಮಕ್ಕೂ ಆಗಬೇಕು, ದೇಹಕ್ಕೂ ಆಗಬೇಕೆಂದು ಹಂಬಲಿಸುತ್ತಿದ್ದೇನೆ. ಎರಡನ್ನು ಬೆಸೆಯಬೇಕೆಂದು ಭ್ರಮಿಸುತ್ತಿದ್ದೇನೆ. ಋಷಿಗಳೂ ಪ್ರಾಣಿಗಳ ದೇಹ ತೊಟ್ಟು ರಮಿಸುತ್ತಿದ್ದರಂತೆ, ಮನುಷ್ಯ ಶರೀರದಲ್ಲಿ ದೇಹಕ್ಕೆ ಪೂರ್ಣ ಸುಖವಿಲ್ಲ ; ಆತ್ಮಕ್ಕೆ ತೃಪ್ತಿಯಿಲ್ಲ. ಯಾಕೋ ಮುಜುಗರ, ಯಾಕೋ ಬೇಡ.

ರಂಗ ಪಡಸಾಲೆಯಿಂದ ಇಳಿದು ಅಂಗಳಕ್ಕೆ ಹೋದ. ಹಿತವಾದ ಬೆಳ್ದಿಂಗಳು ಕಾಡು ಬೆಟ್ಟಗಳನ್ನು ಮೃದುವಾಗಿ ಕೊರೆದು ಆಕಾರಗೊಳಿಸಿತ್ತು. ಸಿಗರೇಟು ಹಚ್ಚಿದ.

ನನಗೆ ಇಲ್ಲಿ ಇರಲು ಯಾಕೆ ಇಷ್ಟವಿಲ್ಲ ? ಹುಳದಂತೆ ಯಾಕೆ ಒದ್ದಾಡುತ್ತೇನೆ?

ಮತ್ತೆ ಸಿಗ್ತೀನಿಯಯ್ಯ ಎಂದು ಲಚ್ಚಿ ಹೊರಟುಹೋದಳು.

*  *  *  *  *

ಮೈಸೂರಿನಿಂದ ಕೊಪ್ಪಲಿಗೆ ಬರುವಾಗ ಬಸ್ಸಿನಲ್ಲಿ ದಾರಿಯುದ್ದಕ್ಕೂ ರಂಗ ಶಾರದೆಗೆ ಏನು ಹೇಳಬೇಕೆಂದು ಯೋಚಿಸುತ್ತ ಬಂದಿದ್ದ. ಜೀವನ ಅತ್ತಲೂ ಇಲ್ಲ ಇತ್ತಲೂ ಇಲ್ಲ ಎನ್ನುವಲ್ಲಿಗೆ ಬಂದು ನಿಂತಿತ್ತು. ನಾಲ್ಕು ವರ್ಷಗಳ ಕೆಳಗೆ ಕೊಪ್ಪಲು ಬಿಡುವಾಗ ಶಾರದೆಗೆ ಸಿಟ್ಟಿನಲ್ಲಿ ಹೇಳಿದ್ದ, "ನಾನು ಇನ್ನು ನಿನ್ನ ಮುಖ ನೋಡಲ್ಲ". ಆದರೆ ಶಾರದೆಯಿಂದ ಅವನಿಗೆ ಬಿಡುಗಡೆಯಿರಲಿಲ್ಲ. ತನ್ನ ನಿರ್ಧಾರ, ಆಸೆ, ಆಕಾಂಕ್ಷೆಗಳಿಗೆ ಮೀರಿದ ಅಂತಃಪ್ರೇರಣೆಯೊಂದು ಬದುಕನ್ನು ನಡೆಸುತ್ತಿದೆ, ಬದಲಾಗಲಾರದ ನಮ್ಮ ಮೂಲ ಸ್ವಭಾವವೇ ನಮ್ಮ ಮೂಲ ಅದೃಷ್ಟ, ಆಗಬೇಕಾದ್ದು ಆಗಲೇ ಬೇಕು, ಆಗಲಿ ಎಂದು ಕಾದ. ಆಗ ಹೊರಟುಹೋದವನು ಶಾರದೆಯಿಲ್ಲದಿದ್ದರೇನಂತೆ ದೊಡ್ಡದೊಂದು ಆದರ್ಶ ಸಾಧಿಸುತ್ತೇನೆಂದು ಮನಸ್ಸು ಮಾಡಿ ವೀಣೆ ಕಲಿತು ನೋಡಿದ, ಚಿತ್ರ ಬರೆದು ನೋಡಿದ, ಕವಿತೆ ಬರೆದು ನೋಡಿದ. ಯಾವುದರಲ್ಲೂ ತಾನು ಹೂ ಪರವಾಗಿಲ್ಲ ಎನ್ನುವುದಕ್ಕಿಂತ ಹೆಚ್ಚು ಸಾಧಿಸಲಿಲ್ಲ. ನಿಷ್ಠೆಯ ಜೀವನವೇ ಪರಮ ಗುರಿಯೆಂದು ಪ್ರಾಮಾಣಿಕತೆ, ಸತ್ಯಸಂಧತೆಯಲ್ಲಿ ದಿನ ಕಳೆದ. ತಾನೊಬ್ಬ ಪರಮ ಪೂಜ್ಯನೆನ್ನುವ ಬಿಗಿದ ಕತ್ತಿನ ಅಹಂಕಾರ, ವಿನಯಿಯ ಗರ್ವ ಬೆಳೆಯಿತು. ಜುಬ್ಬ, ಕಚ್ಚೆಪಂಚೆ ತೊಟ್ಟು ಅಂತರ್ಮುಖಿಯಾಗಿ ಕಂಡದ್ದು ಒಳಗಿನ ಟೊಳ್ಳು. ಜೀವನಕ್ಕೆ ಹಸಿಯಾಗಿ, ಮೃದುವಾಗಿ, ಅನುಭವಗಳ ಆಘಾತಕ್ಕೆ ಮೆತ್ತಗಿನ ಮೈಯಾಗಿ ಉಳಿಯುವುದರ



ಬದಲು ಗಡಸಾದ, ಪೆಡಸಾದ. ಈ ಎಲ್ಲ ಆದರ್ಶದ ಹಂಬಲ, ಎಲ್ಲರಿಗಿಂತ ತಾನು ಶ್ರೇಷ್ಠನಾಗಬೇಕು ಎನ್ನುವ ಅಹಂಕಾರಜನ್ಯ ಸ್ವಪ್ರತಿಷ್ಠೆಯಲ್ಲವೆ ಎಂದು ಅನುಮಾನವಾಯಿತು. ಶ್ರೀಮಂತರ ಹೊಲಸು ಸಮಾಜ ಪ್ರತಿಷ್ಠೆಯ ಇನ್ನೊಂದು ಮುಖ ಈ ಅಧ್ಯಾತ್ಮದ ಸ್ವಪ್ರತಿಷ್ಠೆ. ಕೋಪ, ಕಾಮರಾಗದ್ವೇಷಯುಕ್ತನಾಗಿರುವುದೇ ಮೇಲೆನ್ನಿಸಿತು. ಎಲ್ಲ ಆದರ್ಶಗಳನ್ನು 'ಥತ್' ಎಂದು ಹಳೆ ಬಟ್ಟೆ ಎಸೆಯುವಂತೆ ಮೂಲೆಗೊಗೆದ. ಈ ಪುಸ್ತಕಗಳ, ಜೀವಹೇಡಿ ಶಾರದೆಯ ಮಾತನ್ನೆಲ್ಲ ತಲೆಗೆ ಹಚ್ಚಿಕೊಂಡದ್ದೆ ತಪ್ಪು, ಪೌರುಷಹೀನನಾಗುತ್ತಿದ್ದೇನೆ, ಬದುಕಬೇಕು ಎಂದು ನಿರ್ಧರಿಸಿದ. 'ಬದುಕಬೇಕು' ಎಂದರೆ ? ಅದೂ ಇನ್ನೊಂದು ಶಬ್ದ, ಹೊಸದೊಂದು ಆದರ್ಶ, ರಂಗ ವಾದಿಸುತ್ತಿದ್ದ :

"ಆದರ್ಶಗಳೆಲ್ಲ ಅಹಂಕಾರಜನ್ಯ – ಸ್ವಪ್ರತಿಷ್ಠೆ. ಬದುಕು ದೊಡ್ಡದು. ಎಲ್ಲವನ್ನೂ ಬರುವುದೆಲ್ಲ ಬರಲಿ ಎಂದು ಅನುಭವಿಸಬೇಕು. ನಮ್ಮ ಮಿತಿಯೇನು ಎಂದು ಮೊದಲು ಅರಿಯುವುದು ಅವಶ್ಯ. ಮಿತಿಯನ್ನು ಅರಿತಾಗಲೇ ಈ ಜೀವದ ಸಾಧ್ಯತೆಯೇನು ಗೊತ್ತಾಗುವುದು, ದೇಹದ ಆಸೆಗಳಿಗಿಂತ ಆತ್ಮ ದೊಡ್ಡದಲ್ಲ. ಈ ದೇಹದಲ್ಲಿಯೇ ಎಲ್ಲವುದರ ಪ್ರಾರಂಭ, ಕೊನೆ. ಭೂವ್ಯೋಮಗಳ ಎಲ್ಲ ಹಂಬಲವೂ ಇಲ್ಲೆ ಸಫಲವಾಗಬೇಕು. ಇಂದ್ರಿಯಗಳ ಅನುಭವಕ್ಕೆ ಒಗ್ಗದುದೆಲ್ಲ ಬರಿ ಮನಸ್ಸಿನ ವ್ಯಭಿಚಾರ. ಜೀವನವೆಂದರೆ – ಪ್ರಕೃತಿ ಹೆಣ್ಣಿನ ತೊಡೆಗಳ ನಡುವೆ ಮಾಡಿದ ಗಾಯ, ಗಂಡಸಿನ ಟೊಂಕದಲ್ಲಿ ಉರಿಯುವ ಪಂಜು. ಒಪ್ಪಿಕೊಳ್ಳಬಾರದು ಯಾಕೆ ? ಅವಮಾನ ಯಾಕೆ ? ಮಾಯೆಯಂತೆ – ನಿರ್ವಾಣದಂತೆ, ಅಯ್ಯ, ಜೀವನದಿಂದ ಮುಕ್ತನಾಗುವುದಕ್ಕಿಂತ ಔದಾರ್ಯದಿಂದ ಈ ಜೀವನದ ಸುಖದುಃಖವನ್ನು ಒಪ್ಪಿಕೊಳ್ಳುವುದೆ ಮೇಲಲ್ಲವೆ ? ಆಡಮ್ ಅಂಜೂರದ ಎಲೆಯ ಮರೆಯಲ್ಲಿ ತನ್ನ ಅವಮಾನವನ್ನು ಮುಚ್ಚಿಕೊಳ್ಳಲು ಯತ್ನಿಸಿದನಂತೆ ; ಸಿದ್ಧಾರ್ಥ ಬೋಧಿವೃಕ್ಷದ ನೆರಳಿನಲ್ಲಿ ಅವಮಾನ ಹೋಯಿತೆಂದು ಭ್ರಮಿಸಿದನಂತೆ. ಎಲ್ಲ ಭ್ರಾಂತು. ತಿಂಗಳಿಗೊಮ್ಮೆ ಪುಷ್ಪವತಿಯಾಗುವ ಹೆಣ್ಣಿನಂತೆ ಶುಕ್ಲಪಕ್ಷ, ಕೃಷ್ಣಪಕ್ಷಗಳ ಈ ಪ್ರಕೃತಿ. ಸೃಷ್ಟಿಯೇ ಪರಮೋದ್ದೇಶ".

ಹೊಟೇಲಿನಲ್ಲಿ ಕೂತು ಮಾಡುತ್ತಿದ್ದ ತತ್ವಜಿಜ್ಞಾಸೆ. ಆಡುತ್ತಿದ್ದ ಮಾತುಗಳೆಲ್ಲ ನಿರನುಭವಿ ಹಾಸ್ಟೆಲ್ ಹುಡುಗರ ಜೊತೆ. ರಂಗನ ಮಾತನ್ನು ಅರ್ಧಕ್ಕೆ ತಡೆದು ಗೋಪಾಲ ಹೇಳಿದ :

"Words, words, words. ಅಲ್ಲವಯ್ಯ, ಎಲ್ಲರೂ ವಿಧಿಯಿಲ್ಲದೆ ಅನಿವಾರ್ಯವಾಗಿ ಮಾಡುವ ಈ ಜೀವಿಸುವ ಕೆಲಸವನ್ನ ನೀನೊಂದು ಹೊಸ

ಆದರ್ಶ ಎನ್ನುವಂತೆ ಹೇಳುತ್ತೀಯಲ್ಲೊ? ಈಗ ಯಾವ ಪುಸ್ತಕ ಓದುತ್ತಿದ್ದಿ ಹೇಳು. ಲಾರೆನ್ಸ್ ಓದಲು ಪ್ರಾರಂಭಿಸಿದಿಯಾ? ಅಥವಾ ಫ್ರಾಯ್ಡೊ? – ಅದರ ಬದಲು ಹೆರಿಗೆ ಆಸ್ಪತ್ರೆಗೆ ಒಂದು ಸಾರಿ ಹೋಗಿ ಬಂದರೆ ನಿನಗೆ ಗೊತ್ತಾಗುತ್ತೆ – ಭಾರತೀಯರೆಲ್ಲರೂ ನಿನ್ನ ಆದರ್ಶವನ್ನು ಪ್ರತಿ ರಾತ್ರಿಯೂ ಬಿಡುವಿಲ್ಲದೆ ಆಚರಿಸುತ್ತಾರೆಂದು. ನೀನಿನ್ನೂ ಮದುವೆಯಾಗಿಲ್ಲ ಅಲ್ಲವೆ? ಔಷಧಿ ಸೀಸೆಗಳನ್ನು ಹಿಡಿದು ಕ್ಯೂ ನಿಂತ ಬಸುರಿ ಹೆಂಗಸರನ್ನ ನೋಡಿದರೆ ನಿನ್ನ ಪಿತ್ಥವಷ್ಟು ಇಳಿದೀತು. ಏನಯ್ಯ..."

ರಸ್ತೆಯಲ್ಲೊಬ್ಬ ಬಣ್ಣಬಣ್ಣದ ಬುಷ್‌ಕೋಟ್ ತೊಟ್ಟ ಹುಡುಗ ಹುಡುಗಿಯೊಬ್ಬಳಿಗೆ ಗಾಬರಿಯಾಗುವಂತೆ ಹತ್ತಿರ ಸೈಕಲ್ ಬಿಟ್ಟು, ಬ್ರೇಕ್ ಹಾಕಿ 'ಸಾರಿ' ಎಂದು ಮುಂದೆ ಹೋದ. ಅವನಷ್ಟು ದೂರ ಹೋದ ಮೇಲೆ ಹುಡುಗಿಗೆ ಏನೋ ಖುಷಿಯಾಗಿ ತನ್ನಷ್ಟಕ್ಕೆ ನಕ್ಕಳು – ಗೋಪಿ ಆಕಡೆ ತೋರಿಸಿ ಹೇಳಿದ–

"ನೋಡಿದೆಯಾ, ನಿನ್ನ ಆದರ್ಶ ಅಲ್ಲಿದೆ. ರೋಡ್ ಬದಿಯ ರೋಮಿಯೋಗಳಿಗೆ ಸ್ವಾಧ್ಯಾಯ ಪ್ರಾಪ್ತವಾದದ್ದು ಪುಸ್ತಕದ ಮುಖಾಂತರವೆ ನಿನಗೆ ಬರಬೇಕೇನೊ?"

ಗೋಪಿ ಸುಖಜೀವಿ, ಸಿನಿಕ್ ಹೌದು, ಆದರೆ ಅವನ ಮಾತಿನಲ್ಲಿ ಸತ್ಯವಿತ್ತು. ತಪ್ಪು ರೀತಿಯ ಅಸಡ್ಡೆಯೂ ಇತ್ತು. ರಂಗ ವಾದ ಮಾಡಲಿಲ್ಲ. ತಾನು ಆಡಿದ ಮಾತಿನಲ್ಲಿ ಅಸಹಜತೆಯಿತ್ತು ನಿಜ. ಪ್ರೀತಿಸಬೇಕು, ಜೀವಿಸಬೇಕು, ಆದರ್ಶವಾಗಿ ಬಾಳಬೇಕು ; ಅವರ ಹಾಗೆ ಆಗಬೇಕು, ಇವನ ಹಾಗೆ ಮಾಡಬೇಕು – ಎಲ್ಲವೂ ಆದರ್ಶಗಳೆ. ತಾನು ಪಕ್ಕ ನಿರನುಭವಿ. ನಿನ್ನದೆಲ್ಲ ಪುಸ್ತಕ – ತೀರ್ಥ ಎಂದು ಗೋಪಿ ನಗೆಯಾಡಿದ್ದು ಉತ್ಪ್ರೇಕ್ಷೆಯಾದರೂ ತನ್ನ ಜೀವನದಲ್ಲೊಂದು ಅಸಹಜತೆಯಿತ್ತು. ಅನಿವಾರ್ಯವಾಗಿ ಬದುಕಿನಲ್ಲಿ ಬರುವ ಪರ್ವಕಾಲಗಳನ್ನು ಕಾಣದ ತನ್ನ ಬಾಳು ಬರೆ ಮನೋಮಯ ಲೋಕದಲ್ಲಿ ಓಡಾಡುತ್ತಿತ್ತು. ಅನುಭವವಿಲ್ಲದೆ ಬರೆ ತಲೆ ಬೆಳೆದ ಹುಡುಗು ತಾನು. ಮಲಮೂತ್ರ ವಿಸರ್ಜನೆಯಂತೆ, ಹಸಿವಿನಂತೆ, ಹಾಸಿಗೆಯಲ್ಲಿ ಒಂಟಿಯಾಗಿ ಮಲಗಿದಾಗ ಜೊತೆಯಲ್ಲಿ ಒಬ್ಬಳಿಲ್ಲದೆ ತಾನು ಅಪೂರ್ಣ ಎಂದು ಹೊರಳಾಡಿಸುವ ಯೌವನದ ಭಾರದಂತೆ ಒತ್ತಾಡ ಪಡಿಸುವ, ಅವಸರಗೊಳಿಸುವ ವ್ಯಾಪಾರಗಳು ಮಾತ್ರ ನಿಜ. ಈ ಸಂಸಾರ ಸಾಕಾಗದ ದೊಡ್ಡವರಿಗೆ ಪ್ರತಿಭೆಯೆಂದರೆ ಮಲಮೂತ್ರ ವಿಸರ್ಜನೆಯಷ್ಟೆ, ಧಾತುಸ್ಖಲನದಷ್ಟೆ ಅನಿವಾರ್ಯವಿರಬಹುದು. ನವಿಲನ್ನು ನೋಡಿ ಕೆಂಬೂತವೇಕೆ ಪುಕ್ಕ ಸುಟ್ಟುಕೊಳ್ಳಬೇಕು? ಗೋಪಿಯೆಂದಂತೆ ನಾನು 'ಡಾನ್



ಕ್ವಿಕ್ಸೋಟ್'. ಆದರೆ ನಾನು ಗೋಪಿಗಿಂತ ಉತ್ತಮ ; ಸಿನಿಕನಲ್ಲ.

ಆದರ್ಶಗಳನ್ನು ಮೂಲೆಗೆಸೆದು ರಂಗ, ಆಧುನಿಕ ನಿರನುಭವಿ ಯುವಕನಂತೆ ಬೀರ್ ಕುಡಿದು ನೋಡಿದ, ಕೊನೆಗೊಂದು ದಿನ ಧೈರ್ಯ ಮಾಡಿ ಸೂಳೆಯ ಮನೆಗೂ ಹೋದ. ತನಗೆ ಸುಖ ಕೊಡಬೇಕೆಂದು ಆಸೆಯಿದ್ದ ಲಚ್ಚಿ ಎಷ್ಟೋ ವಾಸಿ. ಆದರೂ ಮನಸ್ಸು ಕೊನೆಗೆ ಮಂಕಾಗುವುದು, ಪೆಚ್ಚಾಗುವುದು. ಹೆಣ್ಣನ್ನು ಕೂಡಿದಾಗ ಆಗುವ ಅನುಭವ ಇಷ್ಟು ಕ್ಷಣಿಕವೆ ? ಸಾಮಾನ್ಯವೆ ? ಇಷ್ಟು ಅಲ್ಪ ಸುಖ ಕೊಟ್ಟು ದಗಾ ಹಾಕಲು ಈ ಎಲ್ಲ ಸಂಸಾರದ, ಭವ ಬಂಧನದ ರಂಗುರಂಗಿನ ಬಲೆಯನ್ನು ನಿಸರ್ಗ ನೆಯ್ದಿದೆಯೆ ? ಗೋಪಿಯಾಡಿದ ಮಾತು ಯಾವಾಗಲೂ ನೆನಪಿಗೆ ಬರುತ್ತಿತ್ತು. ಔಷಧಿಯ ಬಾಟ್ಲಿ ಹಿಡಿದು ಕ್ಯೂ ನಿಂತ ಬಸುರಿಯರು. ತಪ್ಪುಮಾಡಿದವರಂತೆ ಅವರನ್ನು ಹಿಂಬಾಲಿಸುವ ಜೋಲುಮುಖದ ಗಂಡಂದಿರು. ಶೋಪೆನೋರ್ ಹೇಳುವುದು ನಿಜ. ಬೇಡ–ಬೇಡ. ಶಾರದೆಯಿಂದಲೂ ಕೊನೆಗೆ ಸಿಗುವುದು ಬರಿ ಇಷ್ಟೆ. ಮೋಸ ಹೋದವನಂತೆ ರಂಗ ಜೀವನದ ರುಚಿ ಕಳೆದುಕೊಂಡ. ಶಾರದೆ ಹೇಳೋದೇ ಸರಿಯಿರಬಹುದು. ಇಷ್ಟು ಅಲ್ಪ ಸುಖಕ್ಕಾಗಿ ಸಾಕಿದ ಕುರುಡನನ್ನು ಯಾಕೆ ತೊರೆಯಬೇಕು ? ಎಲ್ಲ ಬಿಟ್ಟು ಅವಳು ನನ್ನ ಜೊತೆ ಬಂದ ಮೇಲೆ, ಬಿಟ್ಟು ಬಂದುದೆಲ್ಲ ಕ್ಷುಲ್ಲಕ ಎನ್ನಿಸುವಂತಹ ಪ್ರೀತಿಯ ಕಟ್ಟು ತನ್ನ ಅವಳ ನಡುವೆ ಬೆಳೆಯುತ್ತದೊ ಇಲ್ಲವೊ. ಎಲ್ಲ ಯಾಂತ್ರಿಕವಾಗಿಬಿಡುತ್ತದೆ. ನಾಲ್ಕೈದು ನಿಮಿಷಗಳ ಅವಸರದಲ್ಲಿ ಮುಗಿದು ಹೋಗಿ, ಮತ್ತೆ ಬಟ್ಟೆ ತೊಡುವಾಗ, ದೀಪ ಹಾಕುವಾಗ ಅವಮಾನವಾಗುವಂತಹ ಕಾಮಕ್ಕಾಗಿ ಶಾರದೆಯನ್ನು ಅವಳ ಮಾವನಿಂದ ಯಾಕೆ ಕಸಿದುಕೊಳ್ಳಬೇಕು ? ನಾನು ನಿಜವಾಗಿ ಬೆತ್ತಲೆಯಾಗಲಾರೆ, ಶಾರದೆಯೂ ಆಗಲಾರಳು. ಲಚ್ಚಿಯಂಥವರಿಗೆ ಅದು ನೈಸರ್ಗಿಕ, ನಮಗೆ ಇದೇ ನೈಸರ್ಗಿಕ.

ಎಲ್ಲವೂದೂ ಸಾಮಾನ್ಯ, ವೃತ್ತದ ಸುತ್ತ ವ್ಯರ್ಥಸಂಚಾರ, ರುಚಿಲ್ಲ, ಗೆಲುವಿಲ್ಲ. ನಾನೊಂದು ಧರೆಯ ಅಂಚಿನ ಮೇಲೆ ಲಕ್ವಾ ಹೊಡೆದವನಂತೆ ಮೈಮೇಲೆ ಸ್ವಾಧೀನವಿಲ್ಲದೆ ಕೂತಂತೆ, ಕೆಳಗೊಂದು ಕೆಂಪು ಹೂಮುಡಿದ ಹುಡುಗಿ ಆಕಡೆಯಿಂದ ಈಕಡೆಗೆ, ಈಕಡೆಯಿಂದ ಆ ಕಡೆಗೆ ಸಂಚರಿಸಿದಂತೆ – ಕನಸು. ನನಗೆ ಆಯ ತಪ್ಪಿ ಬಿದ್ದು ಬಿಡುವ ದಿಗಿಲು. ಇನ್ನೊಂದು ಕನಸು ಕೊಟ್ಟ ಉಂಗುರ ಹುಡುಗಿ ಕಳೆದಂತೆ, ನನಗೆಲ್ಲ ಮರೆತು ಹೋದಂತೆ. ಏನೋ ದಿಗಿಲು ಒಂಟಿಯಾಗಿರುವಾಗ. ರಾತ್ರೆ ಫಕ್ಕನೆ ಎಚ್ಚರ, ಕಳವಳ. ಕಾಲುಗಳಲ್ಲಿ ನಿತ್ರಾಣ. ಅಮ್ಮ ಮಾತಾಡಿಸಿದರೆ ಸುಮ್ಮನೆ ಕಿಡಿ ಕಿಡಿ ಕೋಪ. ಕೂತರೆ ಕೂತೇ ಬಿಡುವ

ಜಡತೆ, ಮಂಕು. ಏನೋ ಭಯ, ಏನೋ ಭಯ.

... ಆದರೂ ನಾನು ಇಲ್ಲಿ ಮತ್ತೆ ಯಾಕೆ ಬಂದೆ ? ಯಾವ ಕರ್ಮದ ಚಕ್ರಕ್ಕೆ ಸಿಕ್ಕಿಬಿದ್ದಿದ್ದೇನೆ.... ಅರ್ಥವಾಗುವುದೇ ಇಲ್ಲ... ಮೂಗಿಗೊತ್ತಿಬರುವ ಮಲೆನಾಡಿನ ಪ್ರಾಣಿ ಸಸ್ಯಗಳ ವಾಸನೆ ; ಬಾಣಂತಿಯಂತೆ ಹಸಿಯಾದ ಮಣ್ಣಿನ, ಕಳಲೆಯ, ದನಕರುಗಳ ಮೈಯಿನ, ಸೂರಿನ ಗೂಡುಗಳಲ್ಲಿ ಗುಟುರು ಹಾಕುವ ಪಾರಿವಾಳಗಳ, ಕಣಜದಲ್ಲಿ ತುಂಬಿದ ಭತ್ತದ, ವಾಸನೆ.... ಐನೀರಿನ ಒದ್ದೆ ಕೂದಲು ಬೆನ್ನಿನ ಮೇಲೆ, ಬಿಸಿಲು, ಕಣ್ಣಿನ ಮೇಲೆ ಬಂದ ಕೂದಲನ್ನು ತಳ್ಳುತ್ತ ಕೈಯಲ್ಲಿ ಪ್ರಸಾದ ಹಿಡಿದು ಎದ್ದಳು. ಆಗ ಸೂರ್ಯ ಅವಳ ಮೈಯ ಮೇಲೆಲ್ಲ ಬಂಗಾರದ ಒಡವೆಗಳನ್ನು ಚಿಮ್ಮಿದ... ಮುತ್ತುಗದ ಮರದ ತುಂಬ ಕೆಂಪು ಕೆಂಪು ಹೂವೆ, ಎಷ್ಟು ಹೆತ್ತರೂ ನಿತ್ಯ ಕನ್ನಿಕೆ. ಕಲಗಚ್ಚು ಕುಡಿಯುತ್ತಿದ್ದ ದನ ಆಗ ಕತ್ತೆತ್ತಿ ಏನನ್ನೂ ನೋಡದ ದೃಷ್ಟಿಯಲ್ಲಿ ನನ್ನನ್ನು ನೋಡಿತು... ಪುಟ್ಟ ಪುಟ್ಟ ಹೆಜ್ಜೆ, ಪುಟಾಣಿ ಗಾಳಿಪಟ... ಈ ಚೆಲುವಿಗೆಲ್ಲ ನಾನು ಕುರುಡಾಗುತ್ತಿದ್ದೇನೆ. ಮರಗಟ್ಟಿಹೋಗುತ್ತಿದ್ದೇನೆ. ಮುವ್ವತ್ತರ ಹತ್ತಿರ ಹತ್ತಿರಕ್ಕೆ ಬಂದು ಮುದುಕನಾಗುತ್ತಿದ್ದೇನೆ.

ಭ್ರಮಿತನಾಗಿ ಬೆಳದಿಂಗಳಿನಲ್ಲಿ ನಿಂತು 'ದೇವರೇ' ಎಂದ. ಯಾರೂ ಸ್ವತಂತ್ರರಲ್ಲ. ಮೃಗ ಪಕ್ಷಿಗಳಿಗಿಲ್ಲದ ಸ್ವಾತಂತ್ರ್ಯ ಮನುಷ್ಯನಿಗೆಲ್ಲಿ ? ಬರಿ ಭ್ರಮೆ...

ಜಪದ ಸರ ಎಣಿಸುತ್ತ ಪಡಸಾಲೆಯಲ್ಲಿ ಕೂತ' ಶಂಕರಯ್ಯನ ಕಡೆ ನೋಡಿದ.

"ಏ ಶಾರದ ರಂಗ ಇಲ್ಲಿ ಊಟಮಾಡುವುದಾದರೆ ತಿರುಪತಿಗೆ ತಪ್ಪು ಕಾಣಿಕೆ ಸಲ್ಲಿಸಲು ಹೇಳೆ. ಕೊಟ್ಟಿಗೆಗೆ ಕೌಲಿ ಬಂದಿಲ್ಲವೆಂದು ಹೇಳಿದಿ, ತುಂಬು ಬಸುರಿ ಅಲ್ಲ ತುಂಬು ಗಬ್ಬದ ದನ, ಲಚ್ಚಿಯ ಗಂಡನಿಗೆ ನೋಡಿ ಬರುವಂತೆ ಹೇಳೆ. ನಿನ್ನೆ ರಾತ್ರಿ ನಿನ್ನ ಅಕ್ಕ ಬಸುರಿ ಹೆಂಗಸು ಅಯ್ಯಯ್ಯೊ ಎಂದು ವಿಕಾರವಾಗಿ ಕಿರುಚಿಕೊಂಡಂತೆ ಭ್ರಮೆಯಾಗಿ ಎದ್ದೆ. ಮನೆಯ ಎದುರೇ ಹುಲಿಯೊಂದು ನಿಂತು ಅಬ್ಬರಿಸಿ ಹೋಯಿತು. ಮಂತ್ರಿಸಿದ ಹಲಗೆ ಕೊಡುತ್ತೇನೆ, ಕೊಟ್ಟಿಗೆಯಲ್ಲಿಟ್ಟು ಬಾ. ಒಟ್ಟು ನನ್ನ ಪ್ರಾರಬ್ಧ. ಪರಚಿಕೊಳ್ಳೋದೆ ನನ್ನ ಪಾಡಾಗಿದೆ. ಏ ರಂಗಾ... ರಂಗಾ..."

ರಂಗ ಪಡಸಾಲೆಗೆ ಬಂದು ಶಂಕರಯ್ಯನ ಎದುರು ನಿಂತು 'ಏನು' ಎಂದ.

"ಏನು ನಿಶ್ಚಯ ಮಾಡಿದಿರಿ ಹೇಳು".



ನಿಂತಿದ್ದ ರಂಗ ಕೂತುಕೊಂಡ. ಏನು ಹೇಳಬೇಕು ಕ್ಷಣ ತಿಳಿಯದಾಯಿತು.

"ನಿಶ್ಚಯ ಮಾಡೋದು ಹಿರಿಯರಾದ ನಿಮ್ಮ ಕೈಯಲ್ಲಿದೆ".

"ಎಲ್ಲ ಹಿಂದೆ ಆಡಿದ ಮಾತೆ. ಈ ಸಂಬಂಧ ನನ್ನ – ನಿನ್ನ ಹಿರಿಯರ ಮನಸ್ಸಿಗೆ ಬರುವಂಥದಲ್ಲ ನೋಡು."

"ಆದರೆ ಅವರು ಯಾರೂ ಬದುಕಿಲ್ಲವಲ್ಲ".

"ಓದಿದ ನಿನಗೆ ಹಾಗೆನಿಸಬಹುದು ರಂಗ. ಮದುವೆಯಾಗುವುದು ಬರಿ ಗಂಡು ಹೆಣ್ಣಿನ ಸುಖಕ್ಕಲ್ಲ ನೋಡು. ಪಿತೃಋಣವೂ ಅದರಿಂದ ಸಲ್ಲಬೇಕು. ನಿಮ್ಮಿಂದಾಗುವ ಸಂತಾನ ಪಿತೃಗಳಿಗೆ ಪಿಂಡ ಹಾಕಲು ಅರ್ಹವಾದುದಾಗಿರಬೇಕು. ನಮ್ಮ ನಮ್ಮ ಸುಖಕ್ಕೆಂದು ಮಾಡಿಕೊಳ್ಳುವ ಸಂಬಂಧ ನಮ್ಮ ಕರ್ಮಕ್ಕಾಯಿತು. ಅಪ್ಪಯ್ಯ ಒಂದು ಮಾತು ಹೇಳುತ್ತಿದ್ದರು. ಶಂಕರ ಈ ಮನುಷ್ಯ ಜೀವವೊಂದು ಅಸ್ವತಂತ್ರವಪ್ಪ. ಸ್ವತಂತ್ರನಾಗಲು ಆತ್ಮಶ್ರಾದ್ಧ ಮಾಡಿಕೊಂಡು ಅವಧೂತನಾಗಬೇಕು. ಅದು ನನ್ನ ನಿನ್ನಂಥವರಿಗಲ್ಲ ನೋಡು".

"ನಿಮ್ಮ ಮಾತು ನನಗೆ ಅರ್ಥವಾಗುವುದಿಲ್ಲ ಶಂಕರಯ್ಯ. ನನ್ನ ಮಾತು ಕೇಳಿ. ನೀವು ಕಣ್ಣಿಲ್ಲದ ಕುರುಡರು, ವಯಸ್ಸಾದವರು, ಶಾರದೆಯನ್ನ ಸಾಕಿ ಸಲುಹಿದ್ದೀರಿ. ಅವಳು ನಿಮ್ಮನ್ನ ಬಿಟ್ಟಿರಲಾರೆ ಎನ್ನುತ್ತಾಳೆ. ಆಗಲಿ, ನೀವೂ ನಮ್ಮ ಜೊತೆ ಬಂದು ಇರಿ".

ರಂಗ ಬೆವರುತ್ತಿದ್ದ ಹಣೆಯನ್ನು ಒರೆಸಿಕೊಂಡು 'ದೇವರೇ ನನಗೆ ಮಾತಾಡುವ ಧೈರ್ಯಕೊಡು' ಎಂದು ಪ್ರಾರ್ಥಿಸಿದ. ಹೀಗೆ ತನ್ನನ್ನು ಒದ್ದಾಡಿಸುವ ಶಂಕರಯ್ಯನ ಮುಖ ಮುದಿಯಾಗಿ ವಿಕಾರವಾಗಿ ಕಂಡಿತು.

"ಅದು ಹೇಗೆ ಸಾಧ್ಯವೋ ರಂಗ. ಇದು ನನ್ನನ್ನ ಬೆಳೆಸಿದ, ನನ್ನ ಮೈಗೆ ಅಂಟಿಕೊಂಡ ಮನೆ. ಎದುರಿರುವ ಅಡಿಕೆತೋಟ ಈಶ್ವರ ದೇವಸ್ಥಾನದ ಪೂಜಾ ವಿನಿಯೋಗಕ್ಕೆಂದು ಹಿರಿಯರು ಬಿಟ್ಟದ್ದು. ಹೀಗಿರುವಾಗ ಹಿರಿಯರ ಇಚ್ಛೆ ನಡೆಸಿಕೊಂಡು ಹೋಗುವುದರ ಬದಲು ನನ್ನ ಪ್ರಾಣವೇ ಆದ ಈ ಜಾಗ ತೊರೆದು, ಅನ್ನ ನೀರು ಮುಟ್ಟಬಾರದೆಂದು ಹಿರಿಯರು ವಿಧಿಸಿದ ನಿನ್ನ ಮನೆಯಲ್ಲಿ ಬಂದು ನನ್ನ ಕಾಲ ಎಣಿಸಲ ? ಇದು ದೇವರಿಗೆ ಒಪ್ಪತಕ್ಕ ವಿಷಯವೆ ನೀನೇ ಹೇಳು".

ರಂಗನಿಗೆ ಮಾತು ಅಸಹನೆಯಾಯಿತು, ಹೇಸಿಗೆಯಾಯಿತು. ಇದು ಬೋಗಾರು ದುಃಖ, ತನ್ನ ಪಾಡೇ ತನಗಾದವನ ಅಸಹ್ಯ ಕರಕರೆ. ಸಾಯುವಾಗ ಹುಲಿ ಹಿಂಡು ಬಿಟ್ಟು ಒಂಟಿಯಾಗಿ ಪ್ರಾಣ ಬಿಡುವುದಂತೆ. ಆದರೆ ಶಂಕರಯ್ಯನಂತಹ

ಮನುಷ್ಯ ?

"ದೇವರು ಒಪ್ಪೋದು ಏನು ಯಾರಿಗೆ ಗೊತ್ತು ಶಂಕರಯ್ಯ ? ಶಾರದೆಯ ಅಕ್ಕ ಸಕೇಶಿಯಾಗಿ ಬಸುರಾದಳು. ಪ್ರಾಣ ಕಳೆದುಕೊಂಡಳು. ಇನ್ನು ಶಾರದೇ ಮದುವೆಯಾಗದೆ ನಿಮ್ಮ ಶುಶ್ರೂಷೆಯಲ್ಲೆ ಸಾಯಬೇಕು. ಅದೂ ದೇವರ ಇಚ್ಛೆಯ?"

ರಂಗ ಕಟುಕನಂತೆ ಮಾತನಾಡಿದನೆನ್ನಿಸಿ ಶಂಕರಯ್ಯನಿಗೆ ವ್ಯಥೆಯಾಯಿತು. ಅವನು ಹೇಳಿದ್ದು ತಪ್ಪೆ? ಅಮ್ಮ ಸಾಯುವಾಗ ಹೇಳಿದ್ದಳು : "ನೀನು ಕುರುಡನಾಗಿ ಹುಟ್ಟಿ ಮದುವೆಯಾಗಲ್ಲೆಂದು ಹಠ ಹಿಡಿದಿ. ಪಾರ್ವತಿ ಸಕೇಶಿಯಾಗಿ ಮನೆ ಸೇರಿದಳು. ಅವರ ಅಪ್ಪ ಊರು ಬಿಟ್ಟು ಓಡಿ ಹೋದ. ನಿನ್ನ ಹತ್ತಿರ ಸೇರಿದ್ದಾಳೆ ಶಾರದೆ. ಅದು ಒಂದೇ ಕುಡಿ ಉಳಿದಿರೋದು. ಅವಳಿಗಾದರೂ ಸರಿಯಾದ ಕಡೆ ಮದುವೆ ಮಾಡು. ವಂಶ ನಿಸ್ಸಂತಾನವಾಗದಂತೆ ನೋಡಿಕೊ." ಅಮ್ಮನ ಕಠಿಣ ಆಜ್ಞೆ ನಡೆಸಲಿಲ್ಲ. ಶಾರದೆಗೆ ಇಪ್ಪತ್ತೈದು ತುಂಬಿತು. ಅಮ್ಮನಿಗೆ ಹತ್ತನೆ ವಯಸ್ಸಿಗೇ ಮದುವೆಯಾಗಿತ್ತಂತೆ. ತಪ್ಪಾಗಿದೆ. ಎಲ್ಲಿಯೋ ತಪ್ಪಾಗಿದೆ. ನವರಾತ್ರಿ ದಿನ ಗೊಂಬೆಯಿಡೇ ಶಾರದ ಎಂದರೆ ಯಾರು ನೋಡಬೇಕೂಂತ ಇಡಲಿ ಎಂದು ವೈರಾಗ್ಯದ ಮಾತಾಡಿದಳು. ಎರೆದುಕೊಂಡಿಯೇನೆ, ಲಚ್ಚಿ ಬಂದು ನೀರು ಹಾಕುತ್ತಾಳೆ ಕಣೆ – ಎಂದರೆ ಅಯ್ಯೋ ಬೇಡ ಎಂದುಬಿಡುವಳು. ಎಲ್ಲೋ ಏನೋ ತಪ್ಪಾಗಿದೆ. ನನ್ನಿಂದ ತಪ್ಪಾಗಿದೆ. ಈಗ ರಂಗ ದೊಡ್ಡ ಪ್ರಶ್ನೆಯಂತೆ ಎದುರು ನಿಂತಿದ್ದಾನೆ. ಹುಟ್ಟು ಗುರುಡನಾಗಿ ನಾನು ಹುಟ್ಟದಿದ್ದರೆ... ಅದು ನನ್ನ ತಪ್ಪೆ ದೇವರೆ ? ತ್ರಾಣವಿದ್ದವರು ಮಾತ್ರ ಬದುಕಲಿ ಎನ್ನುವ ಪ್ರಕೃತಿಯ ನಿಷ್ಠುರ ವಿಧಿಯಲ್ಲಿ ನಾನು ಬದುಕಿ ಉಳಿದದ್ದೆ ತಪ್ಪು. ರಂಗ ದೊಡ್ಡ ಪ್ರಶ್ನೆ. ಅವನು ನನ್ನ ವಿಧಿ. ಬೇರೆಯವರಿಗೆ ಹೊರೆಯಾಗಿ ಬದುಕಲು ನಿನಗೆ ಏನು ಹಕ್ಕು ಎಂದು ಯೌವನದ ಕುರುಡಿನಲ್ಲಿ ಕೇಳುತ್ತಿದ್ದಾನೆ. ನಾನೂ ಕುರುಡ, ಅವನೂ ಕುರುಡ, ಪ್ರಕೃತಿಯೂ ಕುರುಡು. ಪ್ರಕೃತಿಗೆ ನಾನು, ರಂಗ, ಮೃಗ, ಪಕ್ಷಿ, ಕಲ್ಲು, ಮರಳು ಎಲ್ಲ ಒಂದೆ. ಪ್ರಕೃತಿಗೆ ಕೊಡದ ಧರ್ಮಬುದ್ಧಿ, ವಿವೇಕ, ನಮಗೆ ಕೊಟ್ಟ ದೇವರು. ತಪ್ಪು ಸರಿ ಕಾಣದ ಜಗತ್ತಿನಲ್ಲಿ, ತಪ್ಪು ಸರಿ ಯೋಚಿಸುತ್ತ 'ಆಹಾ ಸುಖವೇ' ಎಂದು ಕತ್ತಿಯಲುಗಿನ ಮೇಲೆ ನಡೆಯೋ ಎಂದ ಮನುಷ್ಯಪ್ರಾಣಿಗೆ. ದೇಹವೊಂದು ಗಟ್ಟಿಯಾಗಿದ್ದಾಗ ದೇವರು ಯಾಕೆ ನನಗೆ ಈ ಪ್ರಶ್ನೆ ಹಾಕಲಿಲ್ಲ ? ಒಟ್ಟು ಅದೃಷ್ಟ. ನಮಗೊಂದು ಧರ್ಮಸೂಕ್ಷ್ಮವಿಲ್ಲದಿದ್ದರೆ ಪ್ರಕೃತಿಯೆಲ್ಲ ಬರೀ ನಿಷ್ಕರುಣವಾಗಿಬಿಡುತ್ತಿತ್ತು. ಅಪ್ಪಯ್ಯ ಇದ್ದಿದ್ದರೆ ಏನು ಮಾಡಲಿ ಅಪ್ಪಯ್ಯ ಎಂದು ಕೇಳುತ್ತಿದ್ದೆ. ಪ್ರೀತಿಯ ವಿಷಯ ಒಂದು ಸಾರಿ ಅವರು ಹೇಳಿದರು. ತಾನೇ ಹೆತ್ತ



ಮರಿಗಳ ಮೇಲಿನ ಮಮತೆಯಲ್ಲಿ ನಾಯಿ, ನೆಕ್ಕಿ, ನೆಕ್ಕಿ, ಮರಿಗಳ ಮೃದುಚರ್ಮ ಸುಲಿಯುವಷ್ಟು ಪ್ರೀತಿಯಲ್ಲಿ ನೆಕ್ಕಿ, ಒರಟು ನಾಲಗೆಗೆ ತಾನೆ ಹೆತ್ತವುಗಳ ರಕ್ತದ ರುಚಿ ತಾಗಲು ಹೆತ್ತವನ್ನೆ ತಿಂದುಬಿಡುತ್ತದೆ. ಇವತ್ತು ಐದು ಮರಿಯಿದ್ದರೆ ನಾಳೆ ನಾಲ್ಕಾಗಿಬಿಡುತ್ತೆ. ತಾಯಿ. ಕಣ್ಣು ಕಾಣದ ಪುಟ್ಟ ಪುಟ್ಟ ಮರಿಗಳು ಪಾಪ. ತಾಯಿಗೂ ಕಣ್ಣಿಲ್ಲ ಪಾಪ. ಹೊಟ್ಟೆಯಿಂದ ಹುಟ್ಟಿದ್ದು ಹೊಟ್ಟೆಗೇ ಸೇರಿ ಜೀರ್ಣವಾಗುತ್ತದೆ. 'ತಾನೇ ಹೆತ್ತವು' ಎಂಬ ಮಾತನ್ನು ಅಪ್ಪಯ್ಯ ಒತ್ತಿ ಹೇಳುತ್ತಿದ್ದರು. ಪ್ರೀತಿಯೆಂದರೆ ಅದು ಶಂಕರ ಎನ್ನುತ್ತಿದ್ದರು. ಪ್ರೀತಿಯೂ ತಪ್ಪು, ನಾನು ಶಾರದೆಯನ್ನು ಪ್ರೀತಿಸುವುದೂ ತಪ್ಪು. ಆದರೆ ಪ್ರೀತಿಯೂ ಇಲ್ಲದೆ ನಾನು ಹೇಗೆ ಬದುಕಲಿ ? ಪ್ರಕೃತಿಯಲ್ಲಿ ನಮಗೆ ಇನ್ನೇನು ಆಸರೆ ? 'ಕಾಲಃ ಕ್ರೀಡತಿ ಗಚ್ಛತ್ಯಾಯುಃ ತದಪಿ ನ ಮುಂಚತ್ಯಾಶಾವಾಯುಃ' ಅಪ್ಪಯ್ಯ ಹೇಳಿ ನಗುತ್ತಿದ್ದರು. 'ನಗಬೇಕೊ ಶಂಕರ' ಎನ್ನುತ್ತಿದ್ದರು.

"ನೀನು ಹೇಳೋದು ತಪ್ಪಲ್ಲ ರಂಗ. ಆದರೆ ಶಾರದ ಇಲ್ಲಿಯೇ ನಿಲ್ಲುವ ಮಾಣಿಯೊಂದನ್ನು ಮದುವೆಯಾಗಿ ವಂಶವನ್ನು ನಡಸಿಕೊಂಡು ಹೋಗಬೇಕೆಂದು ನನ್ನ ಆಸೆ. ಅದು ಹೋಗಲಿ. ನೀನಾದರೂ ನಿನ್ನ ತೋಟವನ್ನು..."

ರಂಗ ಶಂಕರಯ್ಯನ ಮಾತನ್ನು ಅರ್ಧಕ್ಕೆ ತಡೆದ.

"ಅದು ನನ್ನಿಂದ ಸರ್ವಥಾ ಆಗದು. ಈ ಹಳ್ಳಿಯೊಂದು ನನಗೆ ಶಾಪದಂತೆ ಕಾಣುತ್ತದೆ. ನಾನು ಬದುಕಬೇಕು. ಇಲ್ಲಿರಲಾರೆ. ಶಾರದೆಯೂ ಇಲ್ಲಿರಕೂಡದು. ಅಂತಹ ಮದುವೆ ನನಗೆ ಬೇಡ. ನಿಮಗೆ ಈ ಹಳ್ಳಿ, ಈ ಚಿರಪರಿಚಿತ ಮನೆ ಹೇಗೆ ನಿಮ್ಮ ಪ್ರಾಣವೊ, ನನಗೆ ಹಾಗೆಯೇ ಈ ಕೊಪ್ಪಲು ನನ್ನ ಸ್ಮಶಾನ..."

"ಹೀಗೆ ನೀನು ಒರಟು ಮಾಡಿದರೆ ನಾನೇನು ಮಾಡಲೊ ರಂಗ. ಶಾರದೆ ನನ್ನ ಅಕ್ಕನ ಮಗಳಾದ್ದರಿಂದ ಪೂರ್ವಿಕರ ಕಟ್ಟು ಅವಳನ್ನು ಬಂಧಿಸದು, ದೇವರಿಗೆ ತಪ್ಪು ಕಾಣಿಕೆ ಕಟ್ಟಿ ನಿನಗವಳನ್ನು ಬೇಕಾದರೆ ಮದುವೆ ಮಾಡೋಣವೆಂದು ನಾನು ಮನಸ್ಸು ಮಾಡಿದರೂ ನೀನು ಮಾತ್ರ ತಾನು ಹತ್ತಿದ ಕುದುರೆಗೆ ಮೂರೇ ಕಾಲು ಎದು ವಾದ ಮಾಡುತ್ತಿ. ನಿನಗೆ ಯೌವನದ ಕುರುಡು. ನಿನ್ನದೇನು ತಪ್ಪು ಪಾಪ. ನನಗಿರುವ ಒಂದೇ ಒಂದು ಜೀವದ ಆಸರೆ ತಪ್ಪಿಸಿ ನನ್ನನ್ನು ಕೊಲ್ಲಬೇಕೆಂದುಕೊಂಡಿಯಲ್ಲ. ಇದು ನಿನ್ನ ಆತ್ಮ ಒಪ್ಪುವ ಕೆಲಸವ ?"

ರಂಗ ನಿರುತ್ತರನಾಗಿ ತಲೆತಗ್ಗಿಸಿದ. ಎದ್ದು ಶಾರದೆಯನ್ನು ನೋಡೋಣವೆಂದು ಅಡಿಗೆಮನೆಗೆ ಹೋದ. ಅವಳು ಎಲೆ ಹಾಕಿ ದಂಗುಬಡಿದವಳಂತೆ ಕಡಗೋಲು ಕಂಬಕ್ಕೊರಗಿ ನಿಂತಿದ್ದಳು. ಕೈಯಲ್ಲಿ

ಶಾಕುಂತಲವನ್ನು ಹಿಡಿದಿದ್ದಳು. ರಂಗನಿಗೆ ಮನಸ್ಸಿನಲ್ಲೊಂದು ಥಟ್ಟನೆ ಹೊಳೆಯಿತು. ಲಚ್ಚಿ ಎಷ್ಟಾದರೂ ಶಂಕರಯ್ಯನಿಟ್ಟುಕೊಂಡಿದ್ದ ಮಾಲೇರರ ಪುಟ್ಟಿಯ ಮಗಳಲ್ಲವೆ ? ಊರಿಗೇ ಗೊತ್ತಿರುವ ವಿಷಯ. ಶಾರದೆ ಸಾಕುಮಗಳು. ಆದರೆ ಲಚ್ಚಿ ಸ್ವಂತ ಮಗಳಲ್ಲವೆ ? ತನ್ನ ಪಿತೃಗಳ ಇಚ್ಛೆ ಮೀರಬಾರದೆಂದು ಭೂತಕ್ಕೆ ಗಂಟು ಬಿದ್ದ ಶಂಕರಯ್ಯ, ತನ್ನ ಸಂತಾನವೇ ಆದ ಲಚ್ಚಿಗೂ ತಾನು ಜವಾಬ್ದಾರನೆಂದು ಯಾಕೆ ಯೋಚಿಸಬಾರದು ? ಕೇಳಿಬಿಡಬೇಕು ಮುದುಕನನ್ನ. ಮನಸ್ಸು ಗಟ್ಟಿಮಾಡಿ ಶಾರದೆಯ ಜೊತೆ ಮಾತನಾಡದೆ ಅಡಿಗೆ ಮನೆಯಿಂದ ಹೊರಟ. ಶಾರದೆ 'ನಿಲ್ಲಿ' ಎಂದಳು. ರಂಗನ ಮುಖ ವಿವರ್ಣವಾದುದನ್ನು ನೋಡಿ,

"ಮಾವಯ್ಯನ ಮನಸ್ಸು ನೋಯಿಸುವಂತಹ ಮಾತು ನೀವು ಆಡಕೂಡದು" ಎಂದು ಬೇಡಿದಳು. ರಂಗ ಗಂಟಲಿಗೆ ಬಂದ ಮಾತನ್ನು ನುಂಗಿದ. ಶಂಕರಯ್ಯನ ಅಂತರಾತ್ಮಕ್ಕೆ ಆ ಪ್ರಶ್ನೆ ಹೊಳೆಯದಿದ್ದರೆ, ತಾನು ಯಾಕೆ ಅದನ್ನ ಎತ್ತಬೇಕು ? ನನ್ನ ಪ್ರಶ್ನೆ ಬಗೆಹರಿಸಿಕೊಳ್ಳಲು ನಾನು ಇಲ್ಲಿಗೆ ಬಂದಿದ್ದೇನೆ.

ಶಾರದೆ ಮಾವನಿಗೆ ಫಲಾಹಾರಕ್ಕೆ ಇಟ್ಟು ಬಂದು ರಂಗನಿಗೆ ಅನ್ನ ಬಡಿಸಿದಳು.

* * * * *

"ಕೌಲಿಯನ್ನ ಹುಡುಕಿಕೊಂಡು ಬರಲು ಲಚ್ಚಿಯ ಗಂಡನಿಗೆ ಹೇಳಿದೆಯೇನೆ ಶಾರದ. ತುಂಬುಗಬ್ಬದ ದನ ಕಣೇ. ಗುಡ್ಡದ ಮೇಲೆ ಎಲ್ಲಿ ಕರು–ಗಿರು ಹಾಕಿಕೊಂಡಿತೊ. ಈ ಕಾಡಿನಲ್ಲಿ ಹುಲಿಯೊಂದು ಬಂದು ಸೇರಿದೆಯೆಂತೆ. ಹಾಳು ಉಪದ್ರ, ಗಾಯಗೊಂಡ ಹುಲಿಯಿರಬಹುದು ಎಂದ ಕೊರಗ. ನಿನ್ನೆ ರಾತ್ರೆ ಮನೆಯ ಬಾಗಿಲಿಗೇ ಬಂದು ಕೂಗಿತು. ಗಣಪತಿಗೆ ಹಣ್ಣು ಕಾಯಿ ಹೇಳಿಕೊಂಡೆ. ಏನೊ ಅನಿಷ್ಟ ತಗುಲಿದೆ ಮನೆಗೆ. ಕೊರಗನಿಗೆ ನೂರು ಅಡಿಕೆ ಸಸಿ ತಂದು ನಡೊ ಎಂದು ಹೇಳಿದ್ದೆ. ಅವನು ಪತ್ತೆಯೇ ಇಲ್ಲ. ಕುರುಡು ಮುದುಕನ ಮಾತು ಯಾರು ಕೇಳುತ್ತಾರೆ ಹೇಳು. ತಿಪ್ಪಾಭಟ್ಟ ಬಂದು ನಿತ್ಯ ಈಶ್ವರನಿಗೆ ಪೂಜೆ ಮಾಡಿ ಹೋಗುತ್ತಾನೊ ಇಲ್ಲವೊ. ನಾನು ಕಣ್ಣು ಮುಚ್ಚುವವರೆಗೊಂದು ದೇವರ ತಲೆಗೆ ನೀರು ಹೂವು ಬಿದ್ದೀತು. ಆಮೇಲೆ ಕೇಳೋರು ಯಾರು? ಪಿತೃಗಳನ್ನು ನರಕಕ್ಕೆ ತಳ್ಳುವ ಪಾಪಿ ಮಗನಾಗಿ ನಾನು ಹುಟ್ಟಿದೆ."

ರಂಗನಿಗೆ ಅನ್ನ ಸೇರಲಿಲ್ಲ. ಪ್ರತಿಯೊಂದು ಮಾತೂ ತನ್ನನ್ನೆ ಚುಚ್ಚುತ್ತದೆ. ಶಾರದ ಕಂಗಾಲಾದವಳಂತೆ, ದಿಕ್ಕುಕಾಣದವಳಂತೆ ಚಡಪಡಿಸುತ್ತಾಳೆ. ಈ ಮುದುಕನ



ಪ್ರೀತಿ ಇವಳನ್ನು ನಾಶಮಾಡುತ್ತದೆ. ನನ್ನ ಪ್ರೀತಿಗೇಕೆ ಇವಳು ಕಿವಿಗೊಡಬಾರದು. ಹೇಸಿಗೆಯಾಗುವುದಿಲ್ಲವೆ ಇವಳಿಗೆ? ಮನಸ್ಸಿನಲ್ಲಿ ಹಿಂಸೆಯಾದರೂ ಬಾಯಿ ಮುಚ್ಚಿಕೊಂಡಿದ್ದಾಳೆ.

ಕೈತೊಳೆದು ಹೊರಗೆ ಬಂದ ರಂಗ ಪಡಸಾಲೆಯಲ್ಲಿ ಜಪದ ಸರ ಹಿಡಿದು ಕೂತಿದ್ದ ಶಂಕರಯ್ಯನನ್ನು ನೋಡಿ ಬೆಚ್ಚಿದ. ಉಸಿರು ಹೋದವನಂತೆ ನಿಂತ.

ಕೈಯಲ್ಲಿ ಜಪದ ಸರ, ಮೈಮೇಲೆ ಹೊದ್ದ ಕಂಬಳಿ, ಸುಕ್ಕುಗಟ್ಟಿದ ಮುಖ. ಹರಳೆಣ್ಣೆ ದೀಪದಲ್ಲಿ ಉದ್ದವಾಗಿ ಪಡಸಾಲೆಯ ಈ ತುದಿಯಿಂದ ಆ ತುದಿಗೆ ಅವರ ನೆರಳು ; ಅಸ್ಪಷ್ಟವಾಗಿ, ಹಣತೆಯ ದೀಪ ಹಂದಿದಾಗ ಬಳುಕಿ ಬಾಗಿ ; ಅವರ ಅಪ್ಪ, ಅಜ್ಜ, ಮುತ್ತಜ್ಜನ ಕಾಲದಿಂದ ಶಾಪದಂತೆ ಈಗ ನನ್ನ ಬಾಳಿನೊಳಗೆ, ಮುಂದೆ ನನ್ನ ಭವಿಷ್ಯದಲ್ಲಿ ಈ ಭೂತ ; ಈ ನೆರಳು ಭೂತ ; ಶಾರದೆಗೂ ನನಗೂ ನಡುವೆ ಬೀಳುವ ನೆರಳುಗಳು ; ಬೆನ್ನು ಬಿಡದ ನೆರಳುಗಳು ; ಹುಡುಗನಾಗಿದ್ದಾಗೊಮ್ಮೆ ಕತ್ತಲಿನಲ್ಲಿ ಇಲ್ಲಿ ಒಳಗೆ ಓಡಿ ಬಂದು ಶಂಕರಯ್ಯನ ನೆರಳು ನೋಡಿ ಬೆಚ್ಚಿದೆ. ಮನುಷ್ಯರಿಲ್ಲದೆ ಬರಿ ನೆರಳುಗಳೆ ಲೋಕದಲ್ಲೆಲ್ಲ ಓಡಾಡಿಕೊಂಡಿರುವಂತೆ ಕನಸು ಬಿತ್ತು. ನನ್ನ ನೆರಳೂ ನನಗೆ ಭಯ. ಈಗಲೂ ಭಯ. ಹುಟ್ಟುವಾಗ ಜೊತೆಗೆ ಹುಟ್ಟುತ್ತದೆ. ಸಾಯುವಾಗ ಹೋಗುತ್ತದೆ, ಇಲ್ಲ ಸತ್ತಮೇಲೂ ಸಾಯುವುದಿಲ್ಲ. ಸಾಯುವುದೇ ಇಲ್ಲ. ಶಾರದೆಯ ಅಕ್ಕನ ನೆರಳಿದೆ ಇಲ್ಲಿ. ಆಣೆಭಾಷೆ ಹಾಕಿದೆ ಮುತ್ತಜ್ಜರ ನೆರಳು ಇಲ್ಲಿ. ನಾನು ನಿನ್ನ ನೆರಳು ನೋಡುತ್ತೇನೆ, ನೀನು ನನ್ನ ನೆರಳು ನೋಡುತ್ತಿ. ಆಗೊಮ್ಮೆ ಈಗೊಮ್ಮೆ ನೆರಳು ಹತ್ತಿರವಾಗುತ್ತೆ, ದೂರವಾಗುತ್ತೆ. ನಾನು ನಿನ್ನ ಕಂಡಿಲ್ಲ, ನೀನು ನನ್ನ ಕಂಡಿಲ್ಲ. ಕಂಡದ್ದೆಲ್ಲ ನೆರಳು. ನೂರಾರು ವರ್ಷಗಳಿಂದ ತಲೆಯ ಮೇಲೆ ಶಾಪದಂತೆ ಈ ಮಾಡು, ಮೇಲೆ ಜಡಿಮಳೆ ಸೋರುವ ಮುಗಿಲು, ಎರಡನ್ನು ಹೊತ್ತು ನಿಂತ ದಪ್ಪ ದಪ್ಪ ಕಂಬಗಳು, ತೊಲೆಗಳು ; ಮನೆಯ ತುಂಬ ದೀಪ ಕೊರೆದುಬಿಡುವ ಅವುಗಳ ನೆರಳುಗಳು, ಬೂಸಲು ಹಿಡಿದು ಸೊಂಡಿಲು ಮುರಿದ ಗಣಪತಿ, ಮೂಲೆಯ ತಿಜೋರಿ, ನಿಧಾನ ಕಾಲವೆಣಿಸುವ ಗಡಿಯಾರ, ಸಾಯದೆ ಉಳಿದ ಕುರುಡ, ಅವನ ಉದ್ದ ನೆರಳು, ಮನೆಯನ್ನೆಲ್ಲ ಆವರಿಸಿದ್ದ ಮೌನದಲ್ಲಿ ಮಿಯಾವ್ ಎಂದು ಪಡಸಾಲೆ ದಾಟುವ ಕಳ್ಳಹೆಜ್ಜೆಯ ಬೆಕ್ಕು, ಹಳೆ ಮಜ್ಜಿಗೆಯ ವಾಸನೆಯ ಅಡಿಗೆಮನೆ ; ಎಲ್ಲವುದೂ ದುಷ್ಟ ಶಕ್ತಿಗಳಂತೆ, ಸಾವಿನ ಸಂಕೇತಗಳಂತೆ, ನನ್ನ ನಿರ್ಧಾರವನ್ನು ಅಲುಗಿಸುವ ಜನ್ಮ ಜನ್ಮದ ಶಾಪದಂತೆ. ಇಲ್ಲಿ ಯಾವುದೂ

ಮರೆಯುವುದಿಲ್ಲ. ಋತುಚಕ್ರದ ಮೆಲ್ಲಗಿನ ಉಸಿರಾಟದಲ್ಲಿ ಈ ಮನೆಯೊಂದು ತೂಕಡಿಸುವ ನೆನಪಿನಂತೆ, ಜಡವಾಗಿ ಬಿದ್ದ ಅಜಗರದಂತೆ, ಪಾಚಿಗಟ್ಟಿದೆ, ಮಂಕಾಗಿದೆ, ಮಾಸಿದೆ. ಸುಂದರವಾದದ್ದೆಲ್ಲ ನಿರ್ನಾಮವಾಗುವುದು : ಬೀಸಿ ಹೋದ ಪರಿಮಳದಂತೆ, ಮಿಂಚಿ ಮಾಯವಾಗುವ ಸಂಜೆಯ ಬಣ್ಣಗಳಂತೆ. ಆದರೆ ಇದು ಕಣ್ಣಿಲ್ಲದ ರಾಕ್ಷಸ. ಕಲ್ಲಾದ ಅಹಲ್ಯೆ. ಸಾಯಬೇಕು, ನಾಶವಾಗಬೇಕು, ತನ್ನ ಉಪಯುಕ್ತತೆ ಕಳೆದ ಬಳಿಕ ನಿರ್ನಾಮವಾಗಬೇಕು. ಅದು ಒಳಿತು. ಅದು ಸುಂದರ. ಹೀಗೆ ಉಳಿದೇ ಬಿಡುವುದು ಜೀವನಕ್ಕಂಟಿಕೊಂಡು ನಾಶವಾಗದೆ ಉಳಿಯುವುದು ದುಷ್ಟ, ಅನಿಷ್ಟ. ಸುತ್ತೆಲ್ಲ ಕಾಡು ಬೆಳೆಯಿತು, ನಿದ್ರಿಸಿದಳು ಸುಂದರಿ, ಶಾಪಗ್ರಸ್ತ ಕನ್ನಿಕೆ ನನ್ನ ಶಾರದೆ. ನನ್ನ ಪ್ರಾಣ ಶಾರದೆ, ಇದರಿಂದ ನಿನ್ನನ್ನು ನಾನು ರಕ್ಷಿಸುತ್ತೇನೆ. ಕೈಗೆ ಕೈ ತಾ. ಪ್ರತಿದಿನ ಸಾಯೋಣ, ಹುಟ್ಟೋಣ, ಸತ್ತು ಹುಟ್ಟುತ್ತಿರೋಣ.

ಶಂಕರಯ್ಯ ಕಂಬಳಿಯನ್ನು ಮೈತುಂಬ ಹೊದ್ದುಕೊಂಡು ಕುರುಡುಗಣ್ಣಿನ ರೆಪ್ಪೆಗಳಿಂದ ಕತ್ತಲೆಯನ್ನು ವ್ಯರ್ಥ ಮುಚ್ಚಿ ತೆರೆದು, ತೆರೆದು ಮುಚ್ಚಿ, ಪಿಳಿಪಿಳಿ ಬಡಿಯುತ್ತಿದ್ದಂತೆ, ಗಡಿಯಾರ ಟಿಕ್ ಟಿಕ್ ಎಂದು ಕಾಲವನ್ನು ಸುತ್ತಿ ಬಿಚ್ಚಿ, ಬಿಚ್ಚಿ ಸುತ್ತಿ – 'ಗೊರ್'ss – ಎಂದು ಏಳು ಗಂಟೆ ಹೊಡೆಯಿತು. ಗಂಟೆಗೊಂದೊಂದು ತಲೆ ಹಾಕಿ ಏಳಾಯಿತು ಎಂದರು. 'ಹಾ' ಎಂದು ಮೂಗು ಗಂಟಲಿನಿಂದ ವಿಚಿತ್ರ ಶಬ್ದ ಮಾಡಿದರು. ರೆಪ್ಪೆಗಳನ್ನು ಒಂದು ಕ್ಷಣ ಗಟ್ಟಿಯಾಗಿ ಅವುಕಿ ಕಣ್ಣಿನ ಸುತ್ತ ಮುದಿತನದ ಗೆರೆಗಳನ್ನು ಕೊರೆದರು. 'ಅಮ್ಮ, ರಾಮ, ಕೃಷ್ಣ' ಎಂದು ಆಕಳಿಸಿದರು. ಕುರುಡುಗಣ್ಣಿನ ರೆಪ್ಪೆಗಳಿಂದ ಕತ್ತಲೆಯನ್ನು ಮತ್ತೆ ವ್ಯರ್ಥ ಬಡಿಯತೊಡಗಿದರು. ಹಾಗೆಯೇ ಗಡಿಯಾರ ಟಿಕ್ ಟಿಕ್ ಎಂದು ಸುತ್ತಿ ಬಿಚ್ಚಿ – ಬಿಚ್ಚಿ, ಸುತ್ತಿ – ತಲೆತಲಾಂತರಗಳ ನಿಷ್ಫಲತೆಯನ್ನು ಎಣಿಸತೊಡಗಿತು. ರಂಗ ಅಸಹಜತೆಯಿಂದ ಸೊಂಡಿಲು ಮುರಿದ ಗಣಪತಿ ಕಡೆ ನೋಡಿದ. ಭಾರವಾದ ನಡಿಗೆಯಿಂದ ಪಡಸಾಲೆಗೆ ಬಂದ ಶಾರದೆಯ ಕಡೆ 'ಅಯ್ಯೊ ನನ್ನ ಹುಡುಗಿ' ಎಂದು ಮೃದುವಾಗಿ ನೋಡಿ ನಿಟ್ಟುಸಿರಿಟ್ಟ. ಶಂಕರಯ್ಯ ಮತ್ತೆ ತನ್ನಷ್ಟಕ್ಕೆ ಅಂದುಕೊಳ್ಳತೊಡಗಿದರು :

"ನಾನು ಹೇಳಿದರೆ ಈಗಿನ ಕಾಲದವರು ಎಲ್ಲಿ ಕೇಳುತ್ತಾರೆ ? ಪ್ರಾಯಕ್ಕೆ ಬಂದವರಿಗೆ ಮುದುಕರ ಎಗ್ಗೇಕೆ ? ಆಗಲಿ ಇದೇ ಪ್ರಕೃತಿ ನಿಯಮ. ಯಾರು ಯಯಾತಿಯಲ್ಲವೆ ? ಕೇಳಿದ ಮಗನನ್ನ – ಅಯ್ಯ ನನ್ನ ಮಗನೆ, ನಿನಗೆ ನಾನು ಜೀವ ಕೊಟ್ಟಿದ್ದೇನೆ, ನಿನ್ನ ಯೌವನವನ್ನು ಒಂದಿಷ್ಟು ದಿನ ನನಗೆ ಕೊಟ್ಟಿರು ಅಂತ. ಕೊಟ್ಟನೆ ಮಗ ? ನಮ್ಮ ನಮ್ಮ ಜೀವ ನಾವು ನಾವು ಬಾಳಬೇಕು, ಕೊಡುವುದಿಲ್ಲ ಎಂದ. ಯಾಕೆ ಕೊಡಬೇಕು ? ಅವನದೂ ತಪ್ಪಲ್ಲ. ಅಪ್ಪಯ್ಯ ಶಾಕುಂತಲ ಓದಿ ಹೇಳುತ್ತಿದ್ದರು : 'ನೋಡು ಶಂಕರ, ಸಾಕಿದ ಮಗಳನ್ನು ಹೇಗೆ ಕಣ್ವ ಕಳಿಸಿ ಕೊಡುತ್ತಿದ್ದಾನೆ. ನಿರ್ಲಿಪ್ತನಿಗೂ ಪ್ರೀತಿ ತಪ್ಪಲಿಲ್ಲ. ಆದರೂ ಹೋಗಿ ಬಾ ಮಗಳೇ ಎಂದು ಕಣ್ಣು ನೀರು ತುಂಬಿ ಹೇಳಿದ. ಇದು ದೊಡ್ಡದಪ್ಪ'. ನಾವು ಎಲ್ಲರೂ ಕೊನೆಗೆ ಒಬ್ಬಂಟಿಗಳೇ. ತಾಯಿಯ ಹೊಟ್ಟೆಯಿಂದ ಅಳುತ್ತ ಒಂಟಿಯಾಗಿ ಬಂದೆವು. ಸಾಯುವಾಗ ಒಂಟಿಯಾಗಿ ಹೋಗಬೇಕು. ಭೂಲೋಕದ ಅರಸು ಧರ್ಮರಾಯನಿಗೆ ಕೊನೆಗೆ ನಾಯಿಯೊಂದು ಮಾತ್ರ ಜೊತೆಯಲ್ಲಿ ಇತ್ತಂತೆ. ಅದನ್ನೊಂದು ಮಾತ್ರ ಬಿಡುವುದಿಲ್ಲ ಎಂದನಂತೆ ಪುಣ್ಯಾತ್ಮ. ಸುಖಕ್ಕಿಂತ ಶ್ರೇಯಸ್ಸು ದೊಡ್ಡದು. ನಮ್ಮ ಧರ್ಮ ನಾವು ಬಿಡಬಾರದು. ಸುಖಬೇಕೆಂದು ಅಲ್ಲವೆ ಒಬ್ಬರು ಇನ್ನೊಬ್ಬರನ್ನು ಆಶ್ರಯಿಸುವುದು? ಕೊನೆಗೆ ಎಲ್ಲ ಬಿಟ್ಟು ಒಂಟಿಯಾಗಬೇಕು. ಆಸೆ ತೀರದಿದ್ದರೆ ಪ್ರೇತವೂ ಒಂಟಿಯಾಗಿ ಅಲೆಯುತ್ತದಂತೆ. ಯಾರು? ಶಾರದೆಯೇನಮ್ಮ? ಇಲ್ಲಿ ಬಾ ಮಗಳೇ, ನಮ್ಮ ಮನೆಯೆದುರಿಗೇ ನಿನ್ನೆ ಹುಲಿ ಬಂದು ಕೂಗಿದ್ದು ರಾತ್ರೆ ನಿನಗೆ ಕೇಳಿಸಿತೆ? ಗಣಪತಿಗೆ ಮೈಲಿಗೆಯಾಗಿರಬೇಕು. ಭಟ್ಟರಿಗೆ ಹೇಳಿ ಶುದ್ಧ ಮಾಡಿಸಬೇಕಮ್ಮ. ದೇವರಿಗೆ ಮುಡಿಪು ಕಟ್ಟಿದನ?... ಒಂದೇ ವಿಷಯ ನಾನು ಸಾವಿರ ಸಾರಿ ಹೇಳಿ ನಿಮಗೆ ತಲೆಚಿಟ್ಟು ಹಿಡಿಸುತ್ತೀನಿಯಲ್ಲವೆ? ನಾನೊಬ್ಬ ಪಿರ್ಕಿ ಮುದುಕ. ಮುದುಕರೆಲ್ಲರೂ ಪಿರ್ಕಿಗಳೆ. ನನ್ನ ಮಾತು ನೀವು ಕಟ್ಟಿಕೊಳ್ಳುವುದು ಬೇಡ. ನನ್ನನ್ನ ಬಿಸಾಕಿ ಹೋಗಿ. ತಿಪ್ಪಾಭಟ್ಟನಿಗೆ ಒಂದು ಹೊತ್ತು ಬಂದು ಅನ್ನ ಬೇಯಿಸಿ ಹಾಕಯ್ಯ ಎನ್ನುತ್ತೇನೆ. ಉಳಿದ ಸಮಯ ಲಚ್ಚಿ ಬಂದು ನೋಡಿ ಹೋಗುತ್ತಾಳೆ".

ಶಾರದೆ ಬಿಕ್ಕಿ ಅಳುವುದು ನೋಡಿ ರಂಗನಿಗೆ ತಡೆಯದಾಯಿತು. ಹೊರಗೆ ಹೋಗಿ ಶಾರದಾ ಎಂದು ಕೂಗಿದ. 'ಬಾರೇ ಶಾರದಾ, ನಾನೊಂದು ಮಾತು ಹೇಳುತ್ತೇನೆ. ಕೇಳು ಬಾರೇ ಶಾರದಾ' ಎಂದ. ಇನ್ನೊಂದು ಬಲೆಯಿದು, ಬೇಕೆಂದು ಬೀಸುವುದಲ್ಲ ; ಈ ಧರ್ಮಸೂಕ್ಷ್ಮದ ಮಾತು, ತ್ಯಾಗದ ಮಾತು ತನಗೆ ಗೊತ್ತಿಲ್ಲದಂತೆ ಮಾಡುವ ಮೋಸ. ಮುದುಕ ಆಡುವ ಮಾತೆಲ್ಲ ನಿಜವಾಗಿ ಅನ್ನಿಸಿದ್ದಾದರೆ ಸಾಯಬೇಕು, ಆದರೆ ಸಾಯುವುದಿಲ್ಲ, ಸಾಯುವಷ್ಟು ಧೈರ್ಯ, ಔದಾರ್ಯ ಇಲ್ಲ. ನನ್ನನ್ನ ನೋಡಿಕೊಂಡು ಬಿದ್ದಿರು ಎಂದು ಒತ್ತಾಯಮಾಡಿದ್ದರೆ ಮುದುಕನ ವಿರುದ್ಧ ಶಾರದೆ ತಿರುಗಿ ನಿಲ್ಲಬಹುದಿತ್ತು, ವಿರೋಧಿಸುವ ಧೈರ್ಯ ಬರುತ್ತಿತ್ತು, ಆದರೆ ಹೀಗೆ ಮಾತಾಡಿ ಅವಳ ಪ್ರಾಣ ಹಿಂಡುವುದು ಹೆಚ್ಚು ದುಷ್ಟ,

ಅನಿಷ್ಟ ; ಬೇಕೆಂದು ಮಾಡುವುದಲ್ಲ, ಆದರೂ ಅನಿಷ್ಟ ದುಷ್ಟ. 'ಆಹಾ ಎಷ್ಟು ಉದಾರವಾಗಿ ಮಾತನಾಡಿಬಿಟ್ಟೆ' ಎಂದು ಮುದುಕ ತನ್ನ ಗುಣಕ್ಕೇ ತಾನು ಹಿಗ್ಗುತ್ತಿದ್ದಾನೆ, ಮಾತಾಡಿಬಿಟ್ಟಿದ್ದರಿಂದ ತನ್ನ ಅಂತರಾತ್ಮ ಶುದ್ಧವಾದಂತೆ ಎಂದು ತೃಪ್ತಿಯಲ್ಲಿ ತಲೆದೂಗುತ್ತಾನೆ, ಶಂಕರಯ್ಯನ ಈ ಉದಾತ್ತತೆ ಮನಸ್ಸಿನದು, ಮಾತಿನದು, ಹೇಗೆ ಇದನ್ನ ಶಾರದೆಗೆ ತಿಳಿಸಲಿ, ತನ್ನ ಧಾರ್ಮಿಕ ಔದಾರ್ಯದಲ್ಲಿ ನನ್ನ ಪ್ರೀತಿ ಅಲ್ಪ ಎಂದು ಅವಳಿಗೆ ಅನ್ನಿಸುವಂತೆ ಮಾಡಿ ಪೀಡಿಸಿ ಸುಖ ಪಡುತ್ತಾನೆ, ಇದನ್ನ ಶಾರದೆಗೆ ಹೇಗೆ ಮನದಟ್ಟು ಮಾಡಲಿ ? ಜೀವದ ಮಲೆ ಆಸೆಯಿದೆ ಮುದುಕನಿಗೆ. ಸಂಪ್ರದಾಯ, ರೂಢಿಬಲದ ಮೇಲೆ ಆಡುವ ಮಾತು ಪ್ರಾಣಕ್ಕನ್ನಿಸಿದ್ದಲ್ಲ, ಶಾರದೆಗೆ ಇದು ಅರ್ಥವಾಗುವುದೆ ? 'ಶಾರದೇ ಶಾರದೇ ಸ್ವಲ್ಪ ಇಲ್ಲಿ ಬಾರೇ' ಎಂದು ಮತ್ತೆ ಕೂಗಿದ. ಅಯ್ಯೊ ಸೋಲುತ್ತಿದ್ದೇನೆ ಎನ್ನಿಸಿತು. 'ಮದವೆಯಾಗು ಹೋಗು' ಎಂದು ಶಂಕರಯ್ಯ ಹೇಳಿದರೂ ಶಾರದೆ ಬರುವುದಿಲ್ಲ. ತಾನು ದೊಡ್ಡವನಾಗಿ ಸಾವು ಬರದ ಮುದುಕ ನನ್ನನ್ನು ಸಣ್ಣ ಮಾಡುತ್ತಿದ್ದಾನೆ. ಈ ಕುರುಡನ ಧಾರ್ಮಿಕತೆಯ ಎದುರು ನನ್ನ ಟೊಂಕದಲ್ಲಿ ಉರಿಯುವ ಆಸೆ ಹೇಸಿಗೆಯಾಗಿ ಶಾರದೆಯ ಕಣ್ಣಿಗೆ ಕಾಣಿಸುತ್ತದೆ. ನಾಲ್ಕು ನಿಮಿಷದ ನಂತರ ಸೊರಗಿ ಹೋಗುವ ಆಸೆ ನನ್ನದು, ಮುದುಕನದ್ದು ಸನಾತನವಾದ ಧರ್ಮ ಎನ್ನಿಸುತ್ತದೆ ಶಾರದೆಗೆ. ಒಂದು ವೇಳೆ ಮದುವೆಯಾದರೂ ಸಂಪೂರ್ಣ ಶಾರದೆ ನನಗೆ ದಕ್ಕುವುದಿಲ್ಲ. ಸತ್ತ ಮೇಲೂ ಕಾಡುವ ಪ್ರೀತಿಯ ಪ್ರೇತ ಶಂಕರಯ್ಯ. ನನಗೆ ಈ ಭೂತದಿಂದ ಬಿಡುಗಡೆಯೇ ಇಲ್ಲವೇ ದೇವರೇ ಎಂದು 'ಶಾರದಾ ಬಾರೇ' ಎಂದು ಅಳುತ್ತಿದ್ದವಳನ್ನು ಮತ್ತೆ ಕರೆದ. "ಕರೆಯುತ್ತಿದ್ದಾನೆ ಹೋಗು ಮಗಳೇ – ಹೋಗಿ ಬಾ ಮಗಳೇ" ಎಂದರು ಶಂಕರಯ್ಯ. ಬಿಕ್ಕಳಿಸಿ ಬಂದ ಮಾತಿನ ದನಿ ಕೇಳಿ ರಂಗ ಬೆಚ್ಚಿದ. "ಕರೆಯುತ್ತಿದ್ದಾನೆ ಹೋಗು ಮಗಳೇ, ಹೋಗಿ ಬಾ ಮಗಳೇ" – ಕ್ಷೀಣವಾದ ಸ್ವರದಲ್ಲಿ ಬಂದ ಶಂಕರಯ್ಯ ಮಾತಿನ ಹಿಂದ ಏನು ಅರ್ಥವಿತ್ತೊ. ಈ ಮುದುಕ ನಿಜವಾಗಿಯೂ, ಮನಃಪೂರ್ವಕವಾಗಿಯೂ... ಯಾವ ಭಾವವಿತ್ತೊ. ಈ ಮಾತಿನಲ್ಲಿ ? ನಾನು ಇವರ ಬಗ್ಗೆ ಊಹಿಸಿದ್ದೆಲ್ಲಾ ನಿಜವೆ ? – ಓಡಬೇಕು ಎನ್ನಿಸಿತು. ಎಲ್ಲ ನನ್ನ ಕೈಮೀರಿತು ಎನ್ನಿಸಿತು. ನಾನು ಸರಿಯೆ, ಶಂಕರಯ್ಯ ಸರಿಯೆ, ನನಗೆ ನಿಜವಾಗಿಯೂ ಶಾರದೆ ಶಂಕರಯ್ಯನಿಗೆ ಬೇಕೆನ್ನಿಸುವಷ್ಟು ಬೇಕೆ ? ಥತ್ ನನ್ನ ಎಂದುಕೊಂಡ. ಏನೇನೋ ಯೋಚಿಸುತ್ತೇನೆ. ಅಲ್ಲಿ ಶಂಕರಯ್ಯ ತೃಪ್ತರಾಗಿ ಕೂತಿದ್ದಾರೆ. ವ್ಹಾರೆ ವಾ ಮುದುಕ. ಹೋಗಿ ಬಾ ಮಗಳೇ ಎಂದು ಕಣ್ವನಾಗಿಬಿಟ್ಟ. 'ಶಾರದಾ



ಹೊತ್ತಾಗುತ್ತಿದೆ' ಎಂದು ಕರೆದ. ಹರಿಯುತ್ತಿದ್ದ ಇರುವೆಯೊಂದನ್ನು ಕಾಲಿನಿಂದ ಉಜ್ಜಿಕೊಂದ. ಸಾಯಲಿ ಎಂದ.

* * * * *

ಕೊರಗ ಬಂದು ಶಂಕರಯ್ಯನ ಕಾಲಿಗೆ ಬಿದ್ದ. ಸ್ವಲ್ಪ ಕುಡಿದಿದ್ದಾನೆಂದು ಶಂಕರಯ್ಯನಿಗೆ ಗೊತ್ತಾಗಿ ಹಾಳು ಮುಂಡೇಮಗ ಎಂದು – ಬೈದರು. 'ಒಡೇರೇ ನೀವೇ ಕಾಪಾಡಬೇಕು, ನನ್ನ ಮಗಳು ನಂಜಿ ಸಿದ್ದನ ಜೊತೆ ಓಡಿಹೋದಳು. ಐವತ್ತು ರೂಪಾಯಿ ತೆರನಾದರೂ ಕೊಡು ಎಂದೆ. ಸಿದ್ದ ಕೋವಿ ತೋರಿಸಿ ಹೋಗು ಸೂಳೇಮಗನೆ ಎಂದ. ಬೈರ ಐವತ್ತು ರೂಪಾಯಿ ತೆರಕೊಟ್ಟು ಮದುವೆಯಾಗುತ್ತೇನೆ ಎಂದಿದ್ದ. ನಂಜಿ ನಾನು ಸಿದ್ದನನ್ನೇ ಆಗುವುದು ಎಂದು ಅವನನ್ನ ಕಟ್ಟಿಕೊಂಡು ಓಡಿಬಿಟ್ಟಳು' ಎಂದು ಕೊರಗ ಕಣ್ಣೀರು ಸುರಿಸಿದ. 'ನಾನೇನು ಮಾಡಲೊ ಅದಕ್ಕೆ, ತೆರದ ಆಸೆ ಬಿಟ್ಟುಬಿಡು ಅಷ್ಟೆ' ಎಂದರು ಶಂಕರಯ್ಯ. 'ಇದ್ದ ಒಬ್ಬಳೇ ಮಗಳು ಹೀಗೆ ಕೈಕೊಟ್ಟಳಲ್ಲಯ್ಯ. ಹೆತ್ತ ಹೊಟ್ಟೆಗೆ ಹೇಗಾಗಬೇಕು ಹೇಳಿ. ಆ ಸಿದ್ದ ನರಸಪ್ಪನ ಕಡೆ ಆಳು. ಆ ಒಡೇರಿಗೆ ಹೇಳಿಸಿ ತೆರ ಕೊಡಸಿಯಯ್ಯ' ಎಂದ. 'ಆಗಲಿ. ನೀನು ಅಡಿಕೆ ಸಸಿ ತಂದು ನೆಡದೆ ಹೀಗೆ ಕುಡಿದು ತಿರುಗುತ್ತಿದೀಯಲ್ಲ' ಎಂದು ಶಂಕರಯ್ಯ ಗದರಿಸಿದರು. ಕೊರಗ ಹೊರಗೆ ಬಂದು ರಂಗನಿಗೆ ಕೈಮುಗಿದ. 'ರಾತ್ರೆಯಾದ ಮೇಲೆ ಹೊರಗೆ ಹೋಗಬೇಡಿಯಯ್ಯ ಹುಲಿಯಿದೆ' ಎಂದ. ಸ್ವಲ್ಪ ದೂರ ಹೋದಮೇಲೆ ಕುಡಿತದ ಅಮಲಿನಲ್ಲಿ ಹಾಡತೊಡಗಿದ. ಮೋಜಿನಿಂದ ಹಾಡುತ್ತಿದ್ದಾನೆ ಎನ್ನಿಸಿತು ರಂಗನಿಗೆ.

* * * * *

'ಗಬ್ಬದ ದನ ಕೌಲಿ, ಎಲ್ಲಿ ಹುಲಿಯ ಬಾಯಿಯ ಪಾಲಾಗುವದೊ' ಎಂದು ಶಾರದ ಎಂದಿದ್ದಕ್ಕೆ ರಂಗ 'ನಾನೂ ಬರುತ್ತೇನೆ. ನೋಡಿ ಬರೋಣ' ಎಂದು ಹೊರಟ. 'ಕೌಲಿ ಯಾಕೆ ಬರಲಿಲ್ಲವೊ, ಗುಡ್ಡದ ಮೇಲೆ ಎಲ್ಲಾರೂ ಕರು–ಗಿರು ಹಾಕಿತೊ ಏನು ಕತೆಯೊ ಎಂದಳು ಶಾರದ. "ಹೌದಲ್ಲವಾ? ಇಲ್ಲದಿದ್ದರೆ ಗಬ್ಬದ ದನಗಳು ಹೀಗೆ ತಪ್ಪಿಸಿಕೊಳ್ಳಲ್ಲ. ಸಂಜೆಯಾದ ಕೂಡಲೆ ಕೊಟ್ಟಿಗೆಗೆ ಬಂದುಬಿಡ್ತಾವೆ. ಅಂದ ಹಾಗೆ ಕೊರಗ ಹೇಳಿದ್ದು ಕೇಳಿದೆಯ?" ಎಂದ ರಂಗ. ಅದಕ್ಕೆ, 'ಇದು ಎರಡನೆಯ ಸಾರಿ ನಂಜಿ ಹೀಗೆ ಓಡಿಹೋಗುತ್ತಿರೋದು. ಕೊನೆಗೆ ತಂದೆ ಮಗಳು ಒಂದಾಗಿಬಿಡ್ತಾರೆ. ನಿತ್ಯದ ಗೋಳು ಇದು ಕೊರಗನ ಮನೆಯಲ್ಲಿ' ಎಂದು ಶಾರದ ಹೇಳಿದಳು. ರಂಗನಿಗೆ ಯೋಚನೆಯಾಯಿತು. ಗುಡ್ಡದ ಮೇಲೆ ಕರು ಹಾಕಿದರೆ ಫಜೀತಿಯೆ. ಹುಲಿಯ

ಉಪದ್ರವಂತೆ. ನಿಜವೋ ಸುಳ್ಳೊ. ಹೊತ್ತು ಹೋಗದ ಈ ಹಳ್ಳಿಯ ಜನ ಯಾವತ್ತು ಹುಲಿಯ ವಿಷಯ ಯೋಚಿಸುತ್ತಾರೆ. ನಾನು'ಜೂ'ನಲ್ಲಿ ಮಾತ್ರ ಕಂಡಿದ್ದು. ದನಗಳಿಗೆ ವಾಸನೆಯಿಂದಲೇ ಹುಲಿಯಿರೋದು ಗೊತ್ತಾಗುತ್ತಂತೆ. ಕೊರಗ ಹುಲಿ ಹೊಡೆಯುವುದರಲ್ಲಿ ನಿಸ್ಸೀಮ. 'ನಿಲ್ಲೊ ಹಾಗೂ ಇಲ್ಲ, ಬರೋ ಹಾಗೂ ಇಲ್ಲ ಕರು ಹಾಕಿದ್ದರೆ ಅಲ್ಲವಾ ಶಾರದಾ' ಎಂದ. ಈ ದನಗಳು ಹಾಲು ಮಾಯಿಸಿಕೊಂಡಾದ ಮೇಲೆ ಹೋರಿ ಬೇಕೆನ್ನಿಸಿದಾಗ ಕೊಟ್ಟಿಗೆಯಲ್ಲಿ ಹೇಗೆ ಕೂಗಿಗೊಳ್ಳುತ್ತವೆ ! ಹಗ್ಗವನ್ನು ಜಗ್ಗಿ ಜಗ್ಗಿ ಕರೆಯುತ್ತವೆ. ಹಂಬಲದ, ನೋವಿನ, ಒತ್ತಾಯದ ಒಂದು ಥರಾ ಕೂಗು ಅದು. 'ಓ ಹೋರೀನ್ನ ಕರೆಯುತ್ತೆ' ಎನ್ನುತ್ತೇವೆ ನಾವು. ಕಪ್ಪೆಗಳು, ಹಕ್ಕಿಗಳು, ಎಮ್ಮೆಗಳು – ಮನುಷ್ಯನ ವಿನಾ ಎಲ್ಲವೂ – ಕೂಗಿನಿಂದಲೆ ಅನ್ನಿಸುವಂತೆ ಮಾಡುತ್ತವೆ. ಮೈಯಿಂದ ಒಂದು ತರಹೆಯ ವಾಸನೆ ಅಭಿವ್ಯಕ್ತಿಬೇಕು. ನನಗೆ ಶಾರದೆ ಬೇಕೆನ್ನಿಸಿದರೆ ಭಾಷಣ ಹೊಡೆಯುತ್ತೇನೆ. ಕಪ್ಪೆಗಳಂತೆ ಅನ್ನಿಸಿದ್ದನ್ನು ಒಂದು ಗೊಟರಿನಲ್ಲಿ ಹೇಳಲು ಬರುವುದಿಲ್ಲ. ಪಿಟೀಲಿನಲ್ಲಿ ಮುಖ ಸೊಟ್ಟಗೆ ಮಾಡಿ ಬಾರಿಸುತ್ತೇವೆ ನಮ್ಮ ಪ್ರೇಮವನ್ನ, 'ಆಹಾ' ಎಂದು ಕಣ್ಣು ಮೇಲೆ ಮಾಡುತ್ತೇವೆ. ಕಪ್ಪೆಯಾದರೋ ಗೊಟರು ಹಾಕುತ್ತದೆ. ಶಂಕರಯ್ಯ ಧರ್ಮಸೂಕ್ಷ್ಮದ ಮಾತಾಡಿದರೆ, ನಾನು ಮರ್ಮಸೂಕ್ಷ್ಮದ ಮಾತಾಡುತ್ತೇನೆ. 'ಅಯ್ಯೋ ಶಾರದ ನೀನು ನನಗೆ ಬೇಕೆ' ಎಂದು ದನದ ಹಾಗೆ, ಕಪ್ಪೆಯ ಹಾಗೆ ನೋವಿನಿಂದ, ಒತ್ತಾಯದಿಂದ, ಆಸೆಯಿಂದ ಹೇಳಲು ಬರಲ್ಲ. ಅನಾವಶ್ಯಕವಾದ ಗಂಟುಗಳು, ಗಂಭೀರ ಸಮಸ್ಯೆಗಳು. ಮಾನವ ಜಾತಿ ಅತಿ ಶ್ರೇಷ್ಠವಾದದ್ದು. ನಾನು ಗಂಡು ಕಪ್ಪೆ, ಶಾರದೆ ಹೆಣ್ಣು ಕಪ್ಪೆಯಾಗಿದ್ದರೆ ಹೇಗಿರುತ್ತಿತ್ತು ! ಮಲೆನಾಡಿನ ಒಂದು ಕೆಸರು ಹೊಂಡದಿಂದ ನಾನು 'ಟ್ರೊಂಯ್, ಟ್ರೊಂಯ್' ಎಂದು ಕರೆಯುತ್ತಿದ್ದೆ. ಆಗವಳು ಕುಪ್ಪಳಿಸಿ, ಕುಪ್ಪಳಿಸಿ ಬರುತ್ತಿದ್ದಳು. ಈಗ ನಾನು ಶಾರದೆಯನ್ನು ಒಲಿಸಿಕೊಳ್ಳುವ ಕ್ರಮವನ್ನು ಕಪ್ಪೆ ನೋಡಿದ್ದರೆ ಅಯ್ಯೊ ಬೆಪ್ಪ ಎನ್ನುತ್ತಿತ್ತು.

"ಕೌಲಿ ಕಾವೇರಿಯ ಮಗಳಲ್ಲವೆ ಶಾರದ" ಎಂದ.

ಶಾರದೆ ತಲೆ ಹಾಕಿದಳು.

ಕೋಳಿ–ಹೂ–ಕೆರೆಯಿಂದ ತಂಪಾಗಿ ಗಾಳಿ ಬೀಸುತ್ತಿತ್ತು. "ಕಾವೇರಿ ಇನ್ನೂ ಬದುಕಿದೆಯಾ" ಎಂದ.

"ಇಲ್ಲ ಹೋದ ವರ್ಷ ಸತ್ತಿತು. ಕೊಟ್ಟಿಗೆಯಿಂದ ಹೋದದ್ದು ಹಿಂದಕ್ಕೆ ಬರಲೇ ಇಲ್ಲ. ಕೊರಗ ಅದರ ಕೊಂಬುಗಳನ್ನು ಕಾಡಲ್ಲಿ ನೋಡಿದೆ ಎಂದ. ಮುದಿ ದನವನ್ನು ಹುಲಿ ಹಿಡಿತೊ ಏನೊ ಪಾಪ" ಎಂದಳು.



ಕೌಲಿ ಚಿಕ್ಕ ಕರುವಾಗಿದ್ದಾಗ ಹತ್ತಿರ ಹೋದರೆ ಕಾವೇರಿ ಹಾಯಲು ಬರುತ್ತಿತ್ತು. ಅಷ್ಟು ಆಸೆ ಕರು ಎಂದರೆ. ಆದರೆ ಕೌಲಿಗೆ ನಾಲ್ಕೈದು ತಿಂಗಳಾದ ಮೇಲೆ ಇದು ತನ್ನ ಕರು ಎನ್ನುವದನ್ನೂ ಮರೆತುಬಿಟ್ಟಿತು. ನಮಗಿಂತ ಈ ಪಶುಗಳೇ ವಾಸಿ. ಆಕಾಶವಲ್ಲ ; ನೆಲವೇ ನಿಜವಾದ ಆದರ್ಶ. ಕರುವಿಗೆ ಅವಶ್ಯವಿದ್ದಾಗ ಮಾತ್ರ ತಾಯಿಯ ಪ್ರೀತಿ ; ಕಾಲು ಬಲಿತ ಮೇಲೆ 'ಹೋಗು ನಿನ್ನ ಪಾಡಿಗೆ ನೀನು' ಎಂದು ಮರೆತುಬಿಡುತ್ತದೆ. 'ಹೊಟ್ಟೆಯಲ್ಲಿ ಒಂಬತ್ತು ತಿಂಗಳು ಹೊತ್ತು ಹೆತ್ತೆ' ಎಂದು ಹಂಗಿಸುವುದಿಲ್ಲ ; 'ಸ್ವಾತಂತ್ರ್ಯ ಕೊಟ್ಟಿದ್ದೇನೆ, ನನ್ನ ಉದಾತ್ತತೆ ನೋಡಿದಿಯಾ' ಎಂದು ಪೀಡಿಸುವುದಿಲ್ಲ. ತೆರ, ತರಳೆ, ಧರ್ಮಸಂಕಟ ಏನೂ ಇಲ್ಲ. ಥತ್ ಮನುಷ್ಯಪ್ರಾಣಿಯೇ. ಶಾರದೆ,

ಮಾತಾಡುತ್ತಿಲ್ಲ. ಮಾತಾಡು, ಮಾತಾಡು ಮಲ್ಲಿಗೆ, ಸಂಪಿಗೆ, ಸೇವಂತಿಗೆ, ಶಂಕರಯ್ಯನನ್ನು ಕಾವೇರಿಗೆ ಹೋಲಿಸಿ, ಯಾರು ಉತ್ತಮ ಹೇಳಿ ಮೊದಲನೆಯ ಪ್ರಶ್ನೆ, ಶಂಕರಯ್ಯನನ್ನು ಕೊರಗನಿಗೆ ಹೋಲಿಸಿ, ಯಾರು ಉತ್ತಮ ಹೇಳಿ ಎರಡನೆಯ ಪ್ರಶ್ನೆ, ನನ್ನನ್ನು ಕಪ್ಪೆಗೆ ಹೋಲಿಸಿ, ಯಾರು ಉತ್ತಮ ಹೇಳಿ ಮೂರನೆಯ ಪ್ರಶ್ನೆ, ಕಾಗುಣಿತ ತಪ್ಪದಂತೆ ಬರೆಯಿರಿ, ಅಥವಾ ಯಾರನ್ನು ಬೇಕಾರೂ ಯಾರ ಜೊತೆಗಾದರೂ ಹೋಲಿಸಿ,

ಇಬ್ಬರೂ ಮಾತಿಲ್ಲದೆ ಗದ್ದೆ ದಾಟಿದರು. ಕೋಳಿ – ಹೂ – ಕೆರೆಯ ಪಕ್ಕದ ದಿನ್ನೆಯ ಮೇಲೆ ಲಚ್ಚಿ, ಗುಡಿಸಿಲಿನ ಎದುರು ಹಂಡೆಗೆ ಬೆಂಕಿ ಹಾಕಿದ್ದಳು, ಅವಳ ಗಂಡ ಬರೆ ಕೌಪೀನವುಟ್ಟು ಒಲೆಗೆ ಇದಿರಾಗಿ ಕೂತು ಕೈ ಕಾಯಿಸಿಕೊಳ್ಳುತ್ತಿದ್ದ. ಲಚ್ಚಿ ಗಂಡನ ಬೆನ್ನಿಗೆ ಎಣ್ಣೆ ತಿಕ್ಕುತ್ತಿದ್ದಳು. ಬೆಂಕಿಯಲ್ಲಿ ಕಪ್ಪಗೆ ಹೊಳೆಯುವ ಗಂಡಸು ಏನೋ ಪದವನ್ನು ಗೊಗ್ಗರುಕಂಠದಲ್ಲಿ ಹಾಡತೊಡಗಿದ. ರಂಗ ಒಂದು ಕ್ಷಣ ನಿಂತು ನೋಡಿದ. ಪದವನ್ನು ಆಲಿಸಿದ. 'ಆಹಾ' ಎನ್ನಿಸಿತು ಅವನಿಗೆ. ನಿರ್ಲಿಪ್ತರು, ಯೋಗಿಗಳು. ಒಬ್ಬಳು ಸ್ವಂತ ಮಗಳು, ಇನ್ನೊಬ್ಬಳು ಸಾಕುಮಗಳು. ಭೂಮಿಗೆ ಪಶು ಮನುಷ್ಯ ಇದ್ದ ಹಾಗೆ. ಒಬ್ಬಳಿಗೆ ಆತ್ಮ ಕುರುಡು, ಇನ್ನೊಬ್ಬಳಿಗೆ ದೇಹ ಕುರುಡು. ಶಾರದೆಯ ಹೆಗಲಿನ ಮೇಲೆ ಅಂಜುತ್ತ ಕೈಯಿಟ್ಟ. ಅವಳು ಬೇಡವೆನ್ನಲಿಲ್ಲ. ಬೂದು ಮಾವಿನ ಮರದ ಅಡಿ ಬಂದು ನಿಂತರು. "ಶಾರದೆ ನಿನಗೆ ಈಗಲೂ ಮುಟ್ಟಾಗುವಾಗ ಹೊಟ್ಟೆ ನೋಯುತ್ತದೇನೆ" ಎಂದು ರಂಗ ಕೇಳಿದನೆಂದು ಶಾರದೆಗೆ, ನಾಚಿಕೆಯಾಯಿತು. "ನೀನು ನಗುವುದೇ ಇಲ್ಲವೇನೆ ಶಾರದ" ಎಂದರೆ ಶಾರದ ತಗ್ಗಿಸಿದ ತಲೆ ಎತ್ತಲೇ ಇಲ್ಲ. "ಇದು ಏನೇ ಹುಡುಗಿ,

ಯಾವಾಗಲೂ ಅಳುಬುರುಕು ಮುಖ ಮಾಡಿಕೊಂಡರಬೇಡೆ. ಇಕೊ ನನ್ನನ್ನು ನೋಡು" ಎಂದ. ಶಾರದ ಮುಖವೆತ್ತಿದಳು. ರಂಗ ಸ್ವಲ್ಪ ಅಣಕಿಸುವ ಧ್ವನಿಯಲ್ಲಿ "ಯಾ ಕುಂದೇಂದು ತುಷಾರಹಾರಧವಳಾ, ಯಾ ಶುಭ್ರವಸ್ತ್ರಾನ್ವಿತಾ" ಎಂದ. "ಸಾಕು ಮುಂದೆ ಹೇಳಬೇಡಿ" ಎಂದು ಹಿಂದಿನದೆಲ್ಲ ನೆನಪಾಗಿ ಶಾರದ ನಕ್ಕಳು. "ಹಾ – ಅದು ಸರಿ, ಹಾಗೆ ಬಾ" ಎಂದ ರಂಗ.

ಎಷ್ಟು ಮೃದುವಾಗಿ ಮಾತನಾಡಿದ. ನಿನ್ನೆ ನಡೆದಷ್ಟು ಹತ್ತಿರದ ನೆನಪುಗಳು. ಈ ಮರದ ಹಣ್ಣನ್ನು ಆರಿಸುವಾಗ ಅಂಗಾಲಿನಲ್ಲಿ ನೆಗ್ಗಿನ ಮುಳ್ಳು ನೆಟ್ಟಿತು. ಬಗ್ಗಿ ಕೂತು ರಂಗ ತೆಗೆದ. ಇವನ ತಲೆಯ ಮೇಲೆ ಕೈಯೂರಿ ನಿಂತಿದ್ದೆ. ಎಷ್ಟು ಮೃದುವಾಗಿ ಕಾಲನ್ನು ಹಿಡಿದು ಸವರುತ್ತ, ಪುಟ್ಟ ಪುಟ್ಟ ಮುಳ್ಳುಗಳಿಗೆ ಉಗುರಿನಿಂದ ಹುಡುಕುತ್ತ ಕಾಲಿನ ಹತ್ತಿರ ಉಸಿರಾಡಿದ. ಬೆಚ್ಚಗಿತ್ತು ಕೈ. ಮತ್ತೆ ನಿದ್ರಿಸಿದ ರಾಜಕುಮಾರಿಯ ಕಥೆ ಹೇಳಿದ. ನೀನೇ ಅವಳು ಎಂದ. ಕಂತುವ ಹೊತ್ತಿನಲ್ಲೊಂದು ದಿನ ಇವನು ಓದುತ್ತ ಕೂತಿರುವುದು ನೋಡಿದೆ. ಹೊಳೆಯ ಮರಳಿನಲ್ಲಿ ಕಾಲು ಚಾಚಿ ಕೂತವನು ಎಷ್ಟು ಒಂಟಿಯಾಗಿ ಕಂಡ. ಎದೆಗವಚಿಕೊಂಡು ಸಮಾಧಾನ ಪಡಿಸಬೇಕು ಎನ್ನಿಸಿತು. ಹೈಸ್ಕೂಲಿನಲ್ಲಿ ಓದುತ್ತಿದ್ದವನು ಒಂದು ದಿನ ಬಂದು 'ನೀನು ಪೇಟೆಯ ಹುಡುಗಿಯರಂತೆ ಸೀರೆಯ ಒಳಗೆ ಯಾಕೆ ಲಂಗ ತೊಟ್ಟುಕೊಳ್ಳುವುದಿಲ್ಲ' ಎಂದು ಕೇಳಿದ. ನನಗೆ ನಾಚಿಕೆಯಾಯಿತು. ಸ್ವಲ್ಪ ಓರೆಯಾಗಿ ಬೈತಲೆ ತೆಗಿ ಎಂದ. ಅಷ್ಟು ದೊಡ್ಡದಾಗಿ ಕುಂಕುಮವಿಡಬೇಡ ಎಂದ. ನನಗೆ ಭಯವಾಗುತ್ತಿತ್ತು, ಆಸೆಯಾಗುತ್ತಿತ್ತು. ಈಗ ಮತ್ತೆ ಅದೇ ಬೂದು–ಮಾವಿನ ಬುಡದಡಿ.

"ನಾವಿಬ್ಬರೂ ಈಗ ಮದುವೆಯಾಗಿಯೇ ತೀರಬೇಕು ಶಾರದ. ಹಾಗೇ ಉಳಿಯಲು ನಾನಾಗಲೀ, ನೀನಾಗಲೀ ಸ್ವತಂತ್ರರಲ್ಲ."

ಮದುವೆ. ಎಣ್ಣೆಯಲ್ಲಿ ಬರೆದು ಕುಂಕುಮ ತೊಡೆಸಿದ ಆರತಿ; ಮುತ್ತು ಜೋಡಿಸಿದ ಆರತಿ. ಪುಟ್ಟ ಪುಟ್ಟ ನೀಲಾಂಜನ. ಪೆಟ್ಟಿಗೆಯಿಂದ ತೆಗೆದ ಪಟ್ಟೆ ಸೀರೆಗಳ ಸಂಭ್ರಮ. ಮುತ್ತೈದೆಯರ ಗದ್ದಲ, ಅವಸರ, ಮನೆತುಂಬ ಅರಳು. ಯಾವ ಹೆಣ್ಣಿಗೆ ಈ ಸಂಭ್ರಮ ಬೇಡ? ಆದರೆ ನನಗೆ ಅದೃಷ್ಟವಿಲ್ಲ – ಶಾರದ ಅಂಜುತ್ತ ಹೇಳಿದಳು.

"ಮಾವಯ್ಯ.... ನನ್ನ....".

"ಮತ್ತೆಲ್ಲ ಆ ಮಾತು ಬೇಡ ಶಾರದ. ನೂರು ಸಾರಿ ಮಾತನಾಡಿಯಾಗಿದೆ, ಅವರೂ ನಮ್ಮ ಜೊತೆ ಬಂದಿರಬಾರದು ಯಾಕೆ ಶಾರದ?"



"ನೀವೆ ಯಾಕಿ ಇಲ್ಲಿ ಬಂದಿದ್ದು ನನ್ನನ್ನು ಮದುವೆಯಾಗಬಾರದು?"

"ಅಯ್ಯೋ ಆ ಮಾತೊಂದು ಎತ್ತಬೇಡ ಶಾರದ. ಎಷ್ಟು ಸಾರಿ ನಾನು ಬಡಕೊಂಡಿಲ್ಲ. ಈ ಅಜ್ಜ ಮುತ್ತಜ್ಜರ ಭೂತ ನಮ್ಮನ್ನೂ ಕಾಡಬೇಕೆ. ನಾನು ಹೇಳುತ್ತೀನಿ ಕೇಳು. ನೀನಿರೋದು ಬಾಳಿ ಬದುಕುವ ಮನೆಯಲ್ಲ, ಪ್ರೇತಭೂಮಿ. ನಿನ್ನ ಮಾವನೂ ಒಂದು ಭೂತ. ನಿನ್ನ ಅಕ್ಕನೂ, ಭ್ರೂಣಹತ್ಯಮಾಡಿ ಸತ್ತಳು. ಮನೆಯಲ್ಲಿ ಮಕ್ಕಳಿಲ್ಲ, ಮರಿಯಿಲ್ಲ. ನಿಸ್ಸಂತಾನದ ಶಾಪ ಆ ಮನೆಗೆ ಬಿದ್ದಿರಬೇಕು. ಯಾವಾಗಲೂ ಬಿಕೊ ಎನ್ನುತ್ತಿರುತ್ತದೆ. ನಾನು ಇಲ್ಲಿರುವವನೆ "

"ಎಂಥ ಸ್ವಾರ್ಥಿ ನೀವು. ಯಾವಾಗಲೂ ನಿಮ್ಮ ಮೂಗಿನ ನೇರಕ್ಕೇ ನೋಡುತ್ತೀರಿ. ಇನ್ನೊಬ್ಬರ ಸುಖ ಕಷ್ಟ ನಿಮಗೆ ಬೇಡ."

ರಂಗ ಮರಕ್ಕೊರಗಿ ನಿಂತು ಕೋಪದಿಂದ ಮಾತಾಡಿದ ಶಾರದೆಯ ಕಡೆ ನೋಡಿದ.

"ಸ್ವಾರ್ಥ ತ್ಯಾಗದ ಮಾತಾಡಬೇಡ. ಊರಿಗಿಲ್ಲದ ವೈರಾಗ್ಯ ನಿನಗೆ. ನಿನ್ನ ಜೀವಕ್ಕಂಟಿಕೊಂಡಿರುವ ನಿನ್ನ ಮಾವ ಸ್ವಾರ್ಥಿಯಲ್ಲವೆ? ತಾನು ಪಡೆಯಬೇಕಾದ ಸುಖವನ್ನವರು ಜೀವದಿಂದ ಪಡೆಯಲಿಲ್ಲವೆ? ಲಚ್ಚಿಯ ತಾಯಿ ಮಾಲೇರರ ಪುಟ್ಟಿಯನ್ನವರು ಇಟ್ಟುಕೊಂಡಿರಲಿಲ್ಲವೆ ?"

"ಇಕೊ ಕೇಳಿ. ನನ್ನ ಮಾವನ ನಿಂದೆ ಮಾಡುವ ಅಧಿಕಾರ ನಿಮಗಿಲ್ಲ. ಅವರ ಅಮ್ಮನೇ ಒಂದು ಮಾತು ಆ ಬಗ್ಗೆ ಎತ್ತಿರಲಿಲ್ಲ. ನಮಗೇಕೆ ಆ ಮಾತು?"

"ತಪ್ಪೆಂದು ಹೇಳಲಿಲ್ಲ ಶಾರದ. ಅವರು ಮಾಡಿದ್ದು ತುಂಬ ಸರಿ. ಅದರಲ್ಲೇನು ತಪ್ಪು? ಅವರ ಪ್ರೀತಿಯ ನಿಜವಾದ ಫಲಕ್ಕೆ ಅವರು ಅಂಟಿಕೊಂಡಿಲ್ಲ, ಪಾಪ ನಿನ್ನ ಜೀವಕ್ಕೆ ಗಂಟುಬಿದ್ದಿದ್ದಾರೆ. ಅದೇ ನನಗೆ ಸಿಟ್ಟು. ಲಚ್ಚಿ ಅವರ ಮಗಳಲ್ಲವ? ತೋಟವನ್ನು ಅವಳ ಹೆಸರಿಗೆ ಮಾಡಿ ಅವರು ಇಲ್ಲೆ ಇರಲಿ. ಬ್ರಾಹ್ಮಣಿಕೆ ಅದಕ್ಕೆ ಅಡ್ಡಿಯಾಗಬೇಕ? ಪುಟ್ಟಿಯನ್ನ ಕೂಡುವಾಗ ಪುರಾತನ ಸಂಪ್ರದಾಯ ಮರೆಯಲಿಲ್ಲವ?"

"ನಿಮಗೆ ಆ ಮಾತು ಬೇಡ ಎಂದೆ."

"ಅಂದೆ ಸರಿ. ಆದರೆ ನೀನು ಮಾವನ ಹೇಲು, ಉಚ್ಚೆ ಬಳಿಯಲಿಕ್ಕೆ ಹುಟ್ಟಿದವಳಲ್ಲ ಎಂದು ಎಚ್ಚರಿಸಲು ಬಂದಿದ್ದೇನೆ..."

ಶಾರದೆ 'ಅಯ್ಯೊ ಮಾತಾಡಬೇಡಿ' ಎಂದು ಅಳತೊಡಗಿದಳು. ಇವಳ ಜೊತೆ ಮಾತಾಡಲು ಹೋದಾಗಲೆಲ್ಲ ನಾನೇಕೆ ಹೀಗೆ ಒರಟಾಗುತ್ತೇನೆ? ಯಾವಾಗಲೂ ಹೀಗೆಯೇ. ಈ ಶಾರದೆಯೊಂದು ಮಾನಸಿಕ ವಿಶೇಷ. ತನಗೇನು

ಬೇಕು, ಏನು ಬೇಡ ತಿಳಿಯದ ಪೆಚ್ಚು ಹುಡುಗಿ. ಅನ್ನಿಸುವುದೇ ಬೇರೆ, ಆಡುವುದೇ ಬೇರೆ. ನಾನೂ ಅಷ್ಟೆ.

"ಇಕೊ ಕೇಳು ಶಾರದ... ಒಂದು ವಿಷಯ"

ಶಾರದೆ ಸುಮ್ಮನೆ ನಿಂತಳು. ರಂಗ ಅವಳ ತಲೆಗೂದಲನ್ನು ನೇವರಿಸಿ ಮುದ್ದಿನಿಂದ ಅವಳ ಮುಖವನ್ನು ಎತ್ತಿದ.

"ನನಗೆ ನನ್ನ ಅಪ್ಪನ ಮೇಲೆ ಗೌರವವಿರಲಿಲ್ಲ. ಕಾಸುಕಾಸಿಗೆ ಗಂಟು ಹಾಕುವುದರಲ್ಲೆ ಸತ್ತರು ಅವರು. ಹೆತ್ತ ತಾಯಿಯೂ ಸಾಲದಾಯಿತು ನನಗೆ. ಶುದ್ಧ ಯಾವಾಗಲೂ ಪಿರಿ ಪಿರಿ ಅವಳು. ನನ್ನ ಅಮ್ಮನಿಗಿಂತ ತುಂಬ ಬೇರೆಯಾದ ಹೆಣ್ಣನ್ನು ಮದುವೆಯಾಗಬೇಕೆಂದುಕೊಂಡೆ ಬಹಳ ಹಿಂದೆಯೆ."

ಶಾರದ ಮಾತನಾಡಲೇ ಇಲ್ಲ. ರಂಗನಿಗೆ ತನ್ನ ಮನಸ್ಸಿನಲ್ಲಿರುವುದನ್ನೆಲ್ಲ ಹೇಳಲಾರೆ ಎನ್ನಿಸಿತು. ಮಾತಾಡಲು ಹೋದರೆ ಪ್ರತಿ ಸಾರಿಯೂ ಹೀಗೇ ಆಗುತ್ತದೆ. ಒಳಗೆ ಕಳಕಳಿಯಾಗಿ ಶಾರದೆಯ ಕೈಗಳನ್ನೆತ್ತಿ ಮುಖಕ್ಕೊತ್ತಿಕೊಂಡ.

"ಅದಕ್ಕೆ ನಾನು ನಿನ್ನನ್ನು ಎಂದೋ ಹಿಂದೆಯೇ ಆರಿಸಿಕೊಂಡೆ. ಚೂರು ಚೂರಾಗಿ ಹೋಗಿದೆ ನನ್ನ ಬದುಕು. ಎಲ್ಲ ಚೂರುಗಳನ್ನೂ ಸೇರಿಸಿ ನೀನು ನನ್ನನ್ನು ಮನುಷ್ಯನನ್ನಾಗಿ ಮಾಡಬೇಕು."

ಆಡಿದ ಮೇಲೆ ಶಾರದೆಯ ನಿರ್ಲಿಪ್ತ ಮುಖಭಾವ ನೋಡಿ ತನ್ನ ಬಗ್ಗೆಯೇ ಹೇಸಿಗೆಯಾಯಿತು. ಯಾಕೆ ಹೇಳಿಕೊಂಡೆನೊ ಇವಳೆದುರು ಎಲ್ಲವನ್ನು – ಏನೂ ಅನ್ನಿಸದವಳಂತೆ ನಿಂತಿದ್ದಾಳೆ. ಪೆಚ್ಚನಾದೆ ನಾನು.

"ನಾನು ನಿಮ್ಮನ್ನ ಎಂದೊ ಮನಸ್ಸಿನಲ್ಲೆ ವರಿಸಿಯಾಗಿದೆ. ಎಲ್ಲರಂತೆ ಒಟ್ಟಿಗಿದ್ದು ಕ್ಷಣಿಕವಾದ ಸಂಸಾರ..."

ರಂಗನಿಗೆ ನಗು ಬಂತು. ತೀರ ಅಸಹಜವಾಗಿ ಮಾತಾಡುತ್ತಾಳೆ. ಒಂದೆ ಹಾಸಿಗೆಯಲ್ಲಿ ಆತ್ಮಕ್ಕೂ ಆಗಬೇಕು, ದೇಹಕ್ಕೂ ಆಗಬೇಕು ಎಂದು ಬಂದೆನಲ್ಲವೆ? ಇವಳ ಆತ್ಮ ಎಷ್ಟು ಅಸಹಜವಾಗಿದೆ – ರಂಗ ಒರಟಾಗಿ ಹೇಳಿದ.

"ಪುರಂದರದಾಸನ ಮಾತುಗಳನ್ನ ಸುಮ್ಮನೆ ಒದರಬೇಡ ಶಾರದ."

ರಂಗನಿಗೆ ನನ್ನ ಬಗ್ಗೆ ಅರ್ಥವಾಗುವುದೇ ಇಲ್ಲ. ನನಗೆ ಆ ಸುಖ ಬೇಡ. ಅಪ್ಪಯ್ಯನಿಗೂ ಹಾಗೆ ಎನ್ನಿಸಿರಬೇಕು. ಅಮ್ಮನ ಕಾಟ ತಡೆಯಲಾರದೆ ತೀರ್ಥಯಾತ್ರೆ ಹೋಗುತ್ತೇನೆಂದು ಮನೆ ಬಿಟ್ಟವರು ಮತ್ತೆ ಹಿಂದಕ್ಕೆ ಬರಲಿಲ್ಲ. ಆಸ್ತಿ ಪಾಸ್ತಿ ಎಲ್ಲ ತೊರೆದು ಹೋದರು. ಅಕ್ಕನೂ ಅಮ್ಮನಂತೆ, ಮನೆಗೆ ಬಂದು ಹೋಗುತ್ತಿದ್ದ ಮೇಷ್ಟರ ಜೊತೆ ಸಲಿಗೆ ಬೆಳೆಸಿದಳು. ನನಗೆ ಅವಳ ವಯ್ಯಾರ ಬಿಂಕ



ಅಸಹ್ಯವಾಗುತ್ತಿತ್ತು. ಅವಳು ಬಸುರಿಯಾದಾಗ ಆ ಮೇಷ್ಟ್ರು ಹೇಳದೇ ಕೇಳದೇ ಊರು ಬಿಟ್ಟು ಓಡಿದ. ಅಕ್ಕ ಕಳಲೆ ತಿಂದಳು. ಕ್ವಿನಿನ್ ತಿಂದಳು. ಅಕ್ಕತಂಗಿಯರ ಹಣ್ಣನ್ನು ತರಿಸಿ ತಿಂದಳು. ಹಾಳು ಜ್ವರಗೆಡ್ಡೆಯೆಂದು ಮುಖ ಉದ್ದಮಾಡುತ್ತಿದ್ದಳು. ಈ ಕಾಮ ಶ್ರೇಷ್ಠವಂತೆ ರಂಗನಿಗೆ. ಬಾವಿಯಲ್ಲಿ ನೀರು ಕುಡಿದ ಹೆಣ ಈಗಲೂ ಕಣ್ಣಿಗೆ ಕಟ್ಟುತ್ತದೆ. ಆ ಸುಖ ನನಗೆ ಬೇಡ. ಅದು ಇಲ್ಲದೆ ಇದ್ದುಬಿಡಬಲ್ಲೆ. ಆದರೆ ಪಾಪ ರಂಗ. ಅವನ ತಲೆಗೂದಲನ್ನು ನೇವರಿಸಿದಳು. ಪಾಪ ರಂಗ.

"ಕೇಳು ಶಾರದ. ನನ್ನ ಮನಸ್ಸಿನಲ್ಲಿರುವುದನ್ನೆಲ್ಲ ಹೇಳಿಬಿಡ್ತೀನಿ. ನೀನು ಶಂಕರಯ್ಯನನ್ನು ಹಚ್ಚಿಕೊಂಡಿರೋದು ನನಗೆ ಸಹಿಸಲ್ಲ. ಅವರು ಸಾಯಬೇಕೆಂದು ನನಗೆ ಆಸೆ. ಅಲ್ಲ ಅದು ಜೀವನದ ನಿಷ್ಠುರ ನಿಯಮ. ಅಪ್ಪ ಸತ್ತಾಗಲೂ ನನಗೆ ಅಷ್ಟು ದುಃಖವಾಗಲಿಲ್ಲ. ತೋರಿಕೆಗೆ ಅತ್ತೆ. ಆದರೆ ಒಳಗೊಳಗೆ ಮನಸ್ಸು ಹಗುರಾಗಿತ್ತು."

"ಅಯ್ಯೋ ಎಂತಹ ಮಾತಾಡುತ್ತೀರಿ !"

"ನೋಡು ಶಾರದ. ನಾನು ಯೋಚಿಸುವ ರೀತಿ ಅನಿಷ್ಟವಲ್ಲ. ಜೀವನಕ್ಕೆ ಹಸಿಯಾಗಿ ಉಳಿದಿದ್ದರಿಂದ ಏನೇನೋ ಮಾಡಿದೆ. ತಪ್ಪಿರಬಹುದು. ಉದಾಹರಣೆಗೆ ನನ್ನ ಲಚ್ಚಿಯ ವಿಷಯ..."

"ಆ ವಿಷಯ ನನಗೆ ಗೊತ್ತು. ಆ ಮಾತು ಬೇಡ."

"ಏನೋ ಹೇಳಲಿಕ್ಕೆ ಹೋದೆ. ಹೋಗಲಿ, ನಿನ್ನ ಮಾವಯ್ಯ ನಿನ್ನನ್ನ ಪ್ರೀತಿಸಿ ನಿನಗೆ ಹಿಂಸೆಯಾಗುವಂತೆ ಮಾಡುತ್ತಿದ್ದಾರೆ. ಆ ಪ್ರೀತಿ ಅನಿಷ್ಟವಾದದ್ದು. ಅದನ್ನವರು ಬಿಡಬೇಕು ; ಅಂದರೆ ಗೊಣಗದೆ ಸಾಯಬೇಕು. ಇದು ನನ್ನ ದೃಷ್ಟಿಯಲ್ಲ ; ಜೀವನದ ದೃಷ್ಟಿ".

"ಅಯ್ಯೋ ಬಿಡಿ. ಯಾವಾಗಲೂ ಬೋಧಿಸುತ್ತಿರಬೇಡಿ."

ಶಾರದೆ ರಂಗನ ಮಾತು ಕೇಳಿಸಿಕೊಳ್ಳುತ್ತಿರಲಿಲ್ಲ. ಅವಳಿಗೆ ಭಯವಾಯಿತು. ಯಾಕೆ ಹೀಗೆ ಪೀಡಿಸುತ್ತಾನೆ ರಂಗ ? ತುಂಬ ಯಾಕೋ ಹೆದರಿಕೆ. ಕೂತ ಹಾಗೆಯೇ ಮಾವಯ್ಯ ಸತ್ತುಬಿಟ್ಟರೆ... ಇವನು ಏನು ಬೇಕೆಂದು ಬಂದ, ಪ್ರೀತಿಯಂತೆ, ಅಷ್ಟು ಪ್ರೀತಿಯಿದ್ದರೆ ಇಲ್ಲಿಯೇ ಬಂದಿದ್ದು ನನ್ನನ್ನು ಮದುವೆಯಾಗುತ್ತಿದ್ದ. ನಾನು ಸುಖವಾಗಿರಬೇಕೆಂದು ಆಸೆಯಿಲ್ಲ ಇವನಿಗೆ. ಅಕ್ಕನಿಗೆ ಬಸುರುಮಾಡಿದ ಅವನಿಗೂ ಇವನಿಗೂ ಏನು ವ್ಯತ್ಯಾಸ ? ಎಲ್ಲರೂ ಕೊಳಕರೆ. ರಂಗ ಮತ್ತೆ ಅವಳ ಹೆಗಲ ಮೇಲೆ ಕೈಯಿಡಹೋದರೆ ಕೊಸರಿಕೊಂಡಳು. ಇಲ್ಲ ನಾನೇ ಸಾಯಬೇಕು. ಯಾರಿಗೂ ನಾನು ಬೇಡ.

ಸುಮ್ಮನೆ ನನ್ನ ಪೇಚಿಗೆ ಸಿಕ್ಕಿಸುತ್ತಾರೆ. ರಂಗನೊಬ್ಬ ಬಂದು ಹೀಗೆಲ್ಲ ಪೀಡಿಸಿ ಮಾವನ ಜೊತೆಗೂ ತೃಪ್ತಿಯಿಂದ ಇರದಂತೆ ಮಾಡಿದ. ರಂಗ ನನ್ನನ್ನ ಪ್ರೀತಿಸಲ್ಲ. ಎಲ್ಲ ಸುಳ್ಳು. ಲಜ್ಜೆಯೂ ಸಾಕು ಇವನಿಗೆ. ಕರುಣೆಯಿಲ್ಲದ ಕ್ರೂರಿ.

"ಹೇಳು ಶಾರದ, ಮಾತಾಡದೆ ಸುಮ್ಮನೆ ನಿಂತಿರಬೇಡ".

"ನನಗೆ ದಿಕ್ಕೇ ಕಾಣುವುದಿಲ್ಲ..."

"ಹೋಗಲಿ ಬಿಡು. ನೀನೊಂದು ಹೆಣ್ಣು ಎಂದು ತಿಳಿದದ್ದೆ ತಪ್ಪು. ಲಜ್ಜೆ ನಿನಗಿಂತ ಉತ್ತಮ. ನೀನು ಎಂದೂ ನನ್ನ ಪ್ರೀತಿಸಿಯೇ ಇಲ್ಲ. ತುಂಬ ಕೃತ್ರಿಮದ ಸ್ವಭಾವ ನಿನ್ನದು. ಮಾವನ ಹಾಗೆಯೇ ನಿನ್ನ ಒಂದೊಂದು ಹೇಡಿತನದ ಕೆಲಸಕ್ಕೂ ಒಂದೊಂದು ದೊಡ್ಡ ವೇದಾಂತ ತಗುಲಿಸುತ್ತಿ".

ರಂಗನ ಗಂಟಲು ಒಣಗಿ ಬಂತು.

"ನನ್ನ ಮೇಲೆ ನಂಬಿಕೆಯಿಲ್ಲದಿದ್ದರೆ ಮತ್ತೆ ಯಾಕೆ ಬಂದಿರಿ ?"

"ನಿನ್ನನ್ನ ಆ ಹೇಸು ಮುದುಕನ ಕೈಯಿಂದ..."

"ತಿರುಗಿ ಹಾಗೆ ಮಾತಾಡಬೇಡಿ. ನಿಮ್ಮ ಪ್ರೀತಿಗಿಂತ ಅವರ ಪ್ರೀತಿಯೇ ದೊಡ್ಡದು..."

"ಆಗಲಿ ಹೇಲು ಉಚ್ಚೆ ಬಳಿದುಕೊಂಡಿರು..."

ಸ್ವಲ್ಪ ತಡೆದು ಮತ್ತೆ ಹೇಳಿದ ಕಠೋರವಾಗಿ,

"ಹೀಗೆ ಬದುಕಿದ್ದು ನನ್ನ ಪೀಡಿಸಬೇಡ. ಕೆರೆಗೆ ಬಿದ್ದು ಸಾಯಿ..."

ಶಾರದೆ ಧಡಕ್ಕನೆ ಹೋಗಿಬಿಟ್ಟಳು. ರಂಗ ದಿಗ್ಭ್ರಾಂತನಾಗಿ ಬೂದು ಮಾವಿನ ಮರಕ್ಕೊರಗಿ ಕೂತ.

* * * * *

ಇಲ್ಲಿ ಬೆಳದಿಂಗಳಲ್ಲಿ ಬಿಕೊ ಎನ್ನುವ ಮೌನದಲ್ಲಿ ಮನುಷ್ಯನೊಂದು ಯಾವ ಕ್ಷುಪದಾರ್ಥ? ರಾಕ್ಷಸವಾಗಿ ಕಾಣುತ್ತದೆ ಭೂಮ್ಯಾಕಾಶಗಳ ವಿಸ್ತಾರದ ನಿರ್ಲಕ್ಷ್ಯ. ನಾನು ಈ ಲೋಕಕ್ಕೆ ಸೇರಿದವನಲ್ಲ, ಮನುಷ್ಯ ಈ ನಿರ್ಲಿಪ್ತ ಸುಖಕ್ಕೆ ವಿನಾಯಿತಿ. ಯಾರು ನಾನು ? ರಂಗನಾಥ. ಎಂದರೆ ? ಅರ್ಥವಿಲ್ಲ. ಯಾವುದಕ್ಕೂ ಅರ್ಥವಿಲ್ಲ. ಒಟ್ಟಿನಲ್ಲಿ ನಡೆಯುತ್ತದೆ. ಈ ಹಡಬೆಯಲೆಯುವ ಹೋರಿಗೆ ಯಾವ ಎಗ್ಗೂ ಇಲ್ಲ. ಮಾವಿನ ಮರದ ತೊಗಟೆಗೆ ಮೈಯುಜ್ಜಿಕೊಳ್ಳುತ್ತದೆ. ತುರಿಸಿಕೊಂಡರೆ ತುಂಬ ಸುಖ. ಹೆಣ್ಣಿನ ಜೊತೆ ಮಲಗಬೇಕೆನಿನ್ನಸುವುದೂ ಒಂದು ತರಹ ತುರಿಕೆಯೆ. ಅದಕ್ಕಾಗಿ ಎಷ್ಟೆಲ್ಲ ವಿಜೃಂಭಣೆಮಾಡಿದೆ. ಯಾರ ಹಂಗಿರದ ಹಕ್ಕಿಗಳು ರೆಕ್ಕೆ ಬಡಿಯುವ ಸಪ್ಪಳ ಆಗೊಮ್ಮೆ ಈಗೊಮ್ಮೆ. ಇಲ್ಲಿ ನಾನೊಬ್ಬ ಮಾತ್ರ



ಅಸುಖಿ. ಯಾರು ಹೇಳಿದರು ಅಸುಖಿಯಾಗೆಂದು? ಈ ಬೆಳದಿಂಗಳೇನು ನನ್ನನ್ನು ಲೆಕ್ಕಿಸುವುದೆ? ಯೋಚನೆ ಎಲ್ಲಿ ಹರಿದರೂ ನೆನಪಿನ ಹುತ್ತಗಳು. ಒಬ್ಬಂಟಿ ನಾನು. ಹುಟ್ಟಿದ ದಿನದಿಂದ ಈವರೆಗೂ. ಅಮ್ಮ ಆಗಲಿಲ್ಲ. ಅಪ್ಪ ಆಗಲಿಲ್ಲ. ಶಾರದೆಯಾಗಲಿಲ್ಲ. ಬಿಡುಗಡೆಯೂ ಇಲ್ಲ ; ಪ್ರೀತಿಯ ಬಂಧನವೂ ಇಲ್ಲ. ನಾನು ಹೀಗೆ ಗೋಗರೆದರೆ ಯಾರೂ ಕೇಳುವುದೂ ಇಲ್ಲ. ಒದ್ದೆ ಕಟ್ಟಿಗೆಯಲ್ಲಿ ನರಳುವ ಕಿಚ್ಚಿನಂತೆ ಒದ್ದಾಟ. ಎಲ್ಲವೂ ಒಂದಕ್ಕೊಂದು ಸಂಬಂಧವಿಲ್ಲದ, ಬಿಡಿಬಿಡಿಯಾದ, ನಿತ್ಯ ಜೀವನದ ಅರ್ಥಹೀನ ಬದುಕಿನ, ಒಟ್ಟಿಗೆ ರಾಶಿಯಾಗಿದ್ದರೂ ಒಂದಕ್ಕೊಂದು ಕೂಡದ ಮರಳಿನ ಕಣಗಳಂತಹ ದಿನಗಳು. ಶಂಕರಯ್ಯನ ಹಾಗೆ ನನಗೂ ನನ್ನ ಮೇಲೆ ತುಂಬ ಪ್ರೀತಿ. ಯಾವುದಕ್ಕೂ ಏನೂ ಅರ್ಥವಿಲ್ಲ. ನಾನು ಯಾರಿಗೆ ಸೇರಿದವನು, ನನಗೆ ಆಗುವವರು ಯಾರು, ಪ್ರತಿಭಾಶಾಲಿಯೇ ಬುದ್ಧಿವಂತನೇ, ನಾನು ಏನೂ ಅಲ್ಲ. ಶಾರದೆಯ ಬಳಿ ಹೋಗಿ ಅಂಗಲಾಚಿದೆ. ಆದರೆ ಅವಳು ಯಾರೊ, ನಾನು ಯಾರೊ. ಮಾತಾಡಿದರೆ ಎಲ್ಲ ಬಗೆಹರಿಯುತ್ತದೆಂದು ತಿಳಿದೆ, ಪುಸ್ತಕತೀರ್ಥ, ಹುಚ್ಚ. ಈ ಲೋಕದ ಜೊತೆಗೂ ನಮಗೂ ಪರಸ್ಪರ ಅರ್ಥಮಾಡಿಕೊಳ್ಳಲು ಯಾವುದಾದರೂ ಸಾಧನವಿದೆಯೆ? ಮನಸ್ಸಿನಲ್ಲಿರುವುದನ್ನ ಮಾತಾಡಹೋದರೆ, ಅನ್ನಿಸಿದ್ದೊಂದು ಆಡಿದ್ದೊಂದು. ಮಾತು ಸಾಲದು, ದೇಹ ದೇಹ ಬಯಕೆಯಲ್ಲಿ ಕೂಡಿದರೆ ಮಾತಿಗೆ ಮೀರಿದ್ದು ದಕ್ಕುತ್ತದೆ ಎಂದು ಭ್ರಮಿಸಿದೆ. ಶಾರದೆಯನ್ನು ಎದೆಗವಚಿಕೊಂಡು ಒಂಟಿತನದ ನಿಸ್ಸಹಾಯಕತೆಯನ್ನು ನೀಗಿಕೊಳ್ಳುತ್ತೇನೆಂದು ತಿಳಿದೆ. ಒಂದೆ ಶಯ್ಯೆಯಲ್ಲಿ ಆತ್ಮಕ್ಕೂ ಆಗಬೇಕು, ದೇಹಕ್ಕೂ ಎಂದು ಹುಡುಕಿದೆ. ಶುದ್ಧ ಪೆಚ್ಚ ನಾನು. ಲಜ್ಜೆಯಿಂದ ಪಡೆದದ್ದೇನು? ಆ ಸೂಳೆ ಕೊಟ್ಟದ್ದೇನು? ಬೆಪ್ಪು ನಾನು. ಒಬ್ಬಳು ಸೀರೆಯಿಂದ ಒರೆಸಿಕೊಂಡಳು, ನಗುತ್ತ ನನ್ನ ಕೆನ್ನೆ ಚಿವುಟಿದಳು. ಇನ್ನೊಬ್ಬಳು ತೊಳೆದುಕೊಳ್ಳಿ ಬೇಕಾದರೆ ಎಂದು ಚೊಂಬು ನೀರು ತಂದಿಟ್ಟಳು. ಲೀಲೆಯಲ್ಲವೆ ಅವಳ ಹೆಸರು? ಎಲ್ಲ ಅಸಹ್ಯ. ಶಾರದೆಯಿಂದ ಸಿಗುವುದೂ ಕೊನೆಗೆ ಅಷ್ಟೆ. ಆದರೆ ಪ್ರಕೃತಿಯ ಮೋಸವನ್ನು ಮರೆಸಲು ಮದುವೆಯಾದರೆ ಪುಟ್ಟ ಪಾಪಚ್ಚಿಯೊಂದು ಹುಟ್ಟುತ್ತದೆ. 'ಹಚಿಕಳ್ಳ, ಹಚಿಕಳ್ಳ, ಎಷ್ಟು ಮುದ್ದಾಗಿದೇಯೇ ನಮ್ಮ ಮಗು' 'ಅಪ್ಪನನ್ನ ಗುರುತು ಹಿಡಿಯುತ್ತದಲ್ಲರೀ'... ಹಿಗ್ಗಿ ಗಂಡುತನದ ಠೀವಿ ಮೆರೆಯಬಹುದು. ಅಷ್ಟೆ – ತರುವ ಸಾಧನ ನಾನಾಗಲಾರೆ. ಎಲ್ಲ ಹೇಸಿಗೆ, ಕೊಳಕು. ಜೀವನವೇ ಅಸಹ್ಯ. ಮುಟ್ಟು ನಿಂತು ಋಷಿಪಂಚಮಿ ಮಾಡಿಸಿಕೊಂಡ ಅಮ್ಮನಿಗೆ ತನ್ನ ಜೀವನದಲ್ಲಿ ತೀರದೆ ಉಳಿದ ಕಾಮವನ್ನು ನನ್ನ ಮುಖಾಂತರ

ತೀರಿಸಿಕೊಳ್ಳುವ ಚಪಲ. 'ಶಾರದೆಗೆ ಬಹುಶಃ ಮುಟ್ಟುದೋಷದಿಂದ ಉಂಟಾದ ಮಾನಸಿಕ ಕಾಹಿಲೆ. ಲಾರೆನ್ಸಿನ ಬದಲು ಲೋಧ್ರ ಅವಳಿಗೆ, ಧಾತುಪುಷ್ಟಿರಸಾಯನ ನನಗೆ. ಹೈಸ್ಕೂಲು ಓದುತ್ತಿದ್ದಾಗ ಮನೆಗೆ ಬರುತ್ತಿದ್ದ ದಾರಿಯಲ್ಲಿ ಎಷ್ಟು ಹಗಲುಗನಸುಗಳನ್ನು ನೇಯುತ್ತಿದ್ದೆ – ಶಾರದೆ ಹೊಳೆಯಲ್ಲಿ ಕೊಚ್ಚಿ ಹೋಗುತ್ತಿದ್ದಂತೆ, ನಾನು ದೊಡ್ಡ ವೀರನಂತೆ ಈಜಿ ಅವಳನ್ನು ಹೆಗಲ ಮೇಲೆ ಎತ್ತಿ ತಂದಂತೆ. ಸಿನಿಮಾ ನಾಯಕನ ಹಾಗೆ. ಓದಿ ಓದಿ ಮರುಳಾದ ಕೂಚುಭಟ್ಟ, ಮುಟ್ಟುದೋಷದ ಶಕುಂತಲೆ ತಪೋಭ್ರಷ್ಟ ಕುರುಡು ಕಣ್ವಯ್ಯ, ತಾನೊಬ್ಬ ಗಂಡಸು ಎನ್ನುವುದನ್ನು ಮರೆತ ದುಷ್ಯಂತ. ಲೋಧ್ರ, ಧಾತುಪುಷ್ಟಿರಸಾಯನದಲ್ಲಿ ನಾಟಕದ ಸುಖಾಂತ. ಹಗಲುಗನಸಿನಲ್ಲಿ ನೀರಿನಿಂದ ಎತ್ತಿ ತಂದವಳನ್ನು ತಬ್ಬಿ 'ನನ್ನ ರಾಣಿ' ಎನ್ನುತ್ತಿದ್ದೆ ನಾನು. ಮುಂದೇನು ಮಾಡುವುದು ಗೊತ್ತಾಗದೆ ಮತ್ತೆ ನೀರಿನಲ್ಲಿ ಬೀಳಿಸುತ್ತಿದ್ದೆ. ತಿರುಗಿ ಎತ್ತಿ ತರುತ್ತಿದ್ದೆ, ಶಂಕರಯ್ಯ ಹೋಗಿ ಬಾ ಮಗಳೇ ಎಂದು ಕಣ್ವನಾಗಿಬಿಟ್ಟ. ವ್ಹಾರೆವಾ ಮುದುಕ, ಹಲಸಿನ ಹಣ್ಣಿನ ಮುಳಕ, ಗರ್ಭಿಣಿಯನ್ನು ಕೆರೆಯಲ್ಲಿ ನೀರು ಬರಲೆಂದು ಬಲಿಕೊಟ್ಟರಂತೆ, ಬಂದ ಮಾದೇವರಾಯ, ಹತ್ತಿದ ಬೆತ್ತಲ ಕುದುರಿ. ಭಾಗೀರಥಿಯಂತೆ ಶಾರದೆಯೂ ಬಲಿಯಾಗಿ ವಂಶೋದ್ಧಾರ ಮಾಡುವಳು. ವ್ಹಾರೆವಾ ಮುದುಕ, ಹಲಸಿನ ಹಣ್ಣಿನ ಮುಳುಕ, ದೈಹಿಕವಾಗಿದ್ದ ಪ್ರೀತಿ ಕೊನೆಗೆ ಅಲೌಕಿಕವಾಗಿ ಬೆಳೆಯಿತು ಶಾಕುಂತಲದಲ್ಲಿ; ನಮ್ಮ ಜೀವನದಲ್ಲಿ ಅಲೌಕಿಕವಾಗಿದ್ದುದು ದೈಹಿಕವಾಗಿ ಸಹಜವಾಗಬೇಕು ಎಂದೆ. ದಪ್ಪ ದಪ್ಪ ಶಬ್ದಗಳು. ಮಾರೀಚ ಆಶ್ರಮದಲ್ಲಿ ಶಕುಂತಲೆಯನ್ನು ದುಷ್ಯಂತ ಮತ್ತೆ ಭೆಟ್ಟಿಯಾದಾಗ ;

(ಒಂದು) ಅವಳ ಮುಖದ ತುಂಬ ಸಿಡುಬಿನ ಕಲೆಗಳಾಗಿದ್ದರೆ,

(ಎರಡು) ಕೂದಲು ಬೆಳ್ಳಗಾಗಿದ್ದರೆ,

ನಾಟಕ ಟ್ರಾಜೆಡಿಯಾಗುತ್ತಿತ್ತು ಎಂದೆ. ಭೇಷ್ ಎಂದ ಗೋಪಿ. ಚುರುಕು ಬುದ್ಧಿಯಯ್ಯ ರಂಗನಿಗೆ. ಕೌಲಿಯೇ ಜಿಂಕೆ, ಗೋಪಿಯೇ ವಿದೂಷಕ, ಪೂರ್ವಿಕರ ಆಣೆಭಾಷೆ ದೂರ್ವಾಸ. ಚುರುಕುಬುದ್ಧಿಯಯ್ಯ ರಂಗನಿಗೆ, ಕಮಂಗನಿಗೆ. ಸುತ್ತೆಲ್ಲ ಕಾಡು ಬೆಳೆಯಿತು. ತ್ರಿಪುರಸುಂದರಿ ನಿದ್ದೆಹೋದಳು. ನಾನು ರಾಜಕುಮಾರ? ಕಥೆಗೆ ಮರುಳಾದ ಬೆಪ್ಪುತಕಡಿ, ಹತ್ತಿದ ಬೆತ್ತಲೆ ಕುದುರಿ. ಗಂಡ ಮಾದೇವರಾಯ ಹತ್ತಿದ ಬೆತ್ತಲೆ ಕುದುರಿ, ಶುದ್ಧ ಬೆಪ್ಪು ತಕಡಿ. ಶಂಕರಯ್ಯನ ಧರ್ಮಸೂಕ್ಷ್ಮವೆಲ್ಲ ಹುಟ್ಟುಗುರುಡಿನ ವಿಕಾರ. ಇಲ್ಲದಿದ್ದರೆ ಕವಳಪಟ್ಟ ಕತ್ತರಿಸಿ ತೇಗುತ್ತಿದ್ದರು. ಹಾ ಸುಖವೇ ಎಂದು ಹೊಟ್ಟೆಮೇಲೆ ಕೈಯಾಡಿಸುತ್ತಿದ್ದರು. ಯಾಕೆ ಈಗಲೂ ಅಯ್ಯೊ



ಅನಿಷ್ಟದ ಬಾಳೇ ಎಂದು ಗೊಣಗುತ್ತ ಸುಖವಾಗಿ ತೇಗುತ್ತಾರೆ. ಹಲಸಿನ ಹಣ್ಣಿನ ಮುಳಕ ಎಂದರೆ ಅವರಿಗೆ ಪ್ರಾಣ. ಅದರ ವಾಸನೆ ಮೂಗಿಗೆ ಹೊಡೆದರೆ ಸಾಕು ಎಲ್ಲ ಮರೆತುಹೋಗುತ್ತೆ. ಎಲ್ಲವುದಕ್ಕೂ ಈ ದೇಹ ಮೂಲ. ಎಲ್ಲ ಕೊಳಕು – ಅಸಹ್ಯ, ಮುತ್ತು ಕೊಡುವುದೊಂದು ಚೆಂದ, ನಿಗರಿರುವ ಮೊಲೆಯ ತೊಟ್ಟನ್ನು ಮಿಡಿಯುವುದೊಂದು ಚೆಂದ, ಎಲ್ಲ ಮುಗಿದ ಮೇಲೆ ಆ ಎಸೆದ ಬಟ್ಟೆಗಳನ್ನು ತೊಟ್ಟುಕೊಳ್ಳುವುದು? ಅದೂ ಒಂದು ಚೆಂದ ಅಲ್ಲವೆ? ಇದಕ್ಕಾಗಿ ಪಾಂಡು ಪ್ರಾಣಬಿಟ್ಟನಂತೆ. ಕೆಂಪು ಬಣ್ಣದ ಮೀಸೆ ಹುಟ್ಟದ ಹುಡುಗರು ಇರಲಿಲ್ಲವೇ, ಅಯ್ಯೊ ಪಾಂಡು, ಎಂದರು ಹಾಸ್ಟೆಲಲ್ಲಿ ಹುಡುಗರು. ಊಟವಿಲ್ಲದಿದ್ದರೆ ಫಳಾರ. ರಂಗನಿಗೆ ಊಟವೇ ಆಗಬೇಕಂತೆ ಮುಟ್ಠಾಳ ಎಂದರು ಹುಡುಗರು. ಇಸ್ಪೀಟಾಡುತ್ತ, ಸಿಗರೇಟು ಸೇದುತ್ತ, ಜೋಕುಗಳೆಲ್ಲ ಇಂಗ್ಲೀಷ್ ಭಾಷೆಯಲ್ಲಿ. ಅಮ್ಮನ ಭಾಷೆಯಲ್ಲಿ ಶಬ್ದಗಳು ಅಶ್ಲೀಲವಾಗಿ ಕಾಣುತ್ತವೆ. ನಕ್ಕರು, ಸಿನಿಕರು. ಸಿನಿಕರು ಎಂದರೆ ನಮಗೆ ಇಷ್ಟವಿಲ್ಲದ ಭಯ ಹುಟ್ಟಿಸುವ ಸತ್ಯವನ್ನು ಹೇಳುವವರು. ಎಣ್ಣೆ ಎಣ್ಣೆ ನಕ್ಕರು. ನಾನೂ ನಕ್ಕೆ. ಗಮ್ಮತ್ತೋ ಗಮ್ಮತ್ತು. ಯಾವುದೂ ಟ್ರಾಜೆಡಿಯಲ್ಲ. ನಾನು ಮಾಡಿದ್ದೆಲ್ಲವನ್ನೂ ದೊಡ್ಡದೊಂದು ಜೋಕು ಮಾಡಿಬಿಡಬಹುದು. ಮುಂದೇನು ಮಾಡುವುದು ಗೊತ್ತಾಗದೆ ಹೊಳೆಗೆ ಬೀಳಿಸುತ್ತಿದ್ದೆ, ಮತ್ತೆ ಎತ್ತಿ ತರುತ್ತಿದ್ದೆ – ನನ್ನ ರಾಜ, ನನ್ನ ರಾಣಿ, ತಿರುಗಿ ತಿರುಗಿ ಅದೇ – ಚಡ್ಡಿ ಬಿಚ್ಚುವುದು ಭವ್ಯ ಕೆಲಸವೆಂದು ಉಪನ್ಯಾಸಕೊಡಲು ಪ್ರಾರಂಭಿಸಿದೆ. 'ನಗಿರೋ ಮಕ್ಕಳ ನಕ್ಕುಬಿಡಿ'. ಟ್ರಾಜಿಡಿಯಲ್ಲ – ದೊಡ್ಡ ಜೋಕು. ಹಲಸಿನ ಹಣ್ಣಿನ ಮುಳಕ. ಘಮ ಘಮಾಡಿಸ್ತಾದ ಮುಳಕ, ಏ ಮುದುಕ ನೀನೊಬ್ಬ ದೊಡ್ಡ ಪುಳಕ. ದೊಡ್ಡದೊಂದು ತೇಗು. ಉಬ್ಬಿಕೊಂಡ ಶಂಕರಯ್ಯ. ಕಕ್ಕಸಕ್ಕೆ ದಿನಕ್ಕಿಪ್ಪತ್ತು ಸಾರಿ ಕರೆದುಕೊಂಡು ಹೋಗಲು ಶಾರದೆಯಿಲ್ಲದಿದ್ದರೆ ಹೇಗೆ ? ಸ್ವಾರ್ಥತ್ಯಾಗ ದೊಡ್ಡದಪ್ಪ ದೊಡ್ಡದು. ಮದುವೆಯಾಗಲು ಪುರಸತ್ತೆಲ್ಲಿ ಹುಡುಗಿಗೆ ? ಹಲಸಿನ ಹಣ್ಣಿನ ಮುಳಕವೇ ನನ್ನ ಪರಮ ವೈರಿ. ಮೈಸೂರಲ್ಲಿ ಅದು ಸಿಕ್ಕಲ್ಲ – ಶಂಕರಯ್ಯ ಬರಲ್ಲ. ಸಾಯಲಿ – ನಾನೂ ಸಾಯಲಿ – ಶಾರದೆಯೂ ಸಾಯಲಿ – ಆದರೆ ಎಲ್ಲ ನಾಶವಾದ ಮೇಲೂ ಈ ಬೆಳದಿಂಗಳೊಂದು ಹೀಗೆಯೇ ಹಲ್ಲುಕಿರಿಯುತ್ತಿರುತ್ತದೆ. ಆಕಾಶದಲ್ಲಿರುವ ಅಯ್ಯನಿಗೆ ಗಂಟೆಗಂಟೆಗಳ ಧಾತುಸ್ಖಲನ ಸುಖ ದೊರೆಯುತ್ತದೆಂದು ಕಾಣುತ್ತೆ. ನಾಲ್ಕು ನಿಮಿಷಕ್ಕೆ ಮುಗಿಯುವುದಿಲ್ಲ ಅವನಿಗೆ. ಯಾವಾಗಲೂ ನಿಗರಿಯೇ ಇರುತ್ತೆ ಅವನ ಸೃಷ್ಟಿಯ ಪತಾಕೆ. ಹುಳ, ಹುಪ್ಪಟೆ, ಹೋರಿ, ಹಾವು, ಗೊಜಮೊಟ್ಟೆ ಸಿಕ್ಕ ಕಡೆಯೆಲ್ಲ ಬೀಜ ಬಿತ್ತುತ್ತಾನೆ. ಅತಿ ಕಾಮಿ.

ಅದಕ್ಕೇ ನಮಗೂ ಅಷ್ಟು ಕ್ಷಣದ ಆಸೆ ತೋರಿಸಿ ಮಜಾ ನೋಡುತ್ತಾನೆ ಅವ – ಪುರಾತನದವ – ಸನಾತನದವ – ಲಕ್ಷ್ಮೀವಲ್ಲಭ. ನಾನು ಸತ್ತರೇನು ಬೆಳದಿಂಗಳು ಹಲ್ಲು ಕಿರಿಯುತ್ತಲೇ ಇರುತ್ತದೆ. ದೇವ ಧಾತು, ಎಷ್ಟು ಬೆಳ್ಳಗೆ...

ರಂಗ ಜಿಗ್ಗು, ಕಟ್ಟಿಗೆ, ದರಗು ರಾಶಿ ಹಾಕಿ ಬೆಂಕಿ ಹೊತ್ತಿಸಿದ. ಕುಕ್ಕುರು ಮಂಡಿಯಲ್ಲಿ ಕೂತ. ದೊಡ್ಡದೊಂದು ಜೋಕು ಯೋಚಿಸು. ಆತ್ಮಶ್ರಾದ್ಧವನ್ನು ಮಾಡಿಕೊಳ್ಳುತ್ತಾರಂತೆ ಅಲ್ಲವೆ. ಅಗ್ನಿದಿವ್ಯ ಇನ್ನು ನನಗೆ. ಅಕ್ಕನಂತೆ ಶಾರದೆ ಕೆರೆಗೆ ಹಾರಲಿ, ಅವಳಿಗೆ ಜಲದಿವ್ಯ. ಕೆರೆಯಲ್ಲಿ ನೀರು ಬರಲೆಂದು ಹೆಂಗಸನ್ನು ಬಲಿಕೊಡುತ್ತಾರಂತೆ. ಗರ್ಭಿಣಿ ಹೆಂಗಸು. ಹೊಳೆಗೆ ಬೀಳಿಸುತ್ತಿದ್ದೆ, ಮತ್ತೆ ಎತ್ತಿ ತರುತ್ತಿದ್ದೆ – ಸಿನಿಮ ನಾಯಕನ ಹಾಗೆ. ಶಾರದೆಗೆ ಜಲದಿವ್ಯ. ನನಗೆ ಅಗ್ನಿದಿವ್ಯ. ದೊಡ್ಡದೊಂದು ಜೋಕು ಯೋಚಿಸು. ಈ ಕಟ್ಟಿಗೆಯ ಚೂರು ನಾನು ; ಇದು ಶಾರದೆ ; ಇದು ಶಂಕರಯ್ಯ ; ಎಲ್ಲ ಸುಟ್ಟುಹೋಗಲಿ. ಕೆಟ್ಟು ಹೋಗಲಿ. ಬೆಂಕಿಗೆ ಮೂರು ಸಲ ಅಪ್ರದಕ್ಷಿಣೆ ಬರಬೇಕು. ಜೊತೆಗೆ ಒಂದು ದೆಯ್ಯದ ಹಾಡು. ಎಂಕುದೀಕನ, ನಿಕ್ಕುದೀಕನ, ಎಂಕುದೀಕನ ನಿಕ್ಕುನೀಕನ, ಒಂದು ಸುತ್ತು, ಮತ್ತೆ ಒಂದು ಸುತ್ತು, ಮತ್ತೆ ಒಂದು ಸುತ್ತು, ಎಂಕುದೀಕನ, ನಿಕ್ಕುದೀಕನ, ಎಂಕುದೀಕನ, ನಿಕ್ಕು Shall I at least set my lands in order ? ಎಲ್ಲ ಬರಿ ಮಾತು. ನಾವು ಆಡುವ ಮಾತುಗಳನ್ನೆಲ್ಲ ನೀಟಾಗಿ ಅಚ್ಚುಹಾಕಿಸಿ ಬೆಂಕಿಗೆ ಹಾಕಿದರೆ ನಾನು ಸತ್ತಂತೆ, ಆಡುವ ಮಾತುಗಳನ್ನೆಲ್ಲ ನೀಟಾಗಿ ಅಚ್ಚುಹಾಕಿಸಿ ಬೆಂಕಿಗೆ ಹಾಕಿದರೆ ನಾನು ಸತ್ತಂತೆ, ಶಾರದೆ ಸತ್ತಂತೆ, ಶಂ...ಶಂಕರಯ್ಯ ಸಾಯುವುದೇ ಇಲ್ಲ. ಬೆಂಕಿಯಿಡಬೇಕು, ಎಲ್ಲ ಬೆಂಕಿಯಿಡಬೇಕು. ಉಚ್ಚಿಕೊಂಡ ಶಂಕರಯ್ಯ, ಬಾಚಿದಳು ಶಾರದೆ, ರಂಗ ಲಬೊ ಲಬೊ ಒದ್ದುಕೊಂಡ. ಕೌಲಿಯ ಗಬ್ಬದ ಹೊಟ್ಟೆಯಲ್ಲಿ ಹುಲಿಯುಗುರು ಕಂತಲಿ, ಸರ್ವನಾಶವಾಗಲಿ. ಎಕ್ಕುದೀಕನ, ನಿಕ್ಕುದೀಕನ ಎಂಕು...ಥತ್ ಮರೆಯುವುದೇ ಇಲ್ಲ... ಸತ್ತೆಲ್ಲ ಬಂದನೊಬ್ಬ ಬೆಪ್ಪು ತಕಡಿ, ನಿದ್ರಿಸಿದ ರಾಜಕುಮಾರಿ, ಹತ್ತಿದ ಬೆತ್ತಲೆ, ಎಂಕುದೀ, ನಿಕ್ಕುನೀ, ಎಕ್ಕುದೀ, ನಿಕ್ಕುದೀ,

* * * * *

ದೂರದಿಂದ ಹುಲಿಯಬ್ಬರ ಕೇಳಿಸಲು ದೇವರೇ ಎಂದು ಎದ್ದ. ನನ್ನ ಶಾರದೆಯೆಲ್ಲಿ ದೇವರೇ ಎಂದು ಸುತ್ತು ಮುತ್ತಲೂ ನೋಡಿದ. ಅಯ್ಯೋ ಕೆರೆಗೆ ಹಾರಿದಳು ಎಂದು ಎನ್ನಿಸಿ ಓಡಿದ.

* * * * *



‘ಇದು ಶಾರದೆ’ ಎಂದು ಎಸೆದ ಬಡತಿಗೆಯಷ್ಟು ಉದ್ದವಾದ ಮಾವಿನಕೊಂಬೆ ಉರಿಯುತ್ತಿತ್ತು. ಬೆಂಕಿಯ ಎದಿರು ಹೊತ್ತುಕೊಂಡು ಬಂದ ಶಾರದೆಯನ್ನು ಮಲಗಿಸಿದವನು, ‘ಅನಿಷ್ಟದ ಯೋಚನೆ’ ಎಂದು ಆ ಕಟ್ಟಿಗೆ ಚೂರನ್ನು ಬೆಂಕಿಯಿದ ಎಸೆದ. ಕಾಲು ಜಾರಿ ಬಿದ್ದಳೆ, ಬೇಕೆಂದು ಬಿದ್ದಳೆ, ನನ್ನ ದುಷ್ಟ ಯೋಚನೆ ಇವಳನ್ನು ಕೆಳಗೆ ದಬ್ಬಿತೆ. ಏನೂ ತಿಳಿಯದೆ ರಂಗ ಏದುತ್ತ, ಒದ್ದೆಯಾದ ಅವಳ ಬಟ್ಟೆಗಳನ್ನು ಬಿಚ್ಚಿದ. ಈಜಿ ಅವಳನ್ನು ಮೇಲಕ್ಕೆ ತರಲು ಕೆರೆಗೆ ಹಾರಿದಾಗ ನೀರಿನಲ್ಲಿ ಒದ್ದಾಡುತ್ತಿದ್ದಳು. ಆದ್ದರಿಂದ ಪ್ರಾಣ ಹೋಗಲಿಕ್ಕಿಲ್ಲವೆಂದು ಮನಸ್ಸು ಧೈರ್ಯ ಹೇಳಿತು. “ಅಯ್ಯೊ ನನ್ನ ಶಾರದ... ಅದು ಯಾಕೆ ಕೆರೆಗೆ ಬಿದ್ದಿ ಶಾರದ... ನಾನಿರಲಿಲ್ಲವೆ ನಿನಗೆ ಶಾರದ... ಬೇಕೆಂದೆ ಬಿದ್ದಿಯ... ಜಾರಿ ಬಿದ್ದಿಯ....” ಅಸ್ಪಷ್ಟವಾಗಿ ಮಾತಾಡತೊಡಗಿದ. ಯಾರನ್ನು ಕರೆಯಲಿ ಈ ನಿರ್ಜನ ರಾತ್ರಿಯಲ್ಲಿ ಎಂದು ಭಯವಾಯಿತು. ದೂರದಲ್ಲಿ ಹುಲಿಯಬ್ಬರ ಬೇರೆ. ಕೆರೆಗೆ ಹಾರುವಷ್ಟು ಕಂಗಾಲಾದ ಶಾರದೆಯ ಎದುರು ತನ್ನ ಒದ್ದಾಟವೆಲ್ಲ ಸಾಮಾನ್ಯ – ಅಲ್ಪ ಎನ್ನಿಸಿತು. ಬೆತ್ತಲೆಯಾದ ಥಂಡಿ ಹಿಡಿದ ದೇಹವನ್ನು ತಾನು ಹೊದ್ದಿದ್ದ ಟವಲಿನಿಂದ ಒರೆಸಿದೆ. ಬೆಂಕಿಯನ್ನಷ್ಟು ದೊಡ್ಡದು ಮಾಡಿ ಬೆಚ್ಚಗಿನ ಕೈಗಳಿಂದ ಉಜ್ಜತೊಡಗಿದ. ಒಂದು ಹಿಡಿ ಜೀವ, ಒಂದು ತುತ್ತು ಜೀವ, ಎನ್ನದು ಎನ್ನಿಸಿತು. ‘ಶಾರದ, ಶಾರದ ಕಣ್ಣು ಬಿಡು ಶಾರದ, ಹುಲಿ ಅಬ್ಬರಿಸುತ್ತಿದೆ ಶಾರದ. ತಬ್ಬಿಕೊಂಡು ಬೆಚ್ಚನೆ ಮನೆಯಲ್ಲಿ ಮಲಗಿ ಬೆಳಗಿನ ಬಸ್ಸಿಗೆ ಈ ಊರು ಬಿಡೋಣ ಶಾರದ’ ಎಂದ. ತನ್ನ ಒದ್ದೆ ಬಟ್ಟೆಗಳನ್ನು ಎಸೆದು ಶಾರದೆಯನ್ನು ಅವಚಿಕೊಂಡು ಅವಳ ಬೆನ್ನಿನ ಮೇಲೆ ಕೈಯಾಡಿಸುತ್ತ – ಶಾರದಾ, ಶಾರದಾ, ಶಾರದಾ ಎಂದ. ಸುಮ್ಮನೇ ಅವಳ ಹೆಸರು ಹೇಳುತ್ತ ಅವಳ ಮೈಯುಜ್ಜಿದರೆ ಬದುಕಿ ತನ್ನವಳಾಗುವಳೆಂದು ಅವನ ಮನಸ್ಸು ಹಂಬಲಿಸಿತು. ಗಣಪತಿ, ನನ್ನ ಶಾರದೆ ಬದುಕಲಿ, ನನ್ನ ಆಯುಷ್ಯದಲ್ಲಿ ಅರ್ಧ ಕೊಡುತ್ತೇನೆ, ಶಾರದ ಬದುಕಲಿ. ಶಾರದಾ ಮೆಲ್ಲನೆ ಉಸಿರಾಡತೊಡಗಿದಳು. ರಂಗನಿಗೆ ಹಾಯೆನ್ನಿಸಿತು. ಇವಳೊಂದು ಬದುಕಿಬಿಟ್ಟರೆ ದೇವರೇ ಸಾಕು. ತುಂಬ ತುಂಬ ಪ್ರೀತಿ, ಸುಖ ಎನ್ನಿಸಿತು ಒಳಗೆ. ಒಂದಿಷ್ಟು ಮೃದು, ಒಂದಿಷ್ಟು ಪ್ರೀತಿ, ‘ಇಕೊ ನಾನು ಗಂಡಸು ನಿನ್ನ ಕಷ್ಟವೆಲ್ಲ ನನಗೆ ಕೊಡು’ ಎನ್ನುವ ತಿಳುವಳಿಕೆ, ಸ್ವಲ್ಪ ವಿವೇಕ ಇಲ್ಲದೆ ಎಷ್ಟೆಲ್ಲ ರಂಪಮಾಡಿಬಿಟ್ಟೆ ಎಂದು ಹೇಸಿಗೆಯಾಯಿತು. ಅಗ್ನಿದಿವ್ಯ, ಜಲದಿವ್ಯ, ಕೇಳುತ್ತ ಕೇಳುತ್ತ ಏನನ್ನ ಕೇಳಿದೆ ದೇವರೇ ಶಾರದೆ ಬದುಕಲಿ ಎಂದು ಪ್ರಾರ್ಥಿಸಿದ. ಬಲಗಡೆಗಿದ್ದ ನವಿಲುಗುಡ್ಡದ ತಪ್ಪಲಿನಿಂದ ಮತ್ತೆ ಹುಲಿಯಬ್ಬರ ಕೇಳಿಸಲು, ಕ್ಷೇಮವಾಗಿ ಮನೆ

ತಲಪುವುದು ಅತ್ಯಂತ ಅವಶ್ಯವಾದ, ಕೂಡಲೆ ಮಾಡ ಬೇಕಾದ ಕೆಲಸ ಎನ್ನಿಸಿತು. ಸಾವಿನ ಹತ್ತಿರ ಹತ್ತಿರದವರೆಗೂ ಹೋಗಿ ಪ್ರೀತಿಸುವುದನ್ನ ಕಲಿಯಬೇಕಾಯಿತೆ, ಅಯ್ಯೊ ಮನುಷ್ಯ ಜೀವವೇ, ಹುಳದ ಹಾಗೆ ಒದ್ದಾಡುತ್ತದಲ್ಲ ಇದು, ಅಯ್ಯೊ. ಪಾಪವೇ, – ಶಾರದೆಯ ಒದ್ದೆ ಕೂದಲನ್ನು ಹಿಂಡಿ ಅವಳ ಕಡೆ ಪ್ರಾಣ ಕೊಡುವಷ್ಟು ಮೃದುವಾಗಿ ನೋಡಿದ. ಇಲ್ಲ ಇವಳು ಜಾರಿ ಬೀಳಲಿಲ್ಲ, ಬೇಕೆಂದು ಕೆರೆಗೆ ಬಿದ್ದಳು, ಹುಚ್ಚು ಹುಡುಗಿ, ಸತ್ತು ಬಿಡಬೇಕೆಂದು ಕ್ಷಣ ಎನ್ನಿಸಿ ಹಾರಿಬಿಟ್ಟಳು. ನನಗೆ ಯಾರು ಇಲ್ಲ ಎಂದು ನಿಸ್ಸಹಾಯಳಾದಳು, ಅಬಲೆ, ಹುಚ್ಚು ಹುಡುಗಿ, ಮುದ್ದಿನ ಹುಡುಗಿ, ನನ್ನವಳು – ಅಳಬೇಕೆನಿಸಿತು, ನಗಬೇಕೆನಿಸಿತು. ಈಗ ತಾನೇ ಬಾಯಿ ಬಂದ ಮಗುವಿನಂತೆ ಪೊಟ್ಟು ಪೊಟ್ಟಾಗಿ ಮಾತಾಡಬೇಕೆನಿಸಿತು – ನನ್ನ ಕೂಸೇ, ನನ್ನ ಮುದ್ದೇ, ನನ್ನ ಪ್ರಾಣವೇ, – ಸಾವಿರ ಮಾತು ಗಂಟಲಲ್ಲಿ. ಪ್ರೀತಿಯ ಎದುರು ಎಲ್ಲ ಎಷ್ಟು ಕ್ಷುಲ್ಲಕ, ಸಾಮಾನ್ಯ ಹುಲ್ಲು ಕಡ್ಡಿಯಾಗಿಬಿಟ್ಟಿತು. ನನ್ನ ಕೂಸೇ... ಕಾಡುಬೆಕ್ಕಿನಿಂದ ತಪ್ಪಿಸಿಕೊಂಡ ಟಿಂ ಹಕ್ಕಿಯೊಂದು ಗಿಡ ಬಿಟ್ಟು ಹಾರಿ, ಮದ ತಲೆಗೇರಿ ಸುತ್ತಿ ಚಿಮ್ಮಿ ಚೀರಿತು. ಪಕ್ವವಾದ ಜೀರಕನ ರಸ ಒಸರುವ ಹಣ್ಣು ತನ್ನ ಭಾರಕ್ಕೆ ತೊಟ್ಟು ಸಡಲಿ ನೆಲದ ಹಸಿವಿನ ಕಪ್ಪು ಮಣ್ಣಿನ ಸಾರಕ್ಕೆ ಬಿತ್ತು. ತಾನು ಹಾಕಿದ ಕರುವಿನ ಮೈ ನೆಕ್ಕುತ್ತ ಮೊಟ್ಟುಗಳ ಸಂದಿ ನಿಂತಿದ್ದ ಕೌಲಿ ಹುಲಿಯ ಕೂಗಿಗೆ ಹೆದರಿ, ಬೆಂಕಿಯನ್ನು ನೋಡಿ ಯಾರೋ ಮನುಷ್ಯರಿರಬಹುದೆಂದು ಆಸೆಯಿಂದ 'ಅಂಬಾ, ಅಂಬಾ' ಎಂದಿತು. ತನ್ನ ಕರುವನ್ನು ಬಿಟ್ಟು ಹೋಗಲಾರದೆ ಗಟ್ಟಿಯಾಗಿ ಕರೆಯತೊಡಗಿತು.

ಕಾಲಿನ ಮೇಲೆ ನಿಲ್ಲಲು ಯತ್ನಿಸುತ್ತ ಮೊಲೆಯುಣ್ಣುವ ಕರು. ಕೆಳಗೆ ಚೆಲ್ಲಿದ ರಕ್ತ, ಕಸ, ಬಾಣಂತಿ ಮನೆಯ ಬೆಚ್ಚನೆ ವಾಸನೆ, ನಿಗರಿದ ಕಿವಿ – ಬೆಳದಿಂಗಳಲ್ಲಿ. ದೂರದಿಂದ ಹುಲಿಯಬ್ಬರ. ಕಾಡಿಗೆ ಉರುಳು ಹಾಕುವಂತಹ ಗರ್ಜನೆ.

ಇಲ್ಲಿಗೆ ನುಗ್ಗ ಬಂದರೆ ಬೆಂಕಿಯನ್ನು ಕಂಡು ಹೆದರಬಹುದು. ಹುಲಿಗಳಿಗೆ ಬೆಂಕಿಯೆಂದರೆ ಹೆದರಿಕೆ ! ರಂಗನಿಗೆ ಗಟ್ಟಿಯಾಗಿ ಮಾತಾಡಬೇಕೆನ್ನಿಸಿತು.

"ಶಾರದ ಶಾರದ, ಇಕೊ ಹುಲಿ ಅಬ್ಬರಿಸುತ್ತಲೆ ಇದೆ ಶಾರದ. ಕಣ್ಣು ಬಿಡೆ ಶಾರದ " – ಕಿವಿಯನ್ನು ಮೃದುವಾಗಿ ತುಟಿಗಳಿಂದ ಉಜ್ಜುತ್ತ ಹೇಳಿದ. "ಕೇಳಿದಿಯಾ ಶಾರದ, ಕೌಲಿ ಆ ಮೊಟ್ಟಿನಿಂದ ಕರೆಯುತಿದ್ದೆ . ಸಾಯುವುದು ಬೇಡ ಶಾರದ ಕಣ್ಣು ಬಿಡು".

ಕಾಡೆಲ್ಲ ಒಂದು ಕ್ಷಣ ಸ್ತಬ್ಧವಾಗಲು ಹುಲಿಯ ಕೂಗಿಗೆ ಕಂಗಾಲಾಗಿದ್ದ ಕೌಲಿ ತಾನು ಹಾಕಿದ ಕಸವನ್ನು ತಿನ್ನಲು ಮರೆತು ಮತ್ತೆ 'ಅಂಬಾ' ಎಂದು ಕೂಗಿತು. ಮೊಲೆಯುಣ್ಣುತ್ತಿದ್ದ ಕರುವಿನ ಕಡೆ ಅತಿ ಕಷ್ಟದಿಂದ ಕತ್ತುಬಗ್ಗಿಸಿ ಕರುವಿನ ಕಾಲಿನ ಸಂದಿ ನೆಕ್ಕತೊಡಗಿತು. ಶಾರದೆಯನ್ನು ಎತ್ತಿ ರಂಗ ತೊಡೆಯ ಮೇಲಿಟ್ಟುಕೊಂಡ. 'ಅಯ್ಯೊ' ಎಂದು ಅವಳ ಎದೆಯನ್ನು ತನ್ನ ಎದೆಗೆ ಒತ್ತಿಕೊಂಡ. ಹೊಟ್ಟೆಯೊತ್ತಿ ನೋಡಿದ. ಹೆಚ್ಚು ನೀರು ಕುಡಿದಿರಲಿಲ್ಲ. ದಣಿವು, ಸಂಕಟ, ಪಾಪ. ಬೆಚ್ಚಗೆ ಹೊದ್ದು ಇವಳನ್ನಪ್ಪಿ ಮಲಗಬೇಕು. ನಿದ್ದೆ ಮಾಡಬೇಕು.

* * * * *

ಶಾರದೆಯ ಮೈ ರಂಗನ ಮೈಯೊತ್ತಿನಿಂದ, ಪಕ್ಕದಲ್ಲಿ ಉರಿಯುತ್ತಿದ್ದ ಬೆಂಕಿಯಿಂದ ಬೆಚ್ಚಗಾಯಿತು. ಮೆಲ್ಲನೆ ಕಣ್ಣು ತೆರೆದು, ರಂಗನನ್ನು ಗಟ್ಟಿಯಾಗಿ ಏನನ್ನೊ ನೆನಸಿಕೊಳ್ಳುವಂತೆ ಹಿಡಿದು ನೋಡಿದಳು. ಆಳವಾಗಿ ನಿಟ್ಟುಸಿರಿಟ್ಟು

"ನೀವು ಇಲ್ಲೇ ಇದ್ದು ನನ್ನ ಯಾಕೆ...? ?" ರಂಗನನ್ನು ಬಲವಾಗಿ ತಬ್ಬಿಕೊಂಡಳು. ಕಾಡಿನಲ್ಲೆಲ್ಲೊ ಸರಸರ ಶಬ್ದವಾಗಲು ರಂಗ ಬೆಚ್ಚಿದ.

"ನಿನ್ನ ದಮ್ಮಯ್ಯ. ಯಾಕೆ ಶಾರದ ? ಆ ಪ್ರಶ್ನೆ ಈಗ ಬೇಡ ಶಾರದ. ನಿನ್ನ ದಮ್ಮಯ್ಯ."

ಬಾಯಿಯ ಮೇಲೆ ಮುತ್ತಿಟ್ಟು ರಂಗ ಎದ್ದು ನಿಂತ.

ಕೌಲಿಗೆ 'ಕಟ್ಟುಬಾಯ್ ಕಟ್ಟುಬಾಯ್' ಎಂದು ಕೂಗಿದ.

* * * * *

ಬಚ್ಚಲಿಗೆ ಹೋಗುವಾಗ ತೆಗೆದಿಟ್ಟ ರುದ್ರಾಕ್ಷಿಸರವೆಲ್ಲಿ ಎಂದು ಹುಡುಕುತ್ತ, ಏನೋ ಭಯವಾಗಿ, ಸಂಕಟವಾಗಿ ಶಂಕರಯ್ಯ ಕೈಯಾಡಿಸಿ ತಿಜೋರಿಯ ಬಳಿಯಿದ್ದ ಸರವನ್ನು ಎತ್ತಿಕೊಂಡರು.

ಮನೆಯನ್ನು ಆವರಿಸಿದ್ದ ಮೌನದಲ್ಲಿ ಥಟ್ಟನೆ ದೂರದಲ್ಲಿ ಹುಲಿಯ ಅಬ್ಬರ ! ಮತ್ತೆ ಒಳಕ್ಕೆ ನುಗ್ಗಿ ಬರುವ ನಿಶ್ಶಬ್ದ,

ಆ ನಿಶ್ಶಬ್ದದಲ್ಲಿ ಗಡಿಯಾರದ ಟಿಕ್ – ಟಿಕ್, ಟಿಕ್ – ಟಿಕ್.

ಕುರುಡುಗಣ್ಣಿನ ರೆಪ್ಪೆಗಳಿಂದ ಕತ್ತಲನ್ನು ವ್ಯರ್ಥ ಬಡಿಯತೊಡಗಿದರು.

ಕೊಟ್ಟಿಗೆಯ ಹತ್ತಿರ ನಿಂತು ಕೌಲಿ 'ಅಂಬಾ' ಎಂದಿತು... ಅಪ್ಪ ಅಮ್ಮ ಎಂದರು...

ಉಣಗೋಲು ದಾಟಿ ಹತ್ತಿರ ಹತ್ತಿರವಾಗುತ್ತಿದ್ದ ಹೆಜ್ಜೆಸಪ್ಪಳ ಕೇಳಿಸಲು 'ನಾರಾಯಣ, ನಾರಾಯಣ' ಎಂದರು.

೨೪–೯–೬೦

## ಕಾರ್ತೀಕ

ಬರೆಯಲೇಬೇಕು ಎಂದುಕೊಂಡ ರಾಘವ. ತೊಡಗಿದ ಮೇಲೆ ಮಾಡಿ ಮುಗಿಸಬಹುದು ; ಆದರೆ ತೊಡಗುವುದಕ್ಕೆ ಮುಂಚೆ ಉದಾಸೀನ. ಉದಾಸೀನವಲ್ಲ – ಭಯ. ಎಷ್ಟೊಂದಕ್ಕೆ ಒಳಗಾಗಿ, ಒಳಗೊಂಡು,

ಒಡಲನೂಲಿನಿಂದ ನೇಯುವಂತೆ

ಟೀ ತರಲೆ ಎಂದಳು ಒಳಗಿನಿಂದ ಛಾಯ. ಟೀ ಕುಡಿದು ಬರೆಯುವುದು,

ಅಮ್ಮ. ಮತ್ತು ರಾಗಜ್ಜ. ಮತ್ತು ನಾನು. ಮತ್ತು ಛಾಯ.

ಹೊಗೆಸೊಪ್ಪು ತಿಕ್ಕುತ್ತ ಕೂತ ರಾಗಜ್ಜ ಅರ್ಧ ರಾಜ್ಯ ಕೊಡ್ತೇನೆ, ಬೆನ್ನು ತುರಿಸೋ ಅಪ್ಪು ಎಂದರೆ ಒಳಗಿನಿಂದ ಅಮ್ಮನ ಗದರಿಕೆ – ಓದಿಕೊಳ್ಳಬಾರ್ದ ? ಮನೆಗೆ ಹಿರಿಯರೆಂದವರೇ ಹಾದಿ ಹಾಕಿಕೊಟ್ಟ ಮೇಲೆ...

ಸ್ಲೇಟನ್ನು ಒರೆಸಲು ನೀರೋಟೆ ಬೇರು, ಬಳಪ ಸಿಕ್ಕಿಸಲು ವಾಟೆ, ಚನ್ನೆಮಣೆಗೆ ಹಾಲವಾಣದ ಕಾಳು, ಪೆಟ್ಲಿಗೆ ಗಜ ಒದಗಿಸುತ್ತಿದ್ದವರು ರಾಗಜ್ಜ. ಅಗಸೆಮರ ಅಗಸ್ತ್ಯ ಋಷಿಗಳದ್ದು ಎಂದಿದ್ದರು. ಆರೇಳು ವರ್ಷವಿರಬೇಕು ತನಗೆ. ಮಗ್ಗಿ ಬರೆಯುತ್ತ ಕೂರುವುದೆಂದರೆ ಬೇಜಾರು. ಅಪ್ಪನ ಕಣ್ಣು ತಪ್ಪಿದರೆ ಸ್ಲೇಟನ್ನು ಬಿಸಾಕಿ ಅಂಗಳದಲ್ಲಿ ಚಿಮ್ಮುವ ಎಳೆಗರುವಿನ ಬಾಲ ಹಿಡಿದೆಳೆಯುವುದು; ಅದರ ಕೊರಳಿಗೆ ಕೈಯುಜ್ಜಿ ಉಪ್ಪುಪ್ಪು ಎಂದು ಉಪ್ಪು ತೆಗೆದುಕೊಳ್ಳುವುದು ; ತಲೆಗೆ ಢಿಕ್ಕಿ ಢಿಕ್ಕಿ ಮಾಡಿ ಹಾಯಿಸಲು ಕಲಿಸುವುದು. ಇಲ್ಲವೇ ಒಬ್ಬನೇ ಚನ್ನೆಮಣೆಯಾಡುತ್ತ ಕೂರುತ್ತಿದ್ದೆ. ರಾಗಜ್ಜ ಬಿಸಿಲಿನಲ್ಲಿ ಕೂತು ಹದ್ದಿನ ಗರಿಯಿಂದ ನನಗೊಂದು ಲೇಖನಿ ಮಾಡುವುದನ್ನು ಮಗ್ನನಾಗಿ ನೋಡುವ ಬಾಲತನ ನೆನಪಾಗುತ್ತದೆ.

ಟೀ ತಂದು ಛಾಯ ಆರುವುದಕ್ಕೆ ಮುಂಚೆ ಕುಡೀರಿ ಎದು ಎದುರು ಕೂತಳು. ರಾಘವ ಪೆನ್ನನ್ನು ಮೇಜಿನ ಮೇಲಿಟ್ಟು ಕಣ್ಣೆತ್ತಿದ. ಬಿಳಿ ಮೈಮೇಲೆ ಕೆಂಪು ಹೂಗಳಿರುವ ಸೀರೆ, ಒಪ್ಪುವ ಕೆಂಪು ಚೌಕುಳಿಯ ಕುಪ್ಪುಸ, ತಲೆಗೊಂದು ಕೆಂಪು ಗುಲಾಬಿ – ಬೊಗಸೆ ಕಣ್ಣುಗಳಲ್ಲಿ ಬಯಕೆ. ಹೆರಳನ್ನೆತ್ತಿ ಎದೆಯ ಮೇಲೆ ಇಳಿಬಿಟ್ಟಳು. ಇವನು ಸದಾ ತನ್ನನ್ನು ರಮಿಸುತ್ತಿರಬೇಕು ಎನ್ನುವ ಪ್ರೀತಿಯ



ನಿಷ್ಠುರ ಜುಲುಮೆ ಈಗ ಬೇಕೆನ್ನಿಸಲಿಲ್ಲ. ಮೂತಿಯನ್ನು ಅಲ್ಲಾಡಿಸಿ ಹಂಗಿಸಿದಳು. ರೇಗಿತು. ಇನ್ನೊಂದು ಸಾರಿ "ಆರೋದಕ್ಕೆ ಮುಂಚೆ ಕುಡೀರಿ. ಏನು ಯೋಚನೆ?" ಎಂದಳು. "ಸುಮ್ಮನಿರು, ಬರೀಬೇಕೂಂತ ಕೂತಿದೀನಿ" ಎಂದ. "ರಜದ ದಿನವೂ ನೀವು... ಹೋಗಲಿ ಬಿಡಿ" ಎಂದಳು.

ಎರೆದುಕೊಳ್ಳುವ ಹಬ್ಬದ ಹಿಂದಿನ ದಿನ. ರಾಗಜ್ಜ ಮುಂಡಾಸು ಸುತ್ತಿ ಕೈಯಲ್ಲಿ ಕತ್ತಿ ಹಿಡಿದು ಹೇಳಿದರು :

"ಬಾರೋ ಅಪ್ಪು ಕಾಡಿಗೆ ಹೋಗಿಬರುವ. ಪೆಟ್ಲಿಗೊಂದು ಗಜ ಬೇಕು ಎಂದೆಯಲ್ಲ ಮಾಡಿಕೊಡುವೆ. ಹಂಡೆಗೆ ಕಟ್ಟಲು ಒಂದಷ್ಟು ಹಿಂಡ್ಳಚ್ಚಿ ಬಳ್ಳಿಯನ್ನೂ ತಂದರಾಯಿತು."

ಸ್ಲೇಟನ್ನು ಬಿಸಾಕಿ ಅಮ್ಮನಿಗೆ ಹೇಳಿ ಬರುತ್ತೇನೆ ಎಂದು ಓಡಿದೆ. ಅಮ್ಮ ತುಳಸಿಕಟ್ಟೆಯ ಬುಡದಲ್ಲಿ ಕೂತು ಪಾತ್ರೆ ತೊಳೆಯುತ್ತಿದ್ದ ಅಬ್ಬಕ್ಕನ ಹತ್ತಿರ ಸುಖದುಃಖ ಹೇಳಿಕೊಳ್ಳುತ್ತಿದ್ದಳು. ರಾಗಜ್ಜನ ಜೊತೆ ಹೋಗಲೇ ಅಮ್ಮ ಎಂದು ಮೂರು ಸಾರಿ ಕೇಳಿದ ಮೇಲೆ ಗದರಿಸಿದಳು ;

"ಹೋಗಂತೆ, ಅವರು ಬಂದವರು ಬೆನ್ನು ಬಿಸಿ ಮಾಡ್ತಾರೆ. ಕೂತು ಬರಕೋ ಬಾರದ?"

ಹೊರಗೆ ನಾನು ಹಾಕಿಕೊಂಡು ಬಂದ ಮುಖ ನೋಡಿ ರಾಗಜ್ಜ ಹೇಳಿದರು :

"ನನ್ನ ಮೊಮ್ಮಗನನ್ನು ಕರೆದುಕೊಂಡು ಹೋಗಲು ಸೊಸೆಯ ಅಪ್ಪಣೆ ಬೇರೆ ಕೇಳಬೇಕ ನಾನು ? ನನ್ನ ಮಗನಿಗೆ ಬೇಕಾದರೆ ನಾನು ಹೇಳಿಕೋತೇನೆ, ನಾನಂದ ಹಾಗೆ ಮಾಡು ನೀನು. ತೆಪ್ಪನೆ ನನ್ನ ಜೊತೆ ಬಾ."

ರಾಗಜ್ಜನ ಜೊತೆ ಹೊರಟೆ. ಮೆಟ್ಟಲು ಇಳಿಯುತ್ತ ರಾಗಜ್ಜ, 'ರಾಜನ ಹಾಗೆ ಬದುಕಿದ ನನಗೆ ಈ ಇಳಿವಯಸ್ಸಲ್ಲಿ ಹೆಣ್ಣೊಂದರ ಅಂಕೆಯಲ್ಲಿ ಇರಬೇಕಾಗಿ ಬಂದಿತೆ ಪರಮಾತ್ಮ, ಥತ್' ಎಂದರು. ಉಣುಗೋಲು ದಾಟುತ್ತ ಹಿಂದಕ್ಕೆ ತಿರುಗಿದೆ. ಮುಂಚೆಕಡೆ ಬಾಗಿಲಲ್ಲಿ ಅಮ್ಮ ನಿಂತು ದುರುಗುಟ್ಟಿ ನೋಡುತ್ತಿದ್ದಳು. ಹಿಂದಕ್ಕೆ ಬಾ ಎನ್ನುವಂತೆ ಅವಳು ಮಾಡಿದ ಕೋಪದ ಸನ್ನೆಯನ್ನು ಗಮನಿಸಲಿಲ್ಲವೇನೊ ಎಂಬಂತೆ ಮುಖ ಮಾಡಿ ಮುಂದೆ ನಡೆದೆ.

* * * * *

"ಎಲ್ಲಾದರೂ ತಿರುಗಾಡಿ ಬರೋಣ ಬನ್ನಿ" ಎಂದು ರಾಘವನ ಕೈ ಹಿಡಿದು ಜಗ್ಗುತ್ತ ಛಾಯ ಹೇಳಿದಳು.

“ಬರೀಬೇಕೂಂತ ಕೂತಿದೀನಿ. ಎಲ್ಲ ಸಮಯದಲ್ಲೂ ಹುಡುಗಾಟ ಚೆನ್ನಾಗಿರೋದಿಲ್ಲ ಛಾಯ. ಪ್ಲೀಸ್ " ಎಂದ ರಾಘವ.

“ಹಾಗಾದರೆ ನಾನೊಬ್ಬಳೇ ಎಲ್ಲಾದರೂ ಹೋಗಿ ಬರುತ್ತೇನಪ್ಪ"

ಅವಳ ಧ್ವನಿಯಲ್ಲಿನ ಇಂಗಿತ ತಿಳಿಯಿತು. ರಕ್ತವನ್ನು ಚುರುಕು ಮಾಡುವ ಅವಳ ಆಟದ ಮುನಿಸಿಕೆ ತನಗೀಗ ಬೇಕೆನ್ನಿಸುತ್ತಿಲ್ಲ ಎನ್ನುವುದನ್ನು ಖಂಡಿತವಾಗಿ ಸೂಚಿಸುವಂತೆ ಹೇಳಬೇಕು :

“ಹೋಗು. ನಾನು ಬೇಡಾಂತ ಅಂದೆನೆ?"

ಪ್ರತಿ ನಿಮಿಷದಲ್ಲೂ ಜೀವನಕ್ಕೆ ತೊಡಗಿಸುವ ಅನುರಕ್ತಿಯಲ್ಲಿ, ರತಿಯಲ್ಲಿ ಭೂತದಿಂದ ಬಿಡುಗಡೆ ಎಂದು ತಿಳಿದಿದೇನೆ ಅಲ್ಲವೆ ? ಆದರೆ ಈಗ –

* * * * *

ಬೇಡವೆನ್ನಿಸುತ್ತಿದೆ. ಸ್ವಲ್ಪ ಏಕಾಂಗಿಯಾಗಿದ್ದು ನನ್ನ ಪಾಲಿಗೆ ಬಂದ, ನನಗೆ ವಿಶೇಷವಾದ ಅನುಭವಗಳನ್ನು ಕಣ್ಣು ಬಿಟ್ಟು ನೋಡಬೇಕೆನ್ನಿಸುತ್ತದೆ. ಮುಗಿಯಿತು ಎಂದು ತಿಳಿದದ್ದು ಮರುಕಳಿಸುತ್ತದೆ. ಬದುಕಿದ, ಬದುಕದ ಪ್ರತಿ ಘಳಿಗೆಯೂ ಭೂತವಾಗುವದರಿಂದಲೇ...

ಈಗಿನ ನನ್ನ ಪಾಡಿಗೂ ಜೀವನ ಹಿಡಿದ ಜಾಡಿಗೂ ಅಂದು ನಾನು ಹುಡುಗನಾಗಿದ್ದಾಗ ಅನುಭವಿಸಿದ್ದಕ್ಕೂ ಏನು ಸಂಬಂಧ ಇರಬಹುದೆ ಇಲ್ಲವೆ ಬರೆದು ತಿಳಿಯಬೇಕು. ಕೂಡಿಸಿ, ಜೋಡಿಸಿ,

ಉದಾಹರಣೆಗೆ ನರಸಿಂಹಮಾವ ತಂಗಿಯ ಮನೆಗೆಂದು ಬಂದವನು ಕೇಳುತ್ತಿದ್ದ ಪ್ರಶ್ನೆಗಳು :

“ಅಮ್ಮ ಪಾಪಾನೊ ? ಅಜ್ಜಿ ಪಾಪಾನೊ ?”

ಮಾವನಿಗೆ ಯಾವುದು ಇಷ್ಟವೆಂದು ಭಾವಿಸಿ ಹೇಳುತ್ತಿದ್ದ ಉತ್ತರ.

“ಅಮ್ಮ ಪಾಪ. ಅಜ್ಜಿ ಕೆಟ್ಟ.”

“ನೀನು ಅಮ್ಮನ ಮಗನೋ ? ಅಪ್ಪನ ಮಗನೋ?”

“ಅಮ್ಮನ ಮಗ.”

ಪ್ರಶ್ನೆ ಕೇಳುವಾಗ ಅಮ್ಮನೂ ಎದುರು ಇರುತ್ತಿದ್ದಳು.

“ಅಮ್ಮ ಪಾಪಾನೊ ? ರಾಗಜ್ಜ ಪಾಪಾನೊ ?”

“ಅಮ್ಮ ಪಾಪ. ರಾಗಜ್ಜ...”

ರಾಗಜ್ಜನಿಗೆಲ್ಲಿ ಈ ಉತ್ತರ ಕೇಳಿಸಿತೊ ಎಂದು ಭಯ. ಆರೇಳು ವರ್ಷದ ಹುಡುಗ ಕಳ್ಳನಂತೆ ಅತ್ತಿತ್ತ ನೋಡಿ ಹೇಳುತ್ತಿದ್ದೆ. ದೊಡ್ಡವರ ಪ್ರಪಂಚದಲ್ಲಿ



ನಡೆಯುವುದಕ್ಕೆಲ್ಲ ಬರಿಯ ಸಾಕ್ಷಿಯಲ್ಲದೆ ಪಾಲುದಾರ. ಮುಗ್ಧನನ್ನು ಪ್ರಪಂಚಕ್ಕೆ ನೂಕಿದ ಅನುಭವಗಳು,

ಎಷ್ಟೆಲ್ಲ ? ಮಾರನೆ ದಿನ ಎರೆದುಕೊಳ್ಳುವ ಹಬ್ಬವಾದ್ದರಿಂದ ಹಂಡೆಯ ಕೊರಳಿಗೆ ಕಟ್ಟೆ ಸಿಂಗರಿಸಲು ಹಿಂಡ್ಲಚ್ಚಿಕಾಯಿಯ ಬಳ್ಳಿಬೇಕು. ಕೆಮ್ಮಣ್ಣು ಹಚ್ಚಿ ಹಿಟ್ಟಿನ ರಂಗೋಲೆ ಹಾಕಿದ ಹೊಸಿಲಿನ ಮೇಲೆ ಸಗಣಿಯ ಗುಪ್ಪೆಗಳನ್ನಿಟ್ಟು ದೂರ್ವೆ ನಡಬೇಕು. ಮೇಲೊಂದೊಂದು ಚೆಂಡುಹೂ. ಮತ್ತೆ ದನಗಳ ಕೊಂಬು ಕೊರಳಿಗೆ ಕಟ್ಟಲು ಚೆಂಡುಹೂ. ಜೊತೆಗೆ ಸುರಿದು ಸರ ಮಾಡಿದ ಇನ್ನೊಂದು ತರಹದ ಕೆಂಪು ಕಾಯಿ. ಅದರ ಹೆಸರೇನು ಮರೆತಿದೆ. ಉರು, ಉರುಟು... ಉರುಟಣೆ... ಉರುಟಣೆ ಹೌದೆ ? ಅಲ್ಲ – ಯಾವ ಕಾಯಿಯೊ ? ಒಂದು ಬಟ್ಟಲನ್ನು ತಗೊಳ್ಳೋದು, ಅದರ ಬಾಯನ್ನು ಕೆಮ್ಮಣ್ಣಿನಲ್ಲಿ ಜೇಡಿಯಲ್ಲಿ ಅದ್ದಿ, ಮೈತೊಳೆಸಿ ಶುಭ್ರವಾದ ದನಗಳ ಮೈಮೇಲೆ ಉರುಟುರುಟು ಮುದ್ರಿಸಿ, ಹಂಡುಂಡ ಮಾಡಿ, ಚೆಂಡುಹೂ ಸರದ ಜೊತೆ ಈ ಉರಿ, ಉರುಟು... ಯಾವುದೋ ಕೆಂಪು ಕಾಯಿಯ ಸರವನ್ನು ಕಟ್ಟಿ, ಜಾಗಟೆ ಬಾರಿಸಿ, ಹೋ ಹೋ ಎಂದು ಕೊಟ್ಟಿಗೆಯಿಂದ ಅಟ್ಟಿ ಬೆರೆಸೋದು ; ಇನ್ನೊಬ್ಬರ ಮನೆಯ ದನಗಳ ಕೊರಳಿಂದ ನಾವು ಹರಿದು ತರೋದು. ಗೌಜು, ಗಮ್ಮತ್ತು,

ಇಷ್ಟೇ ಅಲ್ಲ. ಮತ್ತೆಷ್ಟೆಲ್ಲ ಜ್ಞಾಪಕವಾಗುತ್ತದೆ. ನರಸಿಂಹಮಾವ ಸತ್ತದ್ದು.

ಹೇಗೆ ಆಗ ತಾನೇ ನಸಕು ಬೆಳಕಿನಲ್ಲಿ ನಾನು, ಅಪ್ಪ, ಅಮ್ಮ, ರಾಗಜ್ಜ ಎರೆದುಕೊಂಡು ಕೂತಿದೇವೆ ; ಯಾರೋ ಬಂದು ಬಾಗಿಲು ಬಾಗಿಲು ಎಂದು ಬಾಗಿಲು ತಟ್ಟಿದಾಗ, ರಾಗಜ್ಜ ಎದ್ದು ಹೋಗಿ ಬಾಗಿಲು ತೆರೆದರು. ಈ ಸರಿಹೊತ್ತಿನಲ್ಲಿ ಬಂದು ಬಾಗಿಲು ತಟ್ಟುವವರು ಯಾರು ಎಂದು ಅಮ್ಮ ಅಪ್ಪ ಕಿವಿ ನೆಟ್ಟಗೆ ಮಾಡಿ ಗಾಬರಿಯಾಗಿ ಕೂತಾಗ ರಾಗಜ್ಜನ ಬಾಯಿಂದ ನಾರಾಯಣ ಎನ್ನುವ ಮಾತು ಕೇಳಿಸಿ ಅಮ್ಮ ಎದ್ದು ನಿಂತು “ಅಯ್ಯೊ ಏನಾಯಿತು” ಎನ್ನಲು,

ಜೀ ಜೀ ಎಂದು ಶಬ್ದ ಮಾಡುವ ಮೆಟ್ಟನ್ನು ತುಳಿದು ಕೈಯಲ್ಲಿ ಲಾಟೀನು ಹಿಡಿದು ಬಂದ ಇಬ್ಬರು ನರಸಿಂಹಮಾವ ಸನ್ನಿಯಾಗಿ ಸತ್ತ ವಿಷಯ ವರ್ಣಿಸಿದ್ದರು. ಹೆಂಡತಿಯ ಮನೆಗೆ ದೀಪಾವಳಿಗೆಂದು ಹೋದವನು ಸತ್ತ. ಮದುವೆಯಾಗಿ ವರ್ಷದಷ್ಟೆ. ಹೆಂಡತಿ ಮೈನೆರದಿರಲಿಲ್ಲ.

ಅವನಿಗೆ ಮದುವೆಯನ್ನು ಹಠ ಹಿಡಿದು ಮಾಡಿಸಿದವರು ರಾಗಜ್ಜ. ತಪ್ಪು ರಾಗಜ್ಜನ ಮೇಲೆ ಬಂತು. ಅಮ್ಮ ಮೂದಲಿಸಿದಳು : ನೀವು ಮಾಡಿಸಿದ ಮದುವೆ, ಊರೇ ಬೇಡವೆಂದರೂ ಕೇಳಲಿಲ್ಲ, ನಿಮ್ಮ ಸಂಬಂಧದ ಹುಡುಗೀಂತ

ಗ್ರಹ ಕೂಡಿ ಬರದಿದ್ದರೂ ಮದುವೆ ಮಾಡಿಸಿ ಇದ್ದ ಒಬ್ಬನೇ ಅಣ್ಣನನ್ನು ಕೊಂದಿರಿ – ಎಂತ. ರಾಗಜ್ಜ ತುಟಿ ಪಿಟಕ್ಕೆನ್ನುತ್ತಿರಲಿಲ್ಲ. ಹೊಗೆಸಪ್ಪು ತಿಕ್ಕುತ್ತ ಮುಖವನ್ನು ಇನ್ನೊಂದು ಕಡೆ ತಿರುಗಿಬಿಡುತ್ತಿದ್ದರು. ಅಮ್ಮ ಒಳಗೆ ಹೋದ ಮೇಲೆ ನನ್ನನ್ನು ಬಾ ಇಲ್ಲಿ ಎಂದು ಹತ್ತಿರಕ್ಕೆ ಕರೆಯುತ್ತಿದ್ದರು. ಕೂಡಿಸಿಕೊಂಡು:

"ನೋಡಿದೆಯೇನಯ್ಯ ? ನಿನ್ನ ಅಮ್ಮ ಹೇಳಿದ್ದು ಕೇಳಿಸಿಕೊಂಡಿಯ ? ನಾನು ಮುಟ್ಟಿದ್ದೆಲ್ಲ ಮಣ್ಣು. ಯಾವುದೂ ಕೈ ಹತ್ತಲಿಕ್ಕಿಲ್ಲ. ಗ್ರಹಚಾರ."

ರಾಗಜ್ಜ ಹೇಳಿದ್ದೇನೆಂದು ಅಮ್ಮ ಗುಟ್ಟಾಗಿ ಕರೆದು ಕೇಳುವಳೆಂದು ಹೆದರಿ ನಾನು ಒಳಗೇ ಹೋಗುತ್ತಿರಲಿಲ್ಲ.

* * * * *

ಮನೆಯ ಸುತ್ತ ಅದೆಷ್ಟು ದೊಡ್ಡ ಕಾಡೆಂದರೆ ಸುತ್ತಮುತ್ತ ಧಾಂಡಿಗವಾಗಿ ಬೆಳೆದ ವೃಕ್ಷಗಳ ಬೇರುಗಳು ಅಂಗಳದಲ್ಲಿ ಯಾಕೆ, ಮನೆಯ ಒಳಗೂ ಉಬ್ಬಿದ ನರಗಳಂತೆ ಎದ್ದು ನಿಲ್ಲುತ್ತಿದ್ದುವು. ರಾಗಜ್ಜ ನಿತ್ಯ ಕತ್ತಿ ಹಿಡಿದು ಸವರದಿದ್ದರೆ ಮುಗಿದೇ ಹೋಯಿತು. ಬೇಲಿಗೆ ರತ್ನಗಂದಿ, ಕಳ್ಳಿ. ಕಳ್ಳಿಯ ಎಲೆಯನ್ನು ಮುರಿದು ಅದರ ಹಾಲಿನಲ್ಲಿ ಕನ್ನಡಿಯ ಹಾಗೆ ಮಾಡಿ – ಬಿಸಿಲಿನಲ್ಲಿ ಅದು ಪಡೆಯುತ್ತಿದ್ದ ರಂಗುರಂಗಿನ ರೇಖೆಗಳನ್ನು ನೋಡುತ್ತ ಕಾಲ ಹೋಗುತ್ತಿತ್ತು. ಮನೆಗೆ ಹಬ್ಬಿಸಿ ಬಿಟ್ಟ ಕುಂಬಳ ಬಳ್ಳಿ. ಹತ್ತು ಹನ್ನೆರಡು ದಾಳಿಂಬೆ ಗಿಡಗಳು. ಅಮ್ಮ ದಾಳಿಂಬೆ ರಾಕ್ಷಸನ ಕತೆ ಹೇಳುತ್ತಿದ್ದಳು. ಒಂದಾನೊಂದು ಊರಿನಲ್ಲಿ ಒಬ್ಬಾನೊಬ್ಬ ರಾಜನಿಗೆ ಒಬ್ಬಳು ಹೆಂಡತಿ. ತುಂಬಿದ ಗರ್ಭಿಣಿಗೆ ಬಯಕೆ, ದಾಳಿಂಬೆಹಣ್ಣು ಬೇಕೂಂತ. ಯಾವ ಊರಲ್ಲೂ ದಾಳಿಂಬೆಹಣ್ಣು ಬಿಡದ ಕಾಲವದು. ಆದರೂ ಗಂಡನಿಗೆ ಹೆಂಡತಿಯ ಮೇಲೆ ಎಷ್ಟು ಪ್ರೀತಿಯೆಂದರೆ ದೂರ ದೂರ ಹೋಗುತ್ತಾನೆ, ಒಬ್ಬನೆ. ಅಲ್ಲೊಬ್ಬ ರಾಕ್ಷಸನ ತೋಟದಲ್ಲಿ ಒಂದೇ ದಾಳಿಂಬೆ ಮರದಲ್ಲಿ ಒಂದೇ ಹಣ್ಣು... ಅಪ್ಪ ಮನೆಯಲ್ಲಿರುತ್ತಿರಲಿಲ್ಲ. ಕಚೇರಿ, ವಸೂಲಿ ಎಂದು ತಿರುಗಾಟ. ಇದ್ದಾಗಲೂ ಅಮ್ಮನ ಜೊತೆ ಅವರು ಸರಸವಾಗಿದ್ದುದ್ದು ನೆನಪಿಲ್ಲ. ಗಂಡನ ಜೊತೆ ನಿಂತು ಮಾತಾಡುವ ಹೆಂಗಸು ಗಂಡುಬೀರಿಯೆಂದು ಅಜ್ಜಿಯ ನಂಬಿಕೆ... ಕತೆ ಹೇಳುತ್ತ ಅಮ್ಮನಿಗೆ ನಿದ್ದೆ ; ಕೇಳುತ್ತ ನನಗೆ. ಎಡಕ್ಕೆ ತಿರುಗಿ ಹೋದರೆ ಅದೆಷ್ಟು ಎತ್ತರದ ರಂಜದ ಮರ. ಅದರಲ್ಲಿ ಅಡಿಯಲ್ಲಿ ಬಟ್ಟಲನ್ನು ಹಿಡಿದು, ಅಮ್ಮನಿಗೆಂದು ನಕ್ಷತ್ರದಂತಹ ಬೆಳ್ಳನೆ ಹೂವನ್ನು ಆರಿಸುತ್ತಿದ್ದುದು ನಿನ್ನೆ ನಡೆದ ಹಾಗೆ ಕಣ್ಣಿಗೆ ಕಟ್ಟುತ್ತದೆ.

ಅಮ್ಮನ ಕಣ್ಣಿಗೆ ಕಣ್ಣಿಟ್ಟು ನೋಡದೆ ರಾಗಜ್ಜನ ಕಡೆಗೆ ನೋಡಿದಾಗ



ಉಣುಗೋಲು ಹಾಕುತ್ತ ಅಂದರು :

"ನಾಳೆ ನನಗೆ ಅಭ್ಯಂಜನ ಬೇಡವಯ್ಯ. ಪ್ರಾಯಕ್ಕೆ ಬಂದವನೆ ಹಬ್ಬದ ದಿನ ಸತ್ತಮೇಲೆ ನಾನು ಯಾಕೆ ಎಣ್ಣೆ ಹಾಕಿಕೊಳ್ಳಲಿ ? ನೀವೆಲ್ಲ ಗಡದ್ದಾಗಿ ಎರೆದುಕೊಳ್ಳಿ".

ರಾಗಜ್ಜನ ಜೊತೆ ಮಾತಾಡುವಾಗ ತಾನೊಬ್ಬ ದೊಡ್ಡವನಂತೆ ಎನ್ನಿಸುತ್ತದೆ. ಅಪ್ಪನ ಮರ್ಜಿ ಬೇರೆ. ಅವರು ಮನೇಲಿ ಇದ್ದರೆ ಚಳಿಜ್ವರ ಬಂದ ಹಾಗೆ. ಯಾಕೊ ಅಕ್ಷರ ತಿದ್ದಲಿಲ್ಲ ? ಏನೇ ಇವತ್ತು ನಿನ್ನ ಮಗ ಬಾಯಿಪಾಠ ಹೇಳಿದನೇನೆ? ಪೆನ್ಸಿಲ್ ಕೆತ್ತಲು ನಾನು ಅವರ ಬ್ಲೇಡು ತೆಗೆದೆನೆಂದು ಕಿಡಿಕಿಡಿ. ರಾಗಜ್ಜನ ಜೊತೆ ಭಾಗವತರಾಟ ನೋಡಿಬರಲೇ ಅಪ್ಪ ಎಂದರೆ ನಿದ್ದೆಗೆಟ್ಟು ಆ ಹಾಳು ಕುಣಿತವನ್ನೇನು ನೋಡೋದು ಎನ್ನುತ್ತಿದ್ದರು. ಗಂಭೀರವಾದ ಮುಖಮುದ್ರೆಯವರು. ನಿಷ್ಠುರವಾಗಿ ಖಂಡತುಂಡ ಮಾತಾಡುವವರು, ಗಟ್ಟಿಯಾಗಿ ನಗುವರು. 'ಮನೆಗೆ ಕಾಲಿಟ್ಟರೆ ರಗಳೆ, ಎಲ್ಲಾದರೂ ನೀವು ಹಾಳುಬಡಿದುಕೊಳ್ಳಿ' ಎಂದು ಅಮ್ಮ ಅಜ್ಜಿ ದೂರು ತಂದರೆ ಹೇಳಿ ತಮ್ಮಷ್ಟಕ್ಕೆ ತಾವು ಇದ್ದುಬಿಡುವರು. ಜಾತ್ರೆಗೆಂದು ಒಂದು ದಿನ ಅವರ ಜೊತೆ ಪೇಟೆಗೆ ಹೋದಾಗ ವಾರಿಗೆಯ ಸ್ನೇಹಿತರ ಜೊತೆ ಅವರು ವಿನೋದದಿಂದ ವರ್ತಿಸಿದ ಹಾಗೆ ಮನೆಯಲ್ಲಿ ಇದ್ದುದನ್ನು ನನಗೆ ನೋಡಿದ ನೆನಪಿಲ್ಲ. ಅವರು ಮನೆಯಲ್ಲಿರುವುದೇ ಅಪರೂಪ ಎಂದು ನನಗೆ ಖುಷಿ. ಆಸುಪಾಸಿನಲ್ಲೆಲ್ಲಾ ಅಪ್ಪ ಒಬ್ಬರೇ ಸ್ವತಃ ಕ್ಷೌರ ಮಾಡಿಕೊಳ್ಳುತ್ತಿದ್ದವರಾದ್ದರಿಂದ ಚಾವಡಿಯಲ್ಲಿ ಅವರು ಕ್ಷೌರ ಮಾಡಿಕೊಳ್ಳುತ್ತ ಕೂತರೆ ಮನೆಗೆ ಬಂದ ಜನ ಕುತೂಹಲದಿಂದ ನೋಡುತ್ತ ಕೂತಿರುತ್ತಿದ್ದರು. ನನಗೂ ಸೋಪು ನೊರೆಯಾಗುವುದನ್ನು, ಬ್ಲೇಡಿನಲ್ಲದನ್ನು ಹೆರೆಯುವುದನ್ನು ನೋಡಲು ಬಲು ಆಸೆ. ಜೀವನದ ತುಂಬ ಎಷ್ಟು ಅಸಂಗತವಾದ ಅಮುಖ್ಯವಾದ ವಿಷಯಗಳೂ ನೆನಪಿರುತ್ತವೆ ; ಸುಖ ಮಾತ್ರವಲ್ಲ, ದುಃಖ ಮಾತ್ರವಲ್ಲ.

ತಾಯಿಯೆಂದರೆ ತಲೆಬೇನೆ. 'ಹಸಿವಾಗತ್ತೆ ಹಸಿವಾಗತ್ತೆ ಅಶ್ವತ್ಥನಾರಾಯಣ'; ತುಡುವಾಗತ್ತೆ ಎಂದರೆ 'ತುಡುವಾಗತ್ತೆ ತುಡುವಾಗತ್ತೆ ತುಳಸಿ ನಾರಾಯಣ' ಎಂದು ಸತಾಯಿಸಿ ಮಜ್ಜಿಗೆ ಬೀರಿನ ಬಾಗಿಲು ತೆರೆದು ಕೋಡುಬಳೆ ರವೆವುಂಡೆಯನ್ನು – ಮಾಡಿಟ್ಟದ್ದು ಅಜ್ಜಿಗೆ ಗೊತ್ತಾಗದಿರಲೆಂದು ಗುಟ್ಟಾಗಿ ಕೊಟ್ಟು – ಕಳಿಸುತ್ತಿದ್ದಳು. ರಾಗಜ್ಜನಿಗೂ ತಿಂಡಿಯ ಚಪಲವೆಂದು ಹಂಚಿಕೊಂಡರೆ ಅಮ್ಮನಿಗೆ ಸಿಟ್ಟು. ಬುದ್ಧಿ ತಿಳಿದ ಮೇಲೂ ನಿದ್ದೆಯಲ್ಲಿ ಹಾಸಿಗೆ ಮೇಲೆ ಉಚ್ಚೆ ಹೊಯ್ದುಕೊಳ್ಳುತ್ತಿದ್ದೆ. ಪಕ್ಕ ಮಲಗಿದವಳು ಎದ್ದು, ಬೆಚ್ಚಗಿರುವಲ್ಲಿ ನನ್ನನ್ನು

ಮಲಗಿಸಿ, ನಾನು ಒದ್ದೆ ಮಾಡಿದಲ್ಲಿ ತಾನು ಮಲಗುತ್ತಿದ್ದಳು. ಇಷ್ಟು ಕಠೋರವಾದ ಪ್ರೀತಿಯ ಹಂಗಿಲ್ಲದೆ ಬೆಳೆಯುವುದು ಸಾಧ್ಯವಿರಬೇಕಿತ್ತು ಎನ್ನಿಸುತ್ತದೆ. ಜೀವನ ಅಸಹ್ಯ. ನೀರು ತುಂಬಿ ನಿಂದಿಸುವಂತೆ ನೋಡುವ ತಾಯಿಯ ಕಣ್ಣುಗಳು ಬೆನ್ನಿನ ಹಿಂದೆ ಸದಾ ಇವೆ ;

ಇರಲಿ.

ಯಾಕೆ ಇವರು ಅಪ್ಪ, ಇವಳು ಅಮ್ಮ, ಇವಳು ಅಜ್ಜಿ, ಇವರು ರಾಗಜ್ಜ ಗೊತ್ತಿರದಿದ್ದ ಕಾಲ ನೆನಪಿದೆ. ಅಮ್ಮನನ್ನು ರಾಗಜ್ಜ ಸಾತು ಎಂದು ಕರೆಯುವುದು ಕೇಳಿ ನಾನೂ ತಾತು ಎನ್ನುತ್ತಿದ್ದೆ. ಅಜ್ಜಿಯನ್ನು ಅಮ್ಮ ಅತ್ತೆ ಎಂದು ಕರೆಯುವಳೆಂದು ಅತ್ತೆ ಎನ್ನುತ್ತಿದ್ದೆ. ಅಜ್ಜಿಯನ್ನು ಅಪ್ಪ ಅಮ್ಮ ಎನ್ನುವರೆಂದು ನನ್ನಮ್ಮ ಯಾರೆಂದು ಅನುಮಾನಿಸುತ್ತಿದ್ದೆ. ಅಜ್ಜಿ ಮತ್ತು ಅಮ್ಮನನ್ನು – ನಿನ್ನಮ್ಮ, ನನ್ನಮ್ಮ ಎಂದೂ ಕರೆಯುತ್ತಿದ್ದೆ. ನಾನೆ? ಅವನು ನಾನೆ,

ಬೇವಿನ ಸೊಪ್ಪನ್ನು ಹಚ್ಚಿದರೂ ಮೊಲೆಯ ಚಪಲ ಬಿಡದವನು, ಅಮ್ಮ ಚೊಂಬು ತೆಗೆದುಕೊಂಡು ಹಿತ್ತಲಿಗೆ ಹೋದಾಗಲೂ ಜೊತೆಗೆ ಹೋಗಿ ಕೂರುತ್ತಿದ್ದವನು, ನಂತರ ರಾಗಜ್ಜನದು ಸರಿಯೊ ಅಮ್ಮನದು ಸರಿಯೊ ಎಂದು ಕಷ್ಟಕ್ಕೆ ಸಿಕ್ಕಿದವನು ಯಾರು ನಾನೆ,

ಈಗಿನ ನಾನೆ? ಬೆಳೆದು ದೊಡ್ಡದಾಗುವುದೆಂದರೆ ಏನು? ಇಲ್ಲ ಅವನೊಬ್ಬ, – ತಾನು ಇನ್ನೊಬ್ಬ ; ಅವನು ತನಗೀಗ ಪರಕೀಯ ಎಂದೆಲ್ಲ ಅನ್ನಿಸುತ್ತದೆ. ಕಾಲ ಆಕಳಿಸುತ್ತದೆ.

ಮನೆಯಲ್ಲಿ ಜಗಳವಾಡಿ ರಾಗಜ್ಜ ಯಾರ ಮನೆಗೊ ಯಾವ ಊರಿಗೊ ಹೋಗಿ ಬಚ್ಚಲಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತ ಕೂತವರು ಕೂತ ಹಾಗೆ ಪ್ರಾಣ ಬಿಟ್ಟರು. ಆಮೇಲೆ ಅಪ್ಪ ತನ್ನ ತಂದೆಯನ್ನು ಅನಾಥನಾಗಿ ಮಾಡಿದನೆಂದು ಪಾಪಭಾವದಿಂದ ಮಂಕಾದರು. ನನ್ನ ಮುಖ ನೋಡದೆ ಅಮ್ಮ ದುಃಖದಲ್ಲಿ ಬಹು ಸಂಕಟಪಟ್ಟು ಸತ್ತಳು. ಈಗ ಅಪ್ಪ 'ತಾಯಿ ತಂದೆಯ ಮಾತು ಕೇಳದವ ನೀನು, ನಿನ್ನ ಹಂಗು ಬೇಡ ನನಗೆ' ಎಂದು ಹಠ ಹಿಡಿದು ದೂರದಲ್ಲಿ ಏಕಾಕಿಯಾಗಿದ್ದು ಮುದುಕರಾಗುತ್ತಿದ್ದಾರೆ,

*    *    *    *    *

ಪ್ರೀತಿಯೆಂದರೆ ಕರ್ಮಾಂತರಗಳಲ್ಲಿ ತೊಡಗಿದಂತೆ, ಸಂಸಾರವೆಂದರೆ ದುಃಖ – ಇದಕ್ಕೆ ಉತ್ತರವಿದೆಯೆ, ಇಲ್ಲವೆ, ಅನಿವಾರ್ಯವೆ, ಎಂದು ರಾಘವ ಹೆಂಡತಿಯ ಮುಖದ ಕಡೆ ನೋಡಲು ಪೇಪರ್ ಓದುತ್ತ ಕೂತಿದ್ದ ಛಾಯ



ನಕ್ಕಳು. ಗಂಡ ಸೀರಿಯಸ್ಸಾಗಿ ಕಾಣಿಸುತ್ತಿದ್ದಾನೆಂದು ಅವಳಿಗೆ ಜೋಕು.

"ಅದೇನು ಪೆನ್ನು ಹಿಡಿದು ಪೇಪರಿನ ಎದುರು ಸುಮ್ಮನೆ ಮಂಕು ಬಡಿದಂತೆ ಕೂತಿದೀರಲ್ಲ – ನಿಮಗೇನಾಗಿದೆ ?" ಎಂದಳು.

ತನಗೆ ಭಾಗಿಯಾಗಲು ಸಾಧ್ಯವಿಲ್ಲದ ಯಾವುದನ್ನೂ ಗಂಡ ಮಾಡಕೂಡದೆನ್ನುವ ಭಾವ ಇವಳ ಹಾಸ್ಯದಲ್ಲಡಗಿದೆ, ಇವಳಿಗೇನು ಅಧಿಕಾರ, ಹಗುರ ಮನಸ್ಸಿನ ಹೆಣ್ಣು ಎಂದು ರಾಘವನಿಗೆ ರೇಗಿತು. ಕಠಿಣವಾಗಿ,

"ಸುಮ್ಮನೇ ರಗಳೆ ಮಾಡಬೇಡ" ಎಂದ.

ಆಡಿಬಿಟ್ಟ ಮೇಲೆ ರಾಘವನಿಗೆ ಛಾಯಳ ಮುಖಭಾವ ನೋಡಿ ಆಡಬಾರದಿತ್ತು ಎನ್ನಿಸಿತ್ತು. ಅಪ್ಪನೂ ಹೀಗೆ ಅಮ್ಮನಿಗೆ ಗದರಿಸುತ್ತಿದ್ದರು ; ದೂರು ತಂದರೆ ಇದೇನ ನಿನ್ನ ರಗಳೆ, ಮುದ್ದಿನಿಂದ ಮಾತಾಡಿಸಿದರೆ ಇದೇನು ನಿನ್ನ ಸೇಳೆ. ಸ್ವಲ್ಪ ಮರೆತರೆ ಸಾಕು ಅಪ್ಪನ ಸ್ವಭಾವ ಇಣುಕುವುದು.

"ಇಲ್ಲಿ ಬಾ ಛಾಯ" ಎಂದು ಮೃದುವಾಗಿ ಕರೆದ.

"ಹೋಗಿಯಪ್ಪ. ನಿಮಗೇನೊ ಯೋಚನೆ. ಮನೆಯಲ್ಲಿ ಇದ್ದರೂ ನೀವು ಇಲ್ಲದಂತೆ."

ಹುಡುಗಾಟಿಕೆಯ ಮಾತಿನಲ್ಲೂ ಏನೇನೋ ಹೊಗೆಯಾಡುತ್ತದೆ.

"ತಿರುಗಾಡಿ ಬರುತ್ತೇನೆಂದಿ, ಯಾಕೆ ಹೋಗಲಿಲ್ಲ ಛಾಯ?"

ರಾಘವನ ಮಾತಿನಲ್ಲಿ ಒಲೆಸಿಕೊಳ್ಳುವ ಧ್ವನಿಯಿತ್ತು.

"ನೀವು ಬರದೆ ನಾನೊಬ್ಬಳೆ ಹೋಗಲ? ಅದಕ್ಕೇ ನಾವು ಮದುವೆಯಾದದ್ದು ? ನಿಮ್ಮ ತಾಯಿ ತಂದೆಗೆ ಇಷ್ಟವಾದವಳನ್ನೆ ನೀವು ಯಾಕೆ ಆಗಲಿಲ್ಲ ?"

ನೀವು ಯಾಕೆ ಆಗಲಿಲ್ಲ ? ಯಾಕೆ ? ಛಾಯ ಎದ್ದು ನಿಂತಳು – ಒಳಗೆ ಹೋದಳು. ಯಾಕೋ ಸಿಡಿ ಸಿಡಿ, ಯಾಕೆ ? ಅಪ್ಪ, ಅಮ್ಮ, ರಾಗಜ್ಜ, ಅಜ್ಜಿ, ನಾನು. ಈ ವರ್ತುಳದಲ್ಲಿ ಛಾಯ – ಬರೆಯಬೇಕು,

ಯಾಕೆ ಬರೆಯುತ್ತಿಲ್ಲ – ಬರೆಯಲಾಗುತ್ತಿಲ್ಲ – ಬರೆಯಲೇಬೇಕು ಎಂದಕೊಂಡ ರಾಘವ. ಬರೆಯುವುದೆಂದರೆ ಹುಡುಕುವುದು. ಒಂದನ್ನೊಂದಕ್ಕೆ ತಾಳಿಸಿ, ಮೇಳಿಸಿ, ತಡಕಾಡಿ ಹುಡುಕುವುದು. ಸೂರಿನಿಂದ ಕೆಳಗೆ ಇಳಿದ ಒಂದು ಬೆಳಕಿನ ಕೋಲಿನಲ್ಲಿ ಜೀವನದ ಸುಖ ದುಃಖವನ್ನೆಲ್ಲ, ಅನಂತತೆಯನ್ನೆಲ್ಲ ಕಾಣುವುದು,

ಕಾಣಿಸುವುದು,

*    *    *    *    *

ರಾಗಜ್ಜ ಅಬ್ಬಕ್ಕನ ಮನೆಯ ಎದುರು ನಿಂತು,

"ಏ ಅಬ್ಬಕ್ಕ, ಹಬ್ಬಕ್ಕೊಂದಷ್ಟು ಚೆಂಡುಹೂ ಬೇಕು, ಕೊಯ್ದಿಡುತ್ತೀಯ" ಎಂದು ಕೂಗಿದಾಗ ಕೆಂಪು ಮುಂಡಾಸು ಸುತ್ತಿದ ತುಕ್ರ ಹಣಿಕಿ.

"ಅವಳು ನಿಮ್ಮ ಮನೆಗೇ ಪಾತ್ರೆ ತೊಳೆಯಲು ಹೋದಳಲ್ಲಯ್ಯ" ಎಂದ. ರಾಗಜ್ಜ ಮಂಜಯ್ಯನವರು ತಂದ ಹೊಸ ಎತ್ತುಗಳ ಬಗ್ಗೆ ವಿಚಾರಿಸಿದರು. ಬಿಳಿ ಬಟ್ಟೆ ಕಂಡರೆ ತುಡುಗಂತೆ, ಬಾಕಿಯೆಲ್ಲ ಸಮ. ಉಬ್ಬಾದರೂ ಓಡೋಡಿ ಹತ್ತುತ್ತದೆ.

"ನಾನೊಂದು ಜೊತೆ ಎತ್ತಿಟ್ಟಿದ್ದೆ, ಹೇಗಿತ್ತು ಎಂತೀಯ ? ಎರಡೇ ಕೈಗಳಲ್ಲಿ ಗಾಡಿಯಲ್ಲಿ ಎತ್ತಿ ನಿಲ್ಲಿಸುತ್ತಿದ್ದ ಕಾಲ ಅದು". ಎಂದರು ರಾಗಜ್ಜ ನನಗೆ.

ಅಬ್ಬಕ್ಕನ ಬಗ್ಗೆ ಬರೆಯಬೇಕು. ಅವಳೊಬ್ಬಳು ಅಬ್ಬಕ್ಕ. ಅವಳಿಗೊಂದು ಗಂಡ ತುಕ್ರ. ಅವಳಿ – ಜವಳಿ ಮಕ್ಕಳನ್ನೆತ್ತಿಕೊಂಡು ಅವಳು ಬರುವ ಚೆಂದ ನೋಡಿ ನಾನು ಅಬ್ಬಕ್ಕನ್ನ ಗುಬ್ಬಕ್ಕ ಕಚ್ಕಂಡೋಯ್ತು ಎಂದು ಕಟ್ಟಿ ಹೇಳಿದೆನೆಂದು ಅಮ್ಮ ಅಬ್ಬಕ್ಕ ಖುಷಿಯಾಗಿದ್ದರು. ಸುಖದುಃಖ ಹೇಳಿಕೊಳ್ಳಲು ಅಮ್ಮನಿಗೊಬ್ಬಳು ಅಬ್ಬಕ್ಕ. ಅವಳಿಗೆ ಅಮ್ಮ ಹೊರೆಸಿ ಕಳಿಸುತ್ತಾಳೆಂದು ನಿತ್ಯ ಅಜ್ಜಿಯ ದೂರು. ತುಕ್ರನಿಗೆ ಹೆಣ್ಣಿನ ಚಟ. ಪೇಟೆಗೆ ಸಾಯಂಕಾಲ ಗಾಡಿ ಹೊಡೆದುಕೊಂಡು ಹೋದರೆ ರಾತ್ರಿ ರಾಮಿಯ ಮನೆಯಲ್ಲಿ ಮೊಕ್ಕಾಂ. ಅಬ್ಬಕ್ಕ ತಾಳಿ ಹರಿದೆಸೆದಳು; ತುಕ್ರ ರಾಮಿಯನ್ನು ಬಿಟ್ಟ ಮೇಲೆ ಮತ್ತೆ ನಕ್ಕು ತಾಳಿ ಕಟ್ಟಿಕೊಂಡಳು. ಅವನ ತಲೆಗೆ ಮಣ್ಣು ಹೊರೆಸುತ್ತ ಅಬ್ಬಕ್ಕ ಮತ್ತೆ ನಕ್ಕು ಮಾತಾಡುವುದನ್ನು ನಾನು ಕಂಡಿದೇನೆ. ತುಕ್ರನ ಕಚ್ಚೆ ಒದರಿದರೆ ಮಕ್ಕಳು ಉದುರುತ್ತಾವೆಂದು ಅಬ್ಬಕ್ಕ ಕವಳ ಜಗಿಯುತ್ತ ನಗೆಯಾಡಿದ್ದನ್ನು ನಾನು ಕಂಡಿದೇನೆ. ನಮ್ಮ ಸೂಕ್ಷ್ಮಾತಿಸೂಕ್ಷ್ಮ ಮೌಲ್ಯಗಳಿಗೆ ಬೆಂಕಿಯಿಟ್ಟಿತು. ಅವಳ ಅಂಗಳದ ತುಂಬ ಚೆಂಡುಹೂ. ಹರಳೆಣ್ಣೆ ಮೆತ್ತಿದ ಅವಳ ತಲೆಯ ಮೇಲೆ ಚೆಂಡುಹೂ. ಅಳು ಬಂದರೆ ಗಟ್ಟಿಯಾಗಿ ಅಳುತ್ತಿದ್ದಳು ; ಮರುಕ್ಷಣ ನಗುತ್ತಿದ್ದಳು. ತುಕ್ರ ಮನೆ ಬಿಟ್ಟು ಹೋದಾಗ ನಿನ್ನ ಹಂಗಿನಲ್ಲಿ ನಾನಿಲ್ಲ ಎಂದು ತೋರಿಸಿಕೊಳ್ಳಲು ಸೇರೆಗಾರ ಎಂಕಪ್ಪ ಶೆಟ್ಟಿಯ ಜೊತೆ ಸ್ನೇಹ ಮಾಡಿದಳು, ಗಂಡ ಮನೆಗೆ ಬಂದ ಮೇಲೆ ಸೇರೆಗಾರನನ್ನು ನಕ್ಕು ಮಾತಾಡಿಸಿ ದೂರವಿಟ್ಟಳು. ಕಾಡು, ಬೆಟ್ಟ, ಚೆಂಡುಹೂ, ದೀಪಾವಳಿಯ ಸುಖದುಃಖದ ಜೊತೆ ಅಬ್ಬಕ್ಕನ ಜ್ಞಾಪಕವೂ ಆಗುತ್ತದೆಂದು ಬರೆಯಬೇಕು. ಅಬ್ಬಕ್ಕನಂಥವಳೊಬ್ಬಳು ತಾಯಾಗಿದ್ದರೆ ನಾನು ಅತಿಪ್ರಜ್ಞೆಯ ಬೆನ್ನು ಹತ್ತಿ ಹೀಗೆ ಯೋಚಿಸುತ್ತ ಕೂತಿರುತ್ತಿರಲಿಲ್ಲ. ಗದ್ದೆಯ ಕೆಸರಿನಲ್ಲಿ ಏಡಿ ಹುಡುಕುತ್ತ ಕೂತಿರುತ್ತಿದ್ದೆ.

ಅಮ್ಮ ಸತ್ತ ಮೇಲೆ ಭಾಯನ ಜೊತೆ ಊರಿಗೆ ಹೋದವನು ತುಕ್ರನ



ಕಾಲಿನಿಂದ ಮುಳ್ಳು ತೆಗೆಯುತ್ತ ಕೂತ ಅಬ್ಬಕ್ಕ ಮುದುಕಿಯಾಗಿದ್ದನ್ನು ನೋಡಿ ಬಂದೆ. 'ಬಂದಿರಾ ಅಯ್ಯ' ಎಂದು ಪ್ರೀತಿಯಿಂದ ಮಾತಾಡಿಸಿ, 'ನಿಮ್ಮ ಹೆಂಡತಿ ಲಕ್ಷ್ಮಿಯಂತಿದ್ದಾರೆ' ಎಂದಳು. ಇದ್ದ ಮಗನೊಬ್ಬ ಬೊಂಬಾಯಿಗೆ ಓಡಿ ಹೋಗಿ ಹೋಟೆಲಿಗೆ ಸೇರಿದ, ನಾಕು ವರ್ಷವಾದ ಮೇಲೆ ಬಂದು ಮಾತಾಡಿಸಿ ಹೋದ, ಅವನು ಎಲ್ಲಾದರೂ ಇರಲಿ, ಸುಖವಾಗಿರಲಿ, ಗಾಡಿ ಹೊಡೆಯುವುದು ಅವನಿಗೆ ಬೇಡವಾಯ್ತು, ಹೋಗಲಿ ಎಂದಳು. ನನ್ನ ಅಮ್ಮ ಸಾಯುವಾಗ ಪಟ್ಟ ಬೇನೆ, ನನ್ನನ್ನು ನೋಡಬೇಕೆಂದು ಬಯಸಿದ್ದು, ಆದರೆ ಅಪ್ಪ ಹಠ ಹಿಡಿದು ನನಗೆ ಬರೆಯದಿದ್ದದ್ದು – ಎಲ್ಲವನ್ನೂ ವರ್ಣಿಸಿ – ಅಮ್ಮ ನಿಮ್ಮ ಹತ್ತಿರ ಜಗಳವಾಡಿದರೆಂದು ಅವರ ಬಗ್ಗೆ ಕೆಟ್ಟದ್ದು ಬಗೆಯಬೇಡಿಯಯ್ಯ, ಬದುಕಿದ್ದರೆ ಲಕ್ಷ್ಮಿಯಂಥ ನಿಮ್ಮ ಹೆಂಡತಿಯನ್ನು ನೋಡಿ ಮರೆಯುತ್ತಿದ್ದರು ಎಂದಳು. 'ಇನ್ನೂ ಬಸುರಿಯಾಗಿಲ್ಲವಾ ಅಮ್ಮ' ಎಂದು ಭಾಯನನ್ನು ಕೇಳಿ ನಾಚಿಸಿದಳು.

* * * * *

ಎತ್ತರದಲ್ಲಿ ಮನೆ. ತಗ್ಗಿನಲ್ಲಿ ಇಳಿದು ಹೋದರೆ ಅಡಿಕೆ ತೋಟ. ತೋಟದ ಬದಿಗೆ ಅಬ್ಬಕ್ಕನ ಗುಡಿಸಲು. ತೋಟ ದಾಟಿದ ಮೇಲೆ ಗದ್ದೆ ಬೈಲು. ನಡುವೆ ಸಾರ ದಾಟಬೇಕು. ಅಡಿಕೆ ಸಾರ. ರಾಗಜ್ಜ ಮುಂದೆ, ತಾನು ಹಿಂದೆ. ದಾಟುವಾಗ ತೂಗುವುದು. ಜೋಕೆ ಜೋಕೆ ಎನ್ನುತ್ತ ರಾಗಜ್ಜ ದಾಟಿದರು. ಎರಡು ಕೈಗಳನ್ನೂ ಚಾಚಿ ದೇಹವನ್ನು ಸಮತೂಗಿಸಿ ದಾಟುವಾಗ ಪ್ರತಿ ಸಾರಿ ಭಯ, ದಾಟಿದ ಮೇಲೆ ದಾಟಿಬಿಟ್ಟೆನಲ್ಲ ಎಂಬ ಸಂತೋಷ. ಗದ್ದೆಬೈಲಿನ ಕೆಸರಿನ ಹೊಂಡದಲ್ಲಿ ಅಬ್ಬಕ್ಕನ ಮಗ ತಿಮ್ಮ ತದೇಕಚಿತ್ತನಾಗಿ ಏಡಿ ಹಿಡಿಯುತ್ತಿದ್ದ. ಬ್ರಾಂಬ್ರು ಬರುತ್ತಿದ್ದಾರೆಂದು ದೂರದಿಂದ ಕಂಡು ಎದ್ದು ನಿಂತ, ತಾನು ಏನನ್ನೂ ಮಾಡುತ್ತಿರಲಿಲ್ಲ ಎನ್ನುವ ಮುಗ್ಧ ಮುಖ ಮಾಡಿ. ರಾಗಜ್ಜನನ್ನು 'ಅವನು ಏನು ಮಾಡುತ್ತಿದ್ದ ಅಜ್ಜ' ಎಂದದ್ದಕ್ಕೆ 'ಅವಕ್ಕೆ ಬೇರೆ ಕೆಲಸವೆ? ಏಡಿ ಹಿಡಿಯುತ್ತಿದ್ದ' ಎಂದರು.

"ರಾತ್ರೆ ಯಾಕೆ ಸಿಳ್ಳು ಹಾಕಬಾರದು ಅಜ್ಜಯ್ಯ?"

"ಹಾವು ಬರುತ್ತಾವೆ ಅಂತ"

"ಅಭಿಮನ್ಯುವಿನ ಕಥೆ ನಡೆದದ್ದ ಅಜ್ಜಯ್ಯ?"

"ಹಾ..."

"ನಾವು ತಾಯಿಯ ಹೊಟ್ಟೆಯಲ್ಲಿದ್ದಾಗ ಇನ್ನೊಬ್ಬರು ಆಡಿದ್ದೆಲ್ಲ ಕೇಳಿಸುತ್ತದ ಅಜ್ಜಯ್ಯ?"

"ಮುಳ್ಳು ನೋಡಿ ನಡಿ" ಎಂದರು ರಾಗಜ್ಜ.

"ಮೊನ್ನೆ ಯಾಕೆ ನೀವು ಹಜಾಮನಿಂದ ಕ್ಷೌರದ ಕತ್ತಿ ಇಸಕೊಂಡು ಆಮೇಲೆ ಕೊಡುತ್ತೇನೆಂದು ಒಬ್ಬರೇ ಗುಡ್ಡಕ್ಕೆ ಹೋದಿರಿ?"

"ಕಾಡು ಸವರಲಿಕ್ಕೆ..."

"ನಾನೂ ಬರುತ್ತೇನೆಂದರೆ ಹಾಗೆಲ್ಲ ಬರಬಾರದು ಎಂದಿರಿ."

"ಸುಮ್ಮನೆ."

"ಮುಖಕ್ಷೌರದ ಕತ್ತಿಯಲ್ಲಿ ಕಾಡು ಸವರುತ್ತಾರ ಅಜ್ಜಯ್ಯ ?"

ರಾಗಜ್ಜ ನಕ್ಕರು. ಗುಡ್ಡ ಹತ್ತಿ, ಗುಡ್ಡ ಇಳಿದು, ಹತ್ತಿ, ಇಳಿದು, ಸುತ್ತಿ, ಹಾಗೆ ಹೋಗಿ, ಹೀಗೆ ಹೋಗಿ ದಿಕ್ಕು ತಪ್ಪದೆ ಕಾಡು ಸುತ್ತುವುದೊಂದು ಕುಶಲವಾದ ಕಲೆ. ರಾಗಜ್ಜ ಅದಕ್ಕೆ ಸರಿ. ಅಪ್ಪನಿಗೆ ಬರದು. ಸೌದೆ ಕಡಿದು ಒಟ್ಟಿದ್ದಲ್ಲಿಗೆ ಬಂದದ್ದಾಯಿತು. ಇಕೊ ಎಂದು ರಾಗಜ್ಜ ತೋರಿಸಿದರು. ಏನು ಅಂದದ್ದಕ್ಕೆ ಹುಲಿ ಹಾಕಿದ ಹಿಕ್ಕೆ ಎಂದರು. ಇಕೊ ಎಂದು ಹುಲಿಯ ಹೆಜ್ಜೆಯನ್ನು ತೋರಿಸಿದರು. ನಮ್ಮನ್ನು ಕಂಡರೆ ಅವಕ್ಕೂ ಭಯವಯ್ಯ ಎಂದರು.

ಹಿಂಡ್ಲಚ್ಚಿಕಾಯಿಯ ಬಳ್ಳಿಗಳನ್ನು ನಾನು ಹರಿಯುವಾಗ ರಾಗಜ್ಜ ನಾರು ಬಳ್ಳಿಯನ್ನು ಕೊಯ್ದು ತಂದು, ಕಟ್ಟಿಗೆಯನ್ನು ಕಟ್ಟಿ, ತಲೆ ಮೇಲೆ ಹೊತ್ತು, ನಡಿಯಿನ್ನು ಎಂದರು. 'ಪೆಟ್ಲಿಗೆ ಗಜ ಅಜ್ಜಯ್ಯ' ಎಂದೆ. 'ಹೋ ಮರೆತೆ' ಎಂದು ಕಟ್ಟಿಗೆಯನ್ನು ಕೆಳಗಿಳಿಸಿ, ಗಜ ಮಾಡುತ್ತ ಕೂತಾಗ, ನಾನು ದನದ ಕೊರಳಿಗೆ ಉರು... ಉರುಟು... ಉರುಟಣಿ ಎಂದೇ ಇರಬೇಕು – ಕಾಯಿಯನ್ನು ಕೊಯ್ಯುವುದು ಬೇಡವೇ ಎಂದದ್ದಕ್ಕೆ ಹಾ ಹೌದಲ್ಲ ಎಂದರು. ಅದನ್ನು ಕೊಯ್ಯುವಾಗ ಪೆಟ್ಲಿಗೆಂದು ಒಂದಷ್ಟು ಅರಮರಳುಕಾಯನ್ನು ಕೊಯ್ದೆ. ಮನೆಗೆ ಹೋದ ಮೇಲೆ ಅಮ್ಮ ಬಯ್ಯದಿರಲೆಂದು, ಅವಳನ್ನು ಒಲಿಸಿಕೊಳ್ಳಲು ನಿಂಬೆಕಾಯಿ ಉಪ್ಪಿನಕಾಯಿ ಜೊತೆ ಬೆರೆಸಲು ಎಳೆಯದಾದ ಅರಮರಳುಕಾಯಿಯ ಗೊಂಚಲನ್ನು ಕೊಯ್ದು ಚಡ್ಡಿ ಜೇಬಿಗೆ ತುಂಬಿಕೊಂಡೆ.

ದಾರಿಯಲ್ಲಿ ಅಜ್ಜ ಮರಕೆಸ ಕಂಡು :

"ನೋಡಲ್ಲಿ ಪತ್ರಡೆಗೆ ಲಾಯಕ್ಕಾಗಿದೆ" ಎಂದರು.

"ಕೊಯ್ಯಿರಿ ಅಜ್ಜಯ್ಯ" ಎಂದದ್ದಕ್ಕೆ,

"ನಾನು ಹೇಳಿದರೆ ನಿನ್ನಮ್ಮ ಎಲ್ಲಿ ಮಾಡ್ತಾಳೆ? ನೀನೇ ನೋಡ್ತೀಯಲ್ಲ – ಮನೇಲಿ ನಾನೊಬ್ಬ ಮನುಷ್ಯನ? ವಯಸ್ಸಾಗಬಾರದು ಮುದ್ದು. ಎಷ್ಟಾದರೂ ಅವಳು ನಿನ್ನ ಅಮ್ಮ – ನಾನು ನಿನ್ನ ಹತ್ತಿರ ಹೇಳಬಾರದು – ಸರಿ. ಹೋಗಲಿ



ಬಿಡು. ಬಾ ಹೋಗಿ ಮುಂಚೆ ಮನೆ ಸೋರುವ. ಮೊದಲೇ ನಿನ್ನಮ್ಮನಿಗೆ ನೀನು ನನ್ನ ಜೊತೆ ಬಂದದ್ದು ಕಣ್ಣು ಕೆಂಪಾಗಿದೆ." ಎಂದರು.

ಅಬ್ಬಕ್ಕನ ಮನೆಯ ಎದುರು ನಿಂತು 'ಅಬ್ಬಕ್ಕಾ' ಎಂದು ಕೂಗುವಾಗ ಒಳಗೆ ಅವಳ ಮೈಮೇಲೆ ಗಣ ಬಂದಿತ್ತು. ಅವಳ ಬಗ್ಗೆ ಬರೆಯುವಾಗ ಇದನ್ನೂ ಹೇಳಬೇಕು. ಗಡಗಡ ನಡುಗುತ್ತ, ಒದ್ದೆ ಕೂದಲನ್ನು ಮುಖದ ಮೇಲೆಲ್ಲ ಹರಡಿ, ಹಣೆ ತುಂಬ ಕುಂಕುಮ ಬಳೆದು, ಕೈಯಲ್ಲಿ ಅಡಿಕೆಯ ಸಿಂಗಾರ ಹಿಡಿದು ಅವಳು ನಿಮಿತ್ಯ ಹೇಳುತ್ತಿದ್ದಳು – ಸುತ್ತ ಸೇರಿದ ಜನ ಕೇಳುವ ಪ್ರಶ್ನೆಗಳಿಗೆ. ನನಗೆ ಭಯವಾಗುತ್ತದೆಂದು ರಾಗಜ್ಜನಿಗೆ ಅನ್ನಿಸಿರಬೇಕು, ಬಾ ಕೈ ಹಿಡಿದುಕೊ ಎಂದು, ಸ್ವತಃ ಅಂಗಳದಲ್ಲಿ ಚೆಂಡುಹೂ ಕೊಯ್ದರು. ತೋಟ ದಾಟಿದ ಮೇಲೆ ಒಂದು ಮೊಟ್ಟಿನ ಹಿಂದೆ ಕಪಿಲೆಯೊಂದೇ ಮೇಯುತ್ತ ನಿಂತುದನ್ನು ಕಂಡು, "ದನ ಕಾಯೋವನೊಬ್ಬ ದಂಡಕ್ಕೆ" ಎಂದು ಅದನ್ನು ಅಟ್ಟಿಕೊಂಡು ಬಂದಾಗ ಸಂಜೆಯಾಗಿತ್ತು, ಹಾಲು ಕರೆದಾಗಿತ್ತು. ಅಮ್ಮ ಹಾಲಿನ ಪಾತ್ರೆಯನ್ನು ಸೀರೆ ಸೆರಗಿನಿಂದ ಮುಚ್ಚಿಕೊಂಡು ಅಂಗಳ ಹಾಯುತ್ತಿದ್ದವಳು ನನ್ನ ಕಡೆ ನೋಡಿ "ಒಳಗೆ ಬರುವಾಗ ಬೆನ್ನಿಗೆ ಹಾಳೆ ಕಟ್ಟಿಕೊಂಡು ಬಾ" ಎನ್ನಲು ನಾನು ರಾಗಜ್ಜನ ಮುಖ ನೋಡಿದೆ. "ಉಪ್ಪಿನಕಾಯಿಗೆ ಅರಮರಳುಕಾಯಿ ತಂದಿದೇನಮ್ಮ" ಎಂದೆ. ಒಳಗೆ ಅಪ್ಪ ಲಾಟೀನಿನ ಗಾಜನ್ನು ಒರೆಸುತ್ತ ಕೂತಿದ್ದರು.

* * * * *

ಅಪ್ಪ ಬಯ್ಯಲಿಲ್ಲ. ಅಮ್ಮ ಕಣ್ಣುಸಂಜ್ಞೆ ಮಾಡಿ ಅಡಿಗೆಮನೆಯೊಳಗೆ ಕರೆದದ್ದನ್ನು ನೋಡಿ ಅಜ್ಜಿ ದೇವರ ಮನೆಯೊಳಕ್ಕೆ ನೆವ ಮಾಡಿಕೊಂಡು ಬಂದು ಕೂತಳು. ನಾನು ಉಗುರು ಕಚ್ಚುತ್ತ ನಿಂತೆ. ದೇವರ ಕೋಣೆಯಿಂದ ಅಜ್ಜಿ ಆಲಿಸುತ್ತಿದ್ದಾಳೆಂದು ನನಗೆ ಗೊತ್ತು. ಅಮ್ಮನಿಗೆ ಅದರ ಲೆಕ್ಕವಿಲ್ಲ.

"ರಾಗಜ್ಜ ನನ್ನ ಮೇಲೆ ಏನೆಂದರು ಹೇಳು?"

"ಏನಿಲ್ಲಪ್ಪ"

"ಇನ್ನೂ ಏಳು ವರ್ಷವಿಲ್ಲ ನಿನಗೆ, ಚೋಟುದ್ದದ ಹುಡುಗ, ಆಗಲೇ ಹೆತ್ತ ತಾಯಿಗೆ ದ್ರೋಹ ಬಗೆಯೋದನ್ನ ಕಲಿತೆಯಲ್ಲ."

"ಏನೂ ಅನ್ನಲಿಲ್ಲಮ್ಮ."

"ನನ್ನ ಕೊರಳು ಮುಟ್ಟಿ ಹೇಳುತ್ತೀಯ ? ಸುಳ್ಳು ಹೇಳಿದರೆ ನಾನು ಸಾಯುತ್ತೇನೆ. ಕೊರಳಾಣೆಗೂ ಹೇಳು."

ನಾನು ಎಂಜಲು ನುಂಗುತ್ತ ಕಣ್ಣಿನಲ್ಲಿ ನೀರು ತುಂಬಿ ನಿಂತೆ. ದೇವರ

ಕೋಣೆಯಿಂದ ಆಲಿಸುತ್ತಿರುವ ಅಜ್ಜಿ ನಾನು ಹೇಳಿದ ಮಾತನ್ನು ರಾಗಜ್ಜನಿಗೆ ಹೋಗಿ ಹಚ್ಚಿಕೊಡುತ್ತಾಳೆ. ಆದರೆ ಕೊರಳಾಣೆ ಹೇಳಿ ಸುಳ್ಳು ಹೇಳಿದರೆ ನನ್ನಮ್ಮ ಸಾಯುತ್ತಾಳೆ. ಏನು ಮಾಡಲಿ?

"ಹೊಟ್ಟೆಯಲ್ಲಿ ಹುಟ್ಟಿದ ಮಗನೂ ನನ್ನ ಭಾಗಕ್ಕೆ ಇಲ್ಲವಾದ. ತೌರಿನ ಕಡೆಯಿಂದ ಅಣ್ಣನೊಬ್ಬ ನನ್ನವನೂಂತ ಇದ್ದ. ಅವನಿಗೆ ನಾನು ಬೇಡವೆಂದರೂ ಆ ಹುಡುಗಿಯನ್ನು ಕಟ್ಟಿ ಮದುವೆಮಾಡಿ ಹೋದ ದೀಪಾವಳಿಯ ದಿನ ಕೊಂದದ್ದಾಯಿತು. ನೆನಸಿಕೊಂಡರೆ ನನ್ನ ಹೊಟ್ಟೆಯಲ್ಲಿ ಬೆಂಕಿಹಾಕಿದಂತೆ ಆಗುತ್ತದೋ ಅಪ್ಪು." ಸ್ವರವನ್ನು ಎತ್ತಿ ರಾಗಜ್ಜನ ಮಾತನ್ನು ಅನುಕರಿಸುತ್ತ 'ನಾನು ನೋಡಿ ಒಪ್ಪಿಗೆಕೊಟ್ಟು ಬಂದಿದ್ದೇನೆ. ಈ ಮದುವೆ ಆಗಿಯೇ ತೀರಬೇಕು' ನಿನ್ನ ತಂದೆಗೆ ಹೇಳಿದರೆ ಅವರು ಕೇಳುವವರೆ? 'ನಿಮ್ಮ ರಗಳೆ ನನಗೆ ಹಚ್ಚಬೇಡಿ – ನನ್ನ ಪಾಡಿಗೆ ನನ್ನನ್ನು ಬಿಡಿ' ಎಂದರು. ನಾನು ಮರೆಯುವವಳಲ್ಲ ತಿಳಿದಿಯಾ? ನಿನ್ನ ಅಜ್ಜ ನಿನಗೆ ಒಳ್ಳೆಯವರಾಗಿರಬಹುದು. ಮದುವೆಯಾಗಿ ಬಂದ ನನ್ನನ್ನು ನಾಲ್ಕು ವರ್ಷ ತೌರಿಗೆ ಕಳಿಸಲಿಲ್ಲ. ತೌರಿಗೆ ಹೋಗುತ್ತೇನೆಂದರೆ ಮಗನಿಗೆ ಚಾಡಿ ಚುಚ್ಚಿ, ಅವರು ನಿನ್ನಜ್ಜಿ ಸೇರಿ ನನಗೆ ಹೊಡೆಯುತ್ತಿದ್ದರು. ನಾನು ಒಂದೆರಡನ್ನು ಇಲ್ಲಿ ಸಹಿಸಲಿಲ್ಲ. ನನ್ನವಳೂಂತ ಇದ್ದ ಒಬ್ಬ ಅಮ್ಮ ಸತ್ತ ಮೇಲೆ ನನ್ನನ್ನು ತೌರಿಗೆ ಕಳಿಸಿದರು. ಅವಳ ಬೂದಿ ಮಾತ್ರ ನನಗೆ ಸಿಕ್ಕಿತು. ಇವರು ಸತ್ತರೆ ಸದ್ಗತಿಯಿದೆಯೆ ? ನಿನಗೆ ನಿನ್ನ ತಾಯನ್ನ ಪೀಡಿಸಿದವರ ಸಹವಾಸ ಇಷ್ಟವಾಗಿ ಕಾಣುತ್ತದೆ ಅಲ್ಲವೆ ? ನಾನು ತೆಪ್ಪನೆ ಕೂತು ಸಹಿಸುವವಳಲ್ಲ ಗೊತ್ತಾಯಿತ ?"

ಅಮ್ಮ ಅಳಲು ಪ್ರಾರಂಭಿಸಿದಳು. ಅಜ್ಜಿ ಇಣಿಕಿ ನೋಡಿದ್ದನ್ನು ಕಂಡು,

"ಕೇಳಿಸಿಕೊಳ್ಳಿ. ನಾನು ಹೇಳಿದ್ದೆಲ್ಲ ಕೇಳಿಸಿಕೊಳ್ಳಿ. ನಿಮಗೆ ನಾನು ಜಗ್ಗುವವಳಲ್ಲ" ಎಂದು ಇನ್ನಷ್ಟು ಗಟ್ಟಿಯಾಗಿ ಅತ್ತಳು. ನಾನು ಹಿಂದೆ ಹಿಂದೆ ಹೆಜ್ಜೆ ಹಾಕುವುದನ್ನು ಕಂಡು,

"ನಿಲ್ಲು ಸ್ವಲ್ಪ" ಎಂದಳು. ಕಣ್ಣೊರಸಿಕೊಂಡು ಮೆತ್ತಗೆ,

"ನಿನ್ನೆ ಅವರು ಅಜ್ಜಯ್ಯನಿಗೆ ದುಡ್ಡು ಕೊಡಲಿಲ್ಲವ ಹೇಳು" ಎಂದಳು. ಹಿಂದಿನ ದಿನ ರಾಗಜ್ಜ ಹೊಗೆಸೊಪ್ಪಿನ ಖರ್ಚಿಗೆಂದು ಅಪ್ಪನ ಹತ್ತಿರ ಕಾಸು ಕೇಳಿ ತೆಗೆದುಕೊಂಡದನ್ನು ನೋಡಿದ್ದೆ. ಆಮೇಲೆ ರಾಗಜ್ಜ ನನ್ನನ್ನು ಗುಟ್ಟಾಗಿ ಕರೆದು "ನಾನು ದುಡ್ಡು ಇಸಕೊಂಡದ್ದನ್ನು ಅಮ್ಮನಿಗೆ ಹೇಳಬೇಡ ಆಯಿತ?" ಎಂದಿದ್ದರು. ಈಗ ನಾನು ಏನು ಹೇಳಲಿ ?

"ಕೊರಳು ಮುಟ್ಟಿ ಹೇಳು. ಸುಳ್ಳು ಹೇಳಲು ಕಲಿಯಬೇಡ"



"ಇಸಕೊಂಡರು"

"ಅಲ್ಲ – ಇವರಿಗೆ ತನ್ನ ಅಪ್ಪನಿಗೆ ಕೊಡಬೇಕೆನ್ನಿಸಿದರೆ ನನ್ನೆದುರಿಗೇ ಯಾಕೆ ಕೊಡಬಾರದು ? ಒಟ್ಟಿನಲ್ಲಿ ನಾನೊಬ್ಬಳು ಕೆಟ್ಟವಳು. ವರ್ಷಕ್ಕೊಂದು ಒಳ್ಳೆ ಸೀರೆಗೆ ಗತಿಯಿಲ್ಲದೆ ಗೆಯ್ಯಲೊಬ್ಬಳು ನಾನು ಬೇಕು"

ಚಾವಡಿಗೆ ಅಲ್ಲಿಂದ ಓಡಿ ಬಂದು ನೋಡಿದಾಗ ರಾಗಜ್ಜನ ಹತ್ತಿರ ಕೂತು ಅಜ್ಜಿ ಮಾತಾಡುತ್ತಿದ್ದಳು. ರಾಗಜ್ಜ ಮಾತಾಡದೆ ಕೇಳಿಸಿಕೊಳ್ಳುತ್ತಿದ್ದರು. ಅವರು ಮುಖವೆತ್ತಿ ನನ್ನ ಕಡೆ ನೋಡಿದ ಕ್ರಮ ನೋಡಿ ನನ್ನ ಎದೆ ಧಸಕ್ಕೆಂದಿತು. ಯಾರ ಹತ್ತಿರ ಹೋಗಲಿ ? ಏನು ಮಾಡಲಿ ? ಚಾವಡಿಯ ಇನ್ನೊಂದು ಮೂಲೆಯಲ್ಲಿ ಲಾಟೀನಿಟ್ಟುಕೊಂಡು ಅಪ್ಪ ಲೆಖ್ಖ ಬರೆಯುತ್ತ ಕೂತಿದ್ದರು.

* * * * *

ಬರೆಯುವುದನ್ನು ನಿಲ್ಲಿಸಿ, ಬರೆಯಲೆ ಬೇಡವೆ – ನಿಷ್ಪಕ್ಷಪಾತವಾಗಿ ನಾನು ನೋಡಬಲ್ಲೆನೆ ಎಂದು ಯೋಚಿಸುತ್ತ ಕೂತ ರಾಘವನಿಗೆ ಸಂಜೆ ಕಳೆದು ಕತ್ತಲಾಗಿದೆ ಎಂದು ಗೊತ್ತಾಯಿತು. ಕೂತಲ್ಲೆ ಕೂತು ಒಂದು ತರಹದ ಮಂಕು. ಸುಸ್ತು. ಓಡಾಡಿ ಬಂದರೆ ವಾಸಿ ಎನ್ನಿಸಿದರೂ ಯಾಕೊ ಕೂತಲ್ಲಿಂದ ಏಳುವುದೇ ದೊಡ್ಡ ಶ್ರಮವೆನ್ನಿಸುವ ಭಾವನೆ. ಒಂದೊಂದು ಸಾರಿ ತನಗೆ ಏನನ್ನೂ ಮಾಡಲು ಸಾಧ್ಯವಿಲ್ಲ – ಕೂತಲ್ಲಿಂದ ಏಳುವುದೂ ಸಹ ಎನ್ನಿಸುತ್ತದೆ. ಬೆಳಗಿನ ಜಾವ ಬೇಗ ಏಳಬೇಕು, ಸ್ವಲ್ಪ ವ್ಯಾಯಾಮ ಮಾಡಬೇಕು, ಈ ಮಂಕು ಸಲ್ಲದು ಎಂದು ಎಷ್ಟೋ ಸಾರಿ ತೀರ್ಮಾನ ಮಾಡಿಕೊಂಡದ್ದುಂಟು. ಆದರೆ ಏನನ್ನೂ ಮಾಡಲಾರ. ಛಾಯಳ ಸ್ವಭಾವವೇ ಬೇರೆ. ಎಷ್ಟು ಚುರುಕಾಗಿ, ಆರೋಗ್ಯವಾಗಿ, ಕುಣಿಯುತ್ತ ನಗುತ್ತ ಪ್ರಾಯಕ್ಕೆ ಬಂದ ಚಿಗರೆಯಂತಿರುತ್ತಾಳೆ.

ಛಾಯ ರಾಘವನ ಕಾಲು ಬಳಿ ಕೂತು ಅವನ ತೊಡೆಯ ಮೇಲೆ ಗಲ್ಲ ಊರಿ ಮಗು ಮಾತನಾಡುವ ಹಾಗೆ,

"ನಿಮಗೆ ನನ್ನ ಮೇಲೆ ಸಿಟ್ಟ ?" ಎಂದಳು.

ರಾಘವನ ಮುಖ ಸ್ವಲ್ಪ ಪ್ರಸನ್ನವಾಗಿದ್ದು ಕಂಡು ಅವಳಿಗೆ ಗೆಲುವಾಯಿತು. ಅವನ ಪಕ್ಕೆಗೆ ಕಚಕುಳಿಯಿಟ್ಟಳು. ಹಾ ಹಾ ಎಂದು ರಾಘವ ದಡಕ್ಕನೆ ಎದ್ದು ನಿಂತ. 'ಕಚಕುಳಿಯಿಡಬೇಡ ಛಾಯ' ಎಂದು ಮತ್ತೆ ಕೂತ. ಕುಚೇಷ್ಟೆಯ ದೊಡ್ಡ ಕಣ್ಣುಗಳನ್ನು ಎತ್ತಿ "ಅದೇನು ಇವತ್ತೆಲ್ಲ ಯೋಚನೆ" ಎಂದು ಮತ್ತೆ ಕೇಳಿದಳು. ಕಿಟಕಿಯಿಂದ ಹೊರಗೆ ಕಾರ್ತೀಕದ ಶುಭ್ರ ನಕ್ಷತ್ರಗಳ ಕತ್ತಲು. ಏನೋ ಹಗುರಾಗುತ್ತಿದೆ ಒಳಗೆ. 'ಯಾವುದೂ ಅಷ್ಟು ಮುಖ್ಯವಲ್ಲ, ಬಿಡು', ಎನ್ನಿಸುತ್ತದೆ ಒಂದೊಂದು

ಸಾರಿ. ಆದರೆ ಎಲ್ಲೋ ಕೆಲವು ಸಾರಿ ಮಾತ್ರ. ಮತ್ತೆ ಯಥಾಪ್ರಕಾರ. ಛಾಯಳ ಕಿವಿಯ ಮೇಲೆ ಬಂದ ಕೂದಲನ್ನು ಮೃದುವಾಗಿ ತಳ್ಳುತ್ತ "ಏನಿಲ್ಲ" ಎಂದ.

"ನಂಗೊತ್ತು. ನಿಮಗೆ ನನ್ನ ಮೇಲೆ ಇಷ್ಟವಿಲ್ಲ. ಅದಕ್ಕೇ ಮಧ್ಯಾಹ್ನದಿಂದಲೂ ನೀವು ಒಂದು ಥರಾ..."

ಅವಳ ಮಾತಿನಲ್ಲಿ ಲೇವಡಿಯಿತ್ತು. ಒಲಿಸಿಕೊಳ್ಳಲೆಂದು ಮಗುವಿನಂತೆ ಪೊಟ್ಟು ಪೊಟ್ಟಾಗಿ ಆಡುವ ಆಟಿಕೆಯೂ ಇತ್ತು. ಆದರೆ ಈ ಮುದ್ದು ರಾಘವನಿಗೆ ಈಗ ಬೇಡ. ಅವಳ ಮನಸ್ಸನ್ನು ನೋಯಿಸಲೂ ಇಷ್ಟವಾಗುವುದಿಲ್ಲ. ಹೆಂಡತಿಯನ್ನೆತ್ತಿ ತೊಡೆಯ ಮೇಲೆ ಕೂರಿಸಿಕೊಂಡ. ಅದರಲ್ಲಿದ್ದ ಯಾಂತ್ರಿಕತೆ ಛಾಯಾಗೆ ಗೊತ್ತಾಯಿತು. ತನಗೇ ವಿಶೇಷವಾದ ಇನ್ನು ಯಾವುದೋ ಲೋಕದಲ್ಲಿ ಅವನು ಇರುವುದು ಅವಳಿಗೆ ಸಹಿಸುವುದಿಲ್ಲವೆಂದು ರಾಘವನಿಗೂ ಗೊತ್ತು. ಯಾಕೆ ಒಬ್ಬರನ್ನೊಬ್ಬರು ತುಂಬ ಮುದ್ದಿನಿಂದ ಮಗುವಿನಂತೆ ಕಾಣುತ್ತಿದ್ದಾರೆಂದು ನಟಿಸಬೇಕು ? ಛಾಯ ಕೊರಳಿನ ಮೇಲೆ ಕೈಹಾಕಿ ಹೇಳಿದಳು,

"ನನಗೂ ಹೇಳಿ."

"ನೋಡು ಛಾಯ. ರಾಗಜ್ಜ ಅಪ್ಪ ಅಮ್ಮನ ಹತ್ತಿರ ಜಗಳವಾಡಿ ಹೋಗಿ ಯಾರ ಮನೆಯದೋ ಬಚ್ಚಲಿನಲ್ಲಿ ಬೆಂಕಿ ಕಾಯಿಸಿಕೊಳ್ಳುತ್ತ ಕೂತವರು ಕೂತ ಹಾಗೇ ಪ್ರಾಣಬಿಟ್ಟರು. ನನ್ನ ಮುಖ ನೋಡದೆ ಅಮ್ಮ ಸತ್ತಳು. ಈಗ ಅಪ್ಪ ನಿನ್ನ ಹಂಗು ನನಗೆ ಬೇಡವೆಂದು ಒಂಟಿಯಾಗಿದಾರೆ. ಅವರಿಗೆ ವಯಸ್ಸಾಗುತ್ತಿದೆ..."

ಛಾಯಳ ಮುಖ ಮ್ಲಾನವಾಯಿತು. ಈ ಮಾತು ಬಂದದ್ದು ಇದು ಮೊದಲನೆಯ ಸಲ್ಲವಲ್ಲ. ಗೊತ್ತಿರುವ ವಿಷಯವನ್ನು ಹೀಗೆ ಆಡಿ ಹೇಳಲು ಏನು ಕಾರಣ ? 'ನಿನಗಾಗಿ ನೋಡಿ ನಾನು ಅಪ್ಪ ಅಮ್ಮನನ್ನು ತೊರೆದೆ' ಎಂದು ತಿಳಿಸಿ ತೀಡಿ ಹೇಳುವ ಸಣ್ಣತನವಲ್ಲವೆ ?

"ನನ್ನನ್ನು ನೀವು ಮದುವೆಯಾದಿರಿ ಅಂತ ಇಷ್ಟು ಅವಾಂತರ ಅಲ್ಲವೆ ? ಮದುವೆಯಾಗುವ ಮೊದಲೆ ಯೋಚಿಸಬಾರದಿತ್ತೆ? ಈಗ ಹೀಗೆ ವ್ಯಥೆ ಪಟ್ಟು ನಿನ್ನದೇ ಏನೋ ತಪ್ಪು ಎನ್ನಿಸುವಂತೆ ನನಗೆ ಹೇಳುತ್ತಿದೀರಲ್ಲ" ಕಟುವಾಗಿ ಮಾತಾಡಿದವಳು ಎದ್ದು ಹೋಗಿ ಪಕ್ಕದ ಕುರ್ಚಿಯಲ್ಲಿ ಕೂತಳು. ರಾಘವ ಕೈಹಿಡಿದು ಎಳೆಯಲು ಹೋದಾಗ 'ಬೇಡ ಬಿಡಿ' ಎಂದಳು. ಇವಳಿಗಿಷ್ಟೂ ತಿಳಿಯುವುದಿಲ್ಲವೆ, ಸಹಾನುಭೂತಿಯಿಲ್ಲವೆ ಎಂದು ಕಸಿವಿಸಿಯಾಗಿ ರಾಘವ ಹೇಳಿದ :

"ಹಾಗಲ್ಲ ಛಾಯ. ನಾನು ನಿನ್ನ ಮದುವೆಯಾಗದಿದ್ದರೂ ಆಗಬೇಕಾದ್ದೆಲ್ಲ



ಆಗುತ್ತಿತ್ತು. ಹುಟ್ಟಿದೂರಿಂದ, ತಾಯಿತಂದೆಯಿಂದ ಕಡಕೊಂಡು ಬೇರೆಯಾಗಬೇಕೆಂಬ ಹಂಬಲದಿಂದಲೆ, ಬೇಕೂಂತ ನಾನೇ..."

ರಾಘವ ಮಾತನ್ನು ಮುಂದುವರಿಸಲಿಲ್ಲ. ನಿನ್ನ ಮೇಲಿನ ಪ್ರೀತಿಯಿಂದ ಮಾತ್ರವಲ್ಲ ನಾನು ನಿನ್ನನ್ನು ಮದುವೆಯಾದದ್ದು ; ಕರುಳುಬಳ್ಳಿಗಳನ್ನು ಸಂಪೂರ್ಣ ಕಡಿದು ಹಾಕಿ ನನ್ನ ಬಾಳಿನ ಗತಿಯನ್ನು ಹುಡುಕಬೇಕೆಂದು ನಿನ್ನ ಮದುವೆಯಾದೆ ಎಂದು ಹೇಳಿದರೆ ನಿನ್ನನ್ನು ಬರಿ ನೆವವಾಗಿ ಉಪಯೋಗಿಸಿಕೊಂಡೆ, ನಿನ್ನ ಮೇಲೆ ನನಗೆ ಪ್ರೀತಿಯಿಲ್ಲ ಎಂದ ಹಾಗಾಗುತ್ತದೆ. ಹಾಗೆ ಹೇಳಿದರೆ ನಿಜ ಹೇಳಲು ಹೋಗಿ ಸುಳ್ಳು ಹೇಳಿದಂತೆ. ಆದರೆ ತಾಯಿ ತಂದೆಗೆ ಪರಕೀಯನಾಗಿ ಬಾಳೋದು ನನಗೆ ಬೇಕಿತ್ತು, ಆದ್ದರಿಂದ ಅವರು ಒಪ್ಪದ ನಿನ್ನನ್ನು ಮದುವೆಯಾದೆ ಎನ್ನುವುದೆ ನಿಜವೆ. ಇಂತಹ ಮಾತುಗಳನ್ನು ಆಡುತ್ತ ಕೂತರೆ ಅವಳ ಒಡನಾಟದಿಂದ, ಮೈಸಲಿಗೆಯಿಂದ, ತಾನು ಬಯಸಿ ಪಡೆದಿರುವ, ಪಡೆಯುತ್ತಿರುವ ಸುಖವನ್ನು ಇಲ್ಲವೆಂದ ಹಾಗಾಗುತ್ತದೆ. ಮಾತನಾಡದಿರುವದೇ ಮೇಲು ; ನನ್ನನ್ನು ಪ್ರೀತಿಸಿ ಮದುವೆಯಾದವಳನ್ನು ನನ್ನ ಭೂತಕ್ಕೆ, ನನಗೆ ವಿಶಿಷ್ಟವಾದ ಸಮಸ್ಯೆಗಳಿಗೆ ಭಾಗಿಯಾಗಿ ಮಾಡದಿರುವುದು ಮೇಲು. ತಾಯಿ ಮುದುಕಿಯಾಗುತ್ತಿದ್ದಾಳೆಂದು ತಿಳಿದಿದ್ದರೂ ನಾನು ಅವಳನ್ನು ನೋಡಲು ಹೋಗಲಿಲ್ಲ – ಅಹಂಕಾರ ಅಡ್ಡ ಬಂದಿತೆ ? ಅವರಿಂದ ದೂರವಾಗಿರಬೇಕು ಎಂದು ಬಯಸಿ, ಅದರೆಲ್ಲದರ ಜವಾಬ್ದಾರಿ ನನ್ನದೆಂದು ತೀರ್ಮಾನಿಸಿ ನಾನು ಮದುವೆಯಾದೆ. ತಾಯಿ–ತಂದೆ, ಛಾಯಳನ್ನು ಒಪ್ಪಿಕೊಂಡಿದ್ದರೆ ನನಗೆ ಸಮಧಾವಾಗುತ್ತಿತ್ತೊ ಏನೊ ? ಎಲ್ಲದಕ್ಕೂ ವಿರೋಧಿಯಾಗಿರಬೇಕೆಂಬ ಹಂಬಲ ಒಳಗೆ ಇದೆ. ಯಾಕೆ ? ಅದರ ಗೋಜು ಛಾಯಾಗೆ ಬೇಡ. ನನ್ನ ಪಾಡು ಏನೇ ಇರಲಿ 'ಬಾ ನನಗೆ ಸುಖ ಕೊಟ್ಟು ಸುಖ ಪಡಿ' ಎನ್ನುವ ಇಪ್ಪತ್ತು ವರ್ಷಗಳ ಯೌವನದ ಬಯಕೆಯನ್ನು ನಾನು ತೀರಿಸಬೇಕು. ಇವಳಿಗೆ ಹೇಳಲಾರೆ, ಹೇಳಬಾರದು, ಹೇಳಿದರೂ ಅವಳಿಗದು ತಿಳಿಯದೆನ್ನಿಸಿ ರಾಘವ ಎದ್ದು ನಿಂತು, ಕಿಟಕಿಯಿಂದ ಕಾರ್ತೀಕದ ಕತ್ತಲನ್ನು ನೋಡಿದ. 'ಛಾಯಾ' ಎಂದ. 'ಎಷ್ಟು ಗಂಟೆ ಛಾಯ' ಎಂದ. ಪಕ್ಕದಲ್ಲಿ ಬಂದು ನಿಂತು 'ಆಕಾಶ ಎಷ್ಟು ಶುಭ್ರವಾಗಿದೆಯಲ್ಲವ' ಎಂದಳು.

ಪರಕೀಯನಾಗಬೇಕೆಂಬ ಹಂಬಲದ ಮೂಲವೆಲ್ಲಿ ? ಸ್ವಾರ್ಥದಲ್ಲಿಯೆ? ಅಹಂಕಾರದಲ್ಲಿಯೆ ? ತನ್ನ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಏಕಾಕಿತನದಲ್ಲಿ ಅನುಭವಿಸಬೇಕೆನ್ನುವ ಛಲದಲ್ಲಿಯೆ ? ಖುಷಿಯಾದ ಬಾಳು ಬೇಡ ; ಜೀವನ

ಅಗ್ನಿ ದಿವ್ಯವಾಗಲಿ ಎಂದು ಬಯಸುವುದು ಮನಸ್ಸಿನ ರೋಗವೆ ? ಅಥವಾ ನೋವಿನ ಬಾಲ್ಯದ ದಿನಗಳಿಂದ ಮುಕ್ತನಾಗಬೇಕೆಂದು ತಾಯಿತಂದೆಯನ್ನು ಧಿಕ್ಕರಿಸಿದೆನೆ ? ಯಾಕೆ ನನ್ನ – ಛಾಯಳ ಸಂಬಂಧ ಇನ್ನೂ ಸಂಪೂರ್ಣ ಸರಳವಾಗಿಲ್ಲ ? – ಕತ್ತಲಿನಲ್ಲಿ ಉತ್ತರವಿರಲಿಲ್ಲ. ಕಾರ್ತೀಕದ ರಾತ್ರೆ ಕಳೆದ ಕಾರ್ತೀಕದ ನೆನಪುಗಳನ್ನು ಹೊತ್ತಿಸುತ್ತಿದೆ.

* * * * *

ಆ ದೀಪಾವಳಿಯ ಬಗ್ಗೆ ಬರೆಯಬೇಕು. ಕಾರ್ತೀಕದ ದಿನಗಳು ಋತುಚಕ್ರದಲ್ಲಿ ಮರಳಿ, ಹತ್ತಿಸಿಟ್ಟ ಹಣತೆಗಳು ಮಂಕಾಗಿ ಉರಿಯುವುದು ನೋಡಿದಾಗ, ಸತ್ತದ್ದು, ಕೆಟ್ಟದ್ದು, ನೊಂದದ್ದು, ಬೇಕೆಂದೇ ನೋಯಿಸಿದ್ದು ನೆನಪಾಗುತ್ತದೆ. ತಾನೇ ಆ ಬಾಲಕ – ಆದರೂ ಈಗಿನ ನನಗೆ ಪರಕೀಯ. ಆದ್ದರಿಂದ ಈ ಕಣ್ಣಿನಿಂದ ಆ ಕಣ್ಣಿನಿಂದ ಒಟ್ಟಾಗಿ ಕಾಲವನ್ನು ನೋಡಬಹುದು.

ಸಗಣಿಯ ಪುಟ್ಟ ಪುಟ್ಟ ಉಂಡೆಗಳನ್ನು ಮಾಡಿ ಹೊಸಲಿನ ಮೇಲಿಟ್ಟು, ಮೇಲೆ ದೂರುವೆ ನೆಟ್ಟು, ಒಂದೊಂದು ಚೆಂಡುಹೂವಿಟ್ಟು ಅಲಂಕರಿಸುವುದು ಎರೆದುಕೊಳ್ಳುವ ಹಬ್ಬದ ಹಿಂದಿನ ದಿನವೆ ? ಅಂಗಳದಲ್ಲಿ, ಗೊಬ್ಬರದ ಗುಂಡಿಯ ಬಳಿ, ಕೊಟ್ಟಿಗೆಯ ಹತ್ತಿರ, ಅಶ್ವತ್ಥವೃಕ್ಷದ ಕೆಳಗೆ ಗ್ರಾಮದ ಮುಖ್ಯ ಬೀದಿಗಳಲ್ಲಿ ಪಾತಾಳದಿಂದ ಬಲೀಂದ್ರ ಲೋಕವನ್ನು ನೋಡಿ ಹೋಗಲು ಬರುವನೆಂದು ಪಂಜುಗಳನ್ನು ನೆಟ್ಟು 'ದೀಪ್ ದೀಪ್ ದೀಪ್ ಓಳ್ಗೆ – ಹಬ್ಬಕ್ಕೊಂದು ಹೋಳ್ಗೆ' ಎಂದು ಕೂಗುವುದು, ಕೇರಿಗೆ ಕೇಳಿಸುವ ಹಾಗೆ ಪೈಪೋಟಿಯಲ್ಲಿ ಗಂಟಲೆತ್ತಿ ಕೂಗುವುದು ಯಾವ ರಾತ್ರೆ ? ಮಧ್ಯ ರಾತ್ರೆಯಲ್ಲಿ ಒಂದು ಕನಸಿನಿಂದ ಇನ್ನೊಂದು ಕನಸಿಗೆ ಮಗ್ಗುಲಾಗುವ ಅರೆವುಮರೆವಿನಲ್ಲಿ ಅಂಟಿಗೆ ಪಂಟಿಗೆಯ ತಂಡದವರು ಕಾರ್ತೀಕಕ್ಕೆಲ್ಲ ಕೊರಳು ಕೊಟ್ಟು ಹಾಡುವುದು ಯಾವ ದಿನ ? ಮಂಕಾಗಿ ಉರಿಯುವ ಹಣತೆ ಮಿಣಕ್ ಮಿಣಕ್ ಎನ್ನುತ್ತದೆ. ನರಸಿಂಹ ಮಾವ ಸತ್ತ. ರಾಗಜ್ಜ ಸತ್ತರು. ಅಮ್ಮ ಸತ್ತಳು. ಒಂದಲ್ಲ ಒಂದು ದಿನ ಎಲ್ಲರೂ ಸಾಯಬೇಕೆನ್ನುವ ಮೃತ್ಯುಪ್ರಜ್ಞೆಯಲ್ಲಿ ಹಬ್ಬ ಹುಣ್ಣಿಮೆ ಸಡಗರವೆಲ್ಲ ಅಹ ಎಷ್ಟು ಸುಂದರ, – ನೋಯುವುದು ನೋಯಿಸುವುದು ಎಷ್ಟು ವ್ಯರ್ಥ ಎಂದು ಬಾಳು ಹದವಾಗಬೇಕು, ಮೃದುವಾಗಬೇಕು, ಅದರ ಬದಲು – ಎಷ್ಟೆಲ್ಲ ತಿಳಿದರೂ ಈಗ ನಾನೇ,

ಬೇಗ ಕೈಕಾಲು ತೊಳೆದುಕೊ ಹಂಡೆ ಖಾಲಿ ಮಾಡಿ ತೊಳೆದು ಶುದ್ಧ ಮಾಡಬೇಕೆಂದು ಅಮ್ಮ ಹೇಳಿದಳು. ಕೈಕಾಲು ತೊಳೆದು ಚಾವಡಿಯಲ್ಲಿ ಶಾಲು ಹೊದ್ದು ಮಾತಾಡದೆ ಕೂತ ರಾಗಜ್ಜನ ಎದುರು ಮಗ್ಗಿ ಬರೆಯುತ್ತ ಕೂತೆ.



ಲಾಟೀನಿನ ಎದುರು ಕೂತು ಕನ್ನಡಕವನ್ನು ಮೂಗಿನ ತುದಿಗೆ ಸಿಕ್ಕಿಸಿಕೊಂಡು ಅಪ್ಪ ರೂಲುದೊಣ್ಣೆಯಿಂದ ಲೈನುಗಳನ್ನೆಳೆಯುತ್ತಿದ್ದರು. ಬಚ್ಚಲನ್ನು ಗುಡಿಸಿ ತೊಳೆಯುತ್ತಿರುವ ಶಬ್ದ ಹಿತ್ತಲಲ್ಲಿ. ಕಿವಿಯೆಲ್ಲ ಒಳಗೆ – ಒಳಗೆ ಹೋಗುವ ಅವಸರ. ನೆವಕ್ಕಷ್ಟು ಬರೆದು ಅಪ್ಪ ಮಗ್ನರಾಗಿ ಕೂತಿರುವುದು ನೋಡಿ ಒಳಕ್ಕೋಡಿದೆ.

ಪಳ ಪಳ ಹೊಳೆಯುತ್ತಿತ್ತು ಹಂಡೆ. ಒಲೆ ನೆಲವೆಲ್ಲ ಸಗಣಿ ಹಾಕಿ ಸಾರಿಸಿ ಹಸಿ ಹಸಿಯಾಗಿತ್ತು. ರಂಗೋಲೆ ಹಾಕುತ್ತ ಕೂತಿದ್ದಳು ಅಮ್ಮ. "ಎಲ್ಲ ನಾನೇ ಮಾಡಿ ಸಾಯಬೇಕು" ಎಂದು ಗೊಣಗಿದಳು. ಆಮೇಲೆ ಹಂಡೆಯ ಮೈ ಮೇಲೆ ಕೆಮ್ಮಣ್ಣಿನ ಮತ್ತು ಜೇಡಿಯ ಪಟ್ಟೆಗಳನ್ನೆಳೆದು, ಕೊರಳಿಗೆ ಹಿಂಡ್ಳಚ್ಚಿ ಬಳ್ಳಿಗಳನ್ನು ಕಟ್ಟಿ, ಮಡಿಯಲ್ಲಿ ನೀರು ತುಂಬಿಸುವುದನ್ನು ನೋಡುತ್ತ ಪರವಶನಾದೆ.

"ಮೈಲಿಗೆಯಲ್ಲಿ ಹಂಡೆ ನೀರು ಮುಟ್ಟೀಯ – ಊಟವಾದ ಮೇಲೆ ಹಿತ್ತಲಲ್ಲಿ ಹೋಗಿ ಕೈ ತೊಳೆದುಕೊ. ಬಚ್ಚಲಲ್ಲಿ ಉಚ್ಚೆ ಹೊಯ್ಯಬೇಡ" ಎಂದು ಅಮ್ಮ ಎಚ್ಚರ ಹೇಳಿದಳು.

* * * * *

ರಾಘವ ನೆಟ್ಟಿಗೆ ಮುರಿದು ಕೈ ಝಾಡಿಸಿದ. ಸಿಗರೇಟು ಹತ್ತಿಸಿ ಬರೆದದ್ದನ್ನು ಓದುತ್ತ ಅಲ್ಲಿ ಇಲ್ಲಿ ತಿದ್ದುತ್ತ ಕೂತ. ಬೇಜಾರು. ಅಡಿಗೆ ಮಾಡಿಟ್ಟು ಒಳಗೆ ರೇಡಿಯೋ ಕೇಳುತ್ತ ಕೂತಿದ್ದ ಛಾಯನನ್ನು ಕರೆದ. ಹೆಸರು ಹಿಡಿದು ಕೂಗವಾಗ ಒಮ್ಮೊಮ್ಮೆ, ಎಷ್ಟೊಂದು ಮಾತುಗಳಲ್ಲಿ ಹೇಳಲಾರದ್ದನ್ನೆಲ್ಲ ತುಂಬಿ, ಬಲು ಸರಳವಾಗುವಂತೆ ಮಾಡಬಹುದು. ಛಾಯ ಹೊರಗೆ ಬಂದು ಮಾತನಾಡದೆ ನಿಂತ ಒಂದು ಕ್ಷಣದ ಮೌನದಲ್ಲಿ, ಮತ್ತೆ 'ಏನು?' ಎಂದ ರೀತಿಯಲ್ಲಿ, ರಾಘವನಿಗೆ ಸುಖವಾಗಿ ಎದ್ದು ನಿಂತ. ಮನಸ್ಸು ಹೆಚ್ಚು ಹೆಚ್ಚು ಅರಿವಿನ ಕಡೆಗೆ, ಬೆಳಕಿನ ಕಡೆಗೆ, ಅತಿಪ್ರಜ್ಞೆಯ ಕಡೆಗೆ ಹರಿದರೆ – ನಿದ್ದೆಯ ದಿಕ್ಕಿನಲ್ಲಿ, ಕಾಮ ತರುವ ಮರೆವಿನ ದಿಕ್ಕಿನಲ್ಲಿ ಕತ್ತಲೆಗೆ ರಕ್ತ ಹರಿಯುತ್ತದೆ ಎಂದು ಬರೆಯಬೇಕು. ಈ ಛಾಯಳಿಗೆ ಭೂತವೇ ಇಲ್ಲ. ರಾಘವನ ಹಿಂದೆ ನಿಂತು ಅವನ ಸೊಂಟವನ್ನು ಕೈಗಳಿಂದ ಬಳಸಿ, "ನೀವು ರೈಲಂತೆ, ಈಗ ಊಟದ ಮನೆ ಕಡೆಗೆ ಹೋಗತ್ತಂತೆ, ಜುಗ್, ಜುಗ್, ಜುಗ್" ಎಂದು ತಳ್ಳುತ್ತ ರಾಘವನನ್ನು ಒಳಗೆ ಕರೆದುಕೊಂಡು ಹೋದಳು. ರೇಡಿಯೋನ್ನ ಆರಿಸಿ – "ನಾನು ಪಾಪಣ್ಣಿಯಂತೆ, ನೀವೇ ಇವತ್ತು ತಟ್ಟೆಯಿಡೋದಂತೆ" ಎಂದಳು. ರಾಘವ ತಟ್ಟೆಗಳನ್ನು ತಂದಿಟ್ಟ. "ನೀವು ತುಂಬಾ ಒಳ್ಳೆಯವರಂತೆ, ಅನ್ನ ಸಾರು ತಂದಿಡುತ್ತೀರಂತೆ" ಎಂದಳು. ರಾಘವ ಅನ್ನ ಸಾರನ್ನು ತಂದಿಟ್ಟು ತಟ್ಟೆಯ ಎದುರು ಕೂತ. ರಾಘವ ತನ್ನ ಹಾಸ್ಯಕ್ಕೆ ನಗದಿದ್ದುದನ್ನು

ಕಂಡು – "ಇಲ್ಲಪ್ಪ. ಇನ್ನು ಮುಂದೆ ಹುಡುಗಾಟಿಕೆ ಮಾಡಕೂಡದು. ಗಂಭೀರವಾಗಿರಬೇಕು" ಎಂದು ಮುಖವನ್ನು ಬುಕ್ಕಮಾಡಿ ರಾಘವನನ್ನು ನೋಡಿದಳು. ರಾಘವನಿಗೆ ನಗು ಬಂತು. "ಆಟ ಸಾಕು. ಊಟ ಮಾಡೋಣ ಛಾಯ" ಎಂದ.

* * * * *

ಆವತ್ತು ಊಟ ಮಾಡುವಾಗ ನಡೆದದ್ದು ಮರೆಯುವುದಿಲ್ಲ. ಅಪ್ಪನ ಫಲಾಹಾರ ಮುಗಿದಿತ್ತ. ನಾನು, ರಾಗಜ್ಜ, ಅಜ್ಜಿ ಊಟಕ್ಕೆ ಕೂತಿದ್ದೆವು. ನಾನು ರಾಗಜ್ಜ ಜೊತೆಗೆ ; ಅಜ್ಜಿ ಎದುರು. ಅಮ್ಮ ನಮಗೆ ಹುಳಿ ಬಡಿಸಿ ಅಡಿಗೆ ಮನೆಯ ಬಾಗಿಲಿನ ಚೌಕಟ್ಟಿಗೆ ಒರಗಿ ಗಲ್ಲದ ಮೇಲೆ ಬೆರಳಿಟ್ಟು ಏನೋ ಯೋಚಿಸುತ್ತ ಬೇಸರದಲ್ಲಿ ನಿಂತಿದ್ದಳು. ಅವತ್ತು ಬಣ್ಣದ ಸೌತೆಕಾಯಿ ಹುಳಿ. ನನಗೆ ಬಣ್ಣದ ಸೌತೆ ಹುಳಿಯೆಂದರೆ ಇಷ್ಟ. ಅಜ್ಜಯ್ಯನ ಎಲೆಯಲ್ಲಿ ತುಂಬ ಹೋಳಿತ್ತ. ನಾನು ಅವರ ಎಲೆಯ ಕಡೆಗೆ ನೋಡಿದೆ. 'ನಿನಗೆ ಹೋಳು ಇಷ್ಟವಲ್ಲವೇನೊ, ಇಕೊ ತಗೊ' ಎಂದು ನನ್ನ ಎಲೆಗೆ ಅವರು ಅಷ್ಟು ಹೋಳು ಹಾಕಿದರು. ನಾನೊಂದು ಹೋಳೆತ್ತಿಕೊಂಡು ಅಮ್ಮನ ಕಡೆ ನೋಡಿದೆ. ಅವಳು ಕಣ್ಣು ಕೆಂಪು ಮಾಡಿ ನೋಡಿದಳು. ತಿನ್ನಕೂಡದೆಂದು ಅವಳು ಸೂಚಿಸಿದಳೆಂದು ನನಗೆ ಗೊತ್ತಾಗಿ ನಾನದನ್ನು ಎಲೆಯ ಪಕ್ಕಕ್ಕೆ ತಳ್ಳಿದೆ. ಇದನ್ನು ನೋಡುತ್ತ ಎದುರು ಕೂತಿದ್ದ ಅಜ್ಜಿ ಅಮ್ಮನ ಕಡೆ ತಿರುಗಿ,

"ಏನೇ ? ಅಜ್ಜನ ಎಂಜಲನ್ನು ಮೊಮ್ಮಗ ತಿನ್ನಬಾರದೇನೆ ? ಮಗುವಿಗೇಕೆ ದುರ್ಬುದ್ಧಿ ಕಲಿಸುತ್ತೀಯ ? ನೀವೇ ನೋಡಿದರ ?"

ಎಂದು ಅಜ್ಜನ ಕಡೆಗೆ ತಿರುಗಿ ಅನ್ನಲು ಅಜ್ಜಯ್ಯ ನನ್ನ ಕಡೆ ನೋಡಿ,

"ತಿನ್ನೊ ಮಗು. ನನ್ನ ಎಂಜಲನ್ನು ನೀನು ತಿನ್ನಬಹುದು"

ಎನ್ನಲು ನಾನು ಏನು ಮಾಡೋದು ತೋಚದೆ ಅಮ್ಮನ ಕಡೆ ತಿರುಗಲು,

"ಕಂಡವರ ಎಂಜಲನ್ನೆಲ್ಲ ತಿನ್ನಬಾರದೆಂದು ನಿನಗೆ ನಾನು ಸಾರಿ ಸಾರಿ ಹೇಳಲಿಲ್ಲೇನೊ"

ಎಂದು ಗಟ್ಟಿಯಾಗಿ ಅಮ್ಮ ಅಂದಳು.

ಒಂದು ಕ್ಷಣ ಮೌನವಿತ್ತು.

ಆಗ ಅಜ್ಜಿ ಅಜ್ಜಯ್ಯನಿಗೆ – "ನೋಡಿದಿರಾ, ನಾನು ನೀವು ಕಂಡವರು ಆದೆವು ಅಲ್ಲವೇ, ಹೋಗೋಣ ಇಲ್ಲಿಂದ, ಭಿಕ್ಷೆಯಾದರೂ ಎತ್ತಿ ಬದುಕೋಣ, ನಮ್ಮ ಪಾಲಿಗೆ ಒಬ್ಬ ಮಗು ಹುಟ್ಟಲಿಲ್ಲೆಂದು ತಿಳಿಯೋಣ" ಎಂದು ಅಳುತ್ತ



"ಅಲ್ಲ ಇವಳ ನಾಲಗೆ ಎಷ್ಟುದ್ದವಾಗಿದೇಂತ ನೀವೇ ಕಿವಿಯಾರೆ ಕೇಳಿಸಿಕೊಂಡಿರಿ ಅಲ್ಲವೇ, ಇವಳು ಮಾಡುವ ಅನಾಚಾರ ನಿಮಗಾಗಲೀ, ನಿಮ್ಮ ಮಗನಿಗಾಗಲೀ, ನಾನು ಹೇಳಿದರೆ ತಿಳಿಯೋದಿಲ್ಲ ಅಲ್ಲವೇ"

ಎನ್ನಲು, ಅಜ್ಜಯ್ಯ ಅರ್ಧಕ್ಕೆ ಊಟ ನಿಲ್ಲಿಸಿ ಆಪೋಶನ ತೆಗೆದುಕೊಂಡರು.

"ಇಲ್ಲಿಯ ಅನ್ನದ ಋಣ ಇನ್ನು ಹರೀತು ಎಂದಿಟ್ಟು ಕೊ" ಎಂದು ನಡುಗುತ್ತ ಎದ್ದುನಿಂತರು. ಚಾವಡಿಗೆ ಹೋಗಿ ಅಪ್ಪನ ಎದುರು ನಿಂತು ಗಟ್ಟಿಯಾಗಿ,

"ಏನಯ್ಯ ನಿನ್ನ ಹೆಂಡತಿಗೆ ಹೆದರಿಕೊಂಡು ಇನ್ನು ಮುಂದೆ ಇಲ್ಲಿ ಬದುಕಲಾರೆ. ಸಾಯುವಾಗ ನನ್ನ ಬಾಯಿಗೆ ನೀನಾಗಲೀ, ನಿನ್ನ ಹೆಂಡತಿಯಾಗಲೀ ನೀರು ಹಾಕುವುದು ಬೇಡ"

ಎಂದದ್ದು ಕೇಳಿಸಿತು. ಅಪ್ಪ ಧಡ ಧಡ ಅಡಿಗೆಮನೆಗೆ ಬಂದು ಅಮ್ಮ ಅಜ್ಜಿಯ ಎದುರು ನಿಂತು "ನಿಮ್ಮ ದೆಸೆಯಿಂದ ನನಗೆ ಶಾಂತಿಯಿಲ್ಲ. ನಾನು ಸಾಯಬೇಕು." ಎಂದು ರೂಲುದೊಣ್ಣೆಯಿಂದ ತಲೆ ಚಚ್ಚಿಕೊಳ್ಳಲು ಅಮ್ಮ, ಅಜ್ಜಿ, ಅಜ್ಜ ಒಟ್ಟಾಗಿ ರೂಲುದೊಣ್ಣೆಯನ್ನು ಇಸಕೊಂಡರು. ಮತ್ತೆ ಅಪ್ಪ ಅಮ್ಮನ ಕಡೆ ತಿರುಗಿ "ನಿನ್ನನ್ನು ಕೊಂದ ಮೇಲೆ ಉಳಿದವರಿಗೆಲ್ಲ ತೃಪ್ತಿಯಾದೀತು" ಎಂದು ಕೈಯೆತ್ತಿ ಬಡಿಯಲು ಹೋದಾಗ ಅಜ್ಜಯ್ಯ, "ಅಯ್ಯೊ ಅವಳನ್ನೇಕೆ ಕೊಲ್ಲುತ್ತೀಯೊ, ನಾನೇ ಮನೆ ಬಿಟ್ಟು ಹೋಗುತ್ತೇನೆ" ಎನ್ನಲು ಅಜ್ಜಿ, "ನಾನು ನಿಮ್ಮ ಜೊತೆ ಬರುತ್ತೇನೆ, ನನ್ನನ್ನು ಬಿಟ್ಟು ಹೋಗಬೇಡಿ" ಎಂದು ಹೊರಡಲು ಅಮ್ಮ, "ಮದುವೆಯಾಗಿ ನಾಕುವರ್ಷ ಇವರ ಕೈಯಲ್ಲಿ ನಾನು ಪಟ್ಟ ಕಷ್ಟ ಕೇಳುವವರು ಯಾರಿದ್ದಾರೆ ? ಇದ್ದೊಬ್ಬ ಅಣ್ಣನೂ ಸತ್ತ. ಬಾಯಿ ತಪ್ಪಿ ನಾನೊಂದು ಮಾತಾಡಿದೆ ಎಂದರೆ ಇಷ್ಟೊಂದು ರಾದ್ಧಾಂತವಾಗಬೇಕ? ನಾನು ಪ್ರಾಣವಿಟ್ಟುಕೊಳ್ಳುವುದಿಲ್ಲ, ಬಾವಿಗೆ ಹಾರಿ ಸಾಯುತ್ತೇನೆ" ಎಂದು ಹಿತ್ತಲಿನ ಬಾಗಿಲನ್ನು ತೆರೆದು ಧಿಡಿ ಧಿಡಿ ನಡೆಯಲು ನಾನು, "ಅಮ್ಮಾ, ಅಮ್ಮಾ" ಎಂದು ಕೂಗಿಕೊಂಡೆ. ಅಪ್ಪ, ಅಜ್ಜಯ್ಯ ಅವಳ ಹಿಂದೆ ಓಡಿ ಹೋಗಿ ಎಳೆದುಕೊಂಡು ಬಂದರು. "ಇಷ್ಟೆಲ್ಲ ನಿನ್ನ ದೆಸೆಯಿಂದ" ಎಂದು ಅಜ್ಜಯ್ಯ ಅಜ್ಜಿಗೊಂದು ಹೊಡೆದರು. "ಹಾ ನನ್ನನ್ನು ಕೊಂದು ಬಿಡಿ" ಎಂದು ಅಜ್ಜಿ ಅತ್ತಳು.

ನನಗಿನ್ನೂ ನೆನಪಿದೆ. ಊಟದ ಮನೆಯಲ್ಲಿ ನಾನು ಅಮ್ಮ ಇಬ್ಬರೆ ಉಳಿದಿದ್ದೇವೆ. ಕಲಸಿದ ಅನ್ನ ಕಲಸಿದ ಹಾಗೆ ಬಿಟ್ಟ ಅಜ್ಜಯ್ಯ ಅಜ್ಜಿಯ ಎಂಜಲೆಲೆಗಳ ಸುತ್ತ ಗೊದ್ದ ಓಡಾಡುತ್ತಿದೆ. ನಾನು ಆರಿದ ಅನ್ನದ ಮೇಲೆ ಕೈಯಿಟ್ಟು ಸುಮ್ಮನೆ ಕೂತಿದೇನೆ. ಅಜ್ಜಯ್ಯ ಹಾಕಿದ ಬಣ್ಣದ ಸೌತೆ ಹೋಳು ಹಾಗೇ ಇದೆ. ಅಮ್ಮ

ಎಣ್ಣೆ ಎಣ್ಣೆ ಅಳುತ್ತಾಳೆ ಭಣಗುಟ್ಟುವ ಮೌನದಲ್ಲಿ.

* * * * *

ಕತ್ತಲಿನಲ್ಲಿ ಬಾಗಿಲನ್ನು ತೆರೆದು, ಬರಿದಾದ ಚಾವಡಿಯನ್ನು ದಾಟಿ, ಮತ್ತೊಂದು ಬಾಗಿಲನ್ನು ನೂಕಿ ನೋಡಿದಾಗ

ನನ್ನ ಬಾಲ್ಯದ ದಿನಗಳನ್ನು ಎಣಿಸಿದ ಗಡಿಯಾರದ ಕೆಳಗೆ

ರಾಗಜ್ಜ ಹೊದೆಯುತ್ತಿದ್ದ ಶಾಲನ್ನು ಹೊದ್ದು ವಯಸ್ಸಾದ ಅಪ್ಪ ಒಬ್ಬರೇ ಲಾಟೀನಿನ ಎದುರು ಕೂತಿದ್ದರು. ಮನೆಯ ತುಂಬ ಭಣಗುಟ್ಟುವ ಮೌನ, ಕತ್ತಲು.

ನನ್ನ ಹಿಂದೆ ಛಾಯ ಪ್ರಯಾಣದಿಂದ ಬಳಲಿ ಮುಂದೇನಾಗುವುದೊ ಅಂಜುತ್ತ ನಿಂತಿದ್ದಳು.

ಅಪ್ಪನ ಕಾಲಿಗೆ ನಾನು ಬೀಳಲಿಲ್ಲ. ಬಿದ್ದು ಕ್ಷಮಿಸಿ ಎಂದು ಕೇಳಲೆ ಎನ್ನಿಸಿದರೂ, ಕೇಳಿದರೆ ಛಾಯಗೆ ಅವಮಾನ ಮಾಡಿದಂತೆ ಎನ್ನಿಸಿ, ಗಂಟಲು ಒಣಗಿ ಸುಮ್ಮನೆ ನಿಂತು "ಇವಳು ನನ್ನ ಹೆಂಡತಿ" ಎಂದೆ.

ಅಪ್ಪ ನನ್ನ ಕಡೆ ನೋಡಲಿಲ್ಲ. ಅಡಿಗೆಯವನನ್ನು ಕೂಗಿ 'ಇಬ್ಬರಿಗೂ ಬಡಿಸು' ಎಂದರು.

ಅಮ್ಮ ಸತ್ತಳೆಂದು ಸುದ್ದಿ ಕೇಳಿ ಬಂದೆ ಎಂದದ್ದಕ್ಕೆ "ಯಾಕೆ ಬಂದಿ? ಸಾಯುವಾಗ ನೀನು ಹಾಕುವ ನೀರು ಬೇಡ. ನಾನು ನನ್ನ ಅಪ್ಪನನ್ನು ನೋಡಿಕೊಂಡಷ್ಟೆ ನೀನು ನನ್ನನ್ನು ನೋಡಿಕೊಳ್ಳೋದು. ಆಗಲಿ. ಮಾಡಿದ ಕರ್ಮ ತೀರಬೇಕು" ಎಂದರು.

* * * * *

ನಾನು ನಿತ್ಯದಂತೆ ಅಜ್ಜಯ್ಯನ ಪಕ್ಕದಲ್ಲಿ ಮಲಗಬೇಕೊ ಬೇಡವೊ ತಿಳಿಯದೆ ಅಳುತ್ತಿದ್ದ ಅಮ್ಮನ ಹತ್ತಿರ ಎಂಜಲು ಕೈಯಲ್ಲೆ ಹೋಗಿ ನಿಂತಾಗ ಅವಳು 'ನಿನಗೆ ನಿನ್ನ ಅಜ್ಜಿ ಅಜ್ಜ ಹೆಚ್ಚೊ, ನಾನು ಹೆಚ್ಚೊ, ನಾನು ನೇಣು ಹಾಕಿಕೊಂಡು ಸತ್ತ ಮೇಲೆ ನಿನಗೆ ತಿಳಿಯುತ್ತದೆ' ಎಂದಳು. 'ಯಾರ ಜೊತೆ ಮಲಗಲಮ್ಮ' ಎಂದದ್ದಕ್ಕೆ ಎಲ್ಲಾದರೂ ಮಲಗಿಕೊ, ನನ್ನನ್ನೇನು ಕೇಳೋದು ಎಂದು ಊಟದ ಮನೆಯ ನೆಲದ ಮೇಲೆ ಒರಗಿದಳು. ನಾನು ಸುಮ್ಮನೇ ನಿಂತೆ. ಕೈತೊಳೆದು ಬಂದೆ. ನನಗೆ ನಿದ್ದೆ ಬಂದ ಮೇಲೆ ಎಲ್ಲಾದರೂ ಅಮ್ಮ ಹೋಗಿ ನೇಣುಹಾಕಿಕೊಂಡರೆ ? ಅಮ್ಮನ ಪಕ್ಕದಲ್ಲಿ ನೆಲದ ಮೇಲೆ ಒರಗಿಕೊಂಡೆ. ಚಳಿಯಾಯಿತು. ಅಮ್ಮ ಅಮ್ಮ ಎಂದೆ. ಮಾತಾಡಲಿಲ್ಲ. ತುಂಬ ಚಳಿಯಾಯಿತು.



ತಿರುಗಿ 'ಅಮ್ಮ' ಎಂದೆ. ಉತ್ತರ ಬರದಿದ್ದುದು ನೋಡಿ ಅಮ್ಮನಿಗೆ ನಿದ್ದೆ ಬಂತು, ನೇಣುಹಾಕಿಕೊಳ್ಳುವುದಿಲ್ಲ ಎಂದು ಅಜ್ಜಯ್ಯನ ಮಗ್ಗುಲಲ್ಲಿ ಹೋಗಿ ಬೆಚ್ಚಗೆ ಮಲಗಿದೆ. ಪಕ್ಕದಲ್ಲಿ ಕೂತು ಗೊಣಗುತ್ತಿದ್ದ ಅಜ್ಜಿಗೆ – "ನೀವು ಹೆಂಗಸರಿಂದ ನಮಗೆ ಸುಖವಿಲ್ಲ. ನಾವೂ ಹೆಂಗಸರಂತಾಗಿ ಬಿಡುತ್ತೇವೆ. ಹೋಗಿ ಮಲಗು. ಇಲ್ಲದಿದ್ದರೆ ಜಪ್ಪಿಬಿಟ್ಟೇನು" ಎಂದು ಅಜ್ಜಯ್ಯ ಗದರಿಸಲು "ನನ್ನ ಪಾಲಿಗೆ ನೀವೂ ಇಲ್ಲವೆಂದ ಹಾಗಾಯಿತು". ಎಂದು ಅಜ್ಜಿ ಅಳುತ್ತ ಹೋಗಿ ತನ್ನ ಹಾಸಿಗೆಯಲ್ಲಿ ಮಲಗಿದ ಮೇಲೆ, ಅಜ್ಜಯ್ಯ ಆಕಳಿಸಿ, ಅಚ್ಚುತಾನಂತ ಗೋವಿಂದ ಎಂದು, ನನ್ನನ್ನು ಶಾಲಿನಿಂದ ಬೆಚ್ಚಗೆ ಮುಚ್ಚಿದರು.

ಬೆಳಗ್ಗೆ – ಇನ್ನೂ ನಕ್ಷತ್ರಗಳೆಲ್ಲ ಕಾಣುವಷ್ಟು ಬೆಳಗ್ಗೆ – ಕಾಡಿನಿಂದಲೊ ಎಲ್ಲಿಂದಲೊ ಎನ್ನಿಸುವಂತೆ ಚಿ ಚಿ ಚಿ ಚಿಲಿ ಚಿಲಿ ಚಿಲಿ ಚಿಲಿ ಚಿಲಿ, – ಕಿವಿಗೊಟ್ಟು ಆಲಿಸಿದರೆ ಚೀ ಚೀ ಚೀ ಎಂಬ ಶಬ್ದ ತುಂಬಿರುವ ಮೌನದಲ್ಲಿ ಅಮ್ಮ ಬಂದು, ನನ್ನನ್ನು ತಟ್ಟಿ, 'ಏಳು ಏಳು' ಎಂದಳು. ನಾನು ಒಲ್ಲದೆ ಎದ್ದುಕೂತೆ. 'ಮಾವಯ್ಯ' ಎಂದು ಅಜ್ಜಯ್ಯನನ್ನು ಕರೆದಳು. ಅಜ್ಜಯ್ಯ ಮುಸುಕಿನಿಂದಲೇ 'ನಾನಿವತ್ತು ತಲೆಗೆ ಎಣ್ಣೆ ಹಾಕಿ ಎರೆದುಕೊಳ್ಳೋದಿಲ್ಲ' ಎಂದರು. ಅಮ್ಮ 'ನಾನೂ ಎರೆದುಕೊಳ್ಳುವುದಿಲ್ಲ' ಎಂದಳು. 'ನರಸಿಂಹ ಸತ್ತಮೇಲೆ ತಲೆಗೆ ಎಣ್ಣೆ ಹಾಕಬಾರದೆಂದು ಶಪಥ ಮಾಡಿದ್ದೇನೆ, ಮನೆಯವರು ಎರೆದುಕೊಳ್ಳಿ' ಎಂದರು ಅಜ್ಜಯ್ಯ. ಒಳಗೆ ಅಜ್ಜಿಯನ್ನು ಅಮ್ಮ ಏಳಿಸಿ ಎಣ್ಣೆಹಚ್ಚಿಕೊಳ್ಳಿ ಎಂದಳು. ಅದಕ್ಕವಳು 'ಅವರು ಎಣ್ಣೆ ಹಾಕಿಕೊಳ್ಳದಿದ್ದರೆ ನನಗೂ ಬೇಡ, ಸಾಯುವ ಮುದುಕಿಗೇಕೆ ಇಲ್ಲದ ಸಂಭ್ರಮ' ಎಂದಳು. ಕೋಣೆಯಲ್ಲಿ ಮಲಗಿದ್ದ ಅಪ್ಪ "ಥೂ ಇಷ್ಟು ಬೆಳಿಗ್ಗೆ ಎದ್ದು ಅದು ಯಾವ ಸಾವಿಗೆ ಎರಕೊಬೇಕು. ಹೋಗು." ಎಂದು ಗದರಿಸಿದರು. ನಾನು ಕಣ್ಣು ಪಿಳಿಪಿಳಿ ಬಿಡುತ್ತ ಕತ್ತಲಿನ ಚೀ ಚೀ ಚೀ ಚಿಲಿ ಚಿಲಿ ಆಲಿಸಿದೆ. ಮುಸುಕಿನಿಂದ ಅಜ್ಜಯ್ಯ "ಮುದ್ದಾ ನೀನು ಹೋಗಿ ಎರಕೊ" ಎಂದರು. ಸುಮಾರು ಹೊತ್ತು ಅಮ್ಮ ಹೊಸಲಿನ ಮೇಲೆ ಸುಮ್ಮನೆ ಕೂತಳು. ಅಜ್ಜಯ್ಯ ಅಮ್ಮನಿಗೆ "ಹಂಡೆ ನೀರು ಕಾದಿದ್ದರೆ ಮಗುವಿಗೆ ಎರೆಯಬಾರದ ? ಎಣ್ಣೆ ಹಚ್ಚು – ತಲೆಗೆ ಹಿಡಿಯಲಿ. ತಣ್ಣೀರು ಬೇಕಾದರೆ ಎದ್ದು ಸೇದಿ ಹಾಕುತ್ತೇನೆ" ಎಂದರು. 'ಬೇಡ ತುಂಬಿಟ್ಟದ್ದು ಇದೆ' ಎಂದಳು ಅಮ್ಮ. ಏಳು ಎಂದರು – ಎದ್ದೆ. 'ಬಲಗಡೆ ಮಗ್ಗುಲಲ್ಲಿ ಎದ್ದೆ ತಾನೆ' ಎಂದರು ಅಜ್ಜಯ್ಯ. ಹೂ ಎಂದೆ.

ದೇವರ ಎದುರು ಎರಡು ನೀಲಾಂಜನದಲ್ಲಿ ದೀಪ ಉರಿಯುತ್ತಿತ್ತು. ಅಲ್ಲೊಂದು ಮಣೆ ಹಾಕಿ ಅಮ್ಮ ನನ್ನನ್ನು ಕೂರಿಸಿದಳು. ಒಂದು ಬಟ್ಟಲಿನಲ್ಲಿ

ಎಣ್ಣೆಯನ್ನು ಹಿಡಿದುಕೊಂಡು ದೂರ್ವೆಯಿಂದ ಅದನ್ನು ನನ್ನ ಹಣೆಗೆ ಕೂದಲಿಗೆ ಸೋಕಿಸಿದಳು. ಹರಿವಾಣದಲ್ಲಿ ಕುಂಕುಮದ ನೀರು ಮಾಡಿ ಅಕ್ಷತೆ ಹಾಕಿ ಆರತಿ ಎತ್ತಿ ಎಣ್ಣೆಶಾಸ್ತ್ರ ಮುಗಿಸಿದಳು. ಎಣ್ಣೆಯ ಬಟ್ಟಲನ್ನು ನನ್ನ ಎದುರು ಇಟ್ಟು ಇದರಲ್ಲಿ ನಿನ್ನ ಮುಖ ನೋಡಿಕೊ. ಗ್ರಹಚಾರವೆಲ್ಲ ಕಳೆಯಲಿ ಎಂದಳು. ನಾನು ದೀಪದ ಎದುರು ಅದನ್ನಿಟ್ಟು ನೋಡಿ 'ನೋಡಿದೆ ಅಮ್ಮ' ಎಂದೆ. ಬಟ್ಟೆ ತೆಗಿ ಎಂದಳು. ನನಗಿಲ್ಲಿ ಬಟ್ಟೆ ತೆಗೆಯಲು ಚಳಿಯಮ್ಮ ಎಂದದ್ದಕ್ಕೆ ಹೋಗಲಿ ಬಚ್ಚಲು ಮನೆಯಲ್ಲೆ ತೆಗಿ ಎಂದಳು. ನಾನು ಬಚ್ಚಲಿಗೆ ಹೋಗಿ ಬಟ್ಟೆ ತೆಗೆದು ಬೆಂಕಿಯ ಎದುರು ಬೆನ್ನು ಕಾಯಿಸಿಕೊಳ್ಳುತ್ತ ಕೂತಿದ್ದು ಕಂಡು, ಬೆನ್ನು ಕಾಯಿಸಿಕೊಳ್ಳಬಾರದು, ವಾಮೆ, ಮನೆಯವರಿಗೆ ಕೆಡಕು ಎಂದಳು. ತಲೆಗೆ ಎಣ್ಣೆ ಹಚ್ಚಿ, ಕುಣಿಯುವ ನನ್ನ ಮೈಗೆಲ್ಲ ತಿಕ್ಕುತ್ತ, ತಾಯಿಯ ಕೈಯಲ್ಲಿ ಎಣ್ಣೆ ಹಾಕಿಸಿಕೊಳ್ಳಲು ಯಾಕೆ ನಾಚಿಕೆಯೊ, ಇನ್ನೂ ಚೋಟುದ್ದ ಇದ್ದಿ ಎಂದು ನಕ್ಕು, ಎಣ್ಣೆ ಸ್ವಲ್ಪ ಹಿಡಿಯಲಿ ಎಂದಳು. ಆಮೇಲೆ ಬಾನಿಯಲ್ಲಿ ಹವಣಮಾಡಿದ ನೀರಿನಲ್ಲಿ ಕೂರಿಸಿದಳು. ಬಿಸಿ ಬಿಸಿ ನೀರಿನ ಸ್ನಾನ ಆ ಹೊತ್ತಿನಲ್ಲಿ ಬಲು ಸುಖವಾಗಿ ಕಂಡು ಎಣ್ಣೆಸ್ನಾನ ಮಾಡಲು ಬೇರೆ ಯಾರೂ ಇಲ್ಲದ್ದರಿಂದ ಬೋಸಿ ಬೋಸಿ ನೀರು ಹೊಯ್ಯಿಸಿಕೊಳ್ಳುತ್ತ ಕೂತೆ. ತಣ್ಣಗಿನ ಮತ್ತಿಸೊಪ್ಪಿನ ನೋಳಿಯನ್ನು ಕುಣಿಯುತ್ತ ನಡುಗುತ್ತ ಅಮ್ಮನನ್ನು ನಗಿಸುತ್ತ ಮೂರು ಸಾರಿ ಹಾಕಿಸಿಕೊಂಡು, ಹು ಹು ಹು ಚಳಿಯಮ್ಮ ಎನ್ನುತ್ತ ತಲೆ ತೊಳೆಸಿಕೊಂಡೆ. ಆಗ ನನಗೆ ಉದ್ದ ಕೂದಲಿತ್ತು. ಬೆನ್ನು ಮೈ ಕೈ ತಿಕ್ಕಿದ ಮೇಲೆ ಕಂಕಳು ಸಂದಿ ತಿಕ್ಕಿಕೊ ಎಂದು ಸೀಗೆ ಕೊಟ್ಟಳು. ಅಭ್ಯಂಜನವಾದ ಮೇಲೆ ನನ್ನ ಮೈಯನ್ನು ಒಣಗಿದ ಬಟ್ಟೆಯಿಂದ ಚೆನ್ನಾಗಿ ಒರೆಸಿ, ತಲೆಗೊಂದು ಪಾಣಿಪಂಚೆಯನ್ನು ನೀರು ಹೀರಲು ಕಟ್ಟಿ, ದೃಷ್ಟಿಯಾಗದಿರಲೆಂದು ಹಂಡೆಗೆ ಹತ್ತಿದ ಕರಿಯನ್ನು ನನ್ನ ಹಣೆಗೆ ಹಚ್ಚಿ ದೇವರಿಗೆ ಹೋಗಿ ನಮಸ್ಕಾರ ಮಾಡು ಎಂದಳು. ಹೊಸ ಬಟ್ಟೆ ಹಾಕಿಕೊಳ್ಳಲೆ ಅಮ್ಮ ಎಂದದ್ದಕ್ಕೆ ಹಾ ಎಂದು ಮರದ ಪೆಟ್ಟಿಗೆಯ ಬಾಗಿಲು ತೆರೆದು ಹೊಸ ಶರ್ಟು ಚೆಡ್ಡಿಯನ್ನು ಕೊಟ್ಟಳು. ಗಂಧದುಂಡೆಯನ್ನು ಪೆಟ್ಟಿಗೆಯಲ್ಲಿಟ್ಟಿದ್ದರಿಂದ ಅದಕ್ಕೆ ಗಂಧದ ವಾಸನೆ ಬಂದಿತ್ತು. ಸಂಭ್ರಮದಿಂದ ಅರಿಸಿನ ಕುಂಕುಮ ಹಚ್ಚಿದ ಹೊಸ ಬಟ್ಟೆಯನ್ನು ತೊಟ್ಟು ಅಂಗಳಕ್ಕೆ ಬಂದು ನಿಂತೆ.

ಚುಮು ಚುಮೂ ನಸುಕು. ಮಂದ ಪ್ರಕಾಶದಲ್ಲಿ ಅಲ್ಲೊಂದು ಇಲ್ಲೊಂದು ಕರಗುವ ನಕ್ಷತ್ರ. ಇನ್ನೇನು ಹಗಲಾಗಬೇಕು ಎನ್ನುವುದಕ್ಕಿಂತ ಮುಂಚಿನ ಕತ್ತಲು ಕತ್ತಲು ಬೆಳಕು. ಮರಗಿಡಗಳಿಗೆಲ್ಲ ಏನೋ ರೀತಿಯ ಅಂಕುಡೊಂಕು ವಕ್ರ



ಆಕೃತಿಯ ಮಸಿಮಸಿಯಾದ ರೂಪು. ಅವುಗಳಲ್ಲಿ ಹಕ್ಕಿಗಳ ರೆಕ್ಕೆಗಳ ಪಟಪಟ. ಅಬ್ಬಕ್ಕನ ಕೋಳಿ ಕೋಗಿತು. ದೂರದಿಂದ ಇನ್ನೊಂದು ಕೋಳಿ ಕೂಗಿತು. ಇನ್ನೂ ದೂರದಿಂದ ಇನ್ನೊಂದು ಕೋಳಿ. ಸದ್ದು – ಮೌನಸದ್ದು. ಹೊಸ ಬಟ್ಟೆ ತೊಟ್ಟ ಗೆಲುವಿನಲ್ಲಿ ನಾನು ಸಂಭ್ರಮದಿಂದ ಬೆಳಗಾಗುವುದನ್ನು ನೋಡುತ್ತ ನಿಂತಿದ್ದೆ. ಹೋದ ದೀಪಾವಳಿ ನರಸಿಂಹಮಾವ ಸತ್ತ ಎಂಬ ಸುದ್ದಿ ಕೇಳಿಸಿಕೊಂಡ ಜಾಗದಲ್ಲಿ ಮಂಕಾಗಿ ಕೂತಿದ್ದ ಅಮ್ಮನನ್ನು – "ಅಮ್ಮ ಕಾಪಿ ಕೊಡ್ತಿಯೇನೆ?" ಎಂದು ಕೇಳಿದೆ. ಹಾ ಎಂದಳು. "ತಲೆಗೆ ಸುತ್ತಿದ ಪಾಣಿಪಂಚೆ ಬಿಚ್ಚಲೇನೆ ?" ಎಂದದ್ದಕ್ಕೆ "ಬೇಡ ಸ್ವಲ್ಪ ಹೊತ್ತು ಇರಲಿ, ನೀರು ಹೀರಲಿ" ಎಂದಳು. ಆಗ ಧಿಗ್ಗನೆ ಅದೆಷ್ಟು ಕಿರಣಗಳು ಬಲು ಚೆಲುವಾಗಿ ಆಕಾಶದ ಅಂಚಿನಿಂದ ದೂರದ ಬೆಟ್ಟದ ಗೆರೆಯ ಮೇಲೆ ಹಾರಿ ಕಾಣಿಸಿ ಕೊಂಡಾಕ್ಷಣ ನಾನೇನು ಕಂಡೆ,

ಎಂಬುದನ್ನು ಹೇಗೆ ನಂಬಿಕೆಯಾಗುವಂತೆ ಹೇಳಲಿ ? ವಯಸ್ಸಾದ ನನಗೇ ಈಗ ಅದು ವಿಚಿತ್ರವಾಗಿ ಕಾಣಿಸುತ್ತದೆ. ನನಗೇ ನಾನು ಪರಕೀಯ. ಅವತ್ತು ನಾನು,

"ಅಮ್ಮ, ಅಜ್ಜಯ್ಯ ನೋಡಿ, ನೋಡಿ."

ಎಂದು ಕೂಗಿದಾಗ ಅಜ್ಜಯ್ಯ ಅಮ್ಮ ಗಾಬರಿಯಾಗಿ ಹೊರಗೋಡಿ ಬಂದು,

"ಎಲ್ಲೊ ಏನಾಯಿತೊ ಅಪ್ಪು" ಎನ್ನಲು,

"ಅಲ್ಲಿ ಆಕಾಶದಲ್ಲಿ ಏನೋ ಎರಡು ಹಾರುತ್ತಿದ್ದರು. ನೋಡಿದೆ" ಎಂದೆ.

"ಎಲ್ಲಿ ? ಎಲ್ಲಿ ?" ಎಂದರು ಅಜ್ಜಯ್ಯ.

"ಈಗ ಕಾಣಿಸುತ್ತಿಲ್ಲ. ಆಕಾಶದಲ್ಲಿ ಕರಗಿದರು." ಎಂದೆ ನಾನು.

ಅಜ್ಜಯ್ಯ ಅಮ್ಮ ನಕ್ಕರು. ಬಾ ಒಳಗೆ ಎಂದರು. ಏನೊ ಹಕ್ಕಿಯಿರಬೇಕು, ನೀನು ಕರೆದ ರೀತಿ ಕೇಳಿ ಗಾಬರಿಯಾಗಿಬಿಟ್ಟೆವು ಎಂದರು.

* * * * *

ಅಂಗಾತನೆ ಮಂಚದ ಮೇಲೆ ಮಲಗಿ, ಕೈಗಳನ್ನು ಚೆಲ್ಲಿ ಛಾಯ ಮುಗುಳ್ನಕ್ಕಳು. ಹಕ್ಕಿಯಿರಬೇಕು ಎಂದಳು. ರಾಘವ ಅವಳ ತಲೆದೆಸೆಗೆ ನಿಂತು ಹೆಂಡತಿಯನ್ನು ಹುಡುಕುವಂತೆ ನೋಡಿದ. ನಾನು ಸಾಲದೇನು, ಇನ್ನೇನು ಬೇಕು, ನನ್ನನ್ನು ರಮಿಸು ಎನ್ನುವ ಸವಾಲು ಇದು. ಕಾಣುವುದಕ್ಕೆ ಹೊರಗೆ ಕುಚೇಷ್ಟೆ, ಮಕ್ಕಳಾಟಿಕೆ. ಒಳಗೆ – ನನ್ನ ಜೊತೆಯಲ್ಲಿನ ಬಾಳ್ವೆ ಬಿಟ್ಟು ಉಳಿದದ್ದೆಲ್ಲ ಅಸಂಗತ, ನಿಷ್ಪ್ರಯೋಜಕ ಎಂಬ ಹೆಣ್ಣಿನ ತಿರಸ್ಕಾರದ ಭಾವ. ಕೈಗಳನ್ನು ಎತ್ತಿ

'ಬನ್ನಿ' ಎಂದು ಎಳೆದಳು. ದೈನ್ಯದಿಂದ ನೋಡಿ – ಆದರೆ ಗಟ್ಟಿಯಾಗಿ ಅವಳ ಕೈಹಿಡಿದು. ಇದು ಹಿತ ನನಗೆ – ಅದಕ್ಕಾಗಿಯೇ ನನಗಿಂತ ಭಿನ್ನಳಾದ ಇವಳನ್ನು ಮದುವೆಯಾದೆ ಅಲ್ಲವೆ ? ಪ್ರಜ್ಞೆಯ ಆಳದಿಂದ ಅರಿವಿಗೆ ಬಂದಂತೆ, ನಿಧಾನವಾಗಿ ಬಂದು ಮಂಚದ ಮೇಲೆ ಕೂತು ಅವಳ ನುಣುಪಾದ ಮೃದುವಾದ ಹೊಟ್ಟೆಯ ಮೇಲೆ ಕೈಯಿಟ್ಟ. ಮಾಂಸದ ಬೆಚ್ಚನೆಯ ಜಾಗಗಳು. ಮುಟ್ಟಿದ ಕೂಡಲೆ ಇವಳ ಕಣ್ಣುಗಳು ಹೇಗೆ ಮಾದಕವಾಗುತ್ತವೆ. ಆದರೆ ಈಗ ತೀವ್ರವಾದ ಕಾಮ ತರುವ ಸುಖವಾಗಲಿ, ಮರವೆಯಾಗಲಿ ಬೇಕೆನ್ನಿಸಲಿಲ್ಲ. ಈ ಪ್ರೀತಿಯಲ್ಲಿಯೂ ದುಃಖದ ಬೀಜವಿದೆಯಲ್ಲವೆ ಎಂದು ಕ್ಷಣ ಅನ್ನಿಸಿ ಛಾಯಳ ಅರ್ಧ ಮುಚ್ಚಿದ ದೊಡ್ಡ ಕಣ್ಣುಗಳನ್ನು ನೋಡಿದ. ಅಪ್ಪ ಅಮ್ಮನ ಇಷ್ಟದ ವಿರುದ್ಧ ಇವಳನ್ನು ಮದುವೆಯಾಗಲು ಕಾರಣ ನನ್ನ ಭೂತದಲ್ಲಿದೆ, ಪರಕೀಯನಾಗಿ ಉಳಿಯಬೇಕೆಂಬ ನನ್ನ ಛಲದಲ್ಲಿದೆ, ಆದರೆ ಇವಳಿಗೊಂದೂ ನಾನು ಹೇಳಿಕೊಳ್ಳಲಾರೆ, ಭೂತದಲ್ಲಿ ಇವಳನ್ನು ಪಾಲು ಮಾಡಲಾರೆ, ಇವಳಿಗೆ ಅದು ಬೇಡ, ಏಕಾಂಗಿಯಾಗಿ ನನಗೆ ವಿಶೇಷವಾದ ಜೀವನವನ್ನು ನಾನು ಎದುರಿಸಬೇಕು, ಬರೆಯಬೇಕು, ಹುಡುಗನಾಗಿದ್ದಾಗ ಬೆಳಗಿನ ಮುಹೂರ್ತದಲ್ಲಿ ನಿಂತಂತೆ ಒಂದು ಕ್ಷಣ ಮೀರಿ...

ಎದ್ದು ನಿಂತ. ತನ್ನ ಮೈಮೇಲೆ ಆಡುತ್ತಿದ್ದ ಕೈ ಸರಿಯಲು ಥಟ್ಟನೆ ಕಣ್ಣು ಬಿಟ್ಟು ಛಾಯ, "ಎಲ್ಲಿಗೆ" ಎಂದಳು ಅಸಮಾಧಾನದಿಂದ.

ಇರು ಬಂದೆ ಎಂದು ಹೊರಗೆ ಬಂದು ನಿಂತ. ಕಾರ್ತೀಕದ ಕಪ್ಪು ಆಕಾಶದಲ್ಲಿ ಇದು ವ್ಯಾಧ, ಇದು ಕೃತ್ತಿಕೆ. ವೃತ್ತಿಯಲ್ಲಿದ್ದೂ ನಿವೃತ್ತಿಯಲ್ಲಿವೆ. ಇಲ್ಲಿ ನೆಲದ ಮೇಲೆ ದಟ್ಟವಾಗಿ ರಾತ್ರೆರಾಣಿಯ ವಾಸನೆ. ಅಂಟಿಗೆ ಪಂಟಿಗೆಯವರ ಹಾಡು ನೆನಪಾಗುತ್ತದೆ. ಕೊಳ್ಳೀರಿ ದೀಪಾ, ಕೊಡಿ ದೀಪಾ... ಮತ್ತೆ ದೀಪ್ ದೀಪ್ ದೀಪ್ ಓಳ್ಗೆ ; ಹಬ್ಬಕ್ಕೊಂದು ಹೋಳ್ಗೆ. ಹುಟ್ಟಿದೂರಿನಲ್ಲಿ ರಾಗಜ್ಜ ಮಲಗುತ್ತಿದ್ದಲ್ಲೆ ಅಪ್ಪ ಒಂಟಿಯಾಗಿ ಮಲಗಿದ್ದಾರೆ. ತನ್ನ ತಂದೆಯ ದುಃಖದ ಸಾವಿಗೆ ತಾನು ಕಾರಣನಾದೆ ಎನ್ನುವ ಪಾಪಭಾವ ಅವರಿಗೆ ಅಂಟಿಕೊಂಡಿದೆ. ಒಂದು ದಿನ ಅವರೂ ಸಾಯುತ್ತಾರೆ ; ರಾಗಜ್ಜನ ಹಾಗೆ, ದಿಕ್ಕಿಲ್ಲದೆ. ನನ್ನ ಜೀವಕ್ಕೆ ಅಮ್ಮನ ಸಾವಿನ ಪಾಪದ ಜೊತೆ, ಅವರ ಅನಾಥ ಸಾವಿನ ಪಾಪವೂ ಅಂಟಿಕೊಳ್ಳಬೇಕೆಂದು ಅವರ ಇಷ್ಟ.

ಪಿತೃ ಜಿಗಣೆಗಳು, ಭೂತಗಳು,
ಅಂದು ತೊಳೆಸಿ ಬೆಳೆಸಿದ ಅಪ್ಪ ಅಮ್ಮನ ಪ್ರೀತಿ,
ಒಳಗಿನಿಂದ ಛಾಯಳ ಒತ್ತಾಯದ ಕರೆ –



"ಹೊತ್ತಾಗುತ್ತಿದೆ. ಮಲಗಿಕೊಳ್ಳಿ. ಬನ್ನಿ."

೧೫–೧೨–೧೯೬೧ ರಿಂದ
೧೮–೧೨–೧೯೬೧ ವರೆಗೆ

# ಪ್ರಸ್ತ

ಶಾಮಭಟ್ಟರೆ ಮುಂದಾಗಿ ಗಣಪಯ್ಯನ ಹೋಟೆಲಿನ ಅಟ್ಟದ ಮೇಲೆ ಹೋಗಿ, ಪುಂಡರೀಕನಿಗೆ ಮೆತ್ತಗೆ ಬರುವಂತೆ ಸಂಜ್ಞೆ ಮಾಡಿ, ಬಾಗಿಲು ತಟ್ಟಿದರು. ‘ಯಾರು’ ಎಂದು ರೂಮಿನೊಳಗಿಂದ ಒಂದು ಅಸಮಧಾನದ ಧ್ವನಿ ಕೇಳಿಸಿತು. ‘ನಾನು’ ಎಂದು, ಶಾಮಭಟ್ಟರು ಕಾದರು. ಪುಂಡರೀಕ ಆದಷ್ಟು ನಿಶ್ಯಬ್ದವಾಗಿ ಬಿದಿರಿನ ಏಣಿ ಮೆಟ್ಟಲನ್ನು ಹತ್ತಿ ಶಾಮಭಟ್ಟರ ಹಿಂದೆ ನಿಂತು ಆಲಿಸಿದ. ಕೆಳಗೆ ಗಣಪಯ್ಯನ ಹೋಟೆಲಿನಲ್ಲಿ, ಕಾಫಿ ಬೋಗುಣಿಯಲ್ಲಿ ಕುದಿಯುತ್ತ ಕುಣಿಯುವ ಬಿಲ್ಲೆಯ ಕಟಕಟ ಶಬ್ದ–ನಿಂತು, ಶುರುವಾಗಿ, ನಿಂತು – ಈಗ ದೋಸೆಕಾವಲಿಯನ್ನು ತೊಳೆಯುತ್ತಿದ್ದಾರೆ. ಕತ್ತಲು, ತ್ಯಾನಂದೂರಿನಿಂದ ಕುಡುಮಲ್ಲಿಗೆಗೆ ದೊಂದಿ ಹಿಡಿದು ಕಾಡಿನಲ್ಲಿ ನಡೆದು ಬಂದ ಆಯಾಸ, ಕೂತರೆ ಸಾಕು ಎನ್ನಿಸುತ್ತದೆ. ಅಂತೂ ಬಾಗಿಲು ತೆರೆದು, – ನಿಂತ ಮನುಷ್ಯ ಅವನೇ ತಾನೆ ? – ಶಾಮಭಟ್ಟರು ಲಾಟೀನಿನ ಬೆಳಕಿನಲ್ಲಿ ದಿಟ್ಟಿಸಿ ನೋಡಿದರು.

ಅವನು ಪುಂಡರೀಕ ಶಾಮಭಟ್ಟರನ್ನು ಒಳಗೆ ಬನ್ನಿ ಕೂತುಕೊಳ್ಳಿ ಎನ್ನಲಿಲ್ಲ. ಆದರೂ ಶಾಮಭಟ್ಟರೇ ಒಳಗೆ ಹೋಗಿ ನಿಂತು ಆತನನ್ನು ಹತ್ತಿರದಿಂದ ಪರೀಕ್ಷಿಸಿದರು. ಶುಭ್ರವಾದ ಪಂಚೆ, ಬೋಳು ತಲೆಯಮೇಲೆ ಶಾಸ್ತ್ರಕ್ಕೆ ನಾಲ್ಕು ಕೂದಲಿನ ಬಿಳಿ ಜುಟ್ಟು. ಎಣ್ಣೆಗೆಂಪು ಬಣ್ಣದ ಕೋಲುಮುಖ ; ಆಳವಾದ ಗೆರೆಗಳ ಗಂಟುಮುಖ, ನೀಳವಾದ ಉದ್ದನೆಯ ದೇಹ. ಸ್ವಲ್ಪ ಬಾಗಿದ ಬೆನ್ನನ್ನು ನೋಡಿದರೆ ವಯಸ್ಸು ಐವತ್ತರ ಮೇಲೆ ಅರವತ್ತರ ಒಳಗೆ, ಒಟ್ಟಿನಲ್ಲಿ ಮುಖನೋಡಿ ವಯಸ್ಸು ಹೇಳುವುದು ಕಷ್ಟ ಎನ್ನಿಸುವಂತಿತ್ತು. ಇವರು ಬಂದು ಬಾಗಿಲು ತಟ್ಟಿದಾಗ ಆತ ಹಾಸಿಗೆ ಬಿಡಿಸುತ್ತಿದ್ದಿರಬೇಕು – ಚಾಪೆಯ ಮೇಲೆ ಅರ್ಧ ಬಿಚ್ಚಿದ ಹಾಸಿಗೆಯಿತ್ತು.

ಒಂದು ಕ್ಷಣದ ಮೌನದಲ್ಲಿ ಅನುಮಾನಿಸಿ, ಮನಸ್ಸಿಗೆ ಬಂದ ಮಾತುಗಳನ್ನು ತೂಗಿ ಪರೀಕ್ಷಿಸಿ, ಮಾತಿಗೆ ಪ್ರಾರಂಭಿಸಿದವರು ಶಾಮಭಟ್ಟರು :

“ನೀವು ನನ್ನ ಮರೆತಿರಲಿಕ್ಕೆ ಸಾಕು. ಆದರೆ ನಾನು ನಿಮ್ಮನ್ನು ಮರೆತಿಲ್ಲ ನೋಡಿ. ಈ ಪುಂಡರೀಕನ ಗುರುತಾದರೂ ನಿಮಗೆ ಹೇಗೆ ಸಿಕ್ಕಬೇಕು. ಅವನು



ಆಗಿನ್ನೂ ಹುಟ್ಟಿಯೇ ಇರಲಿಲ್ಲ. ಅಂದಹಾಗೆ ಸುಮಾರು ಮುವ್ವತ್ತು ವರ್ಷದ ಮೇಲೆಯೇ ಆಯಿತಲ್ಲವೆ ?”

ಅವನು ತಲೆ ತಗ್ಗಿಸಿ ಸಿಟ್ಟಿನಿಂದ ಮುಖ ತಿರುಗಿಸಿದ್ದು ನೋಡಿ ಶಾಮಭಟ್ಟರ ಮನಸ್ಸು ಧೃಡವಾಯಿತು.

“ಸಿಟ್ಟಾಗಬೇಡಿ, ಸತ್ಯ ಹೇಳಿ. ನೀವು ಶೀನಪ್ಪಯ್ಯ ಅಲ್ಲವೆ ?”

ಅವನು ತನಗೆ ಭಯವಾಗುತ್ತಿದೆ ಎನ್ನುವುದನ್ನು ತೋರಿಸಲು ಇಚ್ಛಿಸದೆ ಕ್ರೂರವಾದ ಧ್ವನಿಯಲ್ಲಿ ಹೇಳಿದ :

“ಅದೆಲ್ಲ ನಿಮಗೆ ಯಾಕೆ ? ತಲೆ ಪ್ರತಿಷ್ಠೆ ಮಾಡಬೇಡಿ. ನೀವು ಹೊರಡಿ, ನಾನು ಮಲಗಿಕೊ ಬೇಕು.”

ನಿಂತು ಆಯಾಸವಾದ್ದರಿಂದ ಗೋವಿಂದ ಎನ್ನುತ್ತ ಸಾವಧಾನವಾಗಿ ಶಾಮಭಟ್ಟರು ನೆಲದ ಮೇಲೆ ಕೂತರು. ನಿಂತೇ ಇದ್ದ ಪುಂಡರೀಕನಿಗೆ ಕೂರುವಂತೆ ಸನ್ನೆ ಮಾಡಿ,

“ನೀವೂ ಕೂತುಕೊಳ್ಳಿ. ಯಾಕೆ ನಿಂತೇ ಇದ್ದೀರಿ. ಸಮಾಧಾನದಿಂದ ಮಾತಾಡುವ. ಎಷ್ಟು ವರ್ಷವಾಯಿತು. ನಿಮ್ಮನ್ನು ಕಂಡು.”

ಎಂದು ಕಿಟಕಿಯ ಮೂಲಕ ಹೊರಗಿನ ಕತ್ತಲನ್ನು ನೋಡುತ್ತ, ಸಿಟ್ಟಿನಲ್ಲಿ ನಿಂತಿದ್ದ ಅವನಿಗೆ ಹೇಳಿದರು. ಕುಡುಮಲ್ಲಿಗೆ ಪೇಟೆಗೆ ಜಾತ್ರೆಗೆಂದು ಬಂದ ಸೀತಾಲಕ್ಷ್ಮಿ ಟೂರಿಂಗ್ ಟಾಕೀಸ್ ಇನ್ನೂ ಇದ್ದದ್ದರಿಂದ ಸಿನಿಮಾ ನೋಡಿ ಮುಗಿಸಿ ಬಂದ ಗಿರಾಕಿಗಳಿಗೆ ಕಾಫಿ ಕೊಡುತ್ತ ಗಣಪಯ್ಯ ಕೆಳಗೆ ಹರಟುತ್ತಿದ್ದ. ತ್ಯಾನಂದೂರಿನಿಂದ ಕುಡುಮಲ್ಲಿಗೆಗೆ ಕತ್ತಲಿನಲ್ಲಿ ದೊಂದಿ ಹಿಡಿದು ಕಾಡಿನಲ್ಲಿ ಪುಂಡರೀಕನ ಜೊತೆ ಬರುವಾಗ ಮನಸ್ಸಿನಲ್ಲಿ ತಿರುವಿ ಹಾಕಿದ್ದ ಮಾತುಗಳನ್ನೆಲ್ಲ ಶಾಮಭಟ್ಟರು ಮತ್ತೆ ನೆನಸಿಕೊಂಡರು. ಅವನು ಏನೆನ್ನುತ್ತಾನೊ ಎಂದು ಅವಸರದಿಂದ ಕುತೂಹಲದಿಂದ ನೋಡುತ್ತ ಕೂತಿದ್ದ ಪುಂಡರೀಕನಿಗೆ, ಕೆಳಗೆ ಹೋಟೆಲಿನಲ್ಲಿ ಕಾಫಿ ಬೋಗುಣಿಯಲ್ಲಿ ಕುಣಿಯುವ ಬಿಲ್ಲೆಯ ಶಬ್ದ ನಡು ನಡುವೆ ಕೇಳಿಸಲು, ನಾನೂ ಯಾಕೆ ತ್ಯಾನಂದೂರು ಹಳ್ಳಿಯಲ್ಲಿ ಒಂದು ಹೋಟೆಲನ್ನು ತರೆಯಬಾರದು, ನೇತ್ರಾವತಿ ಸದಾ ಹೇಳುವ ಹಾಗೆ, ಆಮೇಲೆ ಶಾಮಕಕ್ಕನನ್ನು ಒಮ್ಮೆ ಕೇಳುವುದು ಒಳ್ಳೆಯದು, ಎಂದೊಂದು ಯೋಚನೆ ಸುಳಿದು ಹೋಯಿತು. ನಿಂತೇ ಇದ್ದ ಅವನಿಗೆ ಶಾಮಭಟ್ಟರು ಮತ್ತೆ ಹೇಳಿದರು:

“ಕೂರಿ ಮಾರಾಯರೆ, ನಾನೇನೂ ನಿಮ್ಮ ಜೊತೆ ಜಗಳಕ್ಕೆ ಬಂದಿಲ್ಲ. ನೀವು ಬೀಡಿ ಸೇದುವುದೊ, ಹೊಗೆಸೊಪ್ಪು ಹಾಕುವುದೊ – ಹೊಗೆಸೊಪ್ಪಾದರೆ

ಎಲ್ಲಿ ನನ್ನದಷ್ಟು ಹಾಕಿ ನೋಡುವ"

ಎಂದು ನಗುತ್ತ ಎಲೆಯಡಿಕೆ ಚೀಲವನ್ನು ಒಡ್ಡಿದರು. ಅವನು ಹಾಸಿಗೆಯನ್ನು ಬಿಚ್ಚಿ ಅದರ ಮೇಲೆ ಕೂತ.

ಶಾಮಭಟ್ಟರು ಹೊಗೆಸೊಪ್ಪು ತಿಕ್ಕುತ್ತ ಸಾವಧಾನವಾಗಿ ಹರಟುವ ಶೈಲಿಯಲ್ಲಿ ಹೇಳಿದರು :

"ನಾನು ಇವತ್ತು ಕಾಫಿ ಕುಡಿಯಲು ಇಲ್ಲಿ ಬಂದಾಗ ನಿಮ್ಮನ್ನ ನೋಡಿದೆ – ನೀವು ಹೊಗೆಸೊಪ್ಪು ಹಾಕಿ ಕೊಳ್ಳುವವರಲ್ಲವೆಂದು ಕಾಣುತ್ತೆ. ಒಂದು ಬೀಡಿ ಹಚ್ಚಿ – ನೋಡಿದ ಕೂಡಲೆ ನೀವು ಶೀನಪ್ಪಯ್ಯನವರೆ ಎಂದು ಖಚಿತವಾಯಿತು. ತ್ಯಾನಂದೂರಿಗೆ ತಿರುಗಿ ಹೋಗುವಾಗ – ನಾನು ಇಲ್ಲಿಗೆ ಗಣಪಯ್ಯನಿಗೆ ಬಾಳೆಕಟ್ಟು ಮಾರಲೆಂದು ಬಂದದ್ದು, ನಿತ್ಯ ಒಂದು ಸಾರಿ ಬಂದು ಹೋಗುವ ಅಭ್ಯಾಸ, ಹಳ್ಳಿ ಬೇಸರವಲ್ಲವೆ, ಏನೆನ್ನುತ್ತೀರಿ – ದಾರಿಯಲ್ಲೆಲ್ಲ ಮನಸ್ಸಿನಲ್ಲೆ ಲೆಖ್ಖಾಚಾರ ಹಾಕಿದೆ. ಏನು ಮಾಡಲಿ ಅಂತ. ತ್ಯಾನಂದೂರು ತಲ್ಪುವಾಗಲೇ ಸಾಯಂಕಾಲವಾಗಿತ್ತು. ಸಂಧ್ಯಾವಂದನೆಯ ಶಾಸ್ತ್ರ ಮುಗಿಸಿ ಮತ್ತೆ ಹೊರಟು ಬಂದೆ, ಪುಂಡರೀಕನ ಜೊತೆ – ಯಾಕೊಂದು ಸಂಶಯ, ಹೌದೊ ಅಲ್ಲವೊ ತಿಳಿದೇ ಬಿಡುವ ಎಂದು. ನೀವು ಶೀನಪ್ಪಯ್ಯ ಹೌದೇ ಆಗಿದ್ದರೆ – ನನಗದರಲ್ಲಿ ಸಂಶಯವಿಲ್ಲ – ನಿಮ್ಮನ್ನ ನಾನು ನೋಡಿದ್ದು ಮುವ್ವತ್ತಾರು ವರ್ಷದ ಕೆಳಗೆ. ನಿಮ್ಮ ಮದುವೆಯಲ್ಲಿ. ಆಗ ನಿಮಗೆ ವಯಸ್ಸು ಇಪ್ಪತ್ತನಾಲ್ಕೊ ಇಪ್ಪತ್ತೈದೊ. ನನ್ನ ವಾರಿಗೆಯವರಲ್ಲವೆ ನೀವು ? ತಲೆಯ ತುಂಬ ಕೂದಲು ಬೆಳಸಿ ಜುಟ್ಟುಕಟ್ಟುತ್ತಿದ್ದಿರಿ, ನನ್ನ ಜ್ಞಾಪಕಕ್ಕೆ ಏನೂಂತೀರ ನೀವು ? ಭೇಷ್ ಎನ್ನುತ್ತೀರೊ ಇಲ್ಲವೊ ನೋಡಿಯೇ ಬಿಡುವ ಎಂದು ಪುಂಡರೀಕನನ್ನು ಕರೆದುಕೊಂಡು ನಿಮ್ಮನ್ನು ನೋಡಲು ಬಂದೆ. ಅಲ್ಲ – ನೀವು ಶೀನಪ್ಪಯ್ಯ ಹೌದೇ ಆದರೆ ನಿಮ್ಮ ಮದುವೆಗೆ ಮಂಟಪ ಕಟ್ಟಿದ ಶಾಮಭಟ್ಟನನ್ನು ನೀವು ಮರೆಯೋದು ಸಾಧ್ಯವ ?"

ಶಾಮಕಕ್ಕನ ಮಾತಿನ ರೀವಿಯನ್ನು ಅತ್ಯಂತ ಆಸಕ್ತಿಯಿಂದ ಆಲಿಸಿ ಪುಂಡರೀಕ ಇದಕ್ಕೆ ಉತ್ತರವೇನು ಬರಬಹುದೆಂದು ಅವನ ಕಡೆ ನೋಡಿದ. ಅವನು ಒಂದು ಬೀಡಿ ಹೊತ್ತಿಸಿದ ; ಮಾತಾಡಲಿಲ್ಲ. ಶಾಮಭಟ್ಟರನ್ನು ಅವನು ಕಣ್ಣಿಗೆ ಕಣ್ಣಿಟ್ಟು ನೋಡಲೂ ಇಲ್ಲ. ಕೆಳಗೆ ಹೋಟೆಲಿನಲ್ಲಿ ದೋಸೆಯನ್ನು ಅರೆಯುವ ಶಬ್ದ. ಗಣಪಯ್ಯನ ಮಗುವಿರಬೇಕು, ಅತ್ತಿತು. ಪುಂಡರೀಕ ನೆನೆದುಕೊಂಡ – ಗಣಪಯ್ಯ ಹೇಳಿದ್ದಾನೆ, ಮುಂದಿನ ಶನಿವಾರ ಅವನ ಅಪ್ಪನ ಶ್ರಾದ್ಧವಂತೆ, ದರ್ಭೆ ದೊನ್ನೆ ಬೇಕಂತೆ, ಊಟಕ್ಕೂ ಬರಬೇಕೆಂತೆ, ಯಾರಿಗೆ



ಬೇಕು ಈ ಬ್ರಾಹ್ಮಣಾರ್ಥ ಅಡಿಕೆ ಸುಲಿತದ ಜೀವನ, ಅವನಂತೆ ತಾನೂ ಒಂದು ಹೋಟೆಲು ತೆರೆದರೆ, ಗಣಪಯ್ಯನ ಹೆಂಡತಿ ನೇತ್ರಾವತಿಯ ಹತ್ತಿರದ ಸಂಬಂಧದವಳಲ್ಲವೆ, ಅವಳಿಗೆ ಎರಡೆಳೆ ಚೈನನ್ನು ಗಣಪಯ್ಯ ಮಾಡಿಸಿಹಾಕಿದ್ದಾನೆ, ನೇತ್ರಾವತಿ ಹೇಳಿದಳು 'ನೋಡಿದಿರಾ'. ಅವನು ಬೀಡಿಯನ್ನು ನೆಲಕ್ಕೆ ನುರಿದು ಆರಿಸಿದ. ಬೆನ್ನು ತಿರುಗಿಸಿ ಕೂತ. ಹಾಸಿಗೆಯನ್ನು ಸಂಪೂರ್ಣ ಬಿಚ್ಚಿ, ಹೊದಿಕೆಯನ್ನು ಕೊಡವಿದ. ಮತ್ತೆ ಲಾಟೀನನ್ನು ಸಣ್ಣದು ಮಾಡಿ,

"ಅಧಿಕ ಪ್ರಸಂಗ ಮಾಡಬೇಡಿ. ನಾನು ಮಲಗಿಕೊ ಬೇಕು. ಯಾವ ಶಾಮಭಟ್ಟನೊ, ಯಾವ ಪುಂಡರೀಕನೊ. ನನಗದರ ಪಂಚಾಯ್ತಿ ಬೇಡ."

ಎಂದು ಹಾಸಿಗೆ ಮೇಲೆ ಮಲಗಿಕೊಂಡು ಹೊದಿಕೆಯನ್ನು ಹೊದ್ದು ಮಗ್ಗುಲಾದ, ಶಾಮಭಟ್ಟರು ನಕ್ಕು ಹೇಳಿದರು.

"ಅಲ್ಲ. ಮೊದಲಿನ ಸಿಟ್ಟು ಈಗಲೂ ನೀವು ಬಿಟ್ಟಿಲ್ಲವಲ್ಲ. ಅವತ್ತು ನಾನು ನಿಮ್ಮ ಮಾವ ಪ್ರವೀರಾಚಾರ್ಯರ ಜೊತೆ ಪಂಚಾಯ್ತಿಗೆ ಬಂದಾಗಲೂ ಹಾಗೆ : ನಿಮ್ಮ ಹುಡುಗಿ ನನಗೆ ಬೇಡ, ಕರೆದುಕೊಂಡು ಹೋಗಿ ಎಂದು ಹಿಡಿದ ಪಟ್ಟು ಬಿಡಲೇ ಇಲ್ಲ. ಆ ಮಾತು ನಡೆದು ಮೂವ್ವತ್ತಾರು ವರ್ಷವಾಯ್ತು. ತಲೆ ಕೂದಲು ನೆರೆತು ಹಲ್ಲುಗಳೆಲ್ಲ ಅಲಗುವಷ್ಟು ಕಾಲವಾಯ್ತು. ವಯಸ್ಸಾದ ಮೇಲೆ ಮನುಷ್ಯ ಅಷ್ಟು ತಣ್ಣಗಾಗುತ್ತಾನೆಂದು ನಾನು ತಿಳಿದಿದ್ದೆ. ಹುಟ್ಟಿನಿಂದ ಬಂದ ಸ್ವಭಾವ ಘಟ್ಟ ಹತ್ತಿದರೆ ಹೋಗುತ್ತೊ ಎನ್ನುತ್ತಾರೆ. ನನ್ನ ಪ್ರಶ್ನೆಗೆ ಉತ್ತರ ಬರದೆ ನಾನು ಹೋಗುವವನೇ ಅಲ್ಲ. ಈ ಶಾಮಭಟ್ಟ ಹಿಡಿದ ಕೆಲಸ ಬಿಡತಕ್ಕವನೇ ಅಲ್ಲ. ಗೊತ್ತಾಯಿತೊ."

ಎಂದು ತಮ್ಮ ದಪ್ಪವಾದ ಶರೀರವನ್ನು ಗೋಡೆಗೊರಗಿಸಿ ಕಾಲುಗಳನ್ನು ಚಾಚಿ ಪುಂಡರೀಕನ ಕಡೆ ತಿರುಗಿ,

"ಶೀನಪ್ಪಯ್ಯನವರ ಸಿಟ್ಟು ಇಳಿಯುವ ತನಕ ನಾವಿಲ್ಲಿ ಕೂರುವ. ಅವರೇನು ನಮ್ಮನ್ನು ಹೊಡೆಯುತ್ತಾರ, ಬಡಿಯುತ್ತಾರ ? ಅಥವಾ ಒಂದು ವೇಳೆ ಹೊಡೆದರು ಅನ್ನು – ಹಿರಿಯರ ಆಶೀರ್ವಾದ ಅಂತ ಸುಮ್ಮನಿದ್ದುಬಿಡುವುದು. ಹೆಣ್ಣು ಕೊಟ್ಟವರು ಯಾವತ್ತೂ ತಗ್ಗಿ ನಡೆಯಬೇಕಂತೆ. ಏನನ್ನುತ್ತೀಯ ?"

ಎಂದು ಚೇಷ್ಟೆಯಿಂದ ಕಣ್ಣು ಮಿಟುಕಿಸಿದರು. ಶಾಮಭಟ್ಟರು ಚುರುಕಾಗಿ ತಿರುಗಿ ಕಣ್ಣು ಮಿಟುಕಿಸಿದ ಕ್ರಮದಲ್ಲಿ ಹುಡುಗಾಟಿಕೆಯಿತ್ತು. ಎರಡು ತುಳಸಿದಳ ಮುಡಿದ ಬಿಳಿ ಜುಟ್ಟಿನ, ಕೆಂಪು ಒಂಟಿಯ, ಎಲೆಯಡಿಕೆ ಜಗಿದ ಕೆಂಪು ತುಟಿಯ, ಅವರ ಹಾವಭಾವಗಳ ರಸಿಕತೆಯನ್ನು ನೋಡಿದರೆ ಇವರಿಗೆ ವಯಸ್ಸಾದದ್ದು

ಸುಳ್ಳು ಎನ್ನಿಸುವಂತಿತ್ತು. ಪುಂಡರೀಕ ಸುಮಾರು ಇಪ್ಪತ್ತೈದುವರ್ಷ ವಯಸ್ಸಿನ ಯುವಕನಾದರೂ ತನಗಿಂತ ಚುರುಕಾದ, ಚುರುಕು ನಡೆಯುವ ಶಾಮಕಕ್ಕನನ್ನು ಕೊಂಡಾಡುವ ಕಣ್ಣುಗಳಿಂದ ನೋಡಿದ.

ಮಲಗಿದ ಮನುಷ್ಯ ಎದ್ದುಕೂತು ಲಾಟೀನಿನ ಬೆಳಕನ್ನು ದೊಡ್ಡದು ಮಾಡಿ ಹೇಳಿದ :

"ಅಧಿಕಪ್ರಸಂಗ ಬೇಡವೆಂದು ಹೇಳಿದೆ – ಕೇಳಬಾರದೆ ? ಶುದ್ಧ ಮರ್ಯಾದೆಗೆಟ್ಟ ಜನವೆಂದು ಇದಕ್ಕೇ ಹೇಳೋದು. ನೀವು ಈ ಕೂಡಲೆ ಹೋಗಿ, ಇಲ್ಲವೆ ಹೋಟೆಲಿನ ಯಜಮಾನನಿಗೆ ಹೇಳಿ ನಿಮ್ಮನ್ನು ಹೊರಗೆ ಹಾಕಿಸುತ್ತೇನೆ."

"ಅದು ಅಷ್ಟು ಸುಲಭವಲ್ಲ ಶೀನಪ್ಪಯ್ಯ. ಹಿಂದೆ ನಿಮ್ಮ ಮಾವ ನಿಮ್ಮ ಗಂಟಲಿಗೆ ಹೆದರಿದರೆಂದರೆ ನಾನು ಹೆದರುವವನಲ್ಲ ತಿಳಿಯಿತ ? ತಪ್ಪಿತಸ್ಥರು ನೀವು ನಾವಲ್ಲ. ಇಟ್ಟುಕೊಂಡವಳ ಮಾತು ಕೇಳಿ ಕಟ್ಟಿಕೊಂಡ ಹೆಂಡತೀನ ಬರೆ ಹಾಕಿ ಗೋಳುಹೊಯ್ದಿರಿ. ಮಾವನ ಮನೆಗೆ ಅವಳನ್ನ ತಳ್ಳಿ ಹೆಂಡತಿಗೆ ಜೀವನಾಂಶ ಕೊಡಬೇಕಾಗುತ್ತಲ್ಲ ಎಂದು ಪರಾರಿಯಾದಿರಿ. ನನಗೂ ಅಷ್ಟು ಕಾನೂನು ಗೊತ್ತು. ದಾವಾ ಹಾಕಬಹುದು ನಿಮ್ಮ ಮೇಲೆ."

"ಹೋಗಯ್ಯ – ಹಾಕು ದಾವಾನ. ರೀ ಗಣಪಯ್ಯ."

ಕೆಳಗಿನಿಂದ ಗಣಪಯ್ಯ 'ಊಟಕ್ಕೆ ಕೂತಿದ್ದೇನೆ. ಬರುತ್ತೇನೆ, ತಡೆಯಿರಿ' ಎಂದು ಹೇಳಿದ. ಶಾಮಭಟ್ಟರು ತಮ್ಮ ಧ್ವನಿಯನ್ನು ತಗ್ಗಿಸಿ ಮೆತ್ತಗೆ ಹೇಳಿದರು:

"ಗಣಪಯ್ಯ ನನ್ನ ಗೆಳೆಯ. ಈ ಪುಂಡರೀಕನಿಗೆ ಹೆಣ್ಣಿನ ಕಡೆಯಿಂದ ಸಂಬಂಧ. ತಿಳಿಯಿತೆ ? ಅವನು ಕೇಳೋದು ಊರಿನವನಾದ ನನ್ನ ಮಾತು, ನಿಮ್ಮ ಮಾತಲ್ಲ. ಜನಕ್ಕೆ ಗೊತ್ತಾದರೆ ನಿಮಗೆ ಛೀಮಾರಿಯಾಗುತ್ತದೆ. ನನಗೆ ಬೇಕಾದ್ದು ಇಷ್ಟು : ನೀವು ನಮ್ಮ ಸೀತಕ್ಕನ ಗಂಡ ಶೀನಪ್ಪಯ್ಯ ಹೌದೆಂದು ಒಪ್ಪಿಕೊಳ್ಳುತ್ತೀರೊ – ಇಲ್ಲವೊ ?"

"ಇಲ್ಲ."

"ಇಲ್ಲವಾದರೆ ನೀವು ಹೀಗೆ ರೇಗುತ್ತಿರಲಿಲ್ಲ. ಈ ಮೂಗಿನ ತುದಿಯ ಕೋಪ ಶೀನಪ್ಪಯ್ಯನವರೊಬ್ಬರಿಗೆ ಮಾತ್ರ ಸಾಧ್ಯ."

ಎರಡು ನಿಮಿಷಗಳ ತನಕ ಇಬ್ಬರೂ ಮಾತಾಡಲಿಲ್ಲ. ಆತ ಎದ್ದು ಹೊರಗೆ ಹೋಗಿ ಏಣಿಯ ಹತ್ತಿರ ನಿಂತು ಅನುಮಾನಿಸಿದ. ಒಳಗೆ ಬಂದು ನಿಂತು,

"ಅವಳ ಅಪ್ಪನಿಗೇ ನಾನು ಅವತ್ತು ತಿಳಿಸಿದೆ – ನಿಮ್ಮ ಎದುರಿಗೆ. ಇವಳು ನನ್ನ ಹೆಂಡತಿಯಲ್ಲ, ನಾನು ಅವಳ ಗಂಡನಲ್ಲ, ಮಾತು ಕೇಳದ ಹುಡುಗಿ



ನನಗೆ ಬೇಡ, ಕರೆದುಕೊಂಡುಹೋಗಿ ಅಂತ. ಈಗ ನಿಮ್ಮ ಸಂಧಾನ ಮತ್ತೆ ಬೇಡ, ನಾನು ಅವತ್ತು ಆಡಿದ ಮಾತು ಕೊನೆಯ ಮಾತು. ಗೊತ್ತಾಯಿತ ?"

ಶಾಮಭಟ್ಟರು ಧಡಕ್ಕನೆ ಎದ್ದುನಿಂತರು. ಅವರ ಧ್ವನಿಯಲ್ಲಿ ಹರ್ಷವಿತ್ತು.

"ನಾನು ಹೇಳಿದ್ದು ಸುಳ್ಳ ? ನಿಮ್ಮನ್ನು ನೋಡಿದ ಕೂಡಲೆ ಅಂದುಕೊಂಡೆ. ಇದು ಸೀತಕ್ಕನ ಗಂಡ ಶೀನಪ್ಪಯ್ಯ ಇರಲೇಬೇಕು ಅಂತ" ಎಂದು ನಗುತ್ತ, ತಮ್ಮ ಜೊತೆಗೇ ಎದ್ದು ನಿಂತಿದ್ದ ಪುಂಡರೀಕನ ಕಡೆ ತಿರುಗಿ,

"ಪುಂಡರೀಕ. ಇವರೇ ನಿನ್ನ ಭಾವಯ್ಯ. ನಮಸ್ಕಾರ ಮಾಡು"

ಎಂದರು. ಪುಂಡರೀಕ ಸಾಷ್ಟಾಂಗ ನಮಸ್ಕಾರ ಮಾಡಿದ. ಶೀನಪ್ಪಯ್ಯ ಪುಂಡರೀಕನ ತಲೆಯನ್ನು ಕೈಯಿಂದ ಮುಟ್ಟಿ,

"ಇನ್ನು ಆಯಿತಲ್ಲ – ನೀವು ಹೋಗಿ" ಎಂದರು.

"ನಾವು ಹೋಗಬಂದವರಲ್ಲ ಶೀನಪ್ಪಯ್ಯ. ಮನೆಗೆ ಅಳಿಯನನ್ನ ಕರೆದುಕೊಂಡು ಹೋಗಿ ಔತಣ ಮಾಡಿಸಬೇಕೆಂಬ ಶರ್ತಿನ ಮೇಲೆ ಬಂದಿದ್ದೇವೆ".

ಶಾಮಭಟ್ಟರು ತುಳಸೀಮಣಿ ಸರವನ್ನು ಕತ್ತಿನ ಸುತ್ತ ತಿರುಗಿಸುತ್ತ ಹೇಳಿದರು.

"ನಾನು ಬರೋದಿಲ್ಲ ಎಂದರೆ ಒಂದೆ ಮಾತು."

"ನಿಮಗೆ ಯಾಕೆ ಸಿಟ್ಟು ಹೇಳಿ? ಯಾರ ಮೇಲೆ ಸಿಟ್ಟು ಹೇಳಿ ? ನಾವೇನೂ ಸೀತಕ್ಕನಿಗೆ ಜೀವನಾಂಶ ಕೊಡಿ ಎಂದು ಕೇಳಲು ಬಂದಿಲ್ಲವಲ್ಲ."

"ಅವನೊಬ್ಬನಿದ್ದನಲ್ಲ – ಅವಳ ಚಿಕ್ಕಪ್ಪನೊ, ಯಾರು ಅವ..."

"ಶೇಷಗಿರಿಭಟ್ಟರು ತಾನೆ ? ಅವರು ಸತ್ತು ಹತ್ತು ವರ್ಷವಾಯಿತು",

"ಹುಡುಗೀನ ಮನೆಗೆ ಕರೆದುಕೊಂಡು ಬಂದು ಏನೋ ಬುದ್ಧಿ ಕಲೀಲಿ ಎಂದು ಎರಡು ಏಟು ಹೊಡೆದರೆ – ಯಾವ ಗಂಡ ಹೊಡೆಯಲಿಕ್ಕಿಲ್ಲ – ಹೇಳಿ..."

"ಮತ್ತೆ ಯಾಕೆ ಅದೇ ಸಮಾಚಾರ ಸ್ವಾಮಿ ?"

"ನಮ್ಮ ಮಾವನವರ ಮೇಲೇನೂ ನನಗೆ ಸಿಟ್ಟಿಲ್ಲ. ಆದರೆ ಅವರದ್ದು ಸ್ವಲ್ಪ ಹಿತ್ತಾಳೆ ಕಿವಿ. ಮಾತ್ರ ಹುಡುಗಿಯ ತಾಯಿ..."

"ಅದನ್ನೆಲ್ಲ ಈಗ ಯಾಕೆ ಕೆದಕಬೇಕು ಶೀನಪ್ಪಯ್ಯ. ನಿಮ್ಮ ಮಾವ ಪ್ರವೀರಾಚಾರ್ಯರು ಸತ್ತು ಹದಿನೈದು ವರ್ಷವಾಯಿತು. ನಿಮ್ಮ ಅತ್ತೆಗೆ ಈಗ ಸುಮಾರು ಅರವತ್ತು ವರ್ಷ. ಇವತ್ತು ನಾಳೆಯೆಂದು ದಿನವೆಣಿಸುತ್ತಿದ್ದಾರೆ. ಅಲ್ಲದೆ ಪಾಪ ಆ ಹೆಂಗಸು ಜೀವನದಲ್ಲಿ ಪಟ್ಟ ಕಷ್ಟ ಒಂದರೆಡಲ್ಲ. ಒಂಬತ್ತು ಮಕ್ಕಳ ತಾಯಿ ಅವರು. ಈಗ ಉಳಿದವರೆಂದರೆ ನಿಮ್ಮ ಹೆಂಡತಿ ಸೀತಕ್ಕ ಮತ್ತು

ನೀವು ಮದುವೆಯಾದ ನಂತರ ಹುಟ್ಟಿದ ಈ ಪುಂಡರೀಕ. ಅದೊಂದು ದೊಡ್ಡ ಪುರಾಣ; ಹೇಳುತ್ತ ಕೂತರೆ ಬೆಳಗಾಗುತ್ತದೆ. ಒಟ್ಟಿನಲ್ಲಿ ನೀವು ಆ ಮುದುಕಿಯ ಹೊಟ್ಟೆಯುರಿಸೋದು ಸರಿಯಾಗಿ ಕಾಣಿಸಲ್ಲ."

ಎಂದು ಶಾಮಭಟ್ಟರು ಪುಂಡರೀಕನನ್ನು ಚುಚ್ಚಿ, ಮಾತಾಡುವಂತೆ ಪ್ರೇರೇಪಿಸಿದರು. ಇಷ್ಟು ಹೊತ್ತು ಸುಮ್ಮನೆ ಕೂತಿದ್ದ ಪುಂಡರೀಕ ಅಂಜುತ್ತ ಅಂಜುತ್ತ ಹೇಳಿದ :

"ಭಾವಯ್ಯ ನೀವು ಬರಲೇಬೇಕು. ದೇವಸ್ಥಾನಕ್ಕೆ ಅಮ್ಮ ಅಕ್ಕ ಬಂದಿರುತ್ತಾರೆ. ನಾನು ಹೊರಡುವಾಗ ಅಮ್ಮ ಹೇಳಿದಳು ; ಹನ್ನೆರಡು ವರ್ಷವಾದ ಮೇಲೆ ಒಬ್ಬರು ಇನ್ನೊಬ್ಬರ ಮುಖ ನೋಡಬಾರದಂತೆ. ದೇವರೆದುರಿಗೇ ನೋಡಬೇಕಂತೆ."

ಶೀನಪ್ಪಯ್ಯ ಮತ್ತೊಂದು ಬೀಡಿ ಹತ್ತಿಸಿ ಹಾಸಿಗೆ ಮೇಲೆ ಕೂತು ಯೋಚಿಸಲು ಪ್ರಾರಂಭಿಸಿದರು. "ಅಲ್ಲ ನನಗೇನೂ ಬರಬಾರದೂಂತ ಇಲ್ಲ... ಆದರೆ..." ಎಂದು ಒಂದು ವಾಕ್ಯವನ್ನು ಪ್ರಾರಂಭಿಸಿ ಅರ್ಧಕ್ಕೆ ಸುಮ್ಮನಾದರು. ಶಾಮಭಟ್ಟರು ಹೊರಗೆ ಹೋಗಿ ಜಗಿದ ಕವಳವನ್ನು ಉಗಿದು ಪ್ರಸನ್ನ ಭಾವದಿಂದ ರೂಮಿನೊಳಗೆ ಬಂದು,

"ಅದೆಲ್ಲ ಇರಲಿ ಶೀನಪ್ಪಯ್ಯ. ನಾವು ಯೋಗಕ್ಷೇಮ ವಿಚಾರಿಸಲೇ ಇಲ್ಲ. ನೀವು ಈ ಕಡೆ ಬಂದಿದ್ದರ ಕಾರಣ ? ಮತ್ತೆ ನೀವು ಇರೋದು ಎಲ್ಲಿ ?"

"ಹುಬ್ಬಳ್ಳಿ"

"ನೀವು ಶೀರ್ನಾಳನ್ನು ಬಿಟ್ಟ ಮೇಲೆ ಹುಬ್ಬಳ್ಳಿಗೇ ಸೀದಾ ಹೋದಿರೊ ? ನಾವು ನಿಮ್ಮನ್ನ ಊರೆಲ್ಲ ಅಲೆದು ಹುಡುಕಿದೆವು ಆಗ. ಆದರೆ ಹುಬ್ಬಳ್ಳಿಯೆಲ್ಲಿ, ಕುಡುಮಲ್ಲಿಗೆಯೆಲ್ಲಿ – ಸುಮ್ಮನಾಗಿ ಬಿಟ್ಟೆವು. ಏನು ಉದ್ಯೋಗ – ಹೋಟೆಲೊ?"

ಪುಂಡರೀಕನ ಕಿವಿ ಚುರುಕಾಯಿತು. ಭಾವಯ್ಯನೂ ಹೋಟೆಲಿಟ್ಟವರಾಗಿದ್ದರೆ... ಆದರೆ ಅಮ್ಮ ಒಪ್ಪುತ್ತಾಳೊ – ಏನು ಸಾವೊ....

"ಇಲ್ಲವಪ್ಪ – ಎಮ್ಮೆ ವ್ಯಾಪಾರ. ಆ ಉದ್ದಿಶ್ಯದಿಂದಲೇ ಇತ್ತಲಾಗಿ ಬಂದೆ."

"ಹೌದ ಮಾರಾಯರೆ – ಒಳ್ಳೆ ದೇವರ ಹಾಗೆ ಬಂದಿರಿ ನೀವು. ತ್ಯಾನಂದೂರಿಗೆ ಬನ್ನಿ. ಕೊನೆ ಪಕ್ಷ ನಿಮಗೆ ಹತ್ತು ಎಮ್ಮೆ ಖರ್ಚು ಮಾಡಿಸುತ್ತೇನೆ. ಸಾಹುಕಾರರೇ ಹೇಳುತ್ತಿದ್ದರು. ಹುಬ್ಬಳ್ಳಿಗೆ ಹೋಗಬೇಕು, ಎಮ್ಮೆ ತರಬೇಕು ಅಂತ. ನೀವೇ ಬಂದಿರಲ್ಲ."

"ನನ್ನದು ಹುಬ್ಬಳ್ಳಿ ಧಾರವಾಡದ ಕಡೆ ಎಮ್ಮೆ. ಚೆನ್ನಾಗಿ ಹಿಂಡಿ ಹತ್ತಿಕಾಳು ಹಾಕಿದರೆ ಕಣ್ಣು ಮುಚ್ಚಿ ಹತ್ತು ಸೇರು ಹಾಲು ದಿನಕ್ಕೆ ಕರೆಯಬಹುದು..."



"ಲಾಯಕ್ಕಾಯಿತು ಹಾಗಾದರೆ. ಬಂದು ಹೋಗೋದರಿಂದ ನಿಮಗೇನೂ ಲುಕ್ಸಾನಿಲ್ಲ. ಇವತ್ತು ಇಲ್ಲೇ ಮಲಗಿದ್ದು ನಾಳೆ ಬೆಳಗ್ಗೆ ಊರಿಗೆ ಹೋಗುವ. ನಾನು ಹೋಗಿ ಬೇಕಾದರೆ ಸಾಹುಕಾರರನ್ನು ಕೇಳಿ ಗಾಡಿ ಕಳಿಸುತ್ತೇನೆ ನಿಮಗೆ. ಹೌದ – ನಾನು ನಿಮ್ಮನ್ನ ಪತ್ತೆ ಹಚ್ಚಿದ್ದರಿಂದ ನಿಮಗೂ ಒಳ್ಳೆ ಗಿರಾಕಿ ಸಿಕ್ಕ ಹಾಗಾಯಿತಲ್ಲ. ಧರ್ಮ ಕರ್ಮ ಸಂಯೋಗ ಎನ್ನಬೇಕು ಇದಕ್ಕೆ..."

ಪುಂಡರೀಕ ಕೆಳಗೆ ಹೋಗಿ ಗಣಪಯ್ಯನಿಂದ ಎರಡು ಚಾಪೆ ಕೇಳಿ ತಂದ. ಅವತ್ತು ರಾತ್ರೆ ಅಲ್ಲೇ ಮಲಗಿದ್ದು ಬೆಳಗ್ಗೆ ಹೊತ್ತಿಗೆ ಮುಂಚೆ ಎದ್ದು ಶಾಮಭಟ್ಟರು,

"ನಾನು ಗಾಡಿ ಕಟ್ಟಿಸಿಕೊಂಡು ಬರುತ್ತೇನೆ. ಅಥವಾ ಗಾಡಿಯೊಂದನ್ನೇ ಕಳಿಸುತ್ತೇನೆ. ನೀನು ಇಲ್ಲೇ ಇರು. ಭಾವಯ್ಯನಿಗೆ ಒಂದು ಜೊತೆ ಧೋತ್ರ, ಸೀತಕ್ಕನಿಗೊಂದು ಹೊಸ ಸೀರೆ ನನ್ನ ಲೆಖ್ಖದಲ್ಲಿ ಕೊಂಡುಕೊಂಡು ಬಾ"

ಎಂದು ಪುಂಡರೀಕನಿಗೆ ಹೇಳಿದರು. ಹೊರಡುವಾಗ ಪುಂಡರೀಕನನ್ನು ಗುಟ್ಟಾಗಿ ಕರೆದು ಆಸಾಮಿ ಎಲ್ಲಾದರೂ ನಾಪತ್ತೆಯಾದೀತು, ಜೋಕೆ ಎಂದು ಎಚ್ಚರ ಹೇಳಿದರು.

* * * * *

ಸೀತಕ್ಕ ದನಗಳಿಗೆ ಕಲಗಚ್ಚು ಮುರ ಕೊಟ್ಟು ಹಾಲು ಕರೆಸಿ ಮೇಯಲು ಕೊಟ್ಟಿಗೆಯಿಂದ ತಳ್ಳುತ್ತ ಆ ದನಗಳನ್ನುದ್ದೇಶಿಸಿ ಪ್ರೀತಿಯಿಂದ ಸಿಟ್ಟಿನಿಂದ ಬೇಜಾರಿನಿಂದ ಮಾತಾಡುತ್ತಿದ್ದಾಗ ದೂರದಿಂದ ಶಾಮಭಟ್ಟರೊಬ್ಬರೆ ಬರುವುದು ಕಂಡು ಅಡಿಗೆ ಮನೆಯಲ್ಲಿದ್ದ ತಾಯಿಗೆ ಕರೆದು ಹೇಳಿದರು. ವೆಂಕಮ್ಮ ಆ ಬಗ್ಗೆಯೇ ಚಿಂತಿಸುತ್ತಿದ್ದವರು ಕಷ್ಟಪಟ್ಟು ಉಸಿರಾಡುತ್ತ ಏದುತ್ತ ಎದ್ದು ನಿಂತು, 'ನನಗೆ ಯಾಕೆ ಹೀಗೆ ಇತ್ತೀಚೆಗೆ ಕೈಕಾಲು ಹಿಡಿಯುತ್ತಿದೆ ದೇವರೇ' ಎಂದು, ನಿಧಾನವಾಗಿ ಹೆಜ್ಜೆಯಿಡುತ್ತಿದ್ದಾಗ, ಪುಂಡರೀಕನ ಹೆಂಡತಿ ನೇತ್ರಾವತಿ ಕೆರೆಗೆಂದು ಬಟ್ಟೆಯನ್ನೊಟ್ಟು ಮಾಡಿ ಹೊರಟವಳು ಬುಟ್ಟಿಯನ್ನಲ್ಲೆ ಬಿಟ್ಟು ಗುಡಕ್ಕನೆ ಮುಂಚೆ ಕಡೆ ಓಡಿ, ಉಣುಗೋಲು ದಾಟುತ್ತಿದ್ದ ಶಾಮಭಟ್ಟರಿಗೆ –

"ಏನಾಯಿತು ಹೋದ ಕೆಲಸ – ಗಂಡೋ, ಹೆಣ್ಣೊ" ಎಂದು ಆತುರದಿಂದ ಕೇಳಿದಳು.

"ನಾನು ಹೋದ ಮೇಲೆ ಗಂಡೆ"

ಎಂದು ಶಾಮಭಟ್ಟರು ಸೀದ ಒಳಗೆ ಬಂದು,

"ಎಲ್ಲಿ ವೆಂಕಮ್ಮ ನನಗೊಂದು ಲೋಟ ಬಿಸಿಬಿಸಿ ಕಾಫಿ ಕೊಡಿ. ಮೊದಲು

ಕಾಫಿ ಆಮೇಲೆ ಮಾತು” ಎಂದರು.

“ಕಾಫಿಗೆ ಇಟ್ಟಿದ್ದೇನೆ. ಕೊನೆಗೂ ಮಹಾರಾಯ ಸಿಕ್ಕಿದನ ?” ಎಂದರು ವೆಂಕಮ್ಮ.

ಶಾಮಭಟ್ಟರು 'ಏ ಸೀತಕ್ಕ ಬಾ ಇಲ್ಲಿ' ಎಂದು ಕೂಗಿದರು. ಅವಳು ಬರದಿದ್ದುದು ಕಂಡು, 'ಹುಡುಗಿಗೆ ನಾಚಿಕೆಯೆಂದು ಕಾಣುತ್ತೆ, ಶ್ರೀನಪ್ಪಯ್ಯ ವಿಚಾರಿಸಿಕೊಂಡರು ನನ್ನ ಹುಡುಗಿ ಈಗ ಹೇಗಿದಾಳೆ ಅಂತ' ಎಂದು ಗೇಲಿಮಾಡಿದರು.

ವೆಂಕಮ್ಮ ಕುದಿಯುವ ನೀರಿಗೆ ಕಾಫಿಪುಡಿ ಹಾಕಿ ಮುಚ್ಚಿಟ್ಟು,

“ಏನು ಬಂದಿದ್ದನಂತೆ ?” ಎಂದು ಕೇಳಿದರು.

“ಎಮ್ಮೆ ವ್ಯಾಪಾರ.”

“ಎಮ್ಮೆ ವ್ಯಾಪಾರಕ್ಕೆಂದು ಬಂದಿದ್ದನ ? ಅವನು ಇಟ್ಟುಕೊಂಡಿದ್ದ ಅವಳು ಮಾಡುತ್ತಿದ್ದುದು ಹಾಲಿನ ವ್ಯಾಪಾರ. ಈಗ ಅವಳು ಸತ್ತಿದ್ದಾಳಂತ, ಇದ್ದಾಳಂತ? ಯಾರಿಗೆ ಗೊತ್ತಿತ್ತು ಈ ಮಾರಾಯ ಸೂಳೆ ಇಟ್ಟುಕೊಂಡಿದ್ದಾನೆ ಅಂತ. ಆಗ ಸೀತಕ್ಕ ಮೈನೆರೆದು ಕೂಡ ಇರಲಿಲ್ಲ. ಗಂಡನ ಮನೆಗೇಂತ ಕಳಿಸಿದರೆ ಗಂಡನ ಸೂಳೆಗೂ ಅಡಿಗೆ ಮಾಡಿ ಹಾಕಬೇಕು, ಸೇವೆಮಾಡಬೇಕು. ಕೊನೆಗೆ ಅವರಿಬ್ಬರಿಗೆ ಹಾಸಿಗೆ ಹಾಸಿ ಕೊಟ್ಟು ತಾನು ಹೊರಗೆ ಮಲಗಬೇಕು. ಯಾವ ಜಾತಿಯ ಬಿಕನಾಸಿಯೋ ಅವಳು. ನನ್ನ ಮನೆ ಹಾಳುಮಾಡಿದಳು.”

ಕಾಲನ್ನು ಚಾಚಿ ಕಾಲುಗಂಟನ್ನು ಒತ್ತಿಕೊಳ್ಳುತ್ತ 'ಮೈ ಕೈ ಗಂಟುಗಳಲ್ಲೆಲ್ಲ ನೋವು ಶಾಮಭಟ್ಟರೆ, ಇನ್ನು ನಾನು ಬದುಕಬಾರದು' ಎಂದು ಉಸ್ ಎಂದರು ವೆಂಕಮ್ಮ.

“ಹೋಗಲಿ ಬಿಡಿ ವೆಂಕಮ್ಮ – ಹಳೆಯ ಮಾತು ಬೇಡ. ಈಗ ನೀವು ಏನೆನ್ನುತ್ತೀರಿ ಹೇಳಿ ನನ್ನ ಜ್ಞಾಪಕಶಕ್ತಿಗೆ – ಭೇಷ್ ಎನ್ನುತ್ತೀರೊ ಇಲ್ಲವೊ?”

ವೆಂಕಮ್ಮ ಕಾಫಿಯನ್ನು ಸೋಸಿ, ಹಾಲು ಹಾಕಿ ಶಾಮಭಟ್ಟರಿಗೆ ಕೊಟ್ಟರು. ಶಾಮಭಟ್ಟರು ಕುಕ್ಕೂರು ಕಾಲಿನಲ್ಲೆ ಕೂತಿರೋದು ಕಂಡು ನೇತ್ರಾವತಿಗೆ, 'ಏನು ಹೆಣ್ಣೆ ನಿನ್ನ ಕಕ್ಕನಿಗೆ ಒಂದು ಮಣೆ ತಂದು ಕೊಡಬೇಕೂಂತ ಹೊಳೆಯಲ್ಲವ ನಿಂಗೆ ? ಎಲ್ಲ ನಾನೇ ಹೇಳಬೇಕ ?' ಎಂದರು. ಶಾಮಭಟ್ಟರೆ 'ಪರವಾಯಿಲ್ಲ' ಎಂದು ಒಂದು ಮಣೆ ಎಳೆದು ಕೂತು ಕಾಫಿಯನ್ನು ಕುಡಿದರು. ದಣಿದು ಬಂದ ಅವರಿಗೆ ಕಾಫಿ ಅತ್ಯಂತ ರುಚಿಯಾಯಿತು.

“ಎಷ್ಟು ಒಳ್ಳೆ ಕಾಫಿ ವೆಂಕಮ್ಮ. ಕುಡುಮಲ್ಲಿಗೆ ಗಣಪಯ್ಯನ ಸ್ಪೆಷಲ್



ಕಾಫಿಯೂ ಹೀಗಿರಲಿಲ್ಲ”

ಎಂದು ಹೊಗಳಿ ಎದ್ದು ನಿಂತು,

“ನಾನು ಸಾಹುಕಾರರ ಹತ್ತಿರ ಹೋಗಿ ಗಾಡಿ ಕೇಳುತ್ತೇನೆ. ಸಿಕ್ಕರೆ ಅದನ್ನ ಪೇಟೆಗೆ ಕಳಿಸಿ, ಏನೇನು ಕೆಲಸವಾಗಬೇಕೊ – ದೇವಸ್ಥಾನದಲ್ಲಿ – ನೋಡಿಕೊಳ್ಳುತ್ತೇನೆ. ಹಾಗೇ ಇನ್ನೆರಡು ದಿವಸ ಮನೆಯಿಂದ ಯಾರೂ ಅಡಿಕೆ ಸುಲಿತಕ್ಕೆ ಬರಕ್ಕಾಗಲ್ಲವೆಂತ ಸಾಹುಕಾರನಿಗೆ ತಿಳಿಸುತ್ತೇನೆ. ಇನ್ನೇನು ಹೇಳಿ ?”

ಎಂದರು. ವೆಂಕಮ್ಮ ಇನ್ನೇನಿಲ್ಲವೆಂದು ತಲೆಯಾಡಿಸಿ, “ಒಟ್ಟಿನಲ್ಲಿ ನೀವೊಬ್ಬರು ಈ ಮನೆಯಲ್ಲಿ ಇರೋದರಿಂದ...” ಎನ್ನುವುದರೊಳಗೆ ಶಾಮಭಟ್ಟರು ಅಲ್ಲಿಂದ ಕಾಲು ಕಿತ್ತರು.

ವೆಂಕಮ್ಮ ಮಡಿಯುಟ್ಟು ಜಪಕ್ಕೆ ಕೂತರು. ನಡುವೆ ಜ್ಞಾಪಕ ಮಾಡಿಕೊಂಡು ಕೊಟ್ಟಿಗೆಯ ಸೊಪ್ಪು ಸಗಣಿ ಬಾಚುತ್ತಿದ್ದ ಸೀತಕ್ಕನಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಲು ಹೇಳಿದರು. ನೇತ್ರಾವತಿಯನ್ನು ಕರೆದು 'ನೆನೆಹಾಕಿದ ಮತ್ತಿಯಿದೆಯೇನೆ, ಇದ್ದರೆ ಸ್ವಲ್ಪ ಅವಳ ತಲೆತಿಕ್ಕು' ಎಂದರು. ಈ ನೇತ್ರಾವತಿ ತಾನಾಗಿ ಯೋಚಿಸಿ ಒಂದು ಕೆಲಸ ಮಾಡುವವಳೆ ? ಶಾಲೆಯ ಮೆಟ್ಟಿಲು ಹತ್ತಿ ನಾಲ್ಕಕ್ಷರ ಕಲಿತಿದ್ದೇನೆಂದು ದರ್ಪ ತೋರಿಸುತ್ತಾಳೆ. ಇವಳ ದೆಸೆಯಿಂದ ಪುಂಡರೀಕನ ತಲೆಯೂ ಕೆಟ್ಟಿದೆ. ಹೆಂಡತಿಗೆ ಇಷ್ಟವಾಗಲೆಂದು ಕ್ರಾಪು ಮಾಡಿಸಿ, ತಾಯಿಗೆ ಸಿಟ್ಟು ಬರದಿರಲೆಂದು ಹಿಂದಕ್ಕೆ ಒಂದು ಜುಟ್ಟು ಬಿಟ್ಟಿದ್ದಾನೆ. ತಿಂಗಳು ತಿಂಗಳಿಗೆ ಆ ಜುಟ್ಟು ಸಣ್ಣಗಾಗುವುದನ್ನು ನೋಡಿ ವೆಂಕಮ್ಮ ಏನು ಬಂತಪ್ಪ ಕಾಲ ಎಂದು ನಿಟ್ಟುಸಿರು ಬಿಡುತ್ತಾರೆ. ಏನೇನು ಅವತಾರವೊ – ಶುದ್ಧ ಹೆಣ್ಣಿಗ ಅವನು – ಹೆಂಗಸ ಹಾಗೆ ಬೈತಲೆ ತೆರೆಯುತ್ತಾನೆ. ನೇತ್ರಾವತಿಯ ಬಡಿವಾರವೊ – ನೋಡಿದರೆ ಹೇಸಿಗೆಯಾಗುತ್ತದೆ – ಒಳ್ಳೆ ಮುತ್ತೈದೆಯ ಹಾಗೆ ನಡುವ ಬೈತಲೆ ತೆರೆಯುವುದು ಬಿಟ್ಟು, ವಾರೆ ಬೈತಲೆ ತೆಗೆಯುತ್ತಾಳೆ. ಕಣ್ಣಿಟ್ಟು ನೋಡಿದರೂ ಕಾಣಿಸಬಾರದು ಹಾಗೆ ಸಣ್ಣನೆಯ ಕುಂಕುಮವಿಡುತ್ತಾಳೆ. ಮಡಿ ಮೈಲಿಗೆಯಂತೂ ಸ್ವಲ್ಪವೂ ಇಲ್ಲ. ವೆಂಕಮ್ಮ ತುಳಸಿಯನ್ನು ಕಣ್ಣಿಗೊತ್ತಿಕೊಂಡರು.

ಸೀತಕ್ಕನಿಗೆ ಎರೆದು ಬಂದು ನೇತ್ರಾವತಿ ಅಡಿಗೆಮನೆಗೆ ಬಂದು ಅತ್ತೆಯ ಎದುರು ನಿಲ್ಲಲು,

“ಅದೇನು ಹಾಗೆ ರಾಣಿಯಂತೆ ನಿಂತು ಬಿಟ್ಟೆ, ಒಂದು ಎಳೆ ಹಲಸಿನ ಕಾಯನ್ನು ಕೊಯ್ದು ತಂದು ಹೆಚ್ಚು. ಮಾವಿನಕಾಯಿಯ ಕಾಯಿರಸ ಮಾಡಿದರಾಯಿತು. ಸುವರ್ಣಗೆಡ್ಡೆಯಿದೆ – ಅದರ ಪಲ್ಯ. ಒಂದಷ್ಟು ಹಪ್ಪಳ

ಸೆಂಡಿಗೆ ಕರೆಯೋದು, ಅಕ್ಕಿ ಕಡಲೇ ಬೇಳೆ ಪಾಯಸ ಮಾಡೋದು. ಇವತ್ತು ನೀನಷ್ಟು ಕಾಲು ನೀಡಿ ರಾಣಿಯ ಹಾಗೆ ಕೂರಬೇಡ. ಇವತ್ತಾದರೂ ನನ್ನ ಮಗಳಿಗೆ ಕೆಲಸ ಹಚ್ಚಬೇಡ."

ಎಂದು ಪರಚಿಕೊಳ್ಳುತ್ತ ಗೋಪಿಯನ್ನು ಕೈಮೇಲೆ ಕಲಸಿ ಹಣೆಗೆ ನಾಮವನ್ನೆಳೆದು ಮುದ್ರೆಯೊತ್ತಿಕೊಂಡರು. ಮುಂದಿನ ತ್ರಯೋದಶಿ ಅವರ ಶ್ರಾದ್ಧ ಅಲ್ಲವೆ ? ತನ್ನ ಅಪ್ಪಯ್ಯ ಯಾವತ್ತು ಬರುವುದೆಂಬುದೆ ಪುಂಡರೀಕನಿಗೆ ತಿಳಿಯದು. ಯಾವ ಕಾಲದ ಮಕ್ಕಳೊ ! ಹೊರಗೆ ಹಲಸಿನ ಕಾಯಿ ಕೊಯ್ದು ಬರಲು ನೇತ್ರಾವತಿ ಹೋಗುವಾಗ ತನ್ನಷ್ಟಕ್ಕೆ ಗೊಣಗಿದ್ದ ಬಿಸಿಲಿನಲ್ಲಿ ತಲೆಯೊಣಗಿಸಿಕೊಳ್ಳುತ್ತ ಕೂತ ಸೀತಕ್ಕನಿಗೆ ಕೇಳಿಸಿತು. ಅವಳು ಒಳಗೆ ಬಂದಳು. ಬರುವಾಗ ಬುಟ್ಟಿಯಲ್ಲಿ ನೇತ್ರಾವತಿಯ ಸೀರೆ, ಪುಂಡರೀಕನ ಪಂಚೆ, ಅಂಗಿ – ಒಂದು ಗೆರೆ ಸೋಪು ಕಾಣಿಸಿತು. ಅಮ್ಮನ ಹತ್ತಿರ ಹೇಳಬೇಕೆಂದು ಕೊಂಡಳು. ಪುಂಡರೀಕನ ಬಟ್ಟೆಗೆ ಮಾತ್ರ ಸೋಪು ಹಾಕು, ನಿನ್ನ ಸೀರೆಗೆ ಅಂಟವಾಳದ ಕಾಯಿ ಸಾಕು ಎಂದರೆ ತನ್ನ ಬಟ್ಟೆಗೂ ಸೋಪು ಹಾಕಿಕೊಳ್ಳುತ್ತಾಳೆ. ನಮ್ಮ ಬಟ್ಟೆಗಳಿಗೆ ಅಂಟವಾಳಕಾಯಿಯ ಗತಿಯೂ ಇರುವುದಿಲ್ಲ ಕೆಲವು ಸಾರಿ. ಗೆಯ್ಯಲು ಮಾತ್ರ ನಾನು ಅಮ್ಮ ಬೇಕು ಈ ಮನೆಯಲ್ಲಿ, ಎಂದು ಪರಚಿಕೊಳ್ಳುತ್ತ ತಾಯಿಯ ಎದುರು ನಿಂತು,

"ಏನಾಯಿತು ಅಮ್ಮ – ನೇತ್ರಾವತಿ ಗೊಣಗಿಕೊಂಡು ಹೋದಳು"

ಎಂದದ್ದಕ್ಕೆ ವೆಂಕಮ್ಮ –

"ಇನ್ನೇನು ಆಗಿರಬೇಕು ಹೇಳು. ಕೆಲಸ ಹೇಳಿದರೆ ಅವಳ ಮುಖ ಇಷ್ಟು ದಪ್ಪವಾಗುತ್ತದೆ."

ಎಂದರು. ಸೀತಕ್ಕ ಸೋಪಿನ ವಿಷಯ ಹೇಳಿದಳು. ಅದಕ್ಕೆ ವೆಂಕಮ್ಮ ಶಾಮಭಟ್ಟರು ಬರಲಿ, ಅವರಿಗೆ ಅದನ್ನು ತೋರಿಸಿ ವಿಚಾರಣೆ ಮಾಡಿಸುತ್ತೇನೆ, ಹಾಸಕ್ಕೆ ಹೊದೆಯಕ್ಕೆ ಗತಿಯಿಲ್ಲದೆ ಇರುವಾಗ ಇವಳು ಮನೆ ತೊಳೆಯಲೆಂದೇ ಬಂದು ಸೇರಿಕೊಂಡ ಹಾಗಿದೆ, ಹೀಗೆ ಸಂಸಾರ ಮಾಡಿದರೆ ಉದ್ಧಾರವಾದ ಹಾಗಾಯ್ತು ಎಂದರು. ನೇತ್ರಾವತಿ ಹಲಸಿನ ಕಾಯನ್ನು ಕೊಯ್ದು ತಂದು ಮೂಲೆಯಲ್ಲಿದ್ದ ಮೆಟ್ಟುಗತ್ತಿಯ ಮೇಲೆ ಅದನ್ನು ಇಟ್ಟಳು. ಕೈಗೆ ಮೇಣ ಹತ್ತೀತೆಂದು ತೆಂಗಿನ ಎಣ್ಣೆಯ ಗಿಂಡಿಯನ್ನು ನಾಗಂದಿಗೆಯಿಂದ ತೆಗೆಯಲು ಹೋದಾಗ ಗಿಂಡಿ ಜಾರಿ ಕೆಳಗೆ ಬಿತ್ತು.

ಕಣ್ಣು ಮುಚ್ಚಿ ಕೂತಿದ್ದ ವೆಂಕಮ್ಮ 'ಏನು ಮಾಡಿದಿಯೇ ಮಹಾರಾಯತಿ'



ಎನ್ನುತ್ತ ಕಣ್ಣುಬಿಟ್ಟು ಗಟ್ಟಿಯಾದ ಸ್ವರದಲ್ಲಿ ಕಿರುಚಿದರು :

"ಈ ಮನೆ ತೊಳೆಯದ ಹೊರ್ತು ನಿನಗೆ ಸಮಾಧಾನವಿಲ್ಲ ಅಲ್ಲವ ? ನನ್ನ ಮೇಲೆ ಸಿಟ್ಟಿದ್ದರೆ ಎಣ್ಣೆ ಚೆಲ್ಲಬೇಕ ? ನೀನು ವಿಪರೀತ ಸೊಕ್ಕಿಬಿಟ್ಟಿದ್ದಿ ನೇತ್ರಾವತಿ. ಪುಂಡರೀಕ ಬಂದ ಮೇಲೆ ನಾನು ಅವನನ್ನ ಕೇಳಬೇಕೆಂದಿದ್ದೇನೆ. ನಾನು ಎಷ್ಟು ಸಾರಿ ನಿನಗೆ ಹೇಳಿಲ್ಲ : ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು, ನಿನ್ನ ಸೀರೆಗೆಲ್ಲ ಸೋಪು ಬೇಡ, ಅಂಟವಾಳದ ಕಾಯಿ ಸಾಕು ಅಂತ. ನಿನ್ನ ಚಾಳಿಗಳು ನನಗೆ ಗೊತ್ತಾಗಲ್ಲ ಅಂತ ತಿಳಿದಿದೀಯ ? ನಿನ್ನ ಕೋಣೆ ನಾಗಂದಿಗೆ ಮೂಲೇಲಿ ಯಾಕೆ ಕೋಡುಬಳೆ ಮುಚ್ಚಿಟ್ಟಿದ್ದಿಯೆ ? ನೀನು ನನ್ನ ಎದುರಿಗೆ ತಿಂದರೆ ಬೇಡವೆಂತೀನ? ಇವತ್ತು ಯಾಕೋ ಸೀತಕ್ಕ ಅಲ್ಲಿ ಕೈಹಾಕಿ ನೋಡ್ತಾಳೆ ಒಂದು ಪೊಟ್ಟಣದ ತುಂಬ ಕೋಡುಬಳೆ. ನನ್ನನ್ನ ಕೆಟ್ಟವಳು ಮಾಡಬೇಕೂಂತ ತಾನೆ ನೀನು ಹೀಗೆ ಮಾಡೋದು?"

ನೇತ್ರಾವತಿಗೆ ಸಿಟ್ಟು ಅವಮಾನ ಒಟ್ಟಿಗೇ ಆಗಿ ಮಾತು ತಿಳಿಯದೆ ಮೆಟ್ಟುಗತ್ತಿಯ ಮೇಲೆ ಕೂತು ಕಣ್ಣುತುಂಬ ನೀರು ತುಂಬಿಕೊಂಡಳು. ಸೀತಕ್ಕ ಎಣ್ಣೆಯನ್ನು ಬಳಿದು ಗಿಂಡಿಗೆ ತುಂಬಿಸಿದಳು. ನೇತ್ರಾವತಿಯಿಂದ ಉತ್ತರ ಬರದಿದ್ದುದು ಕಂಡು, ಅವಳು ಎದುರಾಡದಿದ್ದುದಕ್ಕೆ ಆಶ್ಚರ್ಯಪಟ್ಟು ಮತ್ತೆ ಮುಂದುವರಿಸಿದರು :

"ನಾನು ಪಟ್ಟ ಕಷ್ಟ ದೇವರಿಗೆ ಗೊತ್ತು. ನನ್ನ ಅತ್ತೆಯೆಂದರೆ ನಾನು ಗಡಗಡ ನಡುಗುತ್ತಿದ್ದೆ. ನಿನ್ನ ಹಾಗೆ ವಾರೆಬೈತಲೆ ತೆಗೆದು ಗಂಡನ ಜೊತೆ ಸೂಳೆಯ ಹಾಗೆ ಸರಸಮಾಡುವ ಕಾಲವಲ್ಲ ಅದು. ನನ್ನ ಪಾಡಿಗೆ ನಾನು ದುಡಿದುಕೊಂಡಿದ್ದರೂ ಕೂತರೆ ತಪ್ಪು, ನಿಂತರೆ ತಪ್ಪು. ಅವರೋ ವರ್ಷವಿಡೀ ಊರು ಅಲೆಯುವುದು. ಅವರಿಗೊಬ್ಬಳು ರಂಭೆ ಬೇರೆ. ಏಳು ಮಕ್ಕಳನ್ನ ನನ್ನದಲ್ಲಾಂತ ಹೊಂಡಕ್ಕೆ ಹಾಕಿದೆ ಉಳಿದಿಬ್ಬರು ಮಕ್ಕಳಲ್ಲಿ ಸೀತಕ್ಕನ ಪಾಡು ಹೀಗಾಯ್ತು. ನನ್ನ ಮೇಲೆ ನಿಮಗೆ ಇಷ್ಟು ಕರುಣೆ ಬೇಡವ ? ಮೊನ್ನೆ ರಾತ್ರಿ ನೀನು ಪುಂಡರೀಕನಿಗೆ ಮಲಗಿಕೊಂಡು ಏನು ಚುಚ್ಚುತ್ತಿದ್ದಿ. ನಾನು ಕೇಳಿಸಿಕೊಂಡೆ – ಗೊತ್ತಾಯಿತ ? ನನಗೆ ನಿದ್ದೆ ಬಂತೆಂದು ತಿಳಿದಿದ್ದಿಯ? ವಯ್ಯಾರಮಾಡಿ ಗಂಡನನ್ನು ಒಲೆಸಿಕೊಳ್ಳುವ ನಿನ್ನ ನಾಜೂಕು ನನಗೆ ತಿಳಿಯಲ್ಲಾಂತ ತಿಳಿದಿದ್ದೀಯ?"

ವೆಂಕಮ್ಮನ ಧ್ವನಿ ಇನ್ನಷ್ಟು ಜೋರಾಗುವ ಹೊತ್ತಿಗೆ ಶಾಮಭಟ್ಟರ ಹೆಜ್ಜೆಸಪ್ಪಳ ಕೇಳಿಸಲು ಅವರ ಮಾತು ನಿಂತಿತು. ಒಂದು ಕ್ಷಣ ಸುಮ್ಮನಿದ್ದು ಶಾಮಭಟ್ಟರು ಒಳಗೆ ಬಂದು ನಿಂತುದನ್ನು ಕಂಡು,

"ಸೀತಕ್ಕ ಪಟ್ಟ ಕಷ್ಟದಲ್ಲಿ ಒಂದು ಪಾಲು ನೀನು ಪಡುತ್ತಿಲ್ಲ ನೇತ್ರಾವತಿ. ಅವಳು ಅವನ ಸೇವೇನೂ ಮಾಡಬೇಕು, ಅವನ ಸೂಳೆಯ ಸೇವೇನೂ ಮಾಡಬೇಕು. ಇನ್ನೂ ಮೈನೆರೆಯದ ಹುಡುಗಿ – ಸುಖವೆಂದರೆ ಏನೆಂದು ಅವಳು ಕಂಡದ್ದುಂಟೆ ? ಈಗ ಮುದುಕಿಯಾದ ಮೇಲೆ ಯಾವ ಸಂಭ್ರಮಕ್ಕೆಂದು ಅವಳ ಗಂಡ ಇಲ್ಲಿಗೆ ಬರಬೇಕು ? ನಾನೊಂದು ಸಾರಿ ಹೋಗಿ ನೋಡುತ್ತೇನೆ – ಏನು ನೋಡೋದು ? ಸೀತಕ್ಕನ ಬೆನ್ನಿನ ಮೇಲೆ ಕಬ್ಬಿಣದ ಸಟ್ಟುಗ ಕಾಯಿಸಿ ಬರೆ ಇಟ್ಟಿದ್ದಾನೆ. ಇವತ್ತಿಗೂ ಅದರ ಕಲೆ ಅವಳ ಬೆನ್ನಿನ ಮೇಲೆ ಇದೆ. ಬೇಕಾದರೆ ಶಾಮಭಟ್ಟರನ್ನು ಕೇಳು – ಅವರಿಗೆಲ್ಲ ಗೊತ್ತು. ಈ ಪುಣ್ಯಾತ್ಮರೊಬ್ಬರು ನಮ್ಮ ಮನೆಯನ್ನು ಯಾವ ಋಣಾನುಬಂಧದಿಂದಲೊ ಬಂದು ಸೇರದಿದ್ದರೆ ನಮ್ಮದು ನಾಯಿಪಾಡಾಗುತ್ತಿತ್ತು. ಸಾಯುತ್ತಾಳಲ್ಲ ಮಗಳು ಎಂದು ಕರೆದುಕೊಂಡು ಬಂದೆ. ಕಳಿಸಿ ಕೊಡುವಾಗ ಅವನ ಸೂಳೆ ನನ್ನ ಮಗಳ ಕಿವಿಯ ಬುಗುಡಿ, ಎರಡೆಳೆ ಕಾಸಿನ ಸರ, ಗೆಜ್ಜೆ ಪಟ್ಟಿ ಬಚ್ಚಿಟ್ಟು ಕೊಂಡಳು. ಆ ರಂಡೆ ಅದನ್ನೆ ಮಾರಿ ಎಮ್ಮೆ ಕೊಂಡಿರಬೇಕು."

ಶಾಮಭಟ್ಟರು ನೇತ್ರಾವತಿ ಅಳುತ್ತ ಕೂತಿದ್ದುದನ್ನು ಕಂಡು ಏನೋ ನಡೆದಿರಬೇಕೆಂದು ಊಹಿಸಿದರು. ವೆಂಕಮ್ಮನ ಮಾತು ನಿಲ್ಲಿಸಲೆಂದು ಸರಸವಾಗಿ,

"ಏನು ನಡೆದಿದೆ ವೆಂಕಮ್ಮ – ಅಳಿಯದೇವರ ಸಂತರ್ಪಣೆಗೆ ? ನಮಗೊಂದು ಪಾಯಸದ ಊಟಕ್ಕೆ ಮೋಸವಿಲ್ಲ ತಾನೆ ?"

ಎಂದು ಕೇಳಿದರು. ತಾವು ಸಾಹುಕಾರರ ಹತ್ತಿರ ಹೋದ ವಿಷಯ, ಮನೆಯವರು ಅಡಿಕೆ ಸುಲಿತಕ್ಕೆ ಯಾಕೆ ಬರಲಿಲ್ಲ ಎಂದು ಅವರು ರೇಗಿದ್ದು, ಅದಕ್ಕೆ ತಾನು ಕೊಟ್ಟ ಸಮಜಾಯಿಷಿ, ಅಂಗಾಲಾಚಿ ಅಳಿಯದೇವರನ್ನು ತರಲು ಕಮಾನು ಗಾಡಿಯನ್ನು ಅವರಿಂದ ಗಿಟ್ಟಿಸಿದ್ದು ಎಲ್ಲವನ್ನೂ ಅಭಿನಯ ಪೂರ್ವಕವಾಗಿ ವಿವರಿಸಿದರು. ತನ್ನ ಮಾತನ್ನು ಮಗ್ನಳಾಗಿ ಕೇಳುತ್ತ ನೇತ್ರಾವತಿ ಕೂತುದನ್ನು ಕಂಡು ಅವಳ ಅಳು ನಿಂತಿತಲ್ಲ ಎಂದು ಹರ್ಷವಾಗಿ, ಅವಳ ಕಡೆ ನೋಡಿ, ಅವಳ ಹಾಗೆ ಅಳುಬುರುಕು ಮುಖ ಮಾಡಿ, ಸೊಟ್ಟ ಬಾಯಿಯಿಂದ ಈ ಈ ಈ ಎಂದು ಅವಳನ್ನು ನಗಿಸಿದರು.

* * * * *

ದೇವರ ಕೋಣೆಯ ಗೋಡೆಯೊಂದಕ್ಕೆ ಅಂಟಿಸಿದ ಮಾಸಿದ ಕನ್ನಡಿಯೊಂದರ ಎದುರು ನಿಂತು ಸೀತಕ್ಕ ತನ್ನ ಮೋಟು ಜಡೆಯನ್ನು ತೆಂಗಿನ ನಾರಿನಲ್ಲಿ ಬಿಗಿದು ಕಟ್ಟಿಕೊಂಡಳು. ಕುಸುಮ ಜಾಜಿ ಮತ್ತು ಕೇದಗೆಯ ಎಸಳನ್ನು



ಮುಡಿದಳು. ಹಣೆಗೆ ದೊಡ್ಡದಾಗಿ ಒಂದು ಕುಂಕುಮವಿಟ್ಟು ಕೆನ್ನೆಗೆ ಅರಿಸಿನ ಹಚ್ಚಿಕೊಂಡಳು. ಮದುವೆಯಲ್ಲಿ ಅವಳ ತಂದೆ ಕೊಂಡುಕೊಟ್ಟಿದ್ದ ಮುವ್ವತ್ತಾರು ವರ್ಷ ವಯಸ್ಸಾದ ನುಸಿ ಹೊಡೆದ ಧರ್ಮಾವರದ ಸೀರೆಯನ್ನು ಉಟ್ಟುಕೊಂಡಳು. ಆ ಸೀರೆ ಪೆಟ್ಟಿಗೆಯಿಂದ ಹೊರಬರುವುದು ವಿಶೇಷ ಸಂದರ್ಭಗಳಲ್ಲಿ ಮಾತ್ರ ; ಗೌರೀಪೂಜೆ, ಅರಿಸಿನ ಕುಂಕುಮ, ಅಥವಾ ಯಾವುದಾದರೂ ಹಳ್ಳಿಯಲ್ಲಿ ನಡೆಯುವ ಮದುವೆ ದಿನಗಳಲ್ಲಿ ಹಿರಿ ಮುತ್ತೈದೆಯಾಗಿ ಹೋಗುವಾಗ. ನೇತ್ರಾವತಿಯ ಹಾಗೆ ನೆಲಕ್ಕೆ ಸೋಕುವಂತೆ ಅವಳು ಸೀರೆಯನ್ನು ಉಡುವವಳಲ್ಲ. ಒಳಗಚ್ಚೆ ಹಾಕಿ, ಕಾಲಿನಿಂದ ಬಹಳ ಮೇಲಕ್ಕೆ ಬರುವ ಹಾಗೆ, ಬಾಳೆಕಾಯಿ ಗಂಟಿನಲ್ಲಿ ಬಿಗಿದು ಮೇಲಕ್ಕೊಂದು ಪಟ್ಟಿಯನ್ನು ಹಾಕುತ್ತಾಳೆ. ವೆಂಕಮ್ಮ ಹೊಸ ಕೆಂಪು ಸೀರೆಯುಟ್ಟರು. ನೇತ್ರಾವತಿ ನಿತ್ಯದ ಮಾಸಲು ಸೀರೆಯುಡಲು ವೆಂಕಮ್ಮ 'ನನ್ನನ್ನ ಕೆಟ್ಟವಳು ಮಾಡಬೇಕೆಂದಲ್ಲವೆ ನೀನು ಹೀಗೆ ಮಾಡೋದು ? ಬೇರೆ ಒಳ್ಳೆ ಸೀರೆಯುಡಬಾರದು ?' ಎಂದಮೇಲೆ ಮೈಮೇಲೆ ಹೂವಿನ ಚಿತ್ರಗಳಿದ್ದ ಒಂದು ವಾಯಿಲ್ ಸೀರೆಯನ್ನು ಉಟ್ಟಳು. ಮೂವರೂ ದೇವಸ್ಥಾನಕ್ಕೆ ಬಂದು ನಿಂತಾಗ ಗಂಟೆ ಸುಮಾರು ಹತ್ತುವರೆಯಾಗಿತ್ತು.

ಗಂಡ ಬರುತ್ತಾರೆಂಬ ಸುದ್ದಿ ಕೇಳಿ ಸೀತಕ್ಕನ ಮನಃಸ್ಥಿತಿ ಹೇಗಾಗಿರಬಹುದೆಂದು ಚಿಂತಿಸಿದವರು ಶಾಮಭಟ್ಟರೊಬ್ಬರು ಮಾತ್ರ. ಅವರಿಗೆ ಆಶ್ಚರ್ಯ – ಅವಳ ಮುಖಭಾವ ಯಾವತ್ತೂ ನಿರ್ವಿಕಾರವಾಗಿರುತ್ತದೆ. ದಪ್ಪ ತುಟಿಗಳ ಬಾಯನ್ನು ಸ್ವಲ್ಪ ತೆರೆದು ಯಾವಾಗಲೂ ಗಾಬರಿಯಲ್ಲಿ ಅಥವಾ ಮಂಕಿನಲ್ಲಿ ನಿಂತಿರುವಂತೆ ಕಾಣುತ್ತಾಳೆ. ಅವಳಿಗಿದ್ದ ಅತ್ಯಂತ ಪ್ರೀತಿಯ ಸಂಬಂಧವೆಂದರೆ ದನಗಳ ಜೊತೆ ಮತ್ತು ತಾಯಿಯ ಜೊತೆ. ಒಬ್ಬಳೇ ದನಗಳ ಎದುರಿಗೆ ನಿಂತು ತಾಸುಗಟ್ಟಲೆ ಮಾತಾಡುತ್ತಾಳೆ ಬೇಕಾದರೆ – ಅವುಗಳ ಮೈ ತುರಿಸುತ್ತ, ಸಂದಿಯಲ್ಲಿ ಕಚ್ಚಿಕೊಂಡ ಚಿಗಟಗಳನ್ನು ಕಿತ್ತು ಎಸೆಯುತ್ತ, ಇವತ್ತು ಸೀತಕ್ಕ ತಾಯಿಯ ಹತ್ತಿರ ಕೂಡ ತನ್ನ ವಿಷಯದ ಬಗ್ಗೆ ಒಂದು ಮಾತನ್ನೂ ಆಡಿಲ್ಲ. ಹೇಳಿದ ಹಾಗೆ ಮಾಡಬೇಕೆಂದು ಮಾತ್ರ ಅವಳಿಗೆ ಗೊತ್ತು. ಈ ನಿರ್ವಿಕಾರಕ್ಕೆ ಏನೆನ್ನಬೇಕು.

ಶಾಮಭಟ್ಟರು ನಿಂತಲ್ಲಿ ನಿಲ್ಲಲಾರರದೆ ಸುತ್ತುತ್ತಿದ್ದರು – ದೇವಸ್ಥಾನದ ಒಳಕ್ಕೆ, ಹೊರಕ್ಕೆ, ಕೆರೆಯ ದಂಡೆಯವರೆಗೆ, ಮತ್ತೆ ಹಿಂದಕ್ಕೆ. ಪುಂಡರೀಕ ಬಟ್ಟೆಯ ವ್ಯಾಪಾರಕ್ಕೆಂದು ಅಂಗಡಿಗೆ ಹೋಗಿದ್ದಾಗ ಆಸಾಮಿ ಎಲ್ಲಿಯಾದರೂ ಕಾಲು ಕಿತ್ತಿದ್ದರೆ ? ಎಲ್ಲಿ ಜೀವನಾಂಶಕ್ಕೆ ಪೀಡಿಸುತ್ತಾರೊ ಎಂದು ಅವನಿಗೆ ಭಯವಿತ್ತೆಂಬುದು

ಖಚಿತ. ಅವನು ಓಡಿ ಹೋದರೆ ಮಾಡಿದ್ದೆಲ್ಲ ದಂಡ. ಪುಂಡರೀಕನಾದರೊ ಸ್ವಲ್ಪ ಪೆದ್ದು ಈ ವಿಷಯಗಳಲ್ಲಿ...

ಪೂಜೆ–ಭಟ್ಟರು ಮಂಗಳಾರತಿಗೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಕಾದರು...

ಸೀತಕ್ಕನ ಗಂಡನನ್ನು ನೋಡುವ ಕುತೂಹಲದಿಂದ ದೇವಸ್ಥಾನದ ಹೊರಕ್ಕೆ ಬಹಳ ಜನ ಕಾದಿದ್ದರು. ಸಾಹುಕಾರರು ಮತ್ತು ಅವರ ಸಂಸಾರದ ಆದಿಯಾಗಿ, ಜೋಯಿಸರು, ಗೋಪಾಲಕೃಷ್ಣ ತಂತ್ರಿಗಳು, ಸ್ವಲ್ಪ ದೂರದಲ್ಲಿ ಸಾಹುಕಾರರ ತೋಟದ ಕೆಲಸಕ್ಕೆ ಬಂದ ಕನ್ನಡಾ ಜಿಲ್ಲೆ ಆಳುಗಳು, ಗಾಡಿ ಹೊಡೆಯುವ ಈರೋಜಿ, ಹಳೆ ಪೈಕದ ಲಕ್ಕು, ಬಚ್ಚ ಇತ್ಯಾದಿ. ಸುಮಾರು ಅರ್ಧ ಗಂಟೆ ಕಾದ ಮೇಲೆ ಕೆರೆಯ ಈಚೆಗಿನ ಇಳಿಜಾರಿನಲ್ಲಿ ಓಡಿ ಬರುವ ಗಾಡಿಯ ಹೆಜ್ಜೆಗಳ ಸದ್ದು ಕೇಳಿತು. 'ನಮ್ಮ ಗಾಡಿಯೇ, ಹಾಗೆ ಓಡಿ ಬರುವುದು ನಮ್ಮ ಎತ್ತೆ' ಎಂದರು ಸಾಹುಕಾರರು. ಶಾಮಭಟ್ಟರು ಒಳಗೆ ಹೋಗಿ ವೆಂಕಮ್ಮ ಸೀತಕ್ಕರಿಗೆ 'ನೀವು ದೇವರ ಕಡೆಯೇ ನೋಡುತ್ತಿರಿ, ಅದಕ್ಕಿಂತ ಮುಂಚೆ ಅವರಿಗೆ ಮುಖ ಕೊಟ್ಟು ನೋಡಬೇಡಿ' ಎಂದರು.

ಸೀತಕ್ಕನ ಗಂಟಲು ಒಣಗಿತು. ಮೈ ಕೈಯಿಂದ ಬೆವರು ಕಿತ್ತು ಕಣ್ಣು ಮಂಜಾಯಿತು. ಹಣೆಯ ಕುಂಕುಮ ನೀರಾಗಿ ಹಣೆಯಿಂದ ಇಳಿಯಿತು. ವೆಂಕಮ್ಮ ಕಣ್ಣು ಮುಚ್ಚಿ ಕೈ ಮುಗಿದು ನಿಂತರು. ನೇತ್ರಾವತಿ ಊರು ತುಂಬ ಕಣ್ಣಾಡಿಸುತ್ತ ಆತುರ ತಡೆಯಲಾರದೆ ನಿಂತಳು. ಸೀತಕ್ಕನ ಗಂಡ ಬರುವುದೇ ಇಲ್ಲವೇನೊ, ತನ್ನ ಗಂಡನೊಬ್ಬನೇ ಬರುತ್ತಾರೇನೊ – ಹಾಗಾದರೆ ಹೀಗೆ ಕಾದು ನಿಂತವರೆಲ್ಲರ ಮೇಲೆ ಏನು ಪರಿಣಾಮವಾದೀತೆಂದು ಯೋಚಿಸುತ್ತ ಆಲೋಚನೆಯನ್ನು ತಡೆದುಕೊಳ್ಳಲಾರದೆ ಉಸಿರು ಕಟ್ಟಿದವಳಂತೆ ಕಾದಳು.

ಗಾಡಿ ಬಂದು ನಿಂತಿತು. ಸಾಹುಕಾರರು ತಮ್ಮ ಭರ್ಜರಿ ಎತ್ತುಗಳ ಕಡೆ ಮೆಚ್ಚಿಕೆಯಿಂದ ನೋಡುತ್ತಿದ್ದಂತೆ ಗಾಡಿಯಿಂದ ಶೀನಪ್ಪಯ್ಯ ಬಿಳಿಯ ಧೋತ್ರ, ಮುಂಡು–ತೋಳಿನ ಅಂಗಿ, ಮೇಲೊಂದು ಸಿಲ್ಕಿನ ವಸ್ತ್ರ ತೊಟ್ಟು ಕೆಳಗಿಳಿದರು. ಹೊಸ ಧೋತ್ರ, ಸೀರೆಯ ಗಂಟನ್ನು ಹಿಡಿದುಕೊಂಡು ಪುಂಡರೀಕ ಅವರನ್ನು ಹಿಂಬಾಲಿಸಿದ. ಅತ್ತಿತ್ತ ನೋಡದೆ ಶೀನಪ್ಪಯ್ಯ ದೇವಸ್ಥಾನದೊಳಕ್ಕೆ ಹೋದಕೂಡಲೆ ಜಾಗಟೆ ಶಂಖಗಳ ಧ್ವನಿ ಮೇಳದ ಜೊತೆ ಜೊತೆಯಾಗಿ ಭಟ್ಟರು ತಟ್ಟೆಯಲ್ಲಿ ಮಂಗಳಾರತಿಯನ್ನು ತಂದರು. ಆರತಿಗೆ ಎದುರುಬದುರಾಗಿ ವೆಂಕಮ್ಮ ಸೀತಕ್ಕ ಮತ್ತು ಶೀನಪ್ಪಯ್ಯ ನಿಂತು, ಆರತಿಯನ್ನು ಕಣ್ಣಿಗೊತ್ತಿಕೊಂಡು ಅದರ ಮಂದವಾದ



ಬೆಳಕಿನಲ್ಲಿ ಒಬ್ಬರನ್ನೊಬ್ಬರು ನೋಡಿದರು. ಯಾರೂ ಒಂದು ಮಾತನ್ನೂ ಆಡಲಿಲ್ಲ. ಶಾಮಭಟ್ಟರು ಒಂದು ದೊಡ್ಡ ಬಟ್ಟಲಿನಲ್ಲಿ ಎಳ್ಳೆಣ್ಣೆಯನ್ನು ತಂದಿಟ್ಟು ಇದರಲ್ಲಿ ಒಬ್ಬೊಬ್ಬರಾಗಿ ನಿಮ್ಮ ಮುಖಗಳನ್ನು ನೋಡಿಕೊಳ್ಳಿ ಎಂದರು. ನೋಡಿಯಾದ ನಂತರ ಅದನ್ನು ದೇವರ ದೀಪಕ್ಕೆ ವಿನಿಯೋಗಿಸಲೆಂದು ಕೊಟ್ಟರು. ಸಾರ್ವತ್ರಿಕವಾಗಿ ಹರಡಿದ್ದ ಮೌನ ಎಲ್ಲರಿಗೂ ಅಸಹನೀಯವಾಯಿತು. ಶಾಮಭಟ್ಟರು ಇಷ್ಟು ಹೊತ್ತೂ ಸುಮ್ಮನಿದ್ದವರು ಎಲ್ಲರ ಮೇಲೂ ಮಂಕು ಕವಿದದ್ದು ಕಂಡು, ಶೀನಪ್ಪಯ್ಯನ ಕಡೆ ತಿರುಗಿ,

"ನಿಮ್ಮ ಹುಡುಗೀನ ನೋಡಿದಿರಾ ಶೀನಪ್ಪಯ್ಯ ? ನಾನೇನೂ ನಿಮಗೆ ಮೋಸ ಮಾಡಿಲ್ಲವೆಂತ ಖಾತ್ರಿಯಾಯಿತು ತಾನೆ?"

ಎನ್ನಲು ನೇತ್ರಾವತಿ ಸೆರಗಿನಿಂದ ಬಾಯಿ ಮುಚ್ಚಿಕೊಂಡು ಒಳಗೊಳಗೆ ನಕ್ಕು ವಾರೆಗಣ್ಣಿನಿಂದ ಪುಂಡರೀಕನನ್ನು ಹುಡುಕಿದಳು...

*   *   *   *   *

ಮನೆಗೆ ಬಂದ ಮೇಲೆ ಎಲ್ಲರಿಗೂ ಒಗ್ಗರಣೆ – ಅವಲಕ್ಕಿ, ಕಾಫಿಯ ಸಂತರ್ಪಣೆಯಾಯಿತು. ಬೇಡಬೇಡವೆನ್ನುತ್ತ, ಉಪಚಾರ ಮಾಡಿಸಿಕೊಳ್ಳುತ್ತ ಹೊಟ್ಟೆತುಂಬ ಶೀನಪ್ಪಯ್ಯ ತಿಂದರು. ಶಾಮಭಟ್ಟರು ಶೀನಪ್ಪಯ್ಯನಿಗೆ 'ಇವತ್ತು ಸ್ವಲ್ಪ ಊಟಕ್ಕೆ ತಡವಾಗಬಹುದು. ವಿಶ್ರಮಿಸಿಕೊಳ್ಳಿ. ನಾನು ಸ್ವಲ್ಪ ಕೆಲಸವಿದೆ ಹೋಗಿಬರುತ್ತೇನೆ'ಂದು ಹೊರಟರು.

ಈ ಶೀನಪ್ಪಯ್ಯ ಎಂತಹ ಮನುಷ್ಯನೆಂದು ಅವರಿಗೆ ಸಮಸ್ಯೆ... ಒಂದು ನಗುವೆ, ಮುಖದಲ್ಲಿ ಗೆಲುವೆ ? ನಾಚಿಕೆ ಮಾನ ಮರ್ಯಾದೆಯಂತೂ ತೃಣಮಾತ್ರವಿಲ್ಲ. ಸಾಹುಕಾರರು 'ಏನು ನೀವೇ ವೆಂಕಮ್ಮನ ಅಳಿಯಂದಿರ, ಬಂದದ್ದು ಸಂತೋಷ' ಎಂದರೆ ಹೂ ಎನ್ನಲಿಲ್ಲ, ಊಹೂ ಎನ್ನಲಿಲ್ಲ. ಮಾತು ತಿರುಗಿಸಿ 'ಎಮ್ಮೆಯ ವ್ಯಾಪಾರಕ್ಕೆಂದು ಹುಬ್ಬಳ್ಳಿಯಿಂದ ಬಂದೆ, ನಿಮ್ಮ ಕೊಟ್ಟಿಗೆಗೆ ನಾಲ್ಕೆಮ್ಮೆ ಹೊಡೆಸಲಾ' ಎಂದು ನಯ ನಾಜೂಕಿಲ್ಲದೆ ನಿಂತ ಸ್ಥಳದಲ್ಲಿಯೇ ಕೇಳಿಬಿಟ್ಟ. ಮನೆಗೆ ಬಂದ ಮೇಲೆ ಸೀತಕ್ಕನ ಹತ್ತಿರವಿರಲಿ, ವೆಂಕಮ್ಮನ ಹತ್ತಿರವೂ ಒಂದು ಮಾತನ್ನು ಆಡಲಿಲ್ಲ. ಗಾಡಿಯಲ್ಲಿ ಬರುವಾಗ ಸೀತಕ್ಕನ ಚಿಕ್ಕಪ್ಪ ಶೇಷಗಿರಿಭಟ್ಟರನ್ನು ವಾಚಾಮಗೋಚರ ಬೈದನಂತೆ. ಅವರು ಸತ್ತು ಎಷ್ಟು ಕಾಲವಾದರೂ ಇವನ ನಂಜು ಆರಿಲ್ಲವಲ್ಲ ? ಏನೊ ಗಾದೆ ಹೇಳುತ್ತಾರಲ್ಲ ಹಾಗೆ. ಎಂತಹ ಹುಳಿ ಮಾವಿನಕಾಯಿ ಕೂಡ ಉಪ್ಪಿನ ಜೊತೆ ಬೆರಸಿ ಕಲ್ಲು ಹೇರಿಟ್ಟರೆ ತನ್ನ ಹುಳಿಯನ್ನು ಕಳೆದುಕೊಳ್ಳುತ್ತದೆ; ಮನುಷ್ಯ ತನ್ನ ಜಾಯಮಾನವನ್ನು

ಮಾತ್ರ ಬಿಡುವುದಿಲ್ಲ. ಅವನೇನು ಮಾಡಿಯಾನು ಪಾಪ – ಅವನನ್ನು ನಾವು ಬೈಯ್ಯಬಾರದು – ಅದು ಅವನ ಸ್ವಭಾವ. ತಾನು ಸೂಳೆಯಿಟ್ಟುಕೊಂಡಿದ್ದು, ಸೀತಕ್ಕನ ಬೆನ್ನಿಗೆ ಬರೆಯೆಳೆದಿದ್ದು, ಜೀವನಾಂಶ ಕೇಳಿಯಾರೆಂದು ಸೂಳೆಯ ಜೊತೆ ಹುಬ್ಬಳ್ಳಿಗೆ ಪರಾರಿಯಾಗಿದ್ದು – ಈ ಎಲ್ಲ ವಿಷಯದ ಬಗ್ಗೆ ಗಪ್‌ಚಿಪ್, ಮಾತೇ ಇಲ್ಲ. ಪಂಚೆಯನ್ನು ಮೇಲಕ್ಕೆ ಕಟ್ಟಿ, ಬೀಡಿ ಸೇದುತ್ತ ನಮ್ಮ ಹತ್ತಿರ ಹೀಗೆ ಪಂಟು ಹೊಡೆಯುವ ಈ ವ್ಯಕ್ತಿ, ಅವನ ಸೂಳೆಯ ಎದಿರು ಬಾಲ ಮುದುರಿಸಿದ ನಾಯಿಯ ಹಾಗೆ ಇರಬಹುದು. ಈ ಶೀನಪ್ಪಯ್ಯ ಎಂತಹ ಜನ,

ಎಂದು ಯೋಚಿಸುತ್ತ ಜೋಯಿಸರ ಮನೆಯೆದುರಿನ ಬಾವಿಕಟ್ಟೆ ದಾಟುವಾಗ 'ಶಾಮಕಕ್ಕ' ಎಂದು ಕೂಗಿದ್ದು ಕೇಳಿಸಲು ಹಿಂದಕ್ಕೆ ತಿರುಗಿ ನೋಡಿದರೆ ಕೊಳೆ ಬಟ್ಟೆಯನ್ನೆತ್ತಿಕೊಂಡು ಅವಸರವಾಗಿ ಕಾಲು ಹಾಕಿ ನಡೆದು ಬರುತ್ತಿದ್ದ ನೇತ್ರಾವತಿ. ಯಾಕೋ ಈಚೆಗೆ ಬಿಳಿಚಿಕೊಂಡಿದೆ ಹುಡುಗಿ. 'ಏನು ಮಗಳೇ' ಎಂದರು.

ಅವಳು ತನ್ನ ಅಂಗೈಯನ್ನು ತೋರಿಸಿದಳು. ಗಾಯವಾಗಿತ್ತು. 'ಏನಾಗಿದ್ದು' ಎಂದು ಶಾಮಭಟ್ಟರು ಕೇಳಿದ್ದಕ್ಕೆ –

"ನಿನ್ನೆ ಅಡಿಕೆ ಸುಲಿಯುವಾಗ ಕೈಕೊಯ್ದುಕೊಂಡೆ. ನನಗೆ ಸುಲಿಯಲು ಬರಲ್ಲ ಶಾಮಕಕ್ಕ. ಆದರೆ ಅತ್ತೆಗೆ ಹೇಳಿದರೆ ಕಾಲು ಚಾಚಿ ಕೂತು ತಿನ್ನಲು ನೀನೇನು ರಾಣಿಯಾ ಎನ್ನುತ್ತಾರೆ."

"ಅವರಿಗೆ ವಯಸ್ಸಾಗಿದೆ. ಪರಚಿಕೊಳ್ಳುವುದು ಸ್ವಭಾವ – ಸುಮ್ಮನಿದ್ದು ಬಿಡು."

"ಶಾಮಕಕ್ಕ, ನಾನು ಊರಿಗೆ ಹೋಗಬೇಕು. ಅಪ್ಪಯ್ಯನಿಗೆ ಬಂದು ಕರೆದುಕೊಂಡು ಹೋಗಲು ಕಾಗದ ಹಾಕಿ. ನಾನೂ ಅವರು ಹೋಗಿ ಬರುತ್ತೇನೆ."

"ಪುಂಡರೀಕನಿಗೆ ಈಗೆಲ್ಲಿ ನಿನ್ನ ಜೊತೆ ಬರಲು ಬಿಡುವಾಗುತ್ತದೆ ನೇತ್ರಾವತಿ. ಅಡಿಗೆ–ಸುಲಿತ ಮುಗಿದ ಮೇಲೆ ಸಂಭಾವನೆಗೆಂದು ಊರು ತಿರುಗಬೇಕಲ್ಲ."

"ಎಂಥ ಹಾಳು ಸಂಭಾವನೆಯೊ ? ಒಳ್ಳೆ ಭಿಕ್ಷೆ ಬೇಡುವ ಕೆಲಸ."

"ಬ್ರಾಹ್ಮಣನಿಗೆ ಉಪನಯನದ ಹೊತ್ತಿಗೆ 'ಭವತಿ ಭಿಕ್ಷಾಂ ದೇಹಿ' ಎಂದು ಉಪದೇಶವಾಗಿರುತ್ತದಲ್ಲ ನೇತ್ರಾವತಿ."

ಎಂದು ಶಾಮಭಟ್ಟರು ನಕ್ಕರು. ತಾನೂ ಹೀಗೇ ಸಂಭಾವನೆ ಮಾಡಿ ಬದುಕುತ್ತಿರುವವ, ಈ ಹೊಸ ಕಾಲದ ಹುಡುಗಿಗದು ಸೇರುವುದಿಲ್ಲ – ತನ್ನ ಕಾಲದಲ್ಲಿ ಹೆಣ್ಣು ಹೀಗೆ ಯೋಚಿಸುತ್ತಲೇ ಇರಲಿಲ್ಲ, ಅಲ್ಲವೆ, ಎಂದುಕೊಂಡರು.



ನೇತ್ರಾವತಿ ತನ್ನ ಅತ್ತೆ ಮತ್ತು ಅತ್ತಿಗೆ ಹೇಗೆ ತನ್ನನ್ನು ಪೀಡಿಸುತ್ತಿದ್ದಾರೆಂದು ದೂರು ಹೇಳಿ,

"ಇಲ್ಲ ಶಾಮಕಕ್ಕ – ನಾನು ಅಪ್ಪಯ್ಯನ್ನ ನೋಡಿ ಬರಲೇಬೇಕು" ಎಂದಳು.

"ಓಹೊ ಅಪ್ಪಯ್ಯನ ಹತ್ತಿರ ಹೋಗಲೇ ಬೇಕೊ ? ಹಾಗಾದರೆ ಬೇಗ ಬಸುರಿಯಾಗು. ಆರೇಳು ತಿಂಗಳು ಹೋಗಿದ್ದು ಬರಬಹುದು."

ಎಂದು ನಗೆಯಾಡಿ ಶಾಮಭಟ್ಟರು ಕೆರೆದಂಡೆಯ ಮೇಲೆ ನಿಂತರು. ನೇತ್ರಾವತಿ ಕಲ್ಲಿನ ಮೇಲೆ ಸೀರೆಯನ್ನು ಒದ್ದೆ ಮಾಡಿಟ್ಟು ಅಂಟವಾಳದ ಕಾಯಿಗಳನ್ನು ಅದಕ್ಕೆ ಉಜ್ಜುತ್ತ ಬಗ್ಗಿದಾಗ ಆ ಎಳೆಯ ಜೀವವನ್ನು ನೋಡಿ ಶಾಮಭಟ್ಟರಿಗೆ ಅಯ್ಯೊ ಎನ್ನಿಸಿತು. ಈ ಮಗೂನ ತಂದು ಪುಂಡರೀಕನಿಗೆ ಮದುವೆ ಮಾಡಿಸಿದವರು ತಾವು. ಶಾಲೆಯ ಮೆಟ್ಟಿಲು ಹತ್ತಿದ ಹುಡುಗಿಯಲ್ಲವೆ ? ಇಂಗ್ಲಿಷಿನಲ್ಲಿ ತಿಂಗಳುಗಳ, ವಾರಗಳ, ಅಂಕೆಗಳ ಹೆಸರುಗಳನ್ನು ಹೇಳಬಲ್ಲಳು. ಎಷ್ಟೆಂದರೂ ಕನ್ನಡಾ ಜಿಲ್ಲೆಯ ಹುಡುಗಿಯರು ಬಲು ಸೂಟಿ. ಸಿನಿಮಾ ನಾಟಕ ನೋಡಿ ಕುಣಿಯೋದನ್ನ ಬೇರೆ ಕಲಿತಿದ್ದಾಳಂತೆ. ಪುಂಡರೀಕನಿಗಿಂತ ಇವಳೇ ಚುರುಕಿ. ಗಂಡನನ್ನ ಇವಳು ಎರಡು ಬಿಲ್ಲೆಗೆ ಮಾರಿ ಮಂಡಕ್ಕಿ ಕೊಂಡುಕೊಳ್ಳುತ್ತಾಳೆಂದು ವೆಂಕಮ್ಮ ಗೊಣಗುತ್ತಾರೆ. ನಿತ್ಯ ಶಾಮಭಟ್ಟರ ಹತ್ತಿರ ವೆಂಕಮ್ಮನ ದೂರು ಒಂದಲ್ಲ ಒಂದು ಇದ್ದೇ ಇರುತ್ತದೆ. ವಾರೆ – ಬೈತಲೆ ತೆಗೀತಾಳೆ ; ಮಡಿಮೈಲಿಗೆಯಿಲ್ಲ; ಕುಂಕುಮ ಸಣ್ಣಕ್ಕಿಟ್ಟುಕೋತಾಳೆ; ಗಂಡನ ತಲೇ ಕೆಡಿಸಿ ಜುಟ್ಟಿನ ಜೊತೆ ಕ್ರಾಪು ಬಿಡಿಸಿದಾಳೆ. ಹೀಗೇ ಪಿರಿ ಪಿರಿ ಎನ್ನುತ್ತಲೇ ಇರುತ್ತಾರೆ. ನೇತ್ರಾವತಿಗೆ ಬಸುರು ನಿಲ್ಲದೆ ಮೈಯಿಳಿದು ಹೋದ ಮೇಲಂತೂ ಅವರ ಕರಕರೆ ಹೆಚ್ಚಾಗಿದೆ. ಸಾಬರ ಹಾಗೆ ಲಂಗ ಹಾಕುತ್ತಾಳೆ ಸೀರೆ ಒಳಗೆ ; ಒಳಗಚ್ಚೆ ಹಾಕಲ್ಲ; ಗಂಡನ ಕಿವಿಗೆ ನಿತ್ಯ ಊದುತ್ತಾಳೆ – ಸಾವಿರ.

ವೆಂಕಮ್ಮನ ಮನೆಯಲ್ಲಿ ಹೊರಗೊಂದು ಜಗುಲಿ. ಜಗುಲಿ ದಾಟದರೆ ನಡುಮನೆ – ನಡುಮನೆಗೆ ಸೇರಿದ ಹಾಗೆ ಪುಂಡರೀಕನಿಗೆ ಮದುವೆಯಾದ ಮೇಲೆ ಶಾಮಭಟ್ಟರೆ ತಟ್ಟಿ ಕಟ್ಟಿ ಮಾಡಿದ ಒಂದು ರೂಮು. ಒಳಗೆ ಅಡಿಗೆ ಮನೆ ಮತ್ತು ದೇವರ ಕೋಣೆ. ರೂಮಿನಲ್ಲಿ ಪುಂಡರೀಕ ನೇತ್ರಾವತಿ ಮಲಗೋದು; ನಡುಮನೆಯಲ್ಲಿ ಶಾಮಭಟ್ಟರು ; ಒಳಗೆ ದೇವರ ಮನೆಯಲ್ಲಿ ವೆಂಕಮ್ಮ ಮತ್ತು ಸೀತಕ್ಕ. ರಾತ್ರೆ ಎಲ್ಲ ಮಲಗಿಕೊಂಡ ಮೇಲೆ ಪುಂಡರೀಕ ನೇತ್ರಾವತಿಯರ ಪಿಸ ಪಿಸ ಪಿಸ ಮುದ್ದುಮಾತುಗಳು ಶುರುವಾಯಿತೆಂದರೆ ಸಾಕು, ವೆಂಕಮ್ಮ ಸೀತಕ್ಕರ ಕಿವಿ ನೆಟ್ಟಗಾಗುತ್ತದೆ. ನಡುಮನೆಯ ಹೊಸಿಲಿನ ಮೇಲೆ ಇಬ್ಬರಲ್ಲೊಬ್ಬರು ಬಂದು ಕೂತು ಬಾಗಿಲಿಗೆ ಕಿವಿ ಕೊಟ್ಟು ಆಲಿಸುತ್ತಾರೆ. ಶಾಮಭಟ್ಟರಿಗೆ ಅಸಹ್ಯವಾಗುತ್ತದೆ

ಒಂದು ದಿನ ನಡೆದದ್ದು ಯೋಚಿಸಿದರೆ. ಪುಂಡರೀಕ ನೇತ್ರಾವತಿಯನ್ನು ಮುದ್ದಿಗೆ 'ಏ ನೇತ್ರಾ' ಎಂದು ಹೆಸರು ಹಿಡಿದು ಕರೆದನಂತೆ ಮಲಗಿದ್ದಾಗ. ಮರುದಿನ ದೊಡ್ಡ ರಾದ್ಧಾಂತ ಶಾಮಭಟ್ಟರ ಎದಿರು. ವೆಂಕಮ್ಮ ಕಣ್ಣುಗಳನ್ನು ಕಿಡಿಕಿಡಿ ಮಾಡಿ ಹೇಳಿದರು :

"ಎಂತಹ ಗಂಡಸು ಈ ಪುಂಡರೀಕ ? ಹೆಂಡತಿಯ ಹೆಸರು ಹಿಡಿದು ಕೂಗುತ್ತಾನಲ್ಲ – ಒಳ್ಳೆ ಇಟ್ಟುಕೊಂಡ ಸೂಳೆಯನ್ನು ಕರೆಯುವ ಹಾಗೆ. ನಾಚಿಕೆ ಬೇಡವೆ? ಹೆಣ್ಣಿಗನಾಗಿಬಿಟ್ಟ." ಎಂದು ಕಾಲವನ್ನು ಶಪಿಸಿದರು. ಶಾಮಭಟ್ಟರಿಗೆ ಅನ್ನಿಸಿತು – ಪ್ರೀತಿ ಎಂಬುದು ಸೂಳೆಗೆ ಮಾತ್ರ ಸಲ್ಲಬೇಕಾದ್ದೊ, ಹೆಂಡತಿಗೆ ಸಲ್ಲಬಾರದೊ ಎಂದು. ಆದರೆ ಸಾಯುವ ಮುದುಕಿಗೇಕೆ ನೋವು ಮಾಡಬೇಕೆಂದು ಸುಮ್ಮನಾದರು. ಒಂದು ದಿನ ಅವರಿಗೆ ಸುಮ್ಮನಿರಲಾಗಲಿಲ್ಲ. ವೆಂಕಮ್ಮ ಹೊಸಿಲಿನ ಮೇಲೆ ಕೂತು ಆಲಿಸೋದು ಈ ಪೆದ್ದು ಮಕ್ಕಳಿಗೆ ತಿಳಿಯುವುದಿಲ್ಲವಲ್ಲ ಎಂದು ನಿದ್ದೆ ಮಾಡುವಂತೆ ನಟಿಸುತ್ತ ಮಲಗಿದ್ದ ಶಾಮಭಟ್ಟರು ಒಂದು ದಿನ, "ಏನು ವೆಂಕಮ್ಮ ಹೊಸಿಲಿನ ಮೇಲೆ ಕೂತುಬಿಟ್ಟಿರಲ್ಲ ? ಸೆಖೆಯ?" ಎಂದು ಗಟ್ಟಿಯಾಗಿ ಹೇಳಿದರು – ಪುಂಡರೀಕ ನೇತ್ರಾವತಿಗೆ ಕೇಳಿಸುವ ಹಾಗೆ. ಆದರೆ ನೇತ್ರಾವತಿ ಹೆದರುವ ಹುಡುಗಿಯೆ ? ಅತ್ತೆಯಾಡಿದ ಮಾತಿಗೆ ಪ್ರತಿಮಾತು ಆಡಿಬಿಡುತ್ತಾಳೆ – ನೀನು ಎಂದರೆ ನಿನ್ನಜ್ಜ ಎನ್ನುತ್ತಾಳೆ.

ಕೆರೆಯ ದಂಡೆಯಿಂದ ಕಾಲು ಫರ್ಲಾಂಗು ದೂರವಿದ್ದ ತಾವು ತರಕಾರಿ ಬೆಳೆಯುವ ಜಾಗಕ್ಕೆ ಶಾಮಭಟ್ಟರು ಬಂದು ನಿಂತರು. ಒಂದಷ್ಟು ಒಳ್ಳೆ ನೆಲವನ್ನು ಸಾಹುಕಾರರಿಂದ ಗುತ್ತಿಗೆಗೆ ಪಡೆದು ಅದಕ್ಕೆ ಸ್ವತಃ ಬೇಲಿ ಕಟ್ಟಿ ಸುವರ್ಣಗೆಡ್ಡೆ, ಬಣ್ಣದ ಸೌತೆ, ಮೆಣಸಿನಕಾಯಿ ಹಾಕಿದ್ದರು. ಅವರ ಕಸುಬುಗಳಲ್ಲಿ ಇದೂ ಒಂದು. ದೇವಸ್ಥಾನದಲ್ಲಿ ಪೂಜೆ, ಅಲ್ಲಲ್ಲಿ ಬ್ರಾಹ್ಮಣಾರ್ಥ, ಸಾಹುಕಾರರ ಮನೆಯಲ್ಲಿ ವೆಂಕಮ್ಮನವರ ಮನೆಯವರ ಜೊತೆ ಹೋಗಿ ಅಡಿಕೆ ಸುಲಿತ, ಅಡಿಕೆ ಆರಿಸೋದು, ಒಣಗಿದ ಬಾಳೆಲೆ ಕಟ್ಟಿದ ದೊನ್ನೆ ಕುಡುಮಲ್ಲಿಗೆಯಲ್ಲಿ ಮಾರೋದು, ಬಾಳೆಕಾಯಿ ಕೊಂಡು ಮಾರಾಟ, ಪುಂಡರೀಕನ ಜೊತೆ ಸಮಯವಿದ್ದರೆ ಬಗಲಿಗೆ ಜೋಳಿಗೆ ಹಾಕಿಕೊಂಡು ಹೋಗಿ ಸಂಭಾವನೆ ಮಾಡೋದು – ಉದರ ನಿಮಿತ್ತಂ ಬಹುಕೃತ ವೇಷಂ. ನಿಮಿತ್ಯವನ್ನೂ ಹೇಳುತ್ತಾರೆ. ಯಾರ ಮನೆಯದಾದರೂ ದನಕರು ತಪ್ಪಿಸಿಕೊಂಡರೆ ಮಂತ್ರಿಸಿದ ಹಲಗೆ ಕೊಡುತ್ತಾರೆ. ತನ್ನ ಉದರಂಭರಣದ ಜೊತೆ, ಯಾವ ಋಣಾನುಬಂಧದಿಂದಲೋ ಸೇರಿಕೊಂಡ ವೆಂಕಮ್ಮನ ಮನೆಯವರಿಗೆ ಸಹಾಯವೂ ಆಗಬೇಕಲ್ಲ.



ಶಾಮಭಟ್ಟರು ಹಾರೆಯಿಂದ ಮಣ್ಣನ್ನು ಅಗೆದರು. ಕಪ್ಪಾದ ಮೃದುವಾದ ಮಣ್ಣು. ಈ ಮಣ್ಣಿನ ಕತ್ತಲಿನಲ್ಲಿ ಅವಿತುಕೊಂಡಿದ್ದು ಮೊಳಕೆಯಿಡುತ್ತದೆ ಬೀಜ. ಶಾಮಭಟ್ಟರಿಗೆ ಮೃದುವಾದ ಮಣ್ಣೆಂದರೆ, ಬಲಿತ ಬೀಜವೆಂದರೆ, ಹಸಿರು ಒಂಕಿಯ ಹಾಗೆ ಮಣ್ಣಿನಿಂದ ಮೇಲೇಳುವ ಮೊಳಕೆಯೆಂದರೆ, ತಿರುಳನ್ನು ಚಿಗುರಾದ ಎಲೆಗಳ ಅವಸ್ಥೆಗೆ ಮುಟ್ಟಿಸಿ ಉದುರಿ ಹೋಗುವ ಸಿಪ್ಪೆಯೆಂದರೆ ಮೈ ಮರೆಸುವಂತಹ ಸುಖ. ತಾಯಿ ತಂದೆಯನ್ನು ಕಳೆದುಕೊಂಡು ತಬ್ಬಲಿಯಾಗಿ ಹೆಗಲಿಗೊಂದು ಜೋಳಿಗೆ ತೂಗು ಹಾಕಿ ಹುಡುಗನಾಗಿದ್ದಾಗ ಅವರು ಕನ್ನಡಾ ಜಿಲ್ಲೆಯಿಂದ ಒರಟರು. ಭಾಗವತರಾಟದ ಮೇಳವೊಂದಕ್ಕೆ ಸೇರಿ ಕೊಡಂಗಿ ವೇಷ ಕಟ್ಟಿ ಒಂದಷ್ಟು ದಿನ ಕುಣಿದರು. ಅಂಗಚೇಷ್ಟೆಗಳನ್ನು ಮಾಡಿ, ಹಡೆ ಮಾತಾಡುವುದರಲ್ಲಿ ಪ್ರಸಿದ್ಧರಾಗಿ ಮೇಳದ ಜೊತೆ ಘಟ್ಟ ಹತ್ತಿ ಮಲೆನಾಡನ್ನು ಸುತ್ತುತ್ತಿದ್ದಾಗ ಪುಂಡರೀಕನ ತಂದೆ ಪ್ರವೀರಾಚಾರ್ಯನ ಭೆಟ್ಟಿಯಾಯಿತು. ಹೆಗಲಿಗೊಂದು ಜೋಳಿಗೆ ತೂಗು ಹಾಕಿ ಅಡಿಕೆ ಸಂಭಾವನೆ ಮಾಡುತ್ತ – ಚಂಡೆಯ ಸದ್ದಿಗೆ ಕಿವಿ ನೆಟ್ಟಗಾಗಲು ಕಾಡೆನ್ನದೆ ಕಣಿವೆಯನ್ನದೆ ಕೈಯಲ್ಲಿ ದೊಂದಿ ಹಿಡಿದು ಭಾಗವತರಾಟವನ್ನು ನೋಡಲು ಸುತ್ತುತ್ತಿದ್ದ ಪ್ರವೀರಾಚಾರ್ಯರಿಗೆ ಶಾಮಭಟ್ಟರ ಯೌವನದ ರಸಿಕ ಜೀವ ಇಷ್ಟವಾಯಿತು. ಗುರುತಾದೊಡನೆಯೆ 'ನನ್ನ ಜೊತೆ ಬಂದು ಇದ್ದುಬಿಡಯ್ಯ' ಎಂದರು. ಶಾಮಭಟ್ಟರು ಬಂದು ಇದ್ದು ಬಿಟ್ಟರು.

ಒಂದು ದಿನ ಪ್ರವೀಣಾಚಾರ್ಯರು 'ಏನಯ್ಯ ನನ್ನ ಮಗಳು ಸೀತಕ್ಕನನ್ನು ಮದುವೆಯಾಗುತ್ತೀಯ' ಎಂದು ಕೇಳಿದರು. ಶಾಮಭಟ್ಟರಿಗೆ ಒಂದು ಕ್ಷಣ ಗೊಂದಲಕ್ಕಿಟ್ಟುಕೊಂಡಿತು. ಪ್ರೀತಿಯ ಋಣ, ದಾಕ್ಷಿಣ್ಯ ಮರೆತು ಮನಸ್ಸನ್ನು ಗಟ್ಟಿಮಾಡಿ ಬೇಡವೆಂದರು. ಯಾಕೋ ಸಂಸಾರ ಇಷ್ಟವಾಗಲಿಲ್ಲ – ಅಗತ್ಯವಿಲ್ಲದ ಬಂಧನ ಎನ್ನಿಸಿತು. ಈ ಮಾತು ನಡೆದದ್ದು ವೆಂಕಮ್ಮನಿಗೆ ಇವತ್ತಿಗೂ ಗೊತ್ತಿಲ್ಲ. ಶಾಮಭಟ್ಟನನ್ನು ಹೆಂಡತಿ ಅಸಡ್ಡೆಯಿಂದ ಕಂಡಾಳೆಂದು ಪ್ರವೀರಾಚಾರ್ಯರು ಹೇಳಲಿಲ್ಲ. ದೇವರ ದಯದಿಂದ ಇಬ್ಬರ ನಡುವಿನ ಸ್ನೇಹಕ್ಕೂ ಇದು ಅಡ್ಡಿ ತರಲಿಲ್ಲ. ಹೀಗಿರುವುದು ಪ್ರಾಯಶಃ ಗಂಡಸಿಗೆ ಮಾತ್ರ ಸಾಧ್ಯ. ವಯಸ್ಸಿನಲ್ಲಿ ಎಷ್ಟು ಅಂತರವಿದ್ದರೂ ಅದು ವಿಚಿತ್ರವಾದ ಸ್ನೇಹ. ಒಟ್ಟಿಗೇ ಸಂಭಾವನೆಗೆ ಅಲೆದಾಡುವುದು, ತಾಳಮದ್ದಳೆಯ ಕಚೇರಿಗಳನ್ನು ನಡೆಸುವಾಗ ಪದಕ್ಕೆ ಅರ್ಥ ಹೇಳುವುದು, ಪ್ರವೀರಾಚಾರ್ಯರು ದುರ್ಯೋಧನನ ಪಕ್ಷ ವಹಿಸಿ ಮಾತಾಡಿದರೆ ಶಾಮಭಟ್ಟರು ಕೃಷ್ಣನ ಪಕ್ಷ ವಹಿಸುವುದು, ವಾಗ್ವಾದವನ್ನು ಬಿರುಸಿನಿಂದ ನಡೆಸಿ

ಆಮೇಲೆ ಅದನ್ನು ನೆನೆದು ನಗುವುದು. ಒಟ್ಟಿಗೇ ಸೂಳೆಮನೆಗೆ ಹೋಗುವುದೂ ಕೂಡ. ಒಂದು ರೀತಿಯಿಂದ ಪ್ರವೀರಾಚಾರ್ಯರಿಗೆ ಶಾಮಭಟ್ಟ ಅಳಿಯನೇ ಆಗಬೇಕು. ಬಸರೂರಿನ ಗಂಗೆ ಪ್ರವೀರಾಚಾರ್ಯರಿಗೆ ಒಲಿದಿದ್ದರೆ ಅವಳ ಮಗಳು ಪುಟ್ಟಿ ಶಾಮಭಟ್ಟರು ಪ್ರಸಂಗ ಮಾಡುವ ಠೀವಿ, ಅವರ ಹಡೆಮಾತಿನ ಚಮತ್ಕಾರಕ್ಕೆ ಸೋತಿದ್ದಳು.

ಕೊನೆಗೊಂದು ದಿನ ಪ್ರವೀರಾಚಾರ್ಯರು ಜೀವನದಲ್ಲಿ ಸೋತು ಸತ್ತರು. ಸಾಯುವಾಗ ಶಾಮಭಟ್ಟರ ತೊಡೆಯ ಮೇಲೆ ತಲೆಯಿತ್ತು. ವಿಷಮಶೀತ ಜ್ವರದಲ್ಲಿದ್ದಾಗ ವೆಂಕಮ್ಮ ಹತ್ತಿರ ಸುಳಿದರೆ ಸಾಕು ರೇಗುತ್ತಿದ್ದರು. ಸೀತಕ್ಕ ಪುಂಡರೀಕರೆಂದರೆ ಮಾತ್ರ ಮಮತೆ. ಅವರ ಮಾತು ನಿಂತ ಮೇಲೆ – ಆಗ ಸಂಜೆಯಾಗಿತ್ತು – ದೂರ ದೂರಿನಿಂದ ಚಂಡೆಯ ಧ್ವನಿ ಕೇಳಿಸುತ್ತಿರಲು ಕಣ್ಣುನ್ನು ಪಿಳಿಪಿಳಿ ಬಿಡುತ್ತ ಹಾಗೇ ಸತ್ತರು. ಅವರು ಸಾಯುವಾಗ ಮನೆಯಲ್ಲೊಂದು ಬಿಡಿ ಕಾಸಿರಲಿಲ್ಲ. ಸಂಪಾದನೆಯಾದದ್ದೆಲ್ಲ ಸೂಳೆಗೆಂದು, ಆಟಕ್ಕೆಂದು, ತಿರುಗಾಟಕ್ಕೆಂದು, ಖರ್ಚಾಗುತ್ತಿತ್ತು. ಕನ್ನಡಾ ಜಿಲ್ಲೆಯಲ್ಲಿ ಪಿತ್ರಾರ್ಜಿತವಾಗಿ ಬಂದ ಮೂರೆಕೆರೆ ಗದ್ದೆಯನ್ನು ಸಹ ಗಂಗೆಯ ಹೆಸರಿಗೆ ಮಾಡಿದ್ದರು. ಮುಂದಿನ ತ್ರಯೋದಶಿ ಅವರ ಶ್ರಾದ್ಧ ಅಲ್ಲವೆ ? ಯಾಕೋ ಎಲ್ಲರೂ ಅವರನ್ನು ಮರೆಯುವ ಹಾಗೆ ಕಾಣಿಸುತ್ತಿದೆ. ಯಾಕೆ...

ಯಾಕೆ ಹೀಗೆ ? ಪುಂಡರೀಕನನ್ನು ಬಿಟ್ಟು ಎಲ್ಲರೂ ಸೂಳೆಯಿಟ್ಟುಕೊಂಡವರೆ – ಶೀನಪ್ಪಯ್ಯ, ತಾನು, ಪ್ರವೀರಾಚಾರ್ಯರು. ಅಗ್ನಿಸಾಕ್ಷಿಯಾಗಿ ಕಟ್ಟಿಕೊಂಡ ಹೆಂಡತಿಯಲ್ಲಿ ಯಾವ ಸುಖವೂ ಕಾಣದೆ, ಇಟ್ಟುಕೊಂಡ ಸೂಳೆಯೆಂದರೆ ಮಾತ್ರ...

ಪಾತಿಯನ್ನು ಸರಿಮಾಡಿ, ಬೇಲಿ ಸಡಿಲವಾದಲ್ಲೆಲ್ಲ ಬಳ್ಳಿಯಿಂದ ಬಿಗಿದು ಏನು ಬಿಸಿಲಪ್ಪ ಎಂದು ಶಾಮಭಟ್ಟರು ಮನೆಯ ಕಡೆ ನಡೆದರು.

* * * * *

ಪಾಯಸದ ಊಟ ಮಾಡಿ ವೀಳ್ಯದೆಲೆ ಮೆಲ್ಲುತ್ತ ಕೂತಾಗ ಮಾತು ಲೋಕಾಭಿರಾಮವಾಗಿ ಸಾಗಿತು. ಜೋಯಿಸರನ್ನೂ ಅವತ್ತು ಊಟಕ್ಕೆ ಕರೆದದ್ದರಿಂದ ಮಾತಿಗೊಂದು ಜನ ಸಿಕ್ಕ ಹಾಗಾಯಿತು. ತಮ್ಮ ತಲೆಮಾರುಗಳ ಸಂಬಂಧವನ್ನೆಲ್ಲ ಜಾಳಿಸಿ ನೋಡಿ ನಿಮಗೆ ಅವರು ಗೊತ್ತೊ ಇವರು ಗೊತ್ತೊ ವಿಚಾರಿಸಿದಾಗ, ನೇತ್ರಾವತಿಯ ತಂದೆಯ ಅಕ್ಕನ ಮಾವನೂ, ಶೀನಪ್ಪಯ್ಯನ ದೊಡ್ಡಪ್ಪನ ಅಳಿಯನೂ ಸಂಬಂಧಿಕರೆಂದು ಪತ್ತೆಯಾಯಿತು. ಶಾಮಭಟ್ಟರೊಬ್ಬರಿಗೇ ಹಾಗೆ ನೋಡಿದರೆ



ಕರುಳುಬಳ್ಳಿಯೆಂಬುದೇ ಇಲ್ಲದಿದ್ದದ್ದು. ಅವರ ತಂದೆ, ತನ್ನ ತಂದೆಗೆ ಒಬ್ಬನೇ ಮಗ, ಇವರು ಇವರ ತಂದೆಗೆ ಒಬ್ಬನೇ ಮಗ. ಇವರ ತಾಯಿಯೂ ಪರದೇಶಿ. ತನಗೀಗ ಮಕ್ಕಳು ಮರಿಯೆ – 'ಆಯಿತಾ ನನ್ನ ವಿಷಯವೊಂದು ಲೆಖ್ಖಕ್ಕಿಲ್ಲ ಜಮಕ್ಕಿಲ್ಲ' ಎಂದು ಶಾಮಭಟ್ಟರು ನಗೆಯಾಡಿದರೆ, 'ನೀವು ಲೋಕಸಂಸಾರಿಗಳು ಭಟ್ಟರೇ' ಎಂದು ಜೋಯಿಸರು ಅವರನ್ನು ಹೊಗಳಿದರು.

ಮಾತಿಗೆ ಮಾತು ಬೆಳೆದು ಕೊನೆಗೆ ಮೆತ್ತಗೆ ಶೀನಪ್ಪಯ್ಯ ಶುರುಮಾಡಿದರು:

"ಏನು ಜೋಯಿಸರೆ, ನಾನು ಇಲ್ಲಿಗೆ ಬರುತ್ತೇನೆಂದು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಏನೋ ಧರ್ಮ–ಕರ್ಮ–ಸಂಯೋಗ ಕೂಡಿ ಶಾಮಭಟ್ಟರ ಒತ್ತಾಯಕ್ಕೆ ಸಿಕ್ಕಿ ಬಂದೆ. ಏನೋ ಶಾಸ್ತ್ರದಲ್ಲಿ ಹೇಳುತ್ತದೆ ಎನ್ನುತ್ತಾರೆ – ನಿಜವೇ ಜೋಯಿಸರೆ, ನಿಮಗೆ ಈ ವಿಷಯ ಚೆನ್ನಾಗಿ ಗೊತ್ತಿರಬೇಕು – ಮದುವೆ ಮಾಡಿಕೊಂಡು ಗೃಹಸ್ಥನಾದ ಮೇಲೆ ಪ್ರಸ್ತದ ಶಾಸ್ತ್ರವಾಗದಿದ್ದರೆ ಸದ್ಗತಿಯಿಲ್ಲವೆನ್ನುತ್ತಾರೆ. ಅಲ್ಲದೆ ಈಗ ನನಗೆ ದಾನವನ್ನು ಹಿಡಿಯುವ ಅಧಿಕಾರ ಸಹ ಇಲ್ಲವಂತೆ ಪ್ರಸ್ತವಾಗದ್ದರಿಂದ."

ಅಲ್ಲೊಂದು ಇಲ್ಲೊಂದು ಹಲ್ಲು ಬಿದ್ದ ಬಾಯಲ್ಲಿ ಕೃತ್ರಿಮವಾಗಿ ನಗುತ್ತ ಶೀನಪ್ಪಯ್ಯ ಆಡಿದ ಮಾತು ಕೇಳಿ ಶಾಮಭಟ್ಟರಿಗೆ ಅಸಹ್ಯವಾಯಿತು. ಜೋಯಿಸರು ತಮ್ಮ ಅಭಿಪ್ರಾಯವನ್ನು ಕೊಟ್ಟರು – ಶೀನಪ್ಪಯ್ಯ ಹೇಳಿದ್ದು ನಿಜವೆಂದು. ತನಗೊಂದು ಕೆಲಸವಾಗಬೇಕೆಂದು ಬಲು ಮೆತ್ತಗೆ ಮಾತಾಡುತ್ತಿದ್ದಾನೆ. ಹಿಂದೆ ಹುಡುಗಿಯ ಜೊತೆ ಪ್ರಸ್ತಮಾಡಿಕೊಳ್ಳಿ ಎಂದು ಪ್ರವೀರಾಚಾರ್ಯರು ಅಂಗಲಾಚಿಕೊಂಡಾಗ ಇನ್ನಷ್ಟು ಬಂಗಾರ ಹಾಕದ ಹೊರತು ನಾನೊಲ್ಲೆ ಎಂದು ಉಡಾಪಿ ಮಾತಾಡಿದ್ದ. ಹೊಟ್ಟೆಗೆ ಕವಳ ಬಿದ್ದು, ಜೀವನಾಂಶ ಕೊಡುವ ಪ್ರಮೇಯ ಬರಲಿಕ್ಕಿಲ್ಲೆಂದು ಗಟ್ಟಿಯಾದ ಮೇಲೆ ಎಷ್ಟು ಮೃದುವಾಗಿ ಮಾತಾಡುತ್ತಾನೆ. ಅವನ ಈ ಗುಣ ಇಷ್ಟರವರೆಗೆ ಪ್ರದರ್ಶಿತವಾಗುತ್ತಿದ್ದುದು ಪ್ರಾಯಶಃ ಸೂಳೆಯ ಹತ್ತಿರ ಮತ್ತು ಎಮ್ಮೆಯ ಗಿರಾಕಿಗಳ ಹತ್ತಿರ. ಈ ಲೋಕದ ಸುಖಕ್ಕೆ ಎಲ್ಲರೂ ಪ್ರಸ್ತ ಮಾಡಿಕೊಂಡರೆ ಇವನು ಈಗ ಪರಲೋಕದ ದೃಷ್ಟಿಯಿಂದ ಮಾಡಿಕೊಳ್ಳುತ್ತಿದ್ದಾನೆ. ಈ ಲೋಕಕ್ಕೆ ಸೂಳೆಯಾಗಬೇಕು, ಪರಲೋಕಕ್ಕೆ ಮಾತ್ರ ಹೆಂಡತಿ ಬೇಕು, ಚೆನ್ನಾಗಿದೆ.

ಶಾಮಭಟ್ಟರಿಗೆ ಮಾತಾಡಲು ಇಚ್ಛೆಯಾಗದೆ ನೆವ ಹೇಳಿ ಎದ್ದು ದೇವಸ್ಥಾನದ ತಂಪಾದ ಪ್ರಾಕಾರಕ್ಕೆ ಬಂದು ಕಲ್ಲಿನ ಕಂಬಕ್ಕೊರಗಿ ಕಾಲು ಚಾಚಿ ಕೂತು ಕಣ್ಣು ಮುಚ್ಚಿದರು. ಮೈ ಕೈಯಲ್ಲೆಲ್ಲ ತುಂಬ ಆಯಾಸ. ಈ ಶೀನಪ್ಪಯ್ಯ ಮಾತ್ರ

ಹಾಗೊ ?...

ಪ್ರವೀರಾಚಾರ್ಯರೂ ಅಷ್ಟೇ ಅಲ್ಲವೆ ? ಎಷ್ಟು ಒಳ್ಳೆಯ ಮನುಷ್ಯ, ಎಷ್ಟು ಸಭ್ಯ, ಸ್ನೇಹಪರ – ಶೀನಪ್ಪಯ್ಯನಿಗೂ ಅವರಿಗೂ ಸ್ವಭಾವದಲ್ಲಿ ಅಜಗಜಾಂತರ ವ್ಯತ್ಯಾಸ – ಆದರೆ ಕೈ ಹಿಡಿದ ಹೆಂಡತಿಯೆಂದರೆ ತನ್ನ ವಸ್ತುವಿದು ಎಂದು ಸಸಾರ. ಗಂಗೆಯ ಮನೆಗೆ ಹೋದಾಗ ಮಾತ್ರ ಏನು ಮೋಜು. ಅವಳ ಕೈಯಡಿಗೆ ಊಟ ಮಾಡೋದು ಬ್ರಾಹ್ಮಣನಾದ್ದರಿಂದ ನಿಷೇಧವೆಂದು ತಾವೇ ಖುದ್ದು ಅಡಿಗೆ ಮಾಡುತ್ತಿದ್ದರು. ಎಲೆಯಡಿಕೆಯನ್ನು ಅವಳು ಮಡಿಸಿಕೊಡುತ್ತಿದ್ದಾಗ ದಿಂಬಿಗೊರಗೆ ಎಷ್ಟು ಸರಸವಾಗ ಮಾತಾಡುತ್ತಿದ್ದರು. ಗಂಗೆಯ ಹತ್ತಿರ ತಾನೊಬ್ಬ ಮಾತ್ರ ಹೀಗಿರುವುದೆಂದು ಅವರು ಭ್ರಮಿಸಿರಲಿಲ್ಲ. ಅವರಿಗೆ ಗೊತ್ತಿತ್ತು, ಗಂಗೆಯ ಬಾಳು ಸಾಗಲು ತನ್ನ ಪ್ರೀತಿಯೊಂದು ಮಾತ್ರ ಸಾಲದೆಂದು. ಆದರೂ ಅದೆಷ್ಟು ಅವಳ ಬಗ್ಗೆ ಔದಾರ್ಯ, ಕೃತಜ್ಞತೆ, ಹೆಂಡತಿಯೆಂದರೆ ಹಕ್ಕು, ಸೂಳೆಯಾದರೋ ಹಂಗು,

ವೆಂಕಮ್ಮನ ಬಗ್ಗೆ ಯೋಚಿಸಿದರೆ ಅಯ್ಯೊ ಪಾಪ ಎನ್ನಿಸುತ್ತದೆ. ಅವರು ಪ್ರವೀರಾಚಾರ್ಯರಿಗೆ ಎರಡನೆ ಹೆಂಡತಿ. ಮೊದಲನೆಯವಳು ಬಸುರಿಯಾಗಿದ್ದಾಗ ಸತ್ತಳಂತೆ. ವೆಂಕಮ್ಮನಿಗೆ ಯಾವತ್ತೂ ಭಯ. ಹೀರೇ ಹೆಂಡತಿಯ ಜಕಣಿ ತನ್ನನ್ನು ಕಾಡುತ್ತದೆಂದು ಹೊಳೆಯಲ್ಲಿ ಸ್ನಾನಮಾಡಿ ಬರುವಾಗ ಒಂದು ದಿನ ಅದು ಅವರನ್ನು ದಾರಿ ಕಟ್ಟಿ ಹೆದರಿಸಿತಂತೆ. ಒಂದು ಹೊಸ ಸೀರೆಯುಡುವಾಗಲೂ ವೆಂಕಮ್ಮ ಜಕಣಿ ಕಾಟಕ್ಕೆ ಹೆದರಿ ಅದನ್ನು ಇನ್ನೊಂದು ಮುತ್ತೈದೆಗೆ ಉಡಿಸಿ ಮತ್ತೆ ತಾವು ಉಡುತ್ತಿದ್ದರು. ವೆಂಕಮ್ಮನ ಸ್ವಭಾವವೋ ಯಾವತ್ತೂ ತರಳೆ ತಾಪತ್ರಯದ್ದು. ಗಂಡನ ಮುಖ ಕಂಡರೆ ಸಾಕು, ಇಲ್ಲದ ಬೇನೆಗಳನ್ನು ಸೃಷ್ಟಿಸಿ ಹೇಳುತ್ತಿದ್ದಳು, ಇಲ್ಲದ ರಗಳೆಗಳನ್ನು ಗಂಡನ ತಲೆಗೆ ಹಚ್ಚುತ್ತಿದ್ದಳು. ತಡೆಯಲಾರದೆ, ಹೆಂಡತಿಯ ಬಗ್ಗೆ ಸ್ವಲ್ಪವೂ ಸಹಾನುಭೂತಿ ತೋರಲಾರದೆ ಪ್ರವೀರಾಚಾರ್ಯರು ಕಾಲು ಕೀಳುತ್ತಿದ್ದರು ಮನೆಯಿಂದ – ಊರಲೆಯಲು, ಗಂಗೆಯ ಮನೆಯಲ್ಲಿ ಇದ್ದು ಬರಲು...

ಪಾಪದ ಹೆಂಗಸೇ ಎಂದು ವೆಂಕಮ್ಮನ ಬಗ್ಗೆ ಮರುಗುತ್ತಿದ್ದುದು ಶಾಮಭಟ್ಟರೊಬ್ಬರೆ. ಎಷ್ಟು ಮಕ್ಕಳನ್ನು ಹೆತ್ತು ಮಣ್ಣಿಗೆ ಹಾಕಿದಳು. ಸಾವಿತ್ರಿ, ಭಾಗೀರತಿ, ಹಯವದನ, ರಾಮಚಂದ್ರ – ಉಳಿದ ಮಕ್ಕಳ ಹೆಸರೂ ಮರೆತು ಹೋಗುತ್ತಿದೆ. ನಿತ್ಯ ಸತ್ತರೆ ಕಣ್ಣೀರೂ ಬತ್ತಿ ಹೋಗುತ್ತದೆ, ಮನಸ್ಸು ಕಲ್ಲಾಗುತ್ತದೆ. ಸೂಕ್ಷ್ಮವಾದ ಭಾವನೆಗಳೆಲ್ಲ ಜಡ್ಡುಕಟ್ಟುತ್ತವೆ. ಹಯವದನನಿರಬೇಕು – ಜ್ವರ



ಬಂದಿತ್ತು ಮಗುವಿಗೆ – ಬೆಳಗ್ಗೆ ಎದ್ದು ನೋಡುವಾಗ ತಾಯಿಯ ತೋಳಿನಲ್ಲಿ ಸತ್ತಿದ್ದ. ಆಗ ಪ್ರವೀರಾಚಾರ್ಯರು ಮನೆಯಲ್ಲಿರಲಿಲ್ಲ. ಹೀರೇ ಹೆಂಡತಿ ಜಕಣಿಯಾಗಿ ಕಾಡಿ ತನ್ನ ಮಕ್ಕಳನ್ನೆಲ್ಲ ಆಹುತಿ ತೆಗೆದುಕೊಂಡಳೆಂದು ವೆಂಕಮ್ಮ ಶಪಿಸುತ್ತಿದ್ದರು. ಸೀತಕ್ಕನ ಬಾಳೂ ಹಾಗಾದ ಮೇಲೆ ಕೊನೆಗೆ ಪುಂಡರೀಕ ಹುಟ್ಟಿದ. ಹುಟ್ಟಿದ ಮಗುವನ್ನು ವೆಂಕಮ್ಮ ತೋಡಿದ ಗುಂಡಿಯಲ್ಲಿಟ್ಟು – ಈ ಮಗು ಸತ್ತಿತು ಎಂದು ತಿಳಿದುಕೊಂಡಿದೇನೆ, ಇದರ ಮೇಲೆ ಆಸೆ ಬಿಟ್ಟಿದ್ದೇನೆ, ಹೀಗಾದರೂ ಇದು ಬದುಕಿಕೊಳ್ಳಲಿ ಎಂದು – ಮುಟ್ಟಸಮಾಡಿ ಕತ್ತಿಗೆ ಹತ್ತು ಬಗೆಯ ತಾಯಿತ ಕಟ್ಟಿ, ಕಂಡ ದೇವರಿಗೆ ಹರಕೆ ಹೊತ್ತು ಆಸೆಯಿಂದ ಪುಂಡರೀಕನನ್ನು ಬೆಳೆಸಿ...

ಶಾಮಭಟ್ಟರು ಸದ್ದಾಗಲು ಕಣ್ಣು ಬಿಟ್ಟು ನೋಡಿದರು. ಎದುರಿಗೆ ಹೂಬತ್ತಿ – ಪೆಟ್ಟಿಗೆಯ ಸಹಿತ ವೆಂಕಮ್ಮ ಕೂತಿದ್ದರು. ಮಗಳ ಪ್ರಸ್ತದ ಬಗ್ಗೆ ಶಾಮಭಟ್ಟರ ಹತ್ತಿರ ಮಾತಾಡಬೇಕೆಂದು ಅವರು ಬಂದಿರಬಹುದೆಂದು ಭಟ್ಟರಿಗೆ ಹೊಳೆಯಿತು. ಆದರೆ ಆ ಬಗ್ಗೆ ಮಾತಾಡಲು ಅವರಿಗೆ ಇಷ್ಟವಿರಲಿಲ್ಲ. ವೆಂಕಮ್ಮನ ಮನಸ್ಸು ಪ್ರಸನ್ನವಾಗಿರಬಹುದು, ನೇತ್ರಾವತಿಯ ಬಗ್ಗೆ ಕೇಳಿ ನೋಡುವುದೆಂದು ಅವರು ಮೆತ್ತಗೆ ಹೇಳಿದರು :

"ಏನು ವೆಂಕಮ್ಮ. ನಿಮ್ಮ ಹತ್ತಿರ ಒಂದು ವಿಷಯ ಹೇಳಬೇಕು. ನೇತ್ರಾವತಿ ತವರಿಗೆ ಹೋಗಿ ಬಂದ ಸಮಯವಾಯಿತಲ್ಲವೆ ?"

"ಅಲ್ಲ ಅವಳಿಗೆ ಇಲ್ಲಿ ಏನು ಕಡಿಮೆಯಾಗಿದೇಂತ ? ನಾನೇನು ಹೊಡೆಯುತ್ತೇನ ಬಡಿಯುತ್ತೇನ ? ಮತ್ತೆ ಮತ್ತೆ ತವರಿಗೆ ಹೋಗಬೇಕೆಂದು ಅವಳು ಕೂತರೆ ಜನ ಏನೆಂದುಕೋಬೇಕು ? ಅತ್ತೆ ಕೆಟ್ಟವಳೂಂತ ಹೆಸರು ಕೇಳಬೇಕೆಂದಲ್ಲವೆ ? ಅವಳ ತಂದೆಗೂ ಬುದ್ಧಿ ಬೇಡವ ? ಕೊಟ್ಟ ಹೆಣ್ಣು ಕುಲದ ಹೊರಗೇಂತ ಗಾದೆಯೇ ಇದೆ."

"ಹಾಗಲ್ಲ ವೆಂಕಮ್ಮ ಈಗ ನೀವೇ ನೋಡಿ. ನೀವೆಷ್ಟು ನಿಮ್ಮ ಅತ್ತೆಯ ಹತ್ತಿರ ಪಾಡು ಪಟ್ಟಿರಿ. ತವರಿಗೆ ಹೋಗಬೇಕೆಂದರೆ ಏನು ಗಲಾಟೆ ?"

"ಅಲ್ಲವ ? ನಿಮಗೇ ಗೊತ್ತಿರುವ ವಿಷಯವಲ್ಲವ ಭಟ್ಟರೆ ? ನಮ್ಮ ಕಾಲದಲ್ಲೆಲ್ಲ ಸೊಸೆಯಂದಿರು ಹೇಳಿದ ಮಾತು ಕೇಳಿಕೊಂಡಿರುತ್ತಿದ್ದರು ; ಅಂಕೆಯಲ್ಲಿರುತ್ತಿದ್ದರು."

"ನಾನು ಹೇಳ ಹೊರಟದ್ದೇ ಬೇರೆ ವೆಂಕಮ್ಮ. ಈಗ ನಿಮ್ಮ ಸೀತಕ್ಕನೇ ಪಟ್ಟ ಪಾಡು ನೋಡಿ. ಮಗಳನ್ನು ಮನೆಗೆ ಕಳುಹಿಸಿರಿ ಎಂದರೆ ಎಷ್ಟು ರಾದ್ಧಾಂತ

ಮಾಡಿದರು. ಆಗ ನಿಮ್ಮ ಹೆತ್ತ ಕರುಳು ಎಷ್ಟು ನೊಂದಿತು. ಹಾಗೆಯೇ ನಿಮ್ಮ ಸೊಸೆಯ ತಾಯಿಯೂ..."

"ಅವರಿಗೆಲ್ಲ ಅದು ಗೊತ್ತಾಗುತ್ತದ ಭಟ್ಟರೆ ? ನಾನು ಪಟ್ಟದ್ದು ದೇವರಿಗೆ ಗೊತ್ತು. ನನ್ನದೂ ಹೆತ್ತ ಕರುಳಲ್ಲವೆ ? ನೇತ್ರಾವತಿಯ ಸುಖ ನೋಡಿಕೊಳ್ಳೋದು ನನಗೆ ತಿಳಿಯುವುದಿಲ್ಲವ ? ಒಟ್ಟಿನಲ್ಲಿ ನನ್ನನ್ನ ಕೆಟ್ಟವಳು ಮಾಡಬೇಕೂಂತ..."

ಶಾಮಭಟ್ಟರಿಗೆ ಹೇಗೆ ಮಾತಾಡಬೇಕೆಂದು ತಿಳಿಯದೇ ಹೋಯಿತು :

"ನನ್ನ ಮಾತನ್ನ ಸ್ವಲ್ಪ ಕೇಳಿಸಿಕೊಳ್ಳಿ ವೆಂಕಮ್ಮ. ಸಂಸಾರದಲ್ಲಿ ಏನೇನು ನಡೆಯಿತೂಂತ ನಿಮಗೇ ಗೊತ್ತು. ಶೀನಪ್ಪಯ್ಯ ಸೂಳೆಯ ಮಾತು ಕೇಳಿ ಸೀತಕ್ಕನ್ನ ಪೀಡಿಸಿದ. ನಿಮ್ಮ ಯಜಮಾನರೂ ಏನು ಮಾಡಿದರೂಂತ ನಾನು ಹೇಳಬೇಕಿಲ್ಲ. ನೀವೇನೇನು ಅನುಭವಿಸಿದಿರಿ ಅಂತ ಲೋಕಕ್ಕೆ ಗೊತ್ತು. ನೀವು ನೋಡಿದ ಹಾಗೆ ಗಂಡ ಹೆಂಡತೀನ ಪ್ರೀತಿಯಿಂದ ನಡೆಸಿಕೊಂಡುದೇ ಕಡಿಮೆ. ಪ್ರತಿ ಗಂಡನೂ ತಾಯಿಯ ಮಾತು ಕೇಳಿಯೋ, ಅಥವಾ ಸೂಳೆಯ ಮಾತು ಕೇಳಿಯೋ..."

"ಈಗಿನ ಕಾಲದ ಹುಡುಗರಿಗೆ ಈ ವಿಷಯವೇನು ಗೊತ್ತು ಭಟ್ಟರೆ ? ನಮ್ಮ ಕಾಲದಲ್ಲಿ ಹೆಂಡರು ಗಂಡಾಂತ ಅಂದರೆ ಗಡಗಡ ನಡಗ್ತ ದೂರ ನಿಲ್ಲುತ್ತಿದ್ದರು. ನಾನು ಹುಡುಗಿಯಾಗಿದ್ದಾಗ ಅವರ ಜೊತೆ ಮುಖಕ್ಕೆ ಮುಖ ಕೊಟ್ಟು ಮಾತಾಡಿದ ನೆನಪಿಲ್ಲ ನನಗೆ. ಈಗಿನ ಕಾಲವೇ ಬೇರೆಯಾಗಿದೆ. ನೇತ್ರಾವತಿಗೆ ಗಂಡನೆಂದರೆ ಏನು ಸಲಿಗೆ – ಯಾರು ಇರಲಿ ಬಿಡಲಿ ಗಂಡನ ಹತ್ತಿರ ಮಾತಾಡುತ್ತಾಳೆ. ಅವನೋ ಹೆಂಡತಿಯ ಜೊತೆ ಒಳ್ಳೆ ಸೂಳೆಯರ ಜೊತೆ ಆಡುವ ಹಾಗೆ ಆಡುತ್ತಾನೆ. ನೀವೇ ಸ್ವಲ್ಪ ಬುದ್ಧಿ ಹೇಳಬೇಕು ಭಟ್ಟರೆ."

ಶಾಮಭಟ್ಟರಿಗೆ ಅಳಬೇಕೊ ನಗಬೇಕೊ ತಿಳಿಯಲಿಲ್ಲ. ಈ ಹೆಂಗಸಿಗೆ ಅರ್ಥವಾಗೋದೆ ಇಲ್ಲವೆ, ವಿವೇಕವೆಂಬುದೇ ಇಲ್ಲವೆ, ಇಷ್ಟೆಲ್ಲ ಜೀವನದಲ್ಲಿ ಅನುಭವಿಸಿ ವ್ಯರ್ಥವಾಯಿತೆ ?

"ಅಲ್ಲ ವೆಂಕಮ್ಮ, ನೀವು ಎಷ್ಟು ಮಕ್ಕಳನ್ನು ಹೆತ್ತಿದ್ದೀರಿ, ಮಣ್ಣಿಗೆ ಹಾಕಿದ್ದೀರಿ, ಈ ಹಳ್ಳಿಯಲ್ಲಿ ಎಷ್ಟು ಹೆರಿಗೆ ಮಾಡಿಸಿದ್ದೀರಿ. ಇಷ್ಟೆಲ್ಲ ಅನುಭವಿಸಿದ ನೀವು ಈಗ ನಿಮ್ಮ ಸ್ವಂತ ಮಗ ಸೊಸೆಯ ಪ್ರಶ್ನೆ ಬಂದಾಗ ಹೇಗೆ ನಡೆದುಕೊಳ್ಳಬೇಕು ಹೇಳಿ."

ವೆಂಕಮ್ಮ ಕ್ಷಣ ತಬ್ಬಿಬ್ಬಾಗಿ ಹೇಳಿದರು :

"ಒಟ್ಟಿನಲ್ಲಿ ನಾನು ಕೆಟ್ಟವಳಾಗಿ ಕಾಣುತ್ತಿದ್ದೇನೆ ಭಟ್ಟರೆ. ನಾನು ಪಟ್ಟಿದ್ದು



ಅನುಭವಿಸಿದ್ದು ಯಾರಿಗೂ ಲೆಖ್ಖವಿಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಗನೇ ಈಗ ನನ್ನನ್ನ ಧಿಕ್ಕರಿಸಿ ನಡೀತಿದಾನೆ ; ಹೆಂಡತಿ ಹೇಳಿದ ಹಾಗೆ ಕುಣೀತಾನೆ. ಅವನ ಕ್ರಾಪ್ರೇನು, ಹೆಂಡತಿಯ ಜೊತೆ ಸಿನಿಮಾಕ್ಕೆ ಹೋಗೋದೇನು ? ಪೂಜೆ–ಸಂಭಾವನೆಯಿಂದ ಜೀವನ ಸಾಗಬೇಕಾದ ನಮಗೆ ಹಿಡಿಸಿದ ರೀತಿಯೇ ಅದು? ಈ ಹುಡುಗಿಗೆ ಅಷ್ಟೂ ತಿಳಿಯಕೂಡದೆ ? ನಾನೊಂದು ಬುದ್ಧಿವಾದ ಹೇಳಿದರೆ ಅದು ದೊಡ್ಡ ರಾದ್ಧಾಂತವಾಗಬೇಕೆ ? ಒಟ್ಟಿನಲ್ಲಿ ನಾನು ಇಷ್ಟು ದಿನ ಬದುಕಿ ಉಳಿದದ್ದು ತಪ್ಪು."

ಎಂದು ಗೊಳೋ ಎಂದು ವೆಂಕಮ್ಮ ಅಳಲು ಪ್ರಾರಂಭಿಸಿದರು. ಶಾಮಭಟ್ಟರು ನನ್ನ ಕೈಯಿಂದ ಆಗುವ ವಿಷಯವಲ್ಲವಿದು ಎಂದು ದೇವಸ್ಥಾನದಿಂದ ಎದ್ದು ಹೋದರು.

*   *   *   *   *

ಶೀನಪ್ಪಯ್ಯ ಶನಿವಾರವೇ ಹೊರಡಬೇಕಾದ್ದರಿಂದ ಜೋಯಿಸರು ಪಂಚಾಂಗ ನೋಡಿ ಮಾರನೇ ದಿನವೇ ಪ್ರಶಸ್ತವಾದದ್ದೆಂದು ನಿರ್ಧರಿಸಿದರು. ಶಾಮಭಟ್ಟರು ಒಲ್ಲದ ಮನಸ್ಸಿನಿಂದ ಪುಂಡರೀಕನ ಜೊತೆ ಹೋಗಿ ಗಣಹೋಮಕ್ಕೆ ಬೇಕಾದ ಪತ್ರೆ, ಕಬ್ಬು, ಬೇಳೆಗಳು, ತೋರಣಕ್ಕೆ ಮಾವಿನೆಲೆ, ಬಾಳೆಕಂಬ ಹೊಸ ವಸ್ತ್ರಗಳನ್ನೆಲ್ಲ ತಂದರು.

ಹಸೆಮಣೆಯ ಮೇಲೆ ಶೀನಪ್ಪಯ್ಯ ಮತ್ತು ಹೊಸ ಸೀರೆಯುಟ್ಟು ತಲೆತಗ್ಗಿಸಿ ಕೂತ ಸೀತಕ್ಕನನ್ನು ವೆಂಕಮ್ಮ ದೂರದಲ್ಲಿ ಕೂತು ಕಣ್ತುಂಬ ನೋಡಿದರು. ಸೀತಕ್ಕನ ದುರದೃಷ್ಟವೆಲ್ಲ ಈ ಪ್ರಸ್ತದ ಶಾಸ್ತ್ರದಿಂದಾಗಿ ಮುಗಿಯಿತು, ಮಗಳನ್ನು ಹಸೆಮಣೆಯ ಮೇಲೆ ಅಳಿಯ ಜೊತೆ ನೋಡುವ ಭಾಗ್ಯ ಸಿಕ್ಕಿತಲ್ಲ ಎಂದು ಅವರ ಕಣ್ತುಂಬ ನೀರು ತುಂಬಿತು. ಇನ್ನು ಪುಂಡರೀಕನಿಗೊಂದು ಗಂಡುಮಗುವಾದರೆ, ಮೊಮ್ಮಗನನ್ನು ಕಣ್ಣಾರೆ ಕಂಡು ಕುಲವೃದ್ಧಿಯಾಯಿತಲ್ಲ ಎಂದು ಸಂತೋಷಪಟ್ಟು ಕಣ್ಣು ಮುಚ್ಚಬಹುದು. ಸಾಹುಕಾರರ ಹೆಂಡತಿಯಿಂದಾಗಿ ಹಳ್ಳಿಯ ಎಂಟು ಹತ್ತು ಮುತ್ತೈದೆಯರು ಆರತಕ್ಷತೆಗೆ ಬಂದಿದ್ದರು. ಬಂದಿದ್ದವರೆಲ್ಲ ಮುದಿ ಮುತ್ತೈದೆ ಸೀತಕ್ಕನಿಗೆ ಪ್ರಸ್ತದ ಶುಭ ಸಂದರ್ಭದಲ್ಲಿ ರವಕೆಯ ಬಟ್ಟೆಯನ್ನು ತೊಡಿಸಿ ಹಾಡು ಹೇಳಿ ಆರತಿಯೆತ್ತಿದರು.

ಮುಟ್ಟು ನಿಂತು ಮುದಿಯಾದ ಸೀತಕ್ಕ ಅಷ್ಟಗಲ ಕುಂಕುಮವಿಟ್ಟು ತಲೆತಗ್ಗಿಸಿ ಮುದುಕ ಗಂಡನ ಜೊತೆ ಪ್ರಸ್ತದ ಶಾಸ್ತ್ರಕ್ಕೆ ಕೂತಿದ್ದನ್ನು ಕಂಡು ನೇತ್ರಾವತಿಗೆ ಹೊಟ್ಟೆ ಹಿಡಿಸಲಾರದಷ್ಟು ನಗು ಬಂತು. ಬಚ್ಚಲಿಗೆ ಹೋಗಿ, ಕೊಟ್ಟಿಗೆಯಲ್ಲಿ

ನಿಂತು, ಮತ್ತೆ ಮತ್ತೆ ನೆವ ಮಾಡಿಕೊಂಡು ತೊಂಡೆಚಪ್ಪರದ ಮರೆಗೆ ನಿಂತು ತನ್ನಷ್ಟಕ್ಕೆ ತಾನು ನಗುತ್ತ, ಕೂತು ನಗುತ್ತ, ನಿಂತು ನಗುತ್ತ, ಯಾರಿಗೂ ಹೇಳಿಕೊಳ್ಳಲಾರದ ಸಂಕಟದಲ್ಲಿ ಒದ್ದಾಡುತ್ತಿದ್ದ ನೇತ್ರಾವತಿಯನ್ನು ಕಂಡು ಶಾಮಭಟ್ಟರು, "ಇದೇನು ಮಗಳೇ ನಿನ್ನ ಚೇಷ್ಟೆ ?" ಎನ್ನಲು "ಅಯ್ಯೋ ಶಾಮಕಕ್ಕ ದಮ್ಮಯ್ಯ, ತಡೆಯಲಾರೆ" ಎಂದು ಮತ್ತಷ್ಟು ನಗಲು, 'ಅತ್ತೆಗೆ ಗೊತ್ತಾದರೆ ಬೆನ್ನಿಗೆ ಬರೆ ಬಿದ್ದೀತು" ಎಂದು ಹೇಳಿದರು. ಶಾಮಭಟ್ಟರು ಎಂದಿನ ಸಹಜ ಹಾಸ್ಯಭಾವದಲ್ಲಿರಲಿಲ್ಲ.

ಮಧ್ಯಾಹ್ನ ಬ್ರಾಹ್ಮಣ ಸುವಾಸಿನಿಯರಿಗೆ ಗಡದ್ದಾಗಿ ಊಟವಾಯಿತು. ಶೀನಪ್ಪಯ್ಯ ನಾಲ್ಕು ಗಿರಾಕಿಗಳನ್ನು ಗಿಟ್ಟಿಸಿದರು. ಮತ್ತೆ ಯಾವತ್ತು ಈ ಕಡೆ ಎಂದು ಕೇಳಿದ ಪ್ರಶ್ನೆಗಳಿಗೆ ಬರುತ್ತಿರುತ್ತೇನೆ ಎಂದರು. ಇವರು ಹೆಂಡತಿಯನ್ನು ಕರೆದುಕೊಂಡು ಹೋಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿದ್ದರಿಂದ ಯಾರೂ ಆ ಬಗ್ಗೆ ಅವರನ್ನು ಕೇಳಲಿಲ್ಲ.

ಸಾಯಂಕಾಲವಾದ ಮೇಲೆ ಪುಂಡರೀಕ ನೇತ್ರಾವತಿಗಾಗಿ ಹುಡುಕಿ ನಡುಮನೆಯಲ್ಲಿದ್ದ ಅವಳಿಗೆ ಕಣ್ಣು ಸನ್ನೆ ಮಾಡಿ, ಚೆಂಬನ್ನು ತೆಗೆದುಕೊಂಡು ಮನೆಯ ಹಿಂದಿದ್ದ ಗುಡ್ಡದ ಮೇಲೆ ಹೋದ. ಅವನು ಹೋದ ಸ್ವಲ್ಪ ಹೊತ್ತಿನ ಮೇಲೆ ನೇತ್ರಾವತಿಯೂ ತಾನೊಂದು ಚೆಂಬನ್ನು ತೆಗೆದುಕೊಂಡು ಗುಡ್ಡಕ್ಕೆ ಹೋದಳು. ವೆಂಕಮ್ಮ ಸೀತಕ್ಕನನ್ನು ಕರೆದು ಕಿವಿಯಲ್ಲಿ ಹೀಗಾಯಿತೆಂದು ಹೇಳಿದರು.

* * * * *

ರಾತ್ರೆಯಾಯಿತು. ಹಾಸಿಗೆ ಹಾಸುವ ಸಮಯವಾಯಿತು. ವೆಂಕಮ್ಮನಿಗೆ ಚಿಂತೆ – ಇವತ್ತು ಸೀತಕ್ಕ ಯಾರ ಜೊತೆ ಮಲಗಬೇಕು ? ತನ್ನ ಜೊತೆಯೋ, ಗಂಡನ ಜೊತೆಯೋ? ಶಾಸ್ತ್ರದಲ್ಲಿ ಏನು ಹೇಳುತ್ತದೊ ಗೊತ್ತಿಲ್ಲ. ಇಷ್ಟು ವಯಸ್ಸಾದ ಮೇಲೆ ಅವನ ಜೊತೆ ಮಲಗುವುದೆಂದರೇನು – ಹೆಂಗಸಿಗೆ ಋಷಿಪಂಚಮಿ ಮಾಡಿಸಿಕೊಳ್ಳುವ ವಯಸ್ಸು ಸೀತಕ್ಕನಿಗೆ ಹತ್ತಿರವಾಗಿಲ್ಲವೆ – ಇಷ್ಟರ ಮೇಲೆ ಇದು ಶಾಸ್ತ್ರಕ್ಕಾಗಿ ಮಾಡಿದ ಪ್ರಸ್ತ. ಮಂಕಾಗಿ ನಡುಮನೆಯಲ್ಲಿ ನಿಂತಿದ್ದ ಸೀತಕ್ಕ ಗಾಬರಿಪಟ್ಟು 'ಅಮ್ಮ ನಾನು ನಿನ್ನ ಜೊತೆಯೇ ಮಲಗುವುದು' ಎಂದಳು.

ಶಾಮಭಟ್ಟರು ನನಗೆ ಯಾಕೆ ಅದರ ಗೋಜೆಂದು ಹೊರಗಿನ ಚಾವಡಿಯಲ್ಲಿ ಹಾಸಿಕೊಂಡರು. ನಡುಮನೆಯಲ್ಲಿ ಶೀನಪ್ಪಯ್ಯನಿಗೊಂದು ಥಡಿ ಹಾಕಿದರು. ಯಥಾಪ್ರಕಾರ ರೂಮಿನಲ್ಲಿ ಪುಂಡರೀಕ ಮತ್ತು ನೇತ್ರಾವತಿ ; ದೇವರ ಕೋಣೆಯಲ್ಲಿ ಸೀತಕ್ಕ ಮತ್ತು ವೆಂಕಮ್ಮ.



ದೀಪವನ್ನು ಸಣ್ಣದು ಮಾಡಿ ಮಲಗಿಯಾದ ಮೇಲೆ ಎರಡು ಮೂರು ಬೀಡಿ ಸೇದಿ ನೆಲಕ್ಕದನ್ನು ನುರಿದು ಶೀನಪ್ಪಯ್ಯ 'ಪುಂಡರೀಕ ಪುಂಡರೀಕ' ಎಂದು ಕೂಗಿದರು. ಮುಸುಮುಸು ನಗುತ್ತಿದ್ದ ನೇತ್ರಾವತಿ 'ನಿಮ್ಮ ಭಾವಯ್ಯ ಕರೆಯುತ್ತಿದ್ದಾರೆ. ಎದ್ದು ಹೋಗಿ' ಎಂದಳು. ಪುಂಡರೀಕ ಎದ್ದು ಬಂದು ಲಾಟೀನಿನ ದೀಪವನ್ನು ದೊಡ್ಡದು ಮಾಡಿ 'ಏನು ಭಾವಯ್ಯ?' ಅಂದ. ಮಲಗಿದಲ್ಲಿಂದಲೆ ಶೀನಪ್ಪಯ್ಯ :

"ಏನಿಲ್ಲ ಸ್ವಲ್ಪ ಅವಳನ್ನು ಕಳಿಸು. ಮಾತಾಡಬೇಕಿತ್ತು" ಎಂದರು.

* * * * *

ಚಾವಡಿಯಲ್ಲಿ ಮಲಗಿದ್ದ ಶಾಮಭಟ್ಟರು, ಇವತ್ತೇಕೆ ನನಗೆ ತಲೆ ಕೆಟ್ಟ ಹಾಗಿದೆ, ನಿದ್ದೆಯೇ ಬರುತ್ತಿಲ್ಲವಲ್ಲ ಎಂದು ಎದ್ದುಕೂತರು. ಬಸರೂರಿಗೆ ಹೋಗಿ ಪುಟ್ಟಿಯ ಹತ್ತಿರ ಒಂದು ವಾರವಿದ್ದು ಬರಬೇಕೆಂದು ಅವರು ಕೂಡಿಸಿ ಇಟ್ಟುಕೊಂಡಿದ್ದ ಹಣವೆಲ್ಲ ಈ ಶೀನಪ್ಪಯ್ಯನ ಪ್ರಸ್ತದ ಶಾಸ್ತ್ರಕ್ಕೆ ಖರ್ಚಾಯಿತು. ಅದರ ಬಗ್ಗೆ ಇಷ್ಟು ಕಸಿವಿಸಿಯಾಗಬಾರದು; ಆದರೆ ಆಗಿದೆ.

ಪುಟ್ಟಿಯ ಹತ್ತಿರ ಹೋಗದಿದ್ದರೆ ಏನಾದರೂ ಮುಂಡಾಮೋಚಿ ಹೋಗುತ್ತದೆಯೆ ? ತನಗೂ ಈಗ ವಯಸ್ಸಾಗುತ್ತಿದೆ. ಇನ್ನು ತೀರಾ ಪರಾಧೀನನಾಗಿ ಸಾಯದಂತೆ ನೋಡಿಕೋಬೇಕು. ಕಷ್ಟವಾದರೆ ನೇತ್ರಾವತಿ ನೋಡಿಕೊಳ್ಳುತ್ತಾಳೆ, ವೆಂಕಮ್ಮನೂ ಬಿಟ್ಟುಕೊಡುವುದಿಲ್ಲ. ಆದರೆ ತನ್ನಿಂದ ತೊಂದರೆಯಾಗಬಾರದು. ಸತ್ತ ಮೇಲೆ ಅಪರಕರ್ಮದ ವಿಧಿಗಳಿಗೆ, ವರ್ಷಾಂತಿಕ ಬೊಜ್ಜಗಳಿಗೆ, ಮೊದಲೇ ಒಂದಷ್ಟು ಹಣ ಕೂಡಿಟ್ಟು ಸಾಯಬೇಕು.

ಸಾಯುವ ಸಮಯದಲ್ಲಿ, ಮತ್ತೆ ಸತ್ತ ಮೇಲೆ ಎಲ್ಲ ವಿಧಿಗಳನ್ನೂ ಮಾಡಲು ಸ್ವಂತ ಮಗನೊಬ್ಬನಿರಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಅಂತಹ ಯೋಚನೆ ಈವರೆಗೆ ಬರದಿದ್ದದ್ದು, ಆ ಬಗ್ಗೆ ತನಗೆ ವಿಷಾದವೇ ಆಗದಿದ್ದದ್ದು ಉಳಿದವರಿಗೆಲ್ಲರಿಗೂ ಆಶ್ಚರ್ಯ. ವೆಂಕಮ್ಮನೇ ಎಷ್ಟು ಸಾರಿ ಉಪದೇಶ ಮಾಡಲಿಲ್ಲ? ತನಗೆ ಹೆಣ್ಣಿನ ಮೇಲೆ ಹುಚ್ಚಿರಲಿಲ್ಲವೆ? ನೆನಸಿಕೊಂಡರೆ ಶಾಮಭಟ್ಟರಿಗೆ ನಗು ಬರುತ್ತದೆ. ಹೆಣ್ಣಿನ ವಾಸನೆಗೆ ಮನಸ್ಸು ರಂಗಾಗುತ್ತಿದ್ದ ಕಾಲವೊಂದಿತ್ತು. ಬಲು ಪೋಲಿ ನೀವೆಂದು ಪುಟ್ಟಿ ಗೇಲಿ ಮಾಡುತ್ತಿದ್ದಳು. ಪುಟ್ಟಿಯಲ್ಲದೆ ಕೈಹಿಡಿದ ಹೆಂಡತಿಯಾಗಿದ್ದರೆ ತನ್ನ ಸ್ವಭಾವಕ್ಕೆ ರಂಪ ಮಾಡುತ್ತಿದ್ದಳು. ಒಂದು ದಿನ ಪುಟ್ಟಿಯೂ ತನ್ನನ್ನು ತೀರಾ ಹಚ್ಚಿಕೊಂಡು ಕೇಳಿದಳು : "ಭಟ್ಟರೇ ನಿಮ್ಮ ಜೊತೆ ನಾನು ಇದ್ದು ಬಿಡುತ್ತೇನೆ – ಎರಡು ಹೊತ್ತು ಗಂಜಿ ಕಾಣಿಸಿ ಬಿಡಿ ಸಾಕು"

ಅಂತ. "ನೀನು ಈಗ ಇರುವ ಹಾಗೇ ಇದ್ದು ಬಿಡು ಹೆಣ್ಣೆ. ಅದೇ ಚೆಂದ" ಎಂದುಬಿಟ್ಟರು ಶಾಮಭಟ್ಟರು. ಯಾಕೆ ? ಕಟ್ಟಿಕೊಂಡ ಒಂದು ಹೆಣ್ಣು ಬೇಕೆಂದು ಮದುವೆಯನ್ನೂ ಆಗಲಿಲ್ಲ – ಯಾಕೆ ? ಪ್ರವೀರಾಚಾರ್ಯರ ಪಾಡು, ಶೀನಪ್ಪಯ್ಯನ ಮರ್ಜಿ, ತನ್ನ ಜೀವನದ ರೀತಿ ಮೂರನ್ನೂ ತೂಗಿ ನೋಡುತ್ತ ಆಕಾಶವನ್ನು ಸುಮ್ಮನೇ ದಿಟ್ಟಿಸುತ್ತ ಭಟ್ಟರು ಮಲಗಿದರು. ಮತ್ತೆ ಈ ಪುಂಡರೀಕ ಮತ್ತು ನೇತ್ರಾವತಿ...?

* * * * *

ಸೀತಕ್ಕ ಬಂದು ನಿಲ್ಲಲು, "ಅಲ್ಲ ಸ್ವಲ್ಪ ಕಾಲು ಜಗಿಯುತ್ತಿದೆ, ಒತ್ತುತ್ತೀಯಾ ಎಂದು ಕರೆಸಿದೆ" ಎಂದರು ಶೀನಪ್ಪಯ್ಯ.

ಸೀತಕ್ಕನಿಗೆ ಗಂಟಲು ಒಣಗಿ ಬಂತು. ಏನೇನೋ ಅಸ್ಪಷ್ಟವಾದ ಭಾವನೆಗಳು ಬಂದು ದಿಗಿಲಾಯಿತು. ಆದರೆ ಅವರ ಕಾಲುಬುಡದಲ್ಲಿ ಕೂತು ಹೇಳಿದಂತೆ ಮಾಡಿದಳು.

* * * * *

ಸೀತಕ್ಕನನ್ನು ಕಳಿಸಿದ ಮೇಲೆ ವೆಂಕಮ್ಮ ತಮ್ಮ ಕಿವುಡನ್ನು ಶಪಿಸಿಕೊಳ್ಳುತ್ತ ಮಲಗಿದರು ; ಪುಂಡರೀಕನ ರೂಮಿನಿಂದ ಪಿಸ ಪಿಸ ಪಿಸ ಎನ್ನುವ ಶಬ್ದ ಮಾತ್ರ ಕೇಳಿಸುತ್ತಿತ್ತು.

* * * * *

ಶಾಮಭಟ್ಟರು ನಿದ್ದೆಯನ್ನು ಬರಿಸಿಕೊಳ್ಳಲೆಂದು ಒಂದು ಉಪಾಯ ಹೂಡಿದರು. ತಾನು ಮತ್ತು ಪ್ರವೀರಾಚಾರ್ಯರು ಒಂದು ಪ್ರಸಂಗದಲ್ಲಿ ವಾಗ್ವಾದ ಮಾಡಿದ ಹಾಗೆ. ವಿಷಯ : ಸೂಳೆಯರು ಮತ್ತು ಹೆಂಡಂದಿರು, ಸುಖ ದುಃಖ, ಸಾವು ನೋವು ವಿವೇಕ ಶೀನಪ್ಪಯ್ಯ ವೆಂಕಮ್ಮ, ನೇತ್ರಾವತಿ ಮತ್ತು ಪುಂಡರೀಕ, ಅಪರಕರ್ಮಕ್ಕೆಂದು ಹಣ ಕೂಡಿಡುವುದು, ಅಲ್ಲ ಪುಟ್ಟಿಯೆಷ್ಟು ಒಳ್ಳೆಯ ಹೆಣ್ಣೆನ್ನುತ್ತೀರಿ, ಅಂತೂ ಕೊನೆಗೂ ನಿಮ್ಮ ಅಳಿಯ ತನ್ನ ಪ್ರಸ್ತದ ಶಾಸ್ತ್ರಕ್ಕೆಂದು ನಾನು ಪುಟ್ಟಿಗಾಗಿ, ನೇತ್ರಾವತಿಗೆ ಒಂದು ಹೊಸ ಸೀರೆಯನ್ನಾದರೂ ಕೊಡಿಸಬಹುದಾಗಿದ್ದ ಹಣದಲ್ಲಿ ಈ ಮುದಿಯ...

* * * * *

ಪುಂಡರೀಕ ಮೆತ್ತಗೆ ಸೊಂಟಕ್ಕೆ ಸಿಗಿಸಿದ್ದ ಒಂದು ರೂಪಾಯಿಯ ಚಿಲ್ಲರೆಯನ್ನು ಬಿಚ್ಚಿ ಸದ್ದಾಗದಂತೆ ನೇತ್ರಾವತಿಗೆ ಕೊಟ್ಟ. ಪೇಟೆಯಲ್ಲಿ ಖರ್ಚು ಕಳೆದು ಉಳಿದದ್ದು, ದೇವಸ್ಥಾನದಲ್ಲಿ ಸಿಕ್ಕ ದಕ್ಷಿಣೆ ಎಂದು ಕಿವಿಯಲ್ಲಿ ಹೇಳಿದ.



ನೇತ್ರಾವತಿ ಮೆತ್ತಗೆ ಪೆಟ್ಟಿಗೆಯ ಬಾಗಿಲನ್ನು ತೆರೆದು ಆ ದುಡ್ಡನ್ನು ಕರಡಿಕೆಯಲ್ಲಿಟ್ಟಳು. 'ಒಟ್ಟೆಷ್ಟಾಗಿದೆ' ಎಂದು ಕೇಳಿದ. 'ಅರವತ್ತು ರೂಪಾಯಿ ಚಿಲ್ಲರೆ' ಎಂದಳು. 'ಅಮ್ಮನಿಗೆಲ್ಲಾದರೂ ಗೊತ್ತಾದರೆ' ಎಂದ. 'ಬೀಗ ಹಾಕಿ ಬೀಗದ ಕೈಯನ್ನು ಯಾವಾಗಲೂ ನನ್ನ ಜೊತೆಗೇ ಇಟ್ಟುಕೊಳ್ಳುತ್ತೇನೆ' ಎಂದಳು.

* * * * *

ಏನು ಮಾಡುತ್ತಿದ್ದಾಳೊ, ನನ್ನ ಮೇಲೆ ದೂರು ಹೇಳುತ್ತಿರಬೇಕು, ಇನ್ನೇನು ಎಂದು ವೆಂಕಮ್ಮ ದುಃಖಿತರಾದರು. ಗಂಡನಿಂದ ಹಾಗೆ, ಮಗನಿಂದ ಹೀಗೆ ಒಟ್ಟು ನನ್ನ ಬಾಳು ಹೀಗಾಯಿತಲ್ಲ – ಇನ್ನು ಬದುಕಬಾರದು ಸಾಯಬೇಕು ಎಂದುಕೊಂಡರು. ಕೊನೆಗೆ ಸೀತಕ್ಕನಿಗೆ ಪ್ರಸ್ತವನ್ನಾದರೂ ಮಾಡಿದಂತಾಯಿತಲ್ಲ ಎದು ನಿಟ್ಟುಸಿರಿಟ್ಟರು. ಈ ಹಾಳು ಹುಡುಗಿಗೆ ಒಂದು ಮಗುವಾದರೂ ಆಗಿದ್ದರೆ, ಸಾಕಪ್ಪ ಈ ಬಾಳು ಎಂದು ಸಾಯಬಹುದಿತ್ತು, ಆ ಪುಣ್ಯ ನನಗೆಲ್ಲಿ, ಎಂದು ಯೋಚಿಸುತ್ತ ಸೀತಕ್ಕ ಇನ್ನೂ ಯಾಕೆ ಬರಲಿಲ್ಲ ಎಂದು ಕಾದರು.

* * * * *

ಕಾಲೊತ್ತುತ್ತಿದ್ದ ಸೀತಕ್ಕನಿಗೆ, 'ಸ್ವಲ್ಪ ಮೇಲಕ್ಕೆ ಒತ್ತು, ಇನ್ನೂ ಸ್ವಲ್ಪ ಮೇಲಕ್ಕೆ – ಹಾ' ಎನ್ನುತ್ತ ಶೀನಪ್ಪಯ್ಯ ಸುಖಪಟ್ಟರು.

* * * * *

ಪ್ರವೀರಾಚಾರ್ಯರ ವಾದ ಮುಗಿದಿತ್ತು. ಈಗ ಶಾಮಭಟ್ಟರ ವಾದ :

ಈ ದ್ವಂದ್ವ ನನಗೆ ಬೇಡವೆನ್ನಿಸಿತು. ನಿಮಗೂ ಯಾಕೆ ಬೇಕಿತ್ತು ಒಂದು ಹೆಂಡತಿ – ಇದು ನನ್ನ ವಸ್ತು ಎನ್ನಿಸಿದ ಕೂಡಲೆ ಸಸಾರವಾಗುತ್ತದೆ. ಅದಕ್ಕೇ ಪುಟ್ಟಿಗೂ ಬೇಡವೆಂದೆ, ಮದುವೆಯೂ ಬೇಡವೆಂದೆ. ಯಾವುದನ್ನೂ ತೀರ ಹಚ್ಚಿಕೊಳ್ಳಬಾರದು – ಹಚ್ಚಿಕೊಂಡರೆ ಇದು ಹೀಗೇ ಇರಬೇಕೆಂದು ಹಠ ಹುಟ್ಟುತ್ತದೆ, ಮನಸ್ಸು ದುಃಖಕ್ಕೊಳಗಾಗುತ್ತದೆ, ಆದ್ದರಿಂದ 'ಹೀಗುಂಟೊ ? ಇರಲಿ ಬಿಡು, ಹಾಗುಂಟೋ ? ಇರಲಿ ಬಿಡು', ಎಂದು ಇದ್ದು ಬಿಡೋದು ಮೇಲು – ಒಟ್ಟಿನಲ್ಲಿ ಹೇಳೋದಾದರೆ ಹೆಚ್ಚು ಹಚ್ಚಿಕೊಳ್ಳಬಾರದು – ಔದಾರ್ಯವೆಂಬುದೊಂದು ಗುಣವಿದ್ದರೆ – ಎಲ್ಲಿರುತ್ತದೆ, ಈಗ ನೋಡಿ ವೆಂಕಮ್ಮ ಎಷ್ಟು ಕಷ್ಟಪಟ್ಟೂ – ಪುಂಡರೀಕ ನೇತ್ರಾವತಿಯ ಬಗ್ಗೆ – ಮಗ ಒಂದು ಸೂಳೆಯಿಟ್ಟುಕೊಂಡು ಹೆಂಡತಿಯನ್ನು ಹೊಡೆಯುತ್ತಿದ್ದರೆ ಹೀಗೆ ರೇಗುತ್ತಿರಲಿಲ್ಲ – ಏನೆನ್ನುತ್ತೀರಿ,

* * * * *

"ಥೂ ನಿಮ್ಮ ಗಡ್ಡ ಚುಚ್ಚುತ್ತಿದೆ. ಯಾಕೆ ಮೈಲಿಗೆ ಮುಟ್ಟಿಸಿಕೊಂಡಿಲ್ಲ" ಎಂದು ಪುಂಡರೀಕನ ಮುಖವನ್ನು ತಳ್ಳಿ ನೇತ್ರಾವತಿ ಹೇಳಿದಳು.

"ಸೋಮವಾರ ಮಾಡಿಸಿಕೊಳ್ಳುತ್ತೇನೆಯೇ" ಎಂದು ಪುಂಡರೀಕ ನೇತ್ರಾವತಿಯನ್ನು ಎಳೆದು ತಬ್ಬಿಕೊಂಡ.

"ಮೈಲಿಗೆ ಮುಟ್ಟಿಸಿಕೊಳ್ಳುವಾಗ ನಿಮ್ಮ ಆ ಹಾಳು ಜುಟ್ಟನ್ನ ಕತ್ತರಿಸಿ ಹಾಕಿ, ಸಂಪೂರ್ಣ ಕ್ರಾಪು ಬಿಡಿ."

"ಅಮ್ಮನಿಗೆಂದು ಒಂದು ಚೂರು ಇರಲಿ ನೇತ್ರಾ. ಇವತ್ತೊ ನಾಳೆಯೊ ಅವಳು ಸಾಯುತ್ತಾಳೆ. ಅವಳನ್ನು ಯಾಕೆ ನೋಯಿಸಬೇಕು?"

"ನನ್ನನ್ನು ಮಾತ್ರ ಅವರು ಉರಿಸಬಹುದಲ್ಲ ?"

"ಸಂಪೂರ್ಣ ಕ್ರಾಪು ಮಾಡಿಸಿದರೆ ಹೊಟ್ಟೆಪಾಡು ಹೊರೆಯೋದು ಹೇಗೆ ನೇತ್ರಾ ? ಜುಟ್ಟು ಬಿಟ್ಟಿದ್ದರೆ ಮಾತ್ರ ಬ್ರಾಹ್ಮಣಾರ್ಥ ಪೌರೋಹಿತ್ಯ ಸಿಗೋದು, ಸಂಭಾವನೆಗೆ ಹೋದರೆ ಅಡಿಕೆ ಸಿಗೋದು."

"ಈ ಹಾಳು ಬ್ರಾಹ್ಮಣಾರ್ಥ, ಸಂಭಾವನೆ ಬಿಟ್ಟು ಹೋಟೆಲಿಡಿ. ಗಣಪಯ್ಯನನ್ನೆ ನೋಡಿ ಬೇಕಾದರೆ"

"ಆದರೆ ಅಮ್ಮ ಏನು ಹೇಳ್ತಾಳೋ ? ಶಾಮಕಕ್ಕನನ್ನ ಕೇಳಿ ನೋಡಬೇಕು ನೇತ್ರಾ"

ಎನ್ನುತ್ತ ಪುಂಡರೀಕ ಹೆಂಡತಿಯ ಚುರುಕಾದ ದೇಹದ ಮೇಲೆ ಕೈಯಾಡಿಸಿದ.

* * * * *

ಮತ್ತೆ ಪುಟ್ಟಿ, ಇತ್ಯಾದಿ ಉಳಿದ ಹೆಂಗಸರೆಲ್ಲ ಶಾಮಭಟ್ಟರಿಗೆ ನೆನಪಾದರು. ನಿಜವಾಗಿ ನಾನೊಬ್ಬ ಪೋಲಿ, ಈ ವಯಸ್ಸಿನಲ್ಲಿ ಸಾಯುವುದರ ಬಗ್ಗೆ ಯೋಚಿಸಬೇಕು – ಆದರೆ ನನಗಿನ್ನೂ ಹೆಣ್ಣಿನ ಚಟ ಬಿಡಲಿಲ್ಲವಲ್ಲ – ಈಗ ವಟ ವಟ ವಟ ಎನ್ನುತ್ತ ಮಾತಾಡುವ, ಯಾವತ್ತೂ ಯಾರನ್ನಾದರೂ ದೂರುತ್ತಿರುವ ಶೀನಪಯ್ಯನನ್ನೇ ತೆಗೆದುಕೊಳ್ಳುವ, ಒಟ್ಟಿನಲ್ಲಿ ಇದು ನನ್ನ ವಸ್ತು ಎನ್ನುವ ಭಾವನೆ ಬರಬಾರದು. ದ್ವಂದ್ವ ಇರಬಾರದು, ಯಾವುದನ್ನೂ ಅತಿಯಾಗಿ ಹಚ್ಚಿಕೊಳ್ಳಬಾರದು, ಔದಾರ್ಯ ಬಹಳ ದೊಡ್ಡ ಗುಣ.

ಶಾಮಭಟ್ಟರಿಗೆ ಥಟ್ಟನೆ ಸಂಪೂರ್ಣ ಎಚ್ಚರವಾಯಿತು. ಯಾಕೊ ನೇತ್ರಾವತಿ ಪುಂಡರೀಕರ ಬಗ್ಗೆ – ಬೆಳೆಯುತ್ತಿರುವ ಚಿಗುರುತ್ತಿರುವ ಜೀವಗಳಲ್ಲವೆ ಎಂದು – ತುಂಬ ತುಂಬ ಪ್ರೀತಿ ಬಂದಿತು.

* * * * *



ತಾನು ಇಟ್ಟು ಕೊಂಡಿದ್ದ ಸೂಳೆಗಿಂತ ಈ ಸೀತಕ್ಕ ತುಂಬ ಚಿಕ್ಕವಳಲ್ಲವೆ, ಇನ್ನೂ ಮುಟ್ಟಾಗುತ್ತಿರಬಹುದು ಇವಳು ಎಂದುಕೊಂಡು ಶೀನಪ್ಪಯ್ಯ ಮೆತ್ತಗೆ ಸೀತಕ್ಕನ ಕೈಹಿಡಿದು ಎಳೆಯಹೋದರು. ಕಾಲೊತ್ತುತ್ತಿದ್ದ ಸೀತಕ್ಕ ದಡಕ್ಕನೆ ಎದ್ದು ನಿಂತಳು. ಶೀನಪ್ಪಯ್ಯ ಎದ್ದು ಕೂತು ಅವಳ ಕಾಲಿಗೆ ಕೈಹಾಕಿದರು. ಸೀತಕ್ಕನಿಗೆ ಪ್ರಾಣ ಹೋಗುವಷ್ಟು ಗಾಬರಿಯಾಗಿ ಒದ್ದುಕೊಳ್ಳುತ್ತ ಅಲ್ಲಿಂದ ನಡುಮನೆಗೆ ಓಡಿದಳು.

* * * * *

ಶಾಮುಭಟ್ಟರಿಗೆ ಮತ್ತೆ ಕಣ್ಣು ಎಳೆಯಿತು. ನಾನು ಹೀಗೆಲ್ಲ ಯೋಚಿಸುತ್ತೇನೆಂದು ಯಾರಿಗೂ ಗೊತ್ತಿಲ್ಲ – ಶಾಮಭಟ್ಟನೆ, ಪಾಪ ಒಳ್ಳೆಯವ, ಆದರೆ ಹಡೆ ನೋಡಿ ಖರ್ಚು ಕಳೆದು ಉಳಿದ ಹಣವನ್ನು ಸೂಳೆಯ ಮೇಲೆ ಸುರಿಯುತ್ತಾನೆ – ಸ್ವಲ್ಪ ಕಚ್ಚೆ ಹರುಕ – ಆದರೆ ಯಾರಿಗೂ ಅವನಿಂದ ತೊಂದರೆಯಿಲ್ಲ ಎಂದು ಜನ ಯೋಚಿಸುತ್ತಾರಲ್ಲವೆ ? – ಯೋಚಿಸಲಿ ಬಿಡು, ಎಂದು ಪ್ರಸಂಗ ಒಂದರ ಹಾಡನ್ನು ನೆನೆದುಕೊಂಡರು ; ನಿದ್ದೆ ಮಾಡಿದರು.

* * * * *

ನೇತ್ರಾವತಿ ಸುಖದಿಂದ ನರಳಿದಳು,

* * * * *

ವೆಂಕಮ್ಮ ಸೀತಕ್ಕ ಆಲಿಸಿದರು.

೨೩–೩–೬೨.

# ಘಟಶ್ರಾದ್ಧ

ಇನ್ನೂ ಕತ್ತಲು ಕತ್ತಲು ಎನ್ನುವಾಗ ನಾನು ಎದ್ದು ಕಣ್ಣುಜ್ಜಿಕೊಳ್ಳುತ್ತ ಅಂಗಳಕ್ಕೆ ಬಂದು ನೋಡಿದರೆ ಕೈಯ್ಯಲ್ಲೊಂದು ಗಂಟು ಹಿಡಿದು ಶೇಷಗಿರಿ ಉಡುಪರು ಹೊರಟು ನಿಂತಿದ್ದರು. ನನ್ನನ್ನು ನೋಡಿ, "ಕುಡುಮಲ್ಲಿಗೆಗೆ ಹೋದವನು ನಿನ್ನ ಅಪ್ಪಯ್ಯ ಅಮ್ಮನನ್ನು ನೋಡುತ್ತೇನೋ" ಎಂದರು. ಅಪ್ಪಯ್ಯ ಅಮ್ಮ ಎಂದು ಅವರೆಂದ ಕೂಡಲೆ, ಊರಿನಲ್ಲಿದ್ದಿದ್ದರೆ ಇಷ್ಟು ಹೊತ್ತಿಗೆ ಅಮ್ಮನ ಸೀರೆ ಹೊದ್ದು ಬೆಚ್ಚಗೆ ಮಲಗಿರುತ್ತಿದ್ದೆ, ಆಮೇಲೆ ಅಮ್ಮ ಏಳಿಸಿ ಮುಖ ತೊಳೆಸಿ ಕಾಫಿ ಕೊಡುತ್ತಿದ್ದಳು ಎಂದು ನೆನಪಾಗಿ ವ್ಯಥೆಯಾಯಿತು. ಬೇಲಿ ದಾಟುವುದಕ್ಕೆ ಮುಂಚೆ ನಿಂತು ಶೇಷಗಿರಿ ಉಡುಪರು 'ಯಮುನಾ' ಎಂದು ಅವರ ಮಗಳನ್ನು ಕರೆದರು. ತಲೆಯ ಮೇಲೆ ಕೆಂಪು ಸೀರೆಯ ಸೆರಗನ್ನು ಎಳೆದುಕೊಳ್ಳುತ್ತ ಯಮುನಕ್ಕ ಬಾಗಿಲಲ್ಲಿ ಬಂದು ನಿಂತರು. ಶೇಷಗಿರಿ ಉಡುಪರು ಉಣುಗೋಲು ಹಾಕುತ್ತ ಹೇಳಿದರು :

"ಹಾಗಾದರೆ ನಾನು ಹೋಗಿ ಬರ್ತೇನೆ. ಏನು ? ಮಕ್ಕಳ ಮೇಲೆ ನಿಗಾ ಇರಲಿ. ಹೊಳೆಯಲ್ಲಿ ಹೆಚ್ಚು ಹೊತ್ತು ಈಸಲು ಬಿಡಬೇಡ. ಗೋಕರ್ಣದಲ್ಲಿ ಯಾಗ ಮುಗಿಸಿಕೊಂಡು ಉದ್ಯಾವರಕ್ಕೆ ಹೋಗಿಬರೋದು ಮೂರು ತಿಂಗಳಾದರೂ ಆದೀತು. ಮಕ್ಕಳು ನಿತ್ಯ ಬಾಯಿಪಾಠ ಮಾಡಲಿ. ಉಪಾಧ್ಯರಿಗೆ ಉಳಿದದ್ದೆಲ್ಲ ಹೇಳಿದ್ದೇನೆ."

ನನ್ನ ಅಪ್ಪಯ್ಯನಿಗಿಂತ ದೊಡ್ಡವರಾಗಿ ಕಾಣುತ್ತಿದ್ದ ಶೇಷಗಿರಿ ಉಡುಪರೆಂದರೆ ನನಗೆ ಭಯ. ಆದರೆ ಅಮ್ಮನಿಗಿಂತ ಚಿಕ್ಕವರಾಗಿದ್ದ ಯಮುನಕ್ಕ ಎಂದರೆ ಸಲಿಗೆ. ಉಡುಪರು ನನಗೆ ಬೆನ್ನು ತಿರುಗಿಸಿದ ಕೂಡಲೇ ಯಮುನಕ್ಕ ನಾನೂ ಊರಿಗೆ ಹೋಗಬೇಕೆಂದು ಹಠಮಾಡಿದೆ. 'ಇಕೊ ಸುಮ್ಮನಿರು, ಮುಖ ತೊಳೆದು ಹೋಗಿ ತುಳಸಿ ಕೊಯ್ದುಕೊಂಡು ಬಾ' ಎಂದು ಅವರು ಒಳಗೆ ಹೋದರು. ಅವರು ಒಳಗೆ ಹೋಗುತ್ತಿದ್ದಂತೆ ವಿಶ್ವನಾಥಶಾಸ್ತ್ರಿ, ಗಣೇಶ ಎದ್ದು ಬಂದರು. ಶೇಷಗಿರಿ ಉಡುಪರ ಬೆನ್ನು ಕತ್ತಲಿನಲ್ಲಿ ಮಾಯವಾಗುವುದನ್ನು ನೋಡುತ್ತ, ಅಳುತ್ತ ನಿಂತಿದ್ದ ನನ್ನನ್ನು ನೋಡಿ ನಕ್ಕರು. ಅವರ ಜೊತೆ ನಾನು ಬಾವಿಕಟ್ಟೆಗೆ ಮುಖ ತೊಳೆಯಲು ಹೋದೆ. ಶಾಸ್ತ್ರಿ "ಏನೋ ಹೆಣ್ಣಿಗ" ಎಂದು ನನ್ನನ್ನು



ವಿಚಾರಿಸಿದ. ಗಣೇಶ ಬಿಂದಿಗೆಯನ್ನು ಸರ್ರನೆ ಬಾವಿಗಿಳಿಸುತ್ತ – "ಅಲ್ಲೊ ಶಾಸ್ತ್ರಿ, ಈ ಪೆಚ್ಚು ಉಪನಯನದ ಹಿಂದಿನ ರಾತ್ರಿ ತೊಡೇನ ಕೊಯ್ದು ಕಪ್ಪೆ ತುಂಬುತಾರೇಂತ ಚೇಷ್ಟೆ ಮಾಡಿದ್ರೆ ನಂಬಿಕೊಂಡು ಅಳ್ತಾ ಕೂತಿತ್ತಂತೆ" ಎಂದು ಬಿಂದಿಗೆಯ ನೀರು ತುಂಬುತ್ತಿರಲು ನಕ್ಕ. ನಾನು ಅಳುತ್ತ ಅಡಿಗೆಮನೆಗೆ ಹೋದೆ. 'ನೀರು ಸೇದಿ ಕೊಡುತ್ತೇವೆ ಬಾರೊ' ಎಂದು ಅವರಿಬ್ಬರೂ ಕೂಗಿ ಕರೆದರು.

ಯಮುನಕ್ಕ ಮಜ್ಜಿಗೆ ಕಡೆಯುತ್ತಿದ್ದರು. ಅವರ ಮುಖವೂ ಅಳುಬುರುಕಾಗಿ ಕಂಡಿತು. ಎರಡೆರಡು ಸಾರಿ ನಾನು ಹೇಳಿದ ಮೇಲೆ ಅವರು ನನ್ನ ಕಡೆ ತಿರುಗಿ, 'ಹೋಗಲಿ ಬಿಡು, ನೀನು ಅವರ ಜೊತೆ ತುಳಸಿ ಕೊಯ್ಯಲು ಹೋಗಬೇಡ. ನಿನಗೆ ನಾನು ಮುಖ ತೊಳೆಸುತ್ತೇನೆ' ಎಂದು ಸಮಾಧಾನ ಹೇಳಿದರು.

ಮುಖ ತೊಳೆಸಿಯಾದ ಮೇಲೆ ನಾನು ಒಬ್ಬನೇ ಬುಟ್ಟಿ ಹಿಡಿದು ಪೂರ್ವ ದಿಕ್ಕಿಗೆ ಹೊರಟೆ. ದಾರಿಯಲ್ಲಿ ಬೆಳೆದಿದ್ದ ತುಂಬೆಹೂವನ್ನೆಲ್ಲ ಕೊಯ್ದೆ. ನಾನಿನ್ನೂ ಸಣ್ಣವನೆಂದು, ಕುಳ್ಳಗಿದ್ದೀನೆಂದು, ಶಾಸ್ತ್ರಿ–'ತುಂಬೆಗಿಡಕ್ಕೆ ಏಣಿ ಹಾಕೋನು' ಎಂದು ಹಾಸ್ಯಮಾಡುತ್ತಿದ್ದನು. ಶಾಸ್ತ್ರಿ ನನಗಿಂತ ದೊಡ್ಡ ಹುಡುಗ; ತುಂಬ ದೊಡ್ಡ ಹುಡುಗನಂತೆ ನನಗೆ ಕಾಣಿಸುತ್ತಿದ್ದ. ಅವನಿಗೆ ಅಪ್ಪ ಅಮ್ಮ ಇರಲಿಲ್ಲ ; ಉಡುಪರ ಹತ್ತಿರ ವೇದ ಕಲಿಯುತ್ತಿದ್ದ ನನ್ನ ಹಾಗೆ. ಅವನಿಗೆ ಒಂದು ಕಣ್ಣು ಸಣ್ಣ, ಇನ್ನೊಂದು ದೊಡ್ಡಗಿದ್ದುದರಿಂದ ಗಣೇಶ ಅವನನ್ನು ಒಕ್ಕಣ್ಣಿನ ಶುಕ್ಲಾಚಾರಿ ಎಂದು ಹಾಸ್ಯ ಮಾಡುತ್ತಿದ್ದ. ಅವರಿಬ್ಬರೂ ಒಂದು ಜೊತೆ; ನಾನೇ ಬೇರೆ. ಬುಟ್ಟಿ ಹಿಡಿದು ನಡೆಯುತ್ತ ಹಾಗೇ ಗೋಪಾಲ ಜೋಯಿಸರ ಮನೆಗೆ ಹೋದೆ. ಅಲ್ಲಿ ಬಿಲ್ವಪತ್ರೆಯ ಮರವಿದ್ದುದರಿಂದ ಅದರ ಪತ್ರೆ ಕೊಯ್ಯಲು ಗೋಪಾಲ ಜೋಯಿಸರ ಅಕ್ಕ ಗೋದಾವರಮ್ಮನನ್ನು ದೋಟಿಗಾಗಿ ಕೇಳಿದೆ. ಗೋದಾವರಮ್ಮನೂ ಯಮುನಕ್ಕನಂತೆ ಮಡಿ ಹೆಂಗಸು. ಆದರೆ ಅವರಿಗಿಂತ ಯಮುನಕ್ಕ ತುಂಬ ಚಿಕ್ಕವರು ; ಕೆಂಪಗೆ ಗುಂಡ ಗುಂಡಗೆ ಅಮ್ಮನಿಗಿಂತಲೂ ಚೆನ್ನಾಗಿ ಯಮುನಕ್ಕ ಕಾಣುತ್ತಿದ್ದರು. ಯಮುನಕ್ಕನಿಗೆ ಮದುವೆಯಾದ ಸ್ವಲ್ಪ ದಿನದಲ್ಲೆ ಅವರ ಗಂಡ ಹಾವು ಕಚ್ಚಿದ್ದರಿಂದ ಸತ್ತರಂತೆ. ಶೇಷಗಿರಿ ಉಡುಪರ ಹೆಂಡತಿ ಸತ್ತ ಮೇಲೆ – ಅಪ್ಪನನ್ನು ನೋಡಿಕೊಳ್ಳಲು ಒಂದು ಜನ ಬೇಕಲ್ಲ – ಎಂದು ಯಮುನಕ್ಕ ಉಡುಪರ ಜೊತೆಗೇ ಇರುವುದಂತೆ. ಹೀಗೆಂದು ಗಣೇಶ ನನಗೆ ಹೇಳಿದ್ದೆ. ಗಣೇಶ ಉಡುಪರಿಗೆ ದೂರದಿಂದ ಸಂಬಂಧ.

ಕೈಯಿಂದ ದೋಟಿಯನ್ನು ಎತ್ತಿ ನೆಗೆಯುತ್ತ ಬಿಲ್ವಪತ್ರೆ ಕೊಯ್ಯುತ್ತಿದ್ದ ನನ್ನನ್ನು ಕಂಡು ಗೋದಾವರಮ್ಮ, ಬಿಡು ನಾನು ಕೊಯ್ದು ಕೊಡುತ್ತೇನೆಂದು

ಕೊಯ್ದುಕೊಟ್ಟರು. ಆಮೇಲೆ ನಾನು ಅವರ ಹಿತ್ತಲಿನಲ್ಲಿದ್ದ ತುಳಸಿ ಕೊಯ್ಯುತ್ತಿರಲು,

"ಉಡುಪರು ಗೋಕರ್ಣಕ್ಕೆ ಹೋದರೇನೊ?" ಎಂದರು, ನಾನು ಹೌದು ಎಂದೆ.

"ಯಮುನ ಹೇಗಿದ್ದಾಳೆ" ಎಂದರು.

"ಚೆನ್ನಾಗಿದ್ದಾರೆ" ಎಂದೆ.

"ಎರಡು ಮೂರು ದಿನದಿಂದ ದೇವಸ್ಥಾನಕ್ಕೇ ಬರ್ತಿಲ್ಲ – ಹುಷಾರಿಲ್ಲಾಂತ ಕೇಳಿದೆ" ಎಂದರು.

"ನನಗೆ ಗೊತ್ತಿಲ್ಲ" ಎಂದೆ.

"ಗೊತ್ತಿಲ್ಲಾಂದರೆ ಏನೊ ? ಮಲಗಿರೋದಿಲ್ಲವ ಅವರು ? ಉಡುಪರು ಏನೂ ಹೇಳಲಿಲ್ಲವ?

"ತಲೆ – ಸುತ್ತು ಬರ್ತದೆ ಅಂತ ಹೇಳಿ ಮೊನ್ನೆ ಮಲಗಿಕೊಂಡಿದ್ದರು. ಉಡುಪರು ಅದಕ್ಕೆ ಮದ್ದುಕೊಟ್ಟರು ಅಷ್ಟೆ – ಇನ್ನೇನೂ ಇಲ್ಲ", ಎಂದೆ ನಾನು.

"ಓ ಹಾಗೊ ?" ಎಂದು ಗೋದಾವರಮ್ಮ ನಕ್ಕರು. ಒಳಗೆ ಹೋಗುತ್ತ ಗೋಪಾಲ ಜೋಯಿಸರಿಗೆ –

"ಕೇಳಿದೆಯೇನೊ ? ಯಮುನಗೆ ಜ್ವರ ಬರ್ತಿಲ್ವಂತೆ. ಜ್ವರ ಬರದೇನೆ ಜ್ವರಗೆಡ್ಡೆ ಬೆಳೆದಿರಬೇಕು ಪಾಪ" ಎಂದು ನಕ್ಕರು.

ಅವರ ಮನೆಯಿಂದ ಹೊರಟು ಬರುವಾಗ ಅಗ್ನಿಕಾರ್ಯಕ್ಕಾಗಿ ಅಶ್ವತ್ಥವೃಕ್ಷದ ಒಣಗಿದ ಸಮಿಧೆಗಳನ್ನು ಕೇರಿಯ ತುದಿಯಲ್ಲಿದ್ದ ಮರದ ಬುಡದಿಂದ ಆರಿಸಿಕೊಂಡು ಬಂದೆ. ಯಮುನಕ್ಕ ನಾನು ಬರೋದನ್ನೆ ಕಾಯುತ್ತಿದ್ದರು. 'ಎಷ್ಟು ಹೊತ್ತು ? ಉಪಾಧ್ಯರು ಕಾದಿದ್ದಾರೆ ನೋಡು' ಎಂದು ಅವಸರವಾಗಿ ಬಾವಿಯಿಂದ ಎರಡು ಬಿಂದಿಗೆ ತಣ್ಣೀರನ್ನು ನನ್ನ ತಲೆಯ ಮೇಲೆ ದಡದಡ ಹೊಯ್ದು, 'ಬೇಗ ಹೋಗಿ ಜಪಕ್ಕೆ ಕೂತಕೊ' ಎಂದರು. ಒದ್ದೆ ಪಂಚೆಯನ್ನು ಹಿಂಡಿ ಅದರಿಂದ ನನ್ನ ದೊಡ್ಡ ಜುಟ್ಟನ್ನು ಒರಿಸಿ ಅದನ್ನು ಇಳಿಬಿಟ್ಟು ತುದಿಗೊಂದು ಗಂಟುಹಾಕಿ, ಒದ್ದೆಬಟ್ಟೆಯಲ್ಲೆ ನಡುಮನೆಗೆ ಓಡಿ ಬಂದು ಯಮುನಕ್ಕನಿಂದ ಮಡಿಯಲ್ಲಿ ಒಣಗಿಸಿದ ಅಂಗವಸ್ತ್ರವನ್ನು ಇಸಕೊಂಡು ಉಟ್ಟು ಇನ್ನೊಂದು ಅಂಗವಸ್ತ್ರವನ್ನು ಹೊದ್ದು ಪಂಚಪಾತ್ರೆ ಹಿಡಿದು ಹೊರಟೆ. "ಏ ಕೌಪೀನ ಹಾಕಿಕೊಂಡಿದೀಯೇನೊ" ಎಂದರು ಯಮುನಕ್ಕ ಅದನ್ನು ಮರೆತಿದ್ದೆ. ಯಮುನಕ್ಕ ನಕ್ಕು ನನ್ನ ಬೆಳ್ಳಿಯ ಉಡದಾರಕ್ಕೆ ಕೌಪೀನವನ್ನು ಅವರೇ ಸಿಕ್ಕಿಸಿ ಇನ್ನು ಹೋಗೆಂದರು.



ಮೈಲೆ – ಕಜ್ಜಿಮುಖದ ಉಪಾಧ್ಯರು 'ಎಷ್ಟು ಹೊತ್ತೆಂದು' ನನಗೆ ಗದರಿಸಿದರು. ಉಡುಪರು ಒಂದು ದಿನ ನನಗೆ ಗದರಿಸಿದ್ದಿಲ್ಲ. 'ಇನ್ನೂ ಜಪದ ಮಂತ್ರವನ್ನು ನೀನು ಕಲಿತಿಲ್ಲವಲ್ಲ' ಎಂದು ಬಯ್ಯುತ್ತ ಜಪ ಮಾಡಿಸಿದರು. ನನಗೆ ಅವರು ಬಯ್ದರೆಂದು ಜಪಮಾಡುತ್ತ ಕೂತಿದ್ದ ಶಾಸ್ತ್ರಿಗೆ ಖುಷಿಯಾಗಿ, ಅವನು ನಕ್ಕು, ಒಕ್ಕಣ್ಣಿನಲ್ಲಿ ಗಣೇಶನ ಕಡೆ ನೋಡಿದ. ಜಪ ಮುಗಿದ ಮೇಲೆ ಅಗ್ನಿಕಾರ್ಯ ಮಾಡಿದೆ. ಉಪಾಧ್ಯರು ಇದಾದ ಮೇಲೆ ದೇವಸ್ಥಾನಕ್ಕೆ ಪೂಜೆಗೆಂದು ಹೋಗುವವರು "ಗಂಜಿಯೂಟವಾದ ಮೇಲೆ ಬಂದು ಗಂಧ ತೇದು ಕೊಡಿ" ಎಂದರು.

ಸಾಲಾಗಿ ಬಳ್ಳೆ ಹಾಕಿದ್ದರು ಒಳಗೆ. ನಾವು ಮೂವರೂ ಅವಸರದಿಂದ ಓಡಿ ಕೂತುಕೊಂಡೆವು. ಯಮುನಕ್ಕ ಅಕ್ಕಿನುಚ್ಚಿನ ಗಂಜಿಯನ್ನು ಬಡಿಸಿ, ತೆಂಗಿನ ಎಣ್ಣೆಯನ್ನು ಹಾಕಿದರು. ಬಾಡಿಸಿಕೊಳ್ಳಲು ಮಿಡಿ ಉಪ್ಪಿನಕಾಯನ್ನು ಕೊಟ್ಟರು. ತೆಂಗಿನಕಾಯಿ ಮಸ್ತಾಗಿದ್ದ ದಿನ ನಮಗೆ ಕಾಯಿಹಾಲಿನ ಗಂಜಿ ಸಿಗುತ್ತಿತ್ತು.

ನಾವು ಗಂಜಿಯನ್ನು ಶಬ್ದಮಾಡುತ್ತ ಸುರಿದು ಎದ್ದೆವು. ಶಾಸ್ತ್ರಿ ಮತ್ತು ಗಣೇಶ ಹೊರಗೆ ಹೋದರು. ನಾನು ಅಡಿಗೆಮನೆಯಲ್ಲೆ ಉಳಿದೆ.

"ನಿಮಗೆಲ್ಲ ಇವತ್ತು ಸಾಹುಕಾರರ ಮನೇಲೆ ಊಟ. ನಿನ್ನೆ ಬಂದು ಹೇಳಿಕೆ ಹೇಳಿ ಹೋದರಲ್ಲ" ಎಂದರು ಯಮುನಕ್ಕ. ಹಾಗಾದರೆ ದೇವಸ್ಥಾನದಲ್ಲಿ ಪೂಜೆಯಾದ ಮೇಲೆ ಪಾಯಸದ ಊಟವೆಂದು ನನಗೆ ಗೆಲುವಾಯಿತು. ಜೊತೆಗೆ ದಕ್ಷಿಣೆ ಸಿಗುತ್ತದೆ. ಉಪನಯನಕ್ಕೆ ಮುಂಚೆ ಬರೆ ಒಂದು ಬಿಲ್ಲೆ ದಕ್ಷಿಣೆ ಸಿಗುತ್ತಿತ್ತು. ಆದರೆ ಉಪನಯನವಾದ ಮೇಲೆ ಒಂದಾಣೆ ಎಂದು ನನಗೆ ಮುಂಜಿಯಾಗಿದೆಯೆಂದು ಸಂತೋಷ. ಮರಕೋತಿಯಾಡುವ ಹಾಗಿಲ್ಲ, ನಾಯಿಗಳಿಗೆ ಕಲ್ಲು ಹೊಡೆದು ಬೆದರಿಸುವ ಹಾಗಿಲ್ಲ, ಚೆಡ್ಡಿ ಹಾಕಿಕೊಳ್ಳುವ ಹಾಗಿಲ್ಲ, ಊಟಕ್ಕೆ ಕೂತಾಗ ಮಾತಾಡುವ ಹಾಗಿಲ್ಲ – ಎಂಬುದೆಲ್ಲ ಮುಂಜಿಯಾದ ಮೇಲೆ ಬೇಜಾರಾದರೂ ಎಲೆಯ ಪಕ್ಕದಲ್ಲಿಟ್ಟುಕೊಂಡ ಪಂಚಪಾತ್ರೆಯಲ್ಲಿ ಒಂದಾಣೆ ಬೀಳುವುದೆಂದು ಸಂತೋಷ. ಯಮುನಕ್ಕನ ಹತ್ತಿರ ಒಂದು ತೂತದ ಡಬ್ಬಿಯಿತ್ತು. ಅದರಲ್ಲಿ ಬಂದ ದಕ್ಷಿಣೆಯನ್ನೆಲ್ಲಾ ಹಾಕಿ ಕೂಡಿಡುತ್ತಿದೆ. ಮನೆಗೆ ಹೋದಾಗ ಅಮ್ಮನಿಗೆ ಕೊಡು ಎಂದಿದ್ದರು ಯಮುನಕ್ಕ. ಜಿಪುಣ ಎಂದು ಹಂಗಿಸುತ್ತಿದ್ದ ಶಾಸ್ತ್ರಿ.

"ಯಾಕೆ ಹೊತ್ತು ಮಾಡಿ ಬಂದೆಯೊ ನಾಣಿ ? ಸುಮ್ಮನೆ ಆ ಉಪಾಧ್ಯರ ಹತ್ತಿರ ಬೈಸಿಕೊಂಡೆಯಲ್ಲ" ಎಂದರು ಯಮುನಕ್ಕ.

ನಾನು ಗೋದಾವರಮ್ಮನ ಮನೆಗೆ ಬಿಲ್ವಪತ್ರೆಗೆಂದು ಹೋಗಿದ್ದು ಅಲ್ಲಿ ಅವರು ಕೇಳಿದ್ದು ಹೇಳಿದೆ. ಯಮುನಕ್ಕನ ಮುಖ ಪೆಚ್ಚಾಯಿತು. 'ಇನ್ನೇನು ಕೇಳಿದರು ಹೇಳು, ಹೇಳು' ಎಂದು ಒತ್ತಾಯಮಾಡಿದರು. 'ಏನೋ ಜ್ವರ, ಜ್ವರಗಡ್ಡೆಯೆಂದು ಅವರವರೆ ಮಾತಾಡಿಕೊಂಡು ನಕ್ಕರೆಂದು' ಹೇಳಿದೆ. ಯಮುನಕ್ಕ ಸೆರಗಿನಿಂದ ಮುಖ ಮುಚ್ಚಿಕೊಂಡು ಅತ್ತರು.

"ಇನ್ನು ಯಾರಾದರೂ ಕೇಳಿದರೆ ಜ್ವರ ಬರ್ತಿದೆ ಅಂತ ಹೇಳು" ಎಂದರು.

ಯಮುನಕ್ಕ ಬಿಡುವು ಸಿಕ್ಕಾಗಲೆಲ್ಲ ಮಲಗಿಯೇ ಇರುತ್ತಿದ್ದುದರಿಂದ, ದೇವಸ್ಥಾನಕ್ಕೆ ಬರೋದು ಬಿಟ್ಟಿದ್ದರಿಂದ ನಾನು ಇರಬಹುದು ಎಂದುಕೊಂಡೆ. ಮತ್ತೆ ಮಧ್ಯಾಹ್ನಕ್ಕೆ ಸಮಯವಾದ್ದರಿಂದ ಜಪಕ್ಕೆ ಕೂತೆ. ದೇವಸ್ಥಾನದಲ್ಲಿ ಪೂಜೆಯಾದ ಮೇಲೆ ಯಮುನಕ್ಕನ ಹೊರತು ನಾವೆಲ್ಲ ಸಾಹುಕಾರರ ಮನೇಲಿ ಗಡದ್ದಾಗಿ ಊಟ ಮಾಡಿದೆವು. ಅವರ ಅಮ್ಮನ ಶ್ರಾದ್ಧವಂತೆ. ಊಟ ಮುಗಿದ ಮೇಲೆ ಉಪಾಧ್ಯಾರು ನಮ್ಮನ್ನು ಕರೆದು, "ಇವತ್ತು ನನಗೆ ಬರಲು ಆಗೋದಿಲ್ಲ ಕಣ್ರೋ. ನೀವು ನೀವೇ ಕೂತು ಚಿಂತನೆ ಮಾಡಿಕೊಳ್ಳಿ. ಏ ಶಾಸ್ತ್ರಿ ನೀನು ಈ ಮಾಣಿ ಸರಿಯಾಗಿ ಕಲ್ತಿದೆಯೋ ಇಲ್ಲವೋ ನೋಡಿಕೊ." ಎಂದು ನನ್ನನ್ನು ಶಾಸ್ತ್ರಿಗೆ ಒಪ್ಪಿಸಿ ಹೋದರು. ಊಟವಾದ ಮೇಲೆ ನಿತ್ಯ ಮಧ್ಯಾಹ್ನ ನಮಗೆ ಶ್ರೀಸೂಕ್ತ, ಪುರುಷಸೂಕ್ತ ಇತ್ಯಾದಿ ಮಂತ್ರಗಳನ್ನು ಉಡುಪರು ತಕಲಿ ಹಿಡಿದು ಜನಿವಾರ ಮಾಡುತ್ತ ಬಾಯಿಪಾಠ ಮಾಡಿಸುತ್ತಿದ್ದರು. ದೂರದಲ್ಲಿ ಯಮುನಕ್ಕ ಕೂತು ದೇವಸ್ಥಾನಕ್ಕೆಂದು ಹೂಬತ್ತಿ ಹೊಸೆಯುತ್ತಿದ್ದರು. ಉಡುಪರು ಮನೆಯಲ್ಲಿದ್ದಾಗ ಈ ಪಾಠ ಒಂದು ದಿನ ತಪ್ಪಿದ್ದಿಲ್ಲ. ಆದರೆ ಇವತ್ತು ತಪ್ಪಿತೆಂದು ನನಗೆ ಬಹಳ ಖುಷಿಯಾಯಿತು.

ಶಾಸ್ತ್ರಿ ನನ್ನನ್ನು ಕರೆದು "ಎಲ್ಲಿ ಪುರುಷಸೂಕ್ತವನ್ನು ಹೇಳು" ಎಂದ. ಅವನಿಗೆ ನನಗಿಂತ ಹೆಚ್ಚು ಪಾಠವಾಗಿತ್ತು. ಒಳ್ಳೆ ಕುಂಟೆಕೋಣನ ಹಾಗೆ ಇದ್ದಾನೆಂದು ಯಮುನಕ್ಕ ಅವನನ್ನು ಬಯ್ಯುತ್ತಿದ್ದರು. ನಾನು ಪೆಚ್ಚುಮುಖ ಹಾಕಿ ಅವನೆದುರು ನಿಂತೆ. "ಹೋಗಲಿ ನಿನ್ನ ಪ್ರವರ ಗೋತ್ರಗಳನ್ನಾದರೂ ಸರಿಯಾಗಿ ಹೇಳು" ಎಂದ. ಗಣೇಶ ನಗುತ್ತಿದ್ದ. ನಾನು, 'ಅಂಗೀರಸ, ಅಂಬರೀಷ ಯೌವನಾಶ್ವ ತ್ರಯಾರ್ಷೇಯ ಪ್ರವರಾನ್ವಿತ, ಆಂಗೀರಸ ಗೋತ್ರ, ಅಶ್ವಲಾಯನಸೂತ್ರ ಋಕ್ಶಾಖಾಧ್ಯಾಯೀ ನಾರಾಯಣಶರ್ಮನ್...' ಎನ್ನುತ್ತಿದ್ದಂತೆ – "ಎಲ್ಲಿ ನಿಂತುಕೊಂಡು ಕಿವಿಗಳನ್ನು ಮುಟ್ಟಿ ಸರಿಯಾಗಿ ಹೇಳು" ಎಂದ. ನಾನು ಪುನಃ ಅದನ್ನೆಲ್ಲ ಹೇಳಿ ನಾನು ಪುನಃ ಅದನ್ನೆಲ್ಲ ಹೇಳಿ "ಅಹಂ ಭೋ ಅಭಿವಾದಯೇ" ಎಂದೆ. "ಎಲ್ಲಿ ನಮಸ್ಕಾರವನ್ನೂ ಮಾಡು" ಎಂದ. ಸಮಸ್ಕಾರ ಮಾಡಿದೆ. "ನಾನು ಹೇಳಿದ ಹಾಗೆ ಕೇಳುತ್ತೀಯಾದರೆ ಇನ್ನು ಪಾಠವಿಲ್ಲ" ಎಂದ. ನನಗೆ ಹಿಗ್ಗಿತು. ಹೋಗು ಎಂದಾಕ್ಷಣ ಓಡಿ ಯಮುನಕ್ಕನಿದ್ದಲ್ಲಿಗೆ ಬಂದೆ.



ಯಮುನಕ್ಕ ಊಟವನ್ನು ಬಡಿಸಿಕೊಂಡು ಬಳ್ಳೆಯ ಎದುರು ತಲೆಮೇಲೆ ಕೈಹೊತ್ತು ಕೂತಿದ್ದರು. ಅನ್ನದ ಮೇಲೆ ಮಾವಿನಕಾಯಿ – ಗೊಜ್ಜನ್ನು ಸುರಿದಿದ್ದರು. ಆದರೆ ಒಂದು ತುತ್ತು ಅನ್ನವನ್ನೂ ಉಂಡ ಹಾಗೆ ಕಾಣಲಿಲ್ಲ. ನಾನು ಅಲ್ಲಿಗೆ ಹೋಗಿ ಕೂತ ಮೇಲೆ ನಾಲ್ಕು ತುತ್ತು ಅನ್ನವನ್ನೂ ಉಂಡ ಹಾಗೆ ಮಾಡಿ ಉಳಿದದ್ದನ್ನೆಲ್ಲ ಗೊಬ್ಬರದ ಗುಂಡಿಗೆ ಎಸೆದು ಬಂದರು. 'ಯಾಕೆ ಯಮುನಕ್ಕ' ಎಂದೆ. ಅವರಿಗೆ ಮಾವಿನ – ಗೊಜ್ಜು ಇಷ್ಟವೆಂದು ನನಗೆ ಗೊತ್ತಿತ್ತು. 'ಯಾಕೊ ಸೇರೋದೇ ಇಲ್ಲ' ಎಂದು ನಿಟ್ಟುಸಿರು ಬಿಟ್ಟರು. ನನಗೆ ಬಂದ ದಕ್ಷಿಣೆಯನ್ನು ಅವರ ಕೈಮೇಲೆ ಇಟ್ಟೆ. ಅದನ್ನವರು ತೂತದ ಡಬ್ಬಿಗೆ ಹಾಕುತ್ತ,

"ಶಿವಪುರಕ್ಕೆ ಹೋಗಿ ಅಂಗಡೀಂದ ಒಂದು ಸೇರು ಒಣಮೆಣಸಿನಕಾಯಿ, ಕೊತ್ತುಂಬರಿ ತರಬೇಕಲ್ಲ. ಶಾಸ್ತ್ರಿಗೆ ಹೋಗಿ ಹೇಳು" ಎಂದರು. ನಾನು ಶಾಸ್ತ್ರಿಯನ್ನು ಹುಡುಕಿಕೊಂಡು ಸಾಹುಕಾರರ ಮನೆಗೆ ಹೋದೆ. ಕೆಲಸದ ಆಳು ಮಹಡಿಯ ಮೇಲೆ ಇದ್ದಾನೆಂದು ಹೇಳಿದ.

ಮೇಲೆ ಹೋಗಿ ನೋಡಿದರೆ ಜಮಖಾನ ಹಾಸಿತ್ತು. ಸುತ್ತಲೂ ಸಾಹುಕಾರರ ಮಗ ರಂಗಣ್ಣ, ಇನ್ನಿಬ್ಬರು ಅಗ್ರಹಾರದ ಯುವಕರು ಮತ್ತು ಶಾಸ್ತ್ರಿ ಕೂತಿದ್ದರು. ಏನೋ ಒಂದಷ್ಟು ಎಲೆಗಳನ್ನು ಕೈಗಳಲ್ಲಿ ಜೋಡಿಸಿ ಮುಚ್ಚಿ ಹಿಡಕೊಂಡು ಆಡುತ್ತಿದ್ದರು, ಗಣೇಶ ನೋಡುತ್ತ ಕೂತ್ತಿದ್ದ. ನಾನು ನೋಡುತ್ತ ನಿಂತೆ. ಎಕ್ಕ, ನೈಲ, ರಾಜ, ರಾಣಿ, ಎಂದು ಜಮಖಾನದ ಮಧ್ಯಕ್ಕೆ ಎಲೆಯನ್ನು ಎಸೆಯುತ್ತ ಒಬ್ಬರ ಮುಖವನ್ನು ಇನ್ನೊಬ್ಬರು ನೋಡುತ್ತ ಆಡುವ ಆಟ ಏನೆಂದು ಕೇಳಿದ್ದಕ್ಕೆ ಗಣೇಶ ಇಸ್ಪೀಟು ಎಂದ. ಯಮುನಕ್ಕ ಹೇಳಿದ್ದನ್ನು ಶಾಸ್ತ್ರಿಗೆ ಹೇಳಿದೆ. 'ಶಿವಪೂಜೆಯ ಮಧ್ಯದಲ್ಲಿ ಕರಡಿ' ಎಂದು ರೇಗಿ ತನ್ನ ಎಲೆಯನ್ನು ಗಣೇಶನ ಕೈಯಲ್ಲಿ ಕೊಟ್ಟು ಶಾಸ್ತ್ರಿ ಎದ್ದ. "ನಾನು ಆಡುತ್ತಿದ್ದೆ ಎಂದು ಬಾಯಿ ಬಿಟ್ಟರೆ ಹಲ್ಲು ಮುರಿದುಬಿಡ್ತೇನೆ ಗೊತ್ತಾಯ್ತ?" ಎಂದು ಗದರಿಸಿ ನನ್ನ ಜೊತೆಗೆ ಹೊರಗೆ ಬಂದ.

ಶಿವಪುರಕ್ಕೆ ತನ್ನ ಜೊತೆಗೆ ಬರುವಂತೆ ನನಗೆ ಕೇಳಿದ. "ಯಮುನಕ್ಕನನ್ನು ಕೇಳಬೇಕು" ಎಂದೆ. "ಶುದ್ಧ ಹೆಣ್ಣಿಗನಾಗಿಯೇ ಇರಬೇಡ" ಎಂದು ಗದರಿಸಿದ. ನನಗೂ ಶಿವಪುರಕ್ಕೆ ಹೋಗುವ ಆಸೆಯಾದ್ದರಿಂದ ಅವನ ಜೊತೆ ಹೊರಟೆ.

ಅಗ್ರಹಾರ ದಾಟಿದ ಮೇಲೆ ಒಂದು ಕೆರೆ. ಅದನ್ನು ದಾಟಿದ ನಂತರ ದೊಡ್ಡ ಕಾಡಿನಲ್ಲಿ ಸಣ್ಣದೊಂದು ಗಾಡಿ–ದಾರಿ. ಅದರಲ್ಲಿ ನಾವಿಬ್ಬರೂ ನಡೆದು ಹೋದೆವು. ಸ್ವಲ್ಪ ದೂರ ಹೋದ ಮೇಲೆ ನೇರವಾದ ದಾರಿ ಬಿಟ್ಟು ಅಡ್ಡಕ್ಕೆ ತಿರುಗಿ ಬಾ ನನ್ನ ಜೊತೆ ಎಂದು ಕರೆದುಕೊಂಡು ಹೋದ. ಅಲ್ಲೊಂದು ದೊಡ್ಡ ಮರವಿತ್ತು. ಆ ಮರಕ್ಕೆ ಆಳೆತ್ತರದಲ್ಲೊಂದು ದೊಡ್ಡ ಪೊಟರೆಯಿತ್ತು. ಅದರ ಒಳಗೆ ಶಾಸ್ತ್ರಿ ಕೈಹಾಕಿದ್ದನ್ನು ನಾನು ಕುತೂಹಲದಿಂದ ನೋಡುತ್ತ ನಿಂತೆ, ಒಳಗಿನಿಂದ ಏನನ್ನೊ ತಗೆದು ಮುಷ್ಟಿಯಲ್ಲಿ ಹಿಡಿದುಕೊಂಡು, "ನನ್ನ ಕೈಯಲ್ಲಿ ಇರುವುದೇನು ಹೇಳು." ಎಂದ. ನನಗೆ ಗೊತ್ತಿಲ್ಲ ಎಂದ ಮೇಲೆ ಕೈಬಿಡಿಸಿ ತೋರಿಸಿದ. ಬೀಡಿ–ಕಟ್ಟು ಇತ್ತು. ಇನ್ನೊಂದು ಸಾರಿ ಕೈಹಾಕಿ ಬೆಂಕಿಪೊಟ್ಟಣವನ್ನು ತೆಗೆದ. 'ಕೂತುಕೊ' ಎಂದ. ನಾನು ಕೂತುಕೊಂಡೆ. "ಮೂಗಿನಿಂದ ಹೊಗೆ ಬಿಡೋದು ಎಷ್ಟು ಚೆನ್ನಾಗಿರತ್ತೆ ಅಂತೀಯ" ಎಂದು ಹೊಗೆ ಬಿಟ್ಟು ತೋರಿಸುತ್ತ "ನೀನೂ ಒಂದು ಸೇದು" ಎಂದು ಒತ್ತಾಯ ಮಾಡಿದ. ಬಾಯಿಬಿಟ್ಟು ನೋಡುತ್ತಿದ್ದ ನಾನು ಗಾಬರಿಯಾಗಿ ಬೇಡ ಎಂದೆ.

"ಯಮುನಕ್ಕನ ಹತ್ತಿರ ಮಾತ್ರ ಹೇಳಬೇಡ ಗೊತ್ತಾಯಿತ ? ಚಾಡಿ ಹೇಳಬಾರದು" ಎಂದ.

ನಾನು 'ಆಗಲಿ' ಎಂದೆ.

"ನೀನು ಹೇಳಿದರೂ ನಾನು ಹೆದರೋದಿಲ್ಲ ಗೊತ್ತಾಯಿತ ? ನನಗೆ ಗೊತ್ತಿಲ್ಲವ ಯಮುನಕ್ಕನ ವಿಷಯ. ಇನ್ನೊಂದು ಸಾರಿ ನಂಗೆಲ್ಲಾದರೂ ಬಯ್ಯಲಿ – ನಾನು ಎಲ್ಲಾನೂ ಬಯಲಿಗೆಳೆದು ಬಿಡ್ತೇನೆ. ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿಯತ್ತತಂತೆ."

ಶಾಸ್ತ್ರೀಯ ಮಾತು ನನಗೆ ಅರ್ಥವಾಗಲಿಲ್ಲ. ಆದರೆ ಭಯವಾಯಿತು. ಯಮುನಕ್ಕನಿಗೆ ಹೇಳದೆ ಬರಬಾರದಿತ್ತು ಎನಿಸಿತು. ಗೋಪಾಲ ಕಮ್ತಿಯ ಅಂಗಡಿಯಿಂದ ಸಾಮಾನು ಕೊಂಡು ಶಿವಪುರದ ಗುಡ್ಡ ವಿಳಿಯುತ್ತಿದ್ದಾಗ ಶಾಸ್ತ್ರಿ,

"ಹೋಗುವಾಗ ಬೇರೆ ದಾರಿಯಲ್ಲಿ ಹೋಗುವ, ಹೊಳೆಯ ದಂಡೆಯ ಮೇಲಾಗಿ" ಎಂದ.

ನನಗೆ ಬೇಡವೆನ್ನಲು ಭಯ. ಶಾಸ್ತ್ರಿಯ ಒಕ್ಕಣ್ಣನ್ನು ನೋಡಿದರೆ, ಅವನು ಮಡುವೆಗಳನ್ನು ಚೂಟಿಕೊಳ್ಳುತ್ತ ನನಗೆ ಹಾಸ್ಯಮಾಡುವುದನ್ನು ನೆನೆದರೆ ಅವನು ಹಾಕಿದ ಗೆರೆಯನ್ನು ದಾಟಿ ಹೋಗು ಧೈರ್ಯವಾಗುತ್ತಿರಲಿಲ್ಲ. ಬರುವಾಗ



ದಾರಿಯಲ್ಲಿ,

"ಈಗ ನಿನಗೊಂದು ತಮಾಷೆ ತೋರಿಸುತ್ತೇನೆ. ನೋಡಿದ ಮೇಲೆ ನಿನಗೇ ಗೊತ್ತಾಗುತ್ತದೆ, ಎಲ್ಲ ವಿಷಯ. ಹೇಳಿ ನಾನೇಕೆ ಕೆಟ್ಟವನಾಗಬೇಕು?" ಎಂದ.

ನಾವು ಸುಮಾರು ದೂರ ನಡೆದು ಒಂದು ಹಾಳು ಬಿದ್ದ ಅಗ್ರಹಾರದ ಹತ್ತಿರ ಬಂದೆವು. ಅದು ಹೊಳೆಯ ದಂಡೆಯ ಮೇಲಿತ್ತು. ಹೊದಲ ಎಂದು ಅದರ ಹೆಸರು. ಹಿಂದೊಂದು ದಿನ ನಾನು ಅಲ್ಲಿಗೆ ಯಮುನಕ್ಕನ ಜೊತೆ ಕಟ್ಟಿಗೆ ಆರಿಸಿಕೊಂಡು ಬರಲು ಹೋಗಿದ್ದೆ. ಮನೆಗಳೆಲ್ಲ ಬಿದ್ದು ಅಲ್ಲಿ ಮೋಟುಗೋಡೆಗಳು, ತಳಪಾಯಗಳು ಮಾತ್ರ ಉಳಿದಿದ್ದವು. ಹಳೆಯ ಕಾಲದ ಒಂದು ಜೈನರ ಬಸ್ತಿ, ಮತ್ತು ದೇವರಿಲ್ಲದ ಒಂದು ಗುಡಿಯ ತುಂಬ ಬಾವಲಿಗಳು ಓಡಾಡುತ್ತಿದ್ದುವು. "ಹಿಂದೊಂದು ಕಾಲದಲ್ಲಿ ಇಲ್ಲಿ ಜನ ವಾಸವಾಗಿದ್ದರು. ಈಗ ಹಾಳುಬಿದ್ದಿದೆ" ಎಂದು ಯಮುನಕ್ಕ ಹೇಳಿದ್ದರು. ಅಲ್ಲಿ ದೆವ್ವವಿರಬಹುದೆಂದು ನನಗೆ ಭಯ. ಅಯ್ಯೊ ಪುಕ್ಕ ಎಂದು ಶಾಸ್ತ್ರಿ ನಕ್ಕು ಹಳವುಗಳ ಬೆಳೆದಲ್ಲೆಲ್ಲ ಕಳ್ಳಹೆಜ್ಜೆಯಿಡುತ್ತ ನನ್ನನ್ನು ಕರೆದುಕೊಂಡು ಹೋಗಿ ಒಂದು ಮೋಟುಗೋಡೆಯ ಹಿಂದಕ್ಕೆ ನನ್ನನ್ನು ನಿಲ್ಲಿಸಿ, ಈ ಬಿರುಕಿನಿಂದ ನೀನು ನೋಡು ಎಂದು, ತಾನು ಇನ್ನೊಂದು ಕಂಡಿಯ ಹತ್ತಿರ ನಿಂತ.

ಸ್ವಲ್ಪ ಹೊತ್ತಾದ ಮೇಲೆ ದೂರದಿಂದೊಬ್ಬ ಮನುಷ್ಯ ಬರುವುದು ಕಂಡಾಕ್ಷಣ ನನಗೆ ಹೆದರಿಕೆಯಾಗಿ ಹೋಗೋಣ ಹೋಗೋಣ ಎಂದೆ. ಶಾಸ್ತ್ರಿ, "ನಿನಗೂ ತಿಳಿಯಬೇಕೊ ಇಲ್ಲವೊ ? ಹೀಗೆ ನೀನು ಗುಗ್ಗಾಗಿಯೇ ಇರುತ್ತೀಯ? ಶಕಮುನಿಯ ಅಪರಾವತಾರ ನೀನು" ಎಂದು ಗದರಿಸಿದ. ನಾನು ಹೆದರಿ ನೋಡುತ್ತ ಕೂತೆ. ಕಚ್ಚೆ ಹಾಕಿ ಪಂಚೆಯುಟ್ಟು, ಅಂಗಿ ಹಾಕಿ, ಕ್ರಾಪು ಬಿಡಿಸಿ ಬರುತ್ತಿದ್ದ ಮನುಷ್ಯ ಯಾರೆಂದು ತಿಳಿದು ನನ್ನ ಭಯ ಕಡಿಮೆಯಾಯಿತು. ಅವನನ್ನು ನಾನು ನಿತ್ಯ ನೋಡುತ್ತಿದ್ದೆ. ಉಡುಪರ ಮನೆ ಪಕ್ಕದ ಶಾಲೆಯಲ್ಲಿ ಅವನು ಮೇಷ್ಟರು. ತುಮಕೂರಿಂದ ಬಂದು ಶಿವಪುರದಲ್ಲಿದ್ದಾನಂತೆ. ನಿತ್ಯ ಸೈಕಲ್ಲಿನ ಮೇಲೆ ಬಂದು ಹೋಗ್ತಾನೆ. ರಾಮನವಮಿಯಲ್ಲಿ ದೇವಸ್ಥಾನದಲ್ಲಿ ಹಾರ್ಮೋನಿಯಂ ಬಾರಿಸಿದ್ದ. ನೋಡಲು ತೆಳ್ಳಗೆ ಉದ್ದಗೆ ಪೇಟೆಯವನಂತೆ ಇದ್ದ.

ನಾನು ಹೋಗೋಣ ಎಂದೆ. ಶಾಸ್ತ್ರಿ ಇನ್ನು ಸ್ವಲ್ಪ ಇರು ಎಂದ. ಬಿರುಕಿನಂದ ನೋಡುತ್ತಿದ್ದ ನನಗೆ ಒಂದು ಹಾವು ಕಂಡಿತು. ಹೆದರಿ 'ಹಾವು ಅಲ್ಲಿ' ಎಂದೆ. ಸ್ವಲ್ಪ ಸುಮ್ಮನಿರು ಎಂದು ಶಾಸ್ತ್ರಿ ಗದರಿಸಿದ. ಸ್ವಲ್ಪ ಹೊತ್ತಾದ ಮೇಲೆ ಇನ್ನೊಬ್ಬ

ಅಲ್ಲಿಗೆ ದೊಡ್ಡ ಮೀಸೆ ಬಿಟ್ಟವನು ಬಂದ. ಅವನು ಯಾರೆಂದು ನನಗೆ ಗೊತ್ತಿರಲಿಲ್ಲ. ಅವರಿಬ್ಬರೂ ಮಾತನಾಡುತ್ತ ನಿಂತರು.

ಹಾವು ಕಂಡಿದ್ದರಿಂದ ನನಗೆ ಆದಷ್ಟು ಬೇಗ ಹೋಗಬೇಕೆಂದು ಪುಕ್ಕಲು ಹತ್ತಿಕೊಂಡಿತ್ತು. ಶಾಸ್ತ್ರಿಗೂ ಕಂಡಿಯಿಂದ ನೋಡಿ ಬೇಜಾರು ಬಂದಿರಬೇಕು. ಹೋಗೋಣ ನಡಿ, ನೀನೊಬ್ಬ ಶುದ್ಧ ಪುಕ್ಕು ಎಂದು ನನ್ನನ್ನು ಕಳ್ಳಹೆಜ್ಜೆ ಇಟ್ಟು ಬಗ್ಗಿ ನಡೆಯುತ್ತ ಗಾಡಿ–ದಾರಿಗೆ ಕರೆದುಕೊಂಡು ಬಂದ. ಅಲ್ಲಿಂದ ನೇರಾಗಿ ಮನೆಗೆ ಬಂದಾಗ ಸಂಜೆಯಾಗಿತ್ತು. ಬೇಜಾರಿನಿಂದ ಕೂತಿದ್ದ ಯಮುನಕ್ಕನಿಗೆ ಅಂಗಡಿಗೆ ಹೋದ ವಿಷಯ ಮಾತ್ರ ಹೆದರಿ ಹೆದರಿ ಹೇಳಿದೆ. ಹಾಳು ಬಿದ್ದ ಅಗ್ರಹಾರಕ್ಕೆ ಹೋಗಿ ಕಂಡಿಯಲ್ಲಿ ಇಣುಕಿದ್ದು, ಅಲ್ಲೊಂದು ಹಾವು ಕಂಡದ್ದು ಹೇಳಲು ಧೈರ್ಯವಾಗಲಿಲ್ಲ. ನಾವು ಸ್ನಾನ ಮಾಡಿ ಸಂಧ್ಯಾವಂದನೆಗೆ ಕೂತೆವು. ಅದಾದ ಮೇಲೆ ಊಟ ಮಾಡಿದೆವು. ಯಮುನಕ್ಕ ಅರಳನ್ನು ಮಜ್ಜಿಗೆಯಲ್ಲಿ ಕಲಿಸಿ ತಿಂದರು.

ರಾತ್ರೆ ನಾನು, ಶಾಸ್ತ್ರಿ, ಗಣೇಶ ಚಾವಡಿಯಲ್ಲಿ ಹಾಸಿಗೆ ಹಾಸಿಕೊಂಡೆವು. ಯಮುನಕ್ಕ ನಡುಮನೆಯಲ್ಲಿ ಮಲಗಿದರು. ಅವತ್ತು ರಾತ್ರೆ ನಮ್ಮ ಜೊತೆ ಚಾವಡಿಯಲ್ಲಿ ಮಲಗಲು ಉಡುಪರು ಇಲ್ಲದ್ದರಿಂದ, ಸಾಯಂಕಾಲ ನಾನು ಹಾಳುಬಿದ್ದ ಅಗ್ರಹಾರದಲ್ಲಿ ಹಾವನ್ನು ನೋಡಿ ಬಂದಿದ್ದರಿಂದ ಭಯವಾಯಿತು. ನಡುಮನೆಯಲ್ಲಿ ಯಮುನಕ್ಕನ ಜೊತೆ ಮಲಗುತ್ತೇನೆ ಎಂದರೆ ಶುದ್ಧ ಹೆಣ್ಣಿಗ, ಪುಕ್ಕ ಎಂದು ಶಾಸ್ತ್ರಿ ಗೇಲಿ ಮಾಡಿದ. ಆದ್ದರಿಂದ ನಾನು ಅಲ್ಲೇ ಮಲಗಿದೆ. ಭಯವಾಗಿದ್ದರಿಂದ ನಿದ್ದೆ ಹತ್ತಲು ತುಂಬ ತಡವಾಯಿತು. ಅಪ್ಪಯ್ಯ ಅಮ್ಮನ ನೆನಪಾಯಿತು. ನಾನು ಯಾರ ಮನೆಯಲ್ಲೊ ಯಾರ ಸಂಗಡವೊ ಇದ್ದೇನೆಂದು ಅಳು ಬಂದಿತು. ನನ್ನ ಪಕ್ಕದಲ್ಲಿ ಮಲಗಿದ್ದ ಶಾಸ್ತ್ರಿ ಮೆತ್ತಗೆ ನನ್ನ ಮೇಲೆ ಕೈಹಾಕಿ ಹತ್ತಿರಕ್ಕೆ ಸರಿದ. ಅವನ ಬಾಯಿಂದ ಬೀಡಿಯ ವಾಸನೆ ಬರುತ್ತಿದ್ದುದರಿಂದ ನನಗೆ ಅಸಹ್ಯವಾಯಿತು. ನನ್ನ ಪಂಚೆಯ ಗಂಟನ್ನು ಬಿಚ್ಚಿ ಕೌಪೀನಕ್ಕೆ ಕೈ ಹಾಕಿದ. ನಾನು ದಡಕ್ಕನೆ ಎದ್ದು ಸೀದ ನಡುಮನೆಗೆ ಹೋಗಿ ಯಮುನಕ್ಕನ ಜೊತೆ ಮಲಗಿದೆ. ಯಮುನಕ್ಕನಿಗೆ ನಿದ್ದೆ ಹತ್ತಿರಲಿಲ್ಲ, 'ಭಯವಾಗುತ್ತೆ' ಎಂದೆ. 'ಬಾ ಮಲಗಿಕೊ' ಎಂದು ತಮ್ಮ ಸೀರೆಯನ್ನು ನನಗೆ ಹೊದಿಸಿದರು.

ಇನ್ನು ಸ್ವಲ್ಪ ಹೊತ್ತಾಗಿ ನನಗೆ ಕಣ್ಣು ಭಾರವಾಗುವ ಹೊತ್ತಿಗೆ ಮನೆಯ ಸುತ್ತ ಯಾರೋ ನಡೆಯುವ ಶಬ್ದವಾಯಿತು. ನಾನು ಬೆಚ್ಚಿ ಎಚ್ಚರವಾದೆ. ದೆವ್ವವಿರಬೇಕೆಂದು ನಡುಗಿದೆ. ಯಮುನಕ್ಕ ನನ್ನನ್ನು ತಬ್ಬಿಕೊಂಡರು. ಆಮೇಲೆ



ಹಿತ್ತಲ ಬಾಗಿಲಿನ ಹತ್ತಿರ ಯಾರೋ ಬಂದು ನಿಂತ ಶಬ್ದವಾಯಿತು. ಬಾಗಿಲನ್ನು ತಟ್ಟಿದ ಹಾಗಾಯಿತು. ನಾನು ಯಮುನಕ್ಕನನ್ನು ಗಟ್ಟಿಯಾಗಿ ಹಿಡಿದುಕೊಂಡೆ. 'ಬಾಗಿಲು ಬಾಗಿಲು' ಎಂದು ಮೆತ್ತಗೆ ಕೂಗಿದ ಹಾಗಾಯಿತು. ಕತ್ತಲಿನಲ್ಲಿ ಹೀಗೆ ಕಳ್ಳಹೆಜ್ಜೆಯಿಟ್ಟು ಮನೆಯನ್ನು ಅಪ್ರದಕ್ಷಿಣೆ ಸುತ್ತಿ ಬಾಗಿಲು ತಟ್ಟುವುದು ಬ್ರಹ್ಮರಾಕ್ಷಸನೆ ಎಂದು ನನಗೆ ಗಾಬರಿಯಾಯಿತು. ಯಮುನಕ್ಕ ಎದ್ದರು. ನಾನು ಅವರ ಕೈಹಿಡಿದು ಹೋಗಬೇಡಿ ಎಂದೆ. ಅವರು ಎದ್ದು ಹೊರಟರು, ನಾನೂ ಅವರ ಜೊತೆ ಎದ್ದೆ. "ಬರಬೇಡ, ದೆವ್ವವಿರಬಹುದು. ಅದು ಒಳಗೆ ಬರದಂತೆ ಬಾಗಿಲಲ್ಲಿ ಪೊರಕೆಯಿಟ್ಟು ಬರುತ್ತೇನೆ" ಎಂದು ನನ್ನನ್ನು ನಡುಮನೆಯಲ್ಲೆ ಬಿಟ್ಟು ಹೋದರು. ನಾನು ಅಳುತ್ತ ಅವರಿಗಾಗಿ ಕಾದೆ. ಯಮುನಕ್ಕ ಹಿತ್ತಲಬಾಗಿಲಿಗೆ ಹೋದವರು ಬಾಗಿಲನ್ನು ತೆರೆಯಲಿಲ್ಲ. ತೆರದಿದ್ದರೆ ಡರ್ರೋ ಎಂದು ಕರ್ಕಶ ಶಬ್ಧವಾಗುತ್ತಿತ್ತು. "ಹೋಗಿ, ಹೋಗಿ, ಇಲ್ಲಿಗೆ ಬರಬೇಡಿ" ಎಂದು ಅವರು ಹೇಳಿದ್ದು ಮಾತ್ರ ಕೇಳಿಸಿತು. ಹಿಂದಕ್ಕೆ ಬಂದ ಯಮುನಕ್ಕನನ್ನು ಕಂಡು ನನಗೆ ಇನ್ನಷ್ಟು ಭಯವಾಯಿತು, ಅವರು ಬ್ರಹ್ಮರಾಕ್ಷಸನ ಜೊತೆ ಮಾತಾಡಿ ಬಂದಿದ್ದಾರೆಂದು. ನನ್ನನ್ನು ಅವರು ಎಳೆದು ಒತ್ತಾಯಮಾಡಿ ಮಲಗಿಸಿಕೊಂಡರು. ಬಹಳ ಹೊತ್ತಿನ ಮೇಲೆ ನನಗೆ ನಿದ್ದೆ ಬಂತು.

* * * * *

ಸೂರ್ಯ ಹುಟ್ಟುವುದಕ್ಕೆ ಮೊದಲೇ ಎದ್ದ ನನಗೆ ಒಬ್ಬನೇ ತಂಬಿಗೆ ತೆಗೆದುಕೊಂಡು ಹೋಗಲು ಭಯವಾದ್ದರಿಂದ ಯಮುನಕ್ಕನನ್ನೂ ಜೊತೆಗೆ ಕರೆದುಕೊಂಡು ಹೋಗಿ ನಿಲ್ಲಿಸಿಕೊಂಡೆ. ಇದು ಶಾಸ್ತ್ರಿಗೆ ಗೊತ್ತಾದರೆ ಅವನು ನನ್ನನ್ನು ಹಂಗಿಸಿ ಹಿಂಸಿಸುತ್ತಾನೆಂದು ಮತ್ತಷ್ಟು ಭಯವಾಯಿತು. ನಾನು ಒಬ್ಬನೇ ಬುಟ್ಟಿ ಹಿಡಿದು ಪತ್ರೆ ತುಳಸಿ ಹೂವು ತರಲು ಹೊರಟಾಗ ಶಾಸ್ತ್ರಿ 'ನಾನೂ ನಿನ್ನ ಜೊತೆ ಬರ್ತೇನೆ' ಎಂದ. ಬೇಡವೆನ್ನಲು ನನಗೆ ಭಯ. ಅಲ್ಲದೆ ರಾತ್ರೆ ಬ್ರಹ್ಮರಾಕ್ಷಸ ಮನೆಯ ಸುತ್ತ ತಿರುಗಾಡಿದ್ದರಿಂದ, ಹಾವನ್ನು ಕಂಡದ್ದರಿಂದ ಒಂಟಿಯಾಗಿ ಹೋಗಲು ಭಯ. ದಾರಿಯಲ್ಲಿ ಶಾಸ್ತ್ರಿ,

"ಬ್ರಹ್ಮರಾಕ್ಷಸ ಯಮುನಕ್ಕನಿಗೆ ಏನು ಹೇಳಿತು ?"

ಎಂದು ಕೇಳಿದ. ನನಗೆ ಗೊತ್ತಿಲ್ಲ ಎಂದೆ.

"ಯಮುನಕ್ಕ ಎದ್ದು ಹೋದರು. ಏನೂ ಹೇಳಲಿಲ್ಲವ ?"

"ಬರಬೇಡ, ಹೋಗು ಹೋಗು ಎಂದರು. ಬಾಗಿಲಲ್ಲಿ ಪೊರಕೆಯಿಟ್ಟು ಬಂದರು."

"ಆ ಬ್ರಹ್ಮರಾಕ್ಷಸ ಯಾರು ಗೊತ್ತ ? ನಿನಗಿನ್ನೂ ತಿಳುವಳಿಕೆಯಿಲ್ಲ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತಂತೆ. ಹೋಗಲಿ ಬಿಡು. ನಿಂಗೇ ಒಂದು ದಿನ ಗೊತ್ತಾಗುತ್ತೆ. ಯಮುನಕ್ಕನಿಗೆ ನನ್ನನ್ನ ಕಂಡರೆ ಆಗಲ್ಲ ಅಲ್ಲವ? ನಿಂಗಾದರೆ ಗುಟ್ಟಾಗಿ ರವೆವುಂಡೆ, ಕೋಡುಬಳೆ ಕೊಡ್ತಾರೆ, ಅಲ್ಲವೇನೊ?" ಎಂದ.

ನನಗೆ ಏನು ಹೇಳಬೇಕೆಂದು ಗೊತ್ತಾಗದೆ ಸುಮ್ಮನಾದೆ. ಬಿಲ್ವಪತ್ರೆಗಾಗಿ ನಾವು ಗೋದಾವರಮ್ಮನ ಮನೆಗೆ ಹೋದಾಗ ಅವರು,

'ಯಮುನ ಹೇಗಿದ್ದಾಳೆ?' ಎಂದು ಕೇಳಿದರು.

ನಾನು 'ಯಮುನಕ್ಕನಿಗೆ ಜ್ವರ ಬರ್ತಿರೋದು ನಿಜ' ಎಂದೆ.

"ಜ್ವರಾನೂ ಇಲ್ಲ ಗೀರಾನೂ ಇಲ್ಲ. ನಿನ್ನೆ ರಾತ್ರೆ ಮನೇಸುತ್ತ ಒಂದು ಬ್ರಹ್ಮರಾಕ್ಷಸ ಓಡಾಡಿತು, ಹಿತ್ತಲ ಕಡೆ ಬಂದು ಬಾಗಿಲು ತಟ್ಟಿತು."

ಎಂದು ಶಾಸ್ತ್ರಿ ಒಕ್ಕಣ್ಣಿನಿಂದ ನಗುತ್ತ ಗೋದಾವರಮ್ಮನಿಗೆ ಹೇಳಿದ. ಗೋದಾವರಮ್ಮ ಎಲ್ಲ ವಿಷಯಾನೂ ಕೇಳಿ ಕೇಳಿ ತಿಳಿದುಕೊಂಡರು.

ಬಿಲ್ವಪತ್ರೆ ಕೊಯ್ದಾದ ಮೇಲೆ ಶಾಸ್ತ್ರಿ ನನಗೆ "ಏ ಭೃಗು – ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗಿ ಒಂದಷ್ಟು ಸಂಪಗೆಹೂ ಕೊಯ್ದುಕೊಂಡು ಬರೋಣ" ಎಂದ. ನಾನು ಒಂದು ಗದ್ದೆ ದಾಟಿ ಅಲ್ಲಿಗೆ ಹೋಗಿ ಹೂವು ಕೊಯ್ದೆವು. ಶಾಸ್ತ್ರಿ ನನಗೆ,

"ಸುಬ್ರಹ್ಮಣ್ಯದೇವರನ್ನ ಮೈಲಿಗೇಲಿ ಮುಟ್ಟುತ್ತೀಯೇನೊ? ನಿನಗೆ ಧೈರ್ಯವಿದೆಯ?"

ಎಂದು ಕೇಳಿದ. ಸುಬ್ರಹ್ಮಣ್ಯದೇವರಿಗೆ ಮೈಲಿಗೆಯಾದರೆ ಹಾವು ಕಾಡುತ್ತೆ ಅಂತಾರೆ, ನನಗೆ ಅದರ ಸುದ್ದಿ ಬೇಡ ಎಂತ ಅಂದಿದ್ದಕ್ಕೆ ಶಾಸ್ತ್ರಿ,

"ಅದಕ್ಕೇ ಹೇಳೋದು ನೀನು ಅಜ್ಜಿಗೊಡ್ಡು, ಹೆಣ್ಣಿಗ, ಭೃಗು ಅಂತ. ಎಂಥಾ ಪುಕ್ಕನಯ್ಯ ನೀನು ? ಮನೆ ಸುತ್ತ ಓಡಾಡಿದ್ದು ಬ್ರಹ್ಮರಾಕ್ಷಸ ಅಂತ ಹೇಳಿದ್ರೆ ನಂಬಿಕೊಂಡುಬಿಟ್ಟಿ ಅಲ್ಲವ ? ಇಗೋ ನೋಡು ನಾನು ಮುಟ್ಟಿ ಬರ್ತೇನೆ."

ಎಂದು ಸೀದ ಗರ್ಭಗುಡಿಯ ಒಳಗೆ ಹೋಗಿ ದೇವರನ್ನು ಮುಟ್ಟಿದ. ನನಗೆ ನಾಚಿಕೆ, ಭಯ, ಆಯಿತು. 'ನೀನೂ ಮುಟ್ಟು' ಎಂದು ನನ್ನನ್ನು ಎಳೆದುಕೊಂಡು ಹೋಗಿ ದೇವರನ್ನು ಮುಟ್ಟಿಸಿದ. ಆಮೇಲೆ ನಗುತ್ತ "ನನ್ನ ಕೈಯಲ್ಲಿ ಗರುಡಮಚ್ಚೆಯಿದೆ. ಅದಕ್ಕೇ ಧೈರ್ಯವಾಗಿ ನಾನು ಮುಟ್ಟಿದೆ. ನಿನ್ನನ್ನ ಖಂಡಿತ ಹಾವು ಬಂದು



ಕಚ್ಚತ್ತೆ" ಎಂದು ಕುಣಿದ. ನಾನು ಗಟ್ಟಿಯಾಗಿ ಅಳತೊಡಗಿದೆ. "ನಾನು ಹೇಳಿದ ಹಾಗೆ ಕೇಳಿದ್ರೆ ಏನೂ ಆಗಲ್ಲ. ನಿನಗೆ ಹಾವು ಕಚ್ಚದಂತೆ ನೋಡಿಕೋತೇನೆ. ಯಮುನಕ್ಕನಿಗೆ ಮಾತ್ರ ನಾನು ಹೇಳಿದ್ದೇನನ್ನೂ ಹೇಳಬಾರ್ದು. ಹೇಳಿದ್ರೆ ನೀನು ಹೋಗಿ ದೇವರನ್ನ ಮೈಲಿಗೇಲಿ ಮುಟ್ಟಿದೀಂತ ಹೇಳಿಬಿಡ್ತೇನೆ" ಎಂದ. ನಾನು ಕಣ್ಣೊರಸಿಕೊಳ್ಳುತ್ತ ಮನೆಗೆ ಬಂದೆ. ಯಮುನಕ್ಕ ಏನಾಯಿತೆಂದು ಕೇಳಿದರೆ ನಾನು ಹೆದರಿ ಸುಮ್ಮನಿದ್ದೆ. ಅವರು ಶಾಸ್ತ್ರಿಯನ್ನು ಕರೆದು "ತಿಂದ ಅನ್ನ ನಿನ್ನ ನೆತ್ತಿಗೇರಿತು ಅಲ್ಲವ ?" ಎಂದು ಬೈದರು. ನಾನು ಅವತ್ತೆಲ್ಲ ಶಾಸ್ತ್ರಿಯ ಜೊತೆಯೇ ಸೇರಲಿಲ್ಲ. ಕೂತಲ್ಲಿ ನಿಂತಲ್ಲಿ ಹಾವು ಬಂದೀತೆಂದು ಹೆದರಿಕೆಯಾಗುತ್ತಿತ್ತು. ಯಾವಾಗಲೂ ಗಾಯತ್ರೀ ಜಪ ಮಾಡುತ್ತ ಓಡಾಡಿದೆ. ರಾತ್ರೆ ಯಮುನಕ್ಕನ ಜೊತೆ ಮಲಗಿದೆ. ಬ್ರಹ್ಮರಾಕ್ಷಸ ಮನೇ ಸುತ್ತ ಓಡಾಡಲಿಲ್ಲ.

ಅವತ್ತಿನಿಂದ ನಾನು ಶಾಸ್ತ್ರಿ ಜೊತೆ ಸೇರುತ್ತಿರಲಿಲ್ಲ. ನಾನು ಒಂಟಿಯಾಗಿ ಸಿಕ್ಕಾಗಲೆಲ್ಲ ಅವನು ಒಕ್ಕಣ್ಣಿನಿಂದ ಚೂಪಗೆ ನನ್ನ ಕಡೆ ನೋಡಿ 'ಹಾವು ಬಂದು ನಿನ್ನನ್ನ ಕಚ್ಚತ್ತೆ, ಯಮುನಕ್ಕನಿಗೆ ಹೇಳಂತೆ' ಎಂದು ಗದರಿಸುತ್ತಿದ್ದ. ನಾನು ಮಾತೇ ಆಡುತ್ತಿರಲಿಲ್ಲ. ಯಮುನಕ್ಕ ಎಲ್ಲಿ ಹೋದರೆ ಅಲ್ಲಿ ಅವರ ಜೊತೆಗಿರಲು ಪ್ರಾರಂಭಿಸಿದೆ. ಶಾಸ್ತ್ರಿ ಮತ್ತು ಗಣೇಶ ಯಾವಾಗಲೂ ಸಾಹುಕಾರರ ಮಗ ರಂಗಣ್ಣನ ಜೊತೆ ಗುಟ್ಟಾಗಿ ಮಾತಾಡುತ್ತ ಇರುತ್ತಿದ್ದರು.

ಒಂದು ದಿನ ಯಮುನಕ್ಕ 'ಕಟ್ಟಿಗೆ ತರಬೇಕು ಬಾ' ಎಂದು ಹಾಳು ಅಗ್ರಹಾರದ ದಾರಿಯಲ್ಲಿ ಕರೆದುಕೊಂಡು ಹೋದರು. ಅರ್ಧ ದೂರ ಹೋಗುವುದರೊಳಗೆ ನನಗೆ ಭಯವಾಯಿತು. ಕೂತುಬಿಟ್ಟ ಅಳತೊಡಗಿದೆ. 'ಅಲ್ಲಿ ಹಾವಿದೆ ನಾನು ಬರೋದಿಲ್ಲ' ಎಂದು ಚಂಡಿ ಹಿಡಿದೆ. ಯಮುನಕ್ಕ ಗದರಿಸಿದರು, ಅಂಗಲಾಚಿದರು – ನಾನು ಕೇಳಲಿಲ್ಲ, ಗೊಣಗುತ್ತ ನನ್ನ ಜೊತೆ ಮನೆಗೆ ಹಿಂದಕ್ಕೆ ಬಂದರು.

ಇನ್ನೊಂದು ದಿನ ನಾನು ಒಬ್ಬನೇ ಬಿಲ್ವಪತ್ರೆಗೆಂದು ಗೋದಾವರಮ್ಮನ ಮನೆಗೆ ಬೆಳಗ್ಗೆ ಹೋದೆ. ಗೋದಾವರಮ್ಮ ನನ್ನನ್ನು ನೋಡಿ ಬಾ ಒಳಗೆ ಎಂದು ಬೆನ್ನಿನ ಮೇಲೆ ಕೈಹಾಕಿ ಒಳಗೆ ಕರೆದುಕೊಂಡು ಹೋದರು. ಅಡಿಗೆಮನೆಯಲ್ಲಿ ಕೂರಿಸಿಕೊಂಡು ಕಾಫಿ ಕೊಟ್ಟರು. ನಾನು ಬೇಡವೆಂದೆ. ಒಂದೊಂದು ಸಾರಿ ಕುಡೀಬಹುದು ಕಣೊ ಎಂದರು. ಕಾಫಿಯನ್ನು ನೋಡಿ ತುಂಬ ಆಸೆಯಾಯಿತು, ಕುಡಿಯಬೇಕು ಎನ್ನಿಸಿತು. ಕುಡಿಯುತ್ತ ಕೂತೆ. ಗೋದಾವರಮ್ಮ ನಗುತ್ತ,

"ನೀನು ಪರವಾಗಿಲ್ಲ ಕಣೋ, ನೇಮನಿಷ್ಠೆಯಿರೋ ಹುಡುಗ. ಬೇರೆ ಹುಡುಗರಂತಲ್ಲ. ಈಗಿನ ಕಾಲದವು ಹೇಳಿದ ಮಾತು ಕೇಳುತ್ತಾವೆಯೆ ? ಜಪ ಜಾರಿ ಹೋಯ್ತು. ಅಗ್ನಿಕಾರ್ಯ ಅಟ್ಟಕ್ಕೆ ಹತ್ತಿತು ಅಂತ ಗಾದೇನೇ ಇದೆಯಲ್ಲ. ಈಗ ಸಾಹುಕಾರರ ಮಗ ರಂಗಣ್ಣನೇ ನೋಡು ಬೇಕಾದರೆ. ಒಳ್ಳೆ ಬೀದಿ ಬಸವ. ಕುಂಟೆಕೋಣನಷ್ಟು ವಯಸ್ಸಾಗಿ ಮೀಸೆ ಬಂದಿದೆ"

ಎಂದು ನನ್ನನ್ನು ಹೊಗಳಿದರು. ನಾನು ಹೊರಡಲೆಂದು ಎದ್ದಾಗ,

"ಯಾಕೋ ಯಮುನ ದೇವಸ್ಥಾನಕ್ಕೇ ಬರ್ತಿಲ್ಲ ? ಮಲಗಿದಲ್ಲಿಂದ ಏಳೋದೇ ಇಲ್ಲವೇ?"

ಎಂದರು. ನಾನು ಇಲ್ಲವೆಂದೆ.

"ನಿಮಗೆಲ್ಲ ಅಡಿಗೆ ಮಾಡಿ ಹಾಕೋರು ಯಾರು ಪಾಪ. ಉಡುಪರೂ ಮನೇಲಿಲ್ಲ. ಆ ಬ್ರಹ್ಮರಾಕ್ಷಸ ಈಗಲೂ ಮನೇ ಸುತ್ತ ಓಡಾಡುತ್ತ ?"

ಎಂದರು. ಅವತ್ತಿನಿಂದ ಅದು ಕಾಣಿಸಿಕೊಂಡಿಲ್ಲ ಎಂದೆ.

"ಏನೋ ಯಮುನಕ್ಕನಿಗೆ ವಾಂತಿ–ಗೀಂತಿ ಆಗುತ್ತ ? ಜ್ವರಗೆಡ್ಡೆಯಾದರೆ ತುಂಬ ವಾಂತಿಯಾಗತ್ತೆ ಅಂತಾರೆ. ಔಷಧಿ ತಗೊಳ್ಳೊಕ್ಕೆ ನಾನು ಅವಳಿಗೆ ಮೊನ್ನೆ ಹೇಳಿದೆ. ಏನಾದರೂ ತಗೋತಿದಾಳ ?"

ಎಂದು ಕೇಳಿದರು. ನನಗೆ ಏನು ಹೇಳಬೇಕೊ ತಿಳಿಯದೆ ಹೊತ್ತಾಯಿತೆಂದು ಸರಸರನೆ ಹೆಜ್ಜೆ ಹಾಕಿ ಮನೆಗೆ ಬಂದೆ. ಯಮುನಕ್ಕನಿಗೆ ಅವರು ಹೀಗೆ ಕೇಳಿದ್ದಕ್ಕೆ ನಾನು ಹೀಗೆ ಹೇಳಿದೆ ಎಂದೆ. ಯಮುನಕ್ಕ ನನ್ನ ಮಾತನ್ನು ಕೇಳಿ ಗಾಬರಿಯಾಗಿ ಕೂತರು. ಅವರ ಕಣ್ಣಿನ ತುಂಬ ನೀರು ತುಂಬಿತು. ನೀನು ಆಕಡೆ ಇನ್ನು ಹೋಗಬೇಡ ಎಂದರು. ನಾನು ಆಗಲಿ ಎಂದೆ.

ಅವತ್ತು ಮಧ್ಯಾಹ್ನ ಗಣೇಶನ ಅಪ್ಪ ತಿಪ್ಪಾಶಾಸ್ತ್ರಿಗಳು ಹೊರಣಿಯಿಂದ ಬಂದರು. ಯಮುನಕ್ಕ ಮಾತಾಡಿಸಿದರೂ ಅವರು ಮಾತಾಡಲಿಲ್ಲ. ಯಮುನಕ್ಕ ಮಾಡಿಕೊಟ್ಟ ಪಾನಕವನ್ನು ಮುಟ್ಟಲಿಲ್ಲ. ಗಣೇಶನಿಗೆ ನಿನ್ನ ಚಾಪೆ ಬಟ್ಟೆಗಳನ್ನು ಕಟ್ಟಿಕೊ ಎಂದು ಕರೆದುಕೊಂಡು ಹೋಗಿಬಿಟ್ಟರು. ಆಮೇಲೆ ಮನೆಯಲ್ಲಿ ಯಮುನಕ್ಕ ಕೂತು ಬಹಳ ಹೊತ್ತು ಅತ್ತರು. ಆ ದಿನ ರಾತ್ರೆ ಊಟ ಮಾಡಿ ನಾನು ಕೈತೊಳೆಯಲು ಹಿತ್ತಲಿಗೆ ಹೋದಾಗ ಕತ್ತಲಿನಲ್ಲಿ ಯಾರೋ ಜಗ್ಗಿನ ಮೇಲೆ ನಡೆದು ಬರುವ ಸರಸರ ಶಬ್ದವಾಯಿತು. 'ಯಮುನಕ್ಕ' ಎಂದು ಕಿರುಚಿಕೊಂಡೆ. ಯಮುನಕ್ಕ, ಶಾಸ್ತ್ರಿ ಓಡಿ ಬಂದರು. ಯಾರೋ ಒಬ್ಬ ಮನುಷ್ಯ ದಡದಡನೆ ಓಡಿ ಹೋಗಿದ್ದು ಕಾಣಿಸಿತು. "ಈ ಬ್ರಹ್ಮರಾಕ್ಷಸನ ಕಾಟಕ್ಕೆ ಏನು



ಮಾಡಬೇಕು ?" ಎಂದು ಶಾಸ್ತ್ರಿ ಯಮುನಕ್ಕನ ಕಡೆ ನೋಡಿದ. "ನೀನು ಮಾತಾಡಬೇಡ, ಸುಮ್ಮನಿರು" ಎಂದು ಯಮುನಕ್ಕ ಗದರಿಸಿದರು. ಗಣೇಶನನ್ನು ಅವರ ಅಪ್ಪ ಬಂದು ಕರೆದುಕೊಂಡು ಹೋದ ಹಾಗೆ ನನ್ನ ಅಪ್ಪಯ್ಯನೂ ಯಾಕೆ ನನ್ನನ್ನು ಕರೆದುಕೊಂಡು ಹೋಗಲಿಲ್ಲೆಂದು ನಾನು ರಾತ್ರೆ ಮಲಗಿಕೊಂಡವನು ಅತ್ತೆ. ಯಮುನಕ್ಕ ನನ್ನನ್ನು ತಬ್ಬಿಕೊಂಡು, "ನೀನು ನನ್ನನ್ನು ಬಿಟ್ಟು ಹೋಗಬೇಡ" ಎಂದು ಬಿಕ್ಕಿ ಬಿಕ್ಕಿ ಅತ್ತರು.

ಯಮುನಕ್ಕ ಮೂರು ಹೊತ್ತೂ ಮನೆಯ ಒಳಗೇ ಇರುತ್ತಿದ್ದರು. ಗೋದಾವರಮ್ಮ ಒಂದು ದಿನ ಬಂದು ಬಾಗಿಲು ತಟ್ಟಿದರೆ – ಸಾಯಂಕಾಲದ ಸಮಯ – ಮನೆಯಲ್ಲಿಲ್ಲವೆಂದು ಹೇಳೆಂದು ನನಗೆ ಹೇಳಿಕಳುಹಿಸಿದರು. ಮಧ್ಯಾಹ್ನ ನಮಗೆ ವೇದವನ್ನು ಹೇಳಿಕೊಟ್ಟಾದ ಮೇಲೆ ಹೊರಟು ನಿಂತ ಉಪಾಧ್ಯರಿಗೆ ಕುಡಿಯಲು ಪಾನಕ ತಂದಿಟ್ಟರೆ "ನನಗೆ ಇದು ಬೇಡವಮ್ಮ" ಎಂದು ಅವರು ಹೊರಟು ಹೋದರು. ಯಮುನಕ್ಕ ಸದಾ ಮೂಲೆ ಮೂಲೆಯಲ್ಲಿ ನಿಂತು ಯೋಚಿಸುತ್ತ ಅಳುತ್ತ ಇರುತ್ತಿದ್ದರು.

ಒಂದು ದಿನ ಮಧ್ಯಾಹ್ನ ನಮಗೆಲ್ಲ ವೇದಪಾಠವನ್ನು ಬೇಗ ಮುಗಿಸಿ ಉಪಾಧ್ಯರು ಹೊರಟು ಹೋದರು. ಶಾಸ್ತ್ರಿ ರಂಗಣ್ಣನ ಜೊತೆ ಮಾತಾಡಲು ಹೋದ. ನಾನು ಯಮುನಕ್ಕ ಇಬ್ಬರೇ ಮನೆಯಲ್ಲಿ ಇದ್ದೆವು. ಆಗ ಪುಟ್ಟರಂಗಿ ಎನ್ನುವ ಕೊಂಕಣಿಗರ ಹೆಂಗಸೊಬ್ಬಳು ಹಿತ್ತಲ – ಬಾಗಿಲಲ್ಲಿ ಅಮ್ಮಾ ಎಂದು ಕರೆದು ಯಮುನಕ್ಕನ ಹತ್ತಿರ ಮಾತಾಡುತ್ತ ಕೂತಳು. ಮಾತಿನ ಮಧ್ಯೆ, "ಏನು ಯಮುನಮ್ಮ, ಈಚೆಗೆ ನೀವು ನೋಡಲು ತುಂಬ ಚೆನ್ನಾಗಿ ಕಾಣಿಸುತ್ತೀರಿ. ಗುಂಡ ಗುಂಡಗೆ ದಪ್ಪಗೆ ಆಗಿದ್ದೀರಿ" ಎಂದು ಅವಳು ಹೇಳಿದ ಕೂಡಲೆ ಮಾತನ್ನು ಅಲ್ಲಿಗೆ ನಿಲ್ಲಿಸಿ ಯಮುನಕ್ಕ ಒಳಕ್ಕೆ ಬಂದವರು ಮತ್ತೆ ಹೊರಗೇ ಹೋಗಲಿಲ್ಲ. ಪುಟ್ಟರಂಗಿ ಕಾದು ಕಾದು "ಯಾಕೆ ಅಮ್ಮನಿಗೆ ಸಿಟ್ಟು ಬಂತೇ?" ಎಂದು ಹೊರಟು ಹೋದಳು.

ಅವತ್ತು ರಾತ್ರೆ ಯಮುನಕ್ಕ ನನ್ನನ್ನು ಪಕ್ಕದಲ್ಲಿ ಮಲಗಿಸಿಕೊಂಡು ಬಹಳ ಹೊತ್ತು ಅತ್ತರು. ಆಮೇಲೆ ಮಡಿಲಿನ ಗಂಟನ್ನು ಬಿಚ್ಚಿ, ಸೀರೆಯನ್ನು ಕೆಳಕ್ಕೆ ಸರಿಸಿ, ಅವರ ಕಿಬ್ಬೊಟ್ಟೆಯ ಹತ್ತಿರ ನನ್ನ ಕಿವಿಯನ್ನು ಇಡಿಸಿ, ಮಲಗಿಸಿಕೊಂಡು, "ನಾಣೀ ಏನಾದರು ನಿನಗೆ ಕೇಳಿಸುತ್ತದ ?" ಎಂದರು. ಅವರ ಮೆತ್ತಗೆ ಬೆಚ್ಚಗೆ ಇದ್ದ ಹೊಟ್ಟೆಯ ಮೇಲೆ ಕೆನ್ನೆಯಿಟ್ಟ ನನಗೆ ತುಂಬ ಸುಖವಾಗಿ, ಅಮ್ಮನ ನೆನಪಾಗಿ, ಯಮುನಕ್ಕ ಅಳುತ್ತಿದ್ದರಿಂದ ನನಗೂ ಅಳು ಬಂತು. ಮತ್ತೆ ನನ್ನ

ಮುಖವನ್ನು ಅವರ ಮೊಲೆಗಳಿಗೆ ಒತ್ತಿಕೊಂಡು ಬೆನ್ನಿನ ಮೇಲೆ ಕೈಯಾಡಿಸಿದರು. "ನೀನು ಎಲ್ಲಿಗೂ ನನ್ನನ್ನು ಬಿಟ್ಟು ಹೋಗಬೇಡ ಆಯಿತ ?" ಎಂದರು. ನಾನು ಸುಖವಾಗಿ ಅವತ್ತು ನಿದ್ದೆ ಮಾಡಿದೆ.

ಅದರ ಮಾರನೆ ದಿನ ಉಪಾಧ್ಯರು ನಮಗೆ ಜಪ ಹೇಳಕೊಡಲಾಗಲಿ, ವೇದ ಹೇಳಿಕೊಡಲಾಗಲಿ ಬರಲಿಲ್ಲ. ದೇವಸ್ಥಾನಕ್ಕೆ ಬಂದು ಪೂಜೆಯನ್ನು ಮುಗಿಸಿಕೊಂಡು ಹಾಗೇ ಹೊರಟುಹೋದರು. ಆಮೇಲಿಂದ ಅವರು ಮನೆಕಡೆ ಸುಳಿಯಲೇ ಇಲ್ಲ. ತ್ರಿಕಾಲ ಸ್ನಾನ ಸಂಧ್ಯಾವಂದನೆ ತಪ್ಪಿತೆಂದು ನನಗೆ ಗೆಲುವಾಯಿತು.

ಒಂದು ದಿನ ತುಳಸಿ – ಪತ್ರೆಗೆಂದು ಹೋದ ಶಾಸ್ತ್ರಿ ಮನೆಗೆ ಬರಲೇ ಇಲ್ಲ. ಸಾಹುಕಾರರ ಮನೆಯಲ್ಲೇ ಇರತೊಡಗಿದ. ನನ್ನ ಮುಖ ಕಂಡರೆ ದೂರದಿಂದಲೆ ಅಣಕಿಸುತ್ತಿದ್ದ.

ಈ ದಿನಗಳಲ್ಲೆಲ್ಲ ನನ್ನನ್ನು ಮನೆಯಿಂದ ಹೊರಗೆ ಹೋಗಲು ಯಮುನುನಕ್ಕ ಬಿಡುತ್ತಿರಲಿಲ್ಲ. ನನಗೆ ಸಿಟ್ಟು ಬರುತ್ತಿತ್ತು. ಕಿಟಕಿಯಿಂದ ನೋಡುತ್ತ ಕೂತಿರುತ್ತಿದ್ದೆ. ಒಕ್ಕಣ್ಣಿನ ಶಾಸ್ತ್ರಿ ರಂಗಣ್ಣನ ಜೊತೆ ಹರಟುತ್ತ ಅಡ್ಡಾಡುತ್ತಿದ್ದ. ಪ್ರೈಮರಿಸ್ಕೂಲಿನ ಹುಡುಗರು ಮರಕೋತಿಯಾಡುತ್ತ, ಬುಗುರಿಯಾಡುತ್ತ ಗಲಾಟೆ ಮಾಡಿಕೊಂಡಿರುತ್ತಿದ್ದರು. ನಮ್ಮ ಮನೆಯ ಹತ್ತಿರ ಒಂದು ನರಹುಳವೂ ಬರುತ್ತಿರಲಿಲ್ಲ. ನಾನು ಮತ್ತು ಯಮುನಕ್ಕ ಹೀಗೆ ಮನೆಯಲ್ಲೆ ಒಂದು ವಾರ ಹಗಲು–ರಾತ್ರೆಗಳನ್ನು ಕಳೆದೆವು. ಅಪ್ಪಯ್ಯ ಯಾಕೆ ಬಂದು ನನ್ನನ್ನು ಕರೆದುಕೊಂಡು ಹೋಗಲಿಲ್ಲೆಂದು ಅಳು ಬರುತ್ತಿತ್ತು. ಯಮುನಕ್ಕನ ಮುಖ ಕಂಡರೆ ರೇಗುತ್ತಿತ್ತು. ನಾನು ರೇಗಿದರೆ ಯಮುನಕ್ಕ ಕಣ್ಣು ತುಂಬ ನೀರು ತುಂಬಿಕೊಂಡು, "ನನ್ನನ್ನು ಬಿಟ್ಟು ಹೋಗಬೇಡ" ಎಂದು ಅಳಲು ಪ್ರಾರಂಭಿಸುತ್ತಿದ್ದರು. ಒಂದು ದಿನ ನನ್ನನ್ನು ಯಮುನಕ್ಕ ಮುದ್ದು ಮಾಡಲು ಬಂದಾಗ ನಾನು ಅವರನ್ನು ಒದ್ದೆ. ಆಮೇಲೆ ತಪ್ಪಾಯಿತೆಂದು ಕೇಳಿಕೊಂಡೆ. ಅವತ್ತು ರಾತ್ರೆ ಯಮುನಕ್ಕ ಅಗ್ರಹಾರದಲ್ಲಿ ಎಲ್ಲರೂ ಮಲಗಿಯಾದ ಮೇಲೆ ನನ್ನನ್ನು ಎಬ್ಬಿಸಿ ಕರೆದುಕೊಂಡು ದೇವಸ್ಥಾನಕ್ಕೆ ಹೋದರು. ಅಲ್ಲಿ ದೇವರಿಗೊಂದು ದೀಪ ಹಚ್ಚಿಟ್ಟು ಬಹಳ ಹೊತ್ತು ಕಣ್ಣು ಮುಚ್ಚಿ ಕೂತು, ಬಗ್ಗಿ ನಮಸ್ಕಾರಮಾಡಿ ಹಿಂದಕ್ಕೆ ಬಂದರು.

* * * * *

ಅವತ್ತೊಂದು ಮಧ್ಯಾಹ್ನ ನಾನೊಬ್ಬನೇ ಕಿಟಕಿಯ ಹತ್ತಿರ ಕೂತಿದ್ದೆ. ಯಮುನಕ್ಕನ ಮೇಲೆ ನನಗೆ ಸಿಟ್ಟು ಬಂದಿತ್ತು. ನನ್ನ ಯಾಕೆ ಅಪ್ಪಯ್ಯ ಕರೆದು ಕೊಂಡು ಹೋಗಲಿಲ್ಲ, ನನಗೆ ಹೋಗಬೇಕು ಮನೆಗೆ ಎಂದು ಅಳು ಬಂತು.



ಹೊರಗೆ ಬೀದಿಯಲ್ಲಿ ಹುಡುಗಿಯರು ಕುಂಟು–ಬಿಲ್ಲೆ ಆಟ ಆಡುತ್ತಿದ್ದರು. ರಂಗಣ್ಣನ ಜೊತೆಗೆ ಶಾಸ್ತ್ರಿ ಬೀದಿಗೆ ಬಂದು ನನ್ನನ್ನು ನೋಡಿದ. ಕಿಟಕಿಯ ಹತ್ತಿರ ಬಂದು ನನ್ನನ್ನು ಕೈಸನ್ನೆ ಮಾಡಿ ಕರೆದ. ನಾನು ಬರೋದಿಲ್ಲ ಎಂದು ತಲೆಯಾಡಿಸಿದೆ. 'ಓಡಾಡಿಕೊಂಡು ಬರೋಣ ಬಾ' ಎಂದ. ನನಗೆ ಹೊರಗೆ ಹೋಗಿ ಬರುವ ಆಸೆಯಾಯಿತು. 'ಯಮುನಕ್ಕನನ್ನ ಕೇಳಿ ಬರುತ್ತೇನೆ' ಎಂದೆ. 'ಯಮುನಕ್ಕ ಮನೆಯಲ್ಲಿಲ್ಲ ಬಾ' ಎಂದ. ನಾನು ಒಳಗೆ ಹೋಗಿ, ಯಮುನಕ್ಕ ಮನೆಯಲ್ಲಿಲ್ಲವಲ್ಲ ಎಂದು ಆಶ್ಚರ್ಯ ಪಟ್ಟು ಅವನ ಜೊತೆ ಹೊರಟೆ.

ರಂಗಣ್ಣ ಮತ್ತು ಶಾಸ್ತ್ರಿಯ ಜೊತೆ, ಇನ್ನು ಮೂವರು ಅಗ್ರಹಾರದ ಯುವಕರು – ಅವತ್ತು ಇಸ್ಪೀಟು ಆಡುತ್ತ ಕೂತಿದ್ದವರು – ಬಂದರು. ಕೆರೆಯ ಹತ್ತಿರ ಹೋಗುತ್ತಿದ್ದಂತೆ, ಅವರು ಹಾಳು ಬಿದ್ದ ಅಗ್ರಹಾರದ ಕಡೆ ನನ್ನನ್ನು ಕರೆದುಕೊಂಡು ಹೋದಾರೆಂದು ನನಗೆ ಹೆದರಿಕೆಯಾಯಿತು. "ನಾನು ಬರೋದಿಲ್ಲ" ಎಂದು ಹಠ ಹಿಡಿದೆ. ಅದಕ್ಕೆ ರಂಗಣ್ಣ ಶಾಸ್ತ್ರಿಗೆ "ಹೋಗಲಿ ಬಿಡೊ, ಅದೊಂದು ಶುದ್ಧ ಹೆಣ್ಣಿಗ" ಎಂದ. ಶಾಸ್ತ್ರಿ ಕೇಳಲಿಲ್ಲ. ನನ್ನನ್ನು ಎಳೆದುಕೊಂಡು ಹೋದ. "ನಿನ್ನ ಅಪ್ಪಯ್ಯನಿಗೆ ಕಾಗದ ಹಾಕಿದ್ದೇವೆ ಕಣೊ, ನಿನ್ನನ್ನ ಕರೆದುಕೊಂಡು ಹೋಗೋದಕ್ಕೆ. ಅದಕ್ಕಿಂತ ಮುಂಚೆ ನಿನಗೊಂದು ತಮಾಷೆ ತೋರಿಸ್ತೇವೆ" ಎಂದು ಶಾಸ್ತ್ರಿ ನನ್ನ ಕೈಹಿಡಿದು ಪ್ರೀತಿಯಿಂದ ಹೇಳಿದ. ನನ್ನನ್ನು ಹೆಣ್ಣಿಗನೆಂದು ಹಾಸ್ಯ ಮಾಡುತ್ತಾರೆಂದು ಹೆದರಿ ಅವರ ಜೊತೆ ಹೋದೆ. ದಾರಿಯುದ್ದಕ್ಕೂ ನನಗೆ ಸುಬ್ರಹ್ಮಣ್ಯದೇವರನ್ನು ನಾನು ಮೈಲಿಗೆಯಲ್ಲಿ ಮುಟ್ಟಿದ್ದು, ಹಾವನ್ನು ಕಂಡಿದ್ದು, ಮನೆಯ ಸುತ್ತ ಬ್ರಹ್ಮರಾಕ್ಷಸ ಸುತ್ತಾಡಿದ್ದು ನೆನಪಾಗಿ ಭಯವಾಯಿತು. ಜೊತೆಗೆ ಇದ್ದ ಐದು ಜನರು ನನಗೆ ಗೇಲಿ ಮಾಡುತ್ತಾರೆಂದು ಇನ್ನಷ್ಟು ದಿಗಿಲಾಯಿತು. ಉದ್ದಕ್ಕೆ, ದೋಟಿಯ ಹಾಗೆ ಬೆಳೆದಿದ್ದ ರಂಗಣ್ಣನನ್ನು ಕಂಡರೆ ನನಗೆ ಅಪ್ಪಯ್ಯನನ್ನು ನೋಡಿದ್ದಕ್ಕಿಂತ ಹೆಚ್ಚು ಗಾಬರಿಯಾಗುತ್ತಿತ್ತು.

ಕಾಡಿನಲ್ಲಿ ತುಂಬ ದೂರದವರೆಗೆ ಬಳಸು – ದಾರಿಗಳಲ್ಲಿ ಹೋಗಿ, ಹಾಳುಬಿದ್ದ ಅಗ್ರಹಾರದ ಒಂದು ತುದಿಯಲ್ಲಿ ಕಾಡಿನ ನಡುವೆ ಇದ್ದ ಬಸ್ತಿಯ ಹತ್ತಿರ ಬಂದೆವು. ಹೊಳೆಯ ಶಬ್ದ ಅಲ್ಲಿಗೆ ಕೇಳಿಸುತ್ತಿತ್ತು. ಶಾಸ್ತ್ರಿ ಗುಟ್ಟಾಗಿ ಹೇಳಿದ : ಇಲ್ಲಿಂದ ಮುಂದೆ ಮೆತ್ತಗೆ ನಡೆಯುತ್ತ ನನ್ನ ಹಿಂದೆ ಬನ್ನಿ ಅಂತ. ಅವನು ಮುಂದಾಗಿ ನಾವೆಲ್ಲ ಹಿಂದಾಗಿ ಸದ್ದು ಮಾಡದೆ ನಡೆದು, ಅವತ್ತು ನಾನು ಶಾಸ್ತ್ರಿ ಅಡಗಿ ಕೂತಿದ್ದ ಮೋಟು – ಗೋಡೆಯ ಹಿಂದೆ ಬಂದೆವು. ನಾನು ಮತ್ತು ಶಾಸ್ತ್ರಿ ಗೋಡೆ ಬಿರುಕು ಬಿಟ್ಟಲ್ಲಿ ಕಣ್ಣಿಟ್ಟು ಕೂತೆವು. ಉಳಿದ

ನಾಲ್ವರು ಎತ್ತರಕ್ಕಿದ್ದುದರಿಂದ ಗೋಡೆಗೆ ಆತು ನಿಂತುಕೊಂಡು ಇಣುಕಿದರು. ನನಗೆ ಹಾವಿನ ನೆನಪಾಗಿ ಎದೆ ಹೊಡೆದುಕೊಳ್ಳಲು ಪ್ರಾರಂಭಿಸಿತು.

ಶಾಸ್ತ್ರಿ, 'ಎದುರಿಗೆ ಏನು ಕಾಣಿಸ್ತಿದೆ ನೋಡು' ಎಂದ. ನಮಗಿಂತ ಸ್ವಲ್ಪ ದೂರದಲ್ಲಿ ಯಮುನಕ್ಕ ನಮಗೆ ಬೆನ್ನು ಹಾಕಿ ಕಲ್ಲು–ಚಪ್ಪಡಿಯೊಂದರ ಮೇಲೆ ಕೂತಿದ್ದರು. ಎರಡು ಕೈಗಳ ಮೇಲೆ ತಲೆ ಹೊತ್ತು ಬಗ್ಗಿ ಕೂತಿದ್ದರು. ಇವರು ಇಷ್ಟು ದೂರ ಬಂದು ಒಬ್ಬರೇ ಕೂತಿದ್ದಾರಲ್ಲ, ಹೆದರಿಕೆಯಾಗಲ್ಲವೆ, ಇಲ್ಲಿ ಹಾವಿದೆ ಎಂದು ಇವರಿಗೆ ಗೊತ್ತಿಲ್ಲವೆ, ಎಂದು ನಾನು ಆಶ್ಚರ್ಯಪಟ್ಟೆ. ಸ್ವಲ್ಪ ಹೊತ್ತಿನ ನಂತರ ಯಮುನಕ್ಕ ಎದ್ದು ನಿಂತದ್ದು ಕಂಡು ಗೋಡೆಯ ಮೇಲಿಂದ ಇಣಿಕಿ ನೋಡುತ್ತಿದ್ದವರು ಕೂತುಬಿಟ್ಟರು. ಯಮುನಕ್ಕ ಯಾರನ್ನೊ ಹುಡುಕುವವರ ಹಾಗೆ ನಮ್ಮ ಕಡೆಯೇ ನಡೆದು ಬಂದರು. "ಯಮುನಕ್ಕ ನಾವೆಲ್ಲ ಇಲ್ಲಿ ಇದ್ದೇವೆ – ಕದ್ದು ನೋಡುತ್ತಿದ್ದೇವೆ, ಇಲ್ಲೊಂದು ಹಾವಿದೆ" ಎಂದು ನನಗೆ ಹೇಳಬೇಕೆನಿಸಿತು. ಆದರೆ ನಾನು ಬಾಯಿ ತೆರೆದ ಕೂಡಲೆ ಶಾಸ್ತ್ರಿ ನನ್ನ ಬಾಯಿ ಮುಚ್ಚಿದ. ರಂಗಣ್ಣ ಮೂಗಿನ ಮೇಲೆ ಬೆರಳಿಟ್ಟು ನನಗೆ ಹೆದರಿಸಿದ. ನಾನು ಸುಮ್ಮನಾದೆ.

ಯಮುನಕ್ಕ ನಮ್ಮ ಕಡೆ ಬರುತ್ತಿದ್ದವರು ನಿಂತು ಮೋಟು – ಗೋಡೆಯನ್ನೆ ಎವೆಯಿಕ್ಕದೆ ನೋಡಿದರು. ಶಾಸ್ತ್ರಿ ಉಸಿರು ಹಿಡಿದು ಕೂತು ನನ್ನ ಬಾಯನ್ನು ಕೈಯಿಂದ ಮುಚ್ಚಿದ. ಯಮುನಕ್ಕ ಸೆರಗಿನಿಂದ ಕಣ್ಣೊರಸಿಕೊಂಡು ಕುರುಡರ ಹಾಗೆ ಪರದಾಡುತ್ತ ನಡೆದು ಹಿಂದಕ್ಕೆ ಹೋಗಿ ಅದೇ ಕಲ್ಲಿನ ಮೇಲೆ ಕೂತರು – ಹಿಂದೆ ಕೂತ ರೀತಿಯಲ್ಲೆ.

ನನಗೆ ಕೂತು ಕೂತು ಬೇಜಾರಾಯಿತು. ಸಾಹುಕಾರರ ಮಗ ರಂಗಣ್ಣ ಮತ್ತು ಉಳಿದವರು ನಿಂತು ಸಾಕಾಗಿ ಕೂತರು. ಶಾಸ್ತ್ರಿಯ ಕಿವಿಯಲ್ಲಿ ಕಂಡಕೂಡಲೆ ಹೇಳು ಎಂದರು. ರಂಗಣ್ಣ ಸಿಗರೇಟು ಹೊತ್ತಿಸಿ, ಇನ್ನೊಂದನ್ನು ಶಾಸ್ತ್ರಿಗೆ ಕೊಟ್ಟ. ಶಾಸ್ತ್ರಿ ನನಗೆ, "ಇನ್ನು ಸ್ವಲ್ಪ ಹೊತ್ತಿಗೆ ಬ್ರಹ್ಮರಾಕ್ಷಸ ಬರುತ್ತಾನೆ, ನೀನು ಕಣ್ಣಾರೆ ನೋಡಬಹುದು" ಎಂದ. ನನಗೆ ತುಂಬ ಗಾಬರಿಯಾಯಿತು. ಇನ್ನಷ್ಟು ಹೊತ್ತಾಗಿ ಬೇಜಾರಾಗಿ ಸಾಯಂಕಾಲವಾಯಿತು.

ನನಗೆ ಅಪ್ಪಯ್ಯ ಅಮ್ಮನ ಜ್ಞಾಪಕವಾಯಿತು. ಯಾರ ಕೈಯಲ್ಲೊ ಸಿಕ್ಕಿಹಾಕಿಕೊಂಡೆ, ಇನ್ನು ನಾನು ಮನೆಗೆ ಹೋಗುತ್ತೇನೊ ಇಲ್ಲವೊ ಎಂದು ದುಃಖವಾಯಿತು. ಹಿಂದಕ್ಕೆ ಹೋಗೋಣ ಎಂದು ಶಾಸ್ತ್ರಿಗೆ ಹೇಳಿದೆ. "ನೀನು ಬೇಕಾದರೆ ಒಬ್ಬನೇ ಹೋಗು, ದಾರಿಯಲ್ಲಿ ಮಾತ್ರ ಹಾವು ಅಟ್ಟಿಸಿಕೊಂಡು ಬರುತ್ತದೆ, ನನ್ನ ಕೈಯಲ್ಲಿ ಗರುಡ–ಮಚ್ಚೆಯಿದೇಂತ ನಿನಗೆ ಗೊತ್ತಿಲ್ಲವ" ಎಂದು



ಶಾಸ್ತ್ರಿ ನನಗೆ ಗದರಿಸಿ ನಕ್ಕ. ನಾನು ಸುಮ್ಮನಾದೆ.

ಸ್ವಲ್ಪ ಹೊತ್ತಾದ ಮೇಲೆ ದೂರದಿಂದ ಒಬ್ಬ ಬರುವುದು ಕಾಣಿಸಿತು. ತೆಳ್ಳಗೆ, ಉದ್ದಗೆ ಇದ್ದ. ಕಚ್ಚೆ ಹಾಕಿ ಪಂಚೆಯುಟ್ಟಿದ್ದ ; ಕ್ರಾಪು ಬಿಡಿಸಿದ್ದ. ಹತ್ತಿರ ಬಂದ ಮೇಲೆ ಇವನೇ ಹಿಂದಿನ ಸಾರಿ ನಾನಲ್ಲಿ ಕದ್ದು ನೋಡಿದಾಗ ಬಂದು ಕೂತಿದ್ದವ ಎಂದು ಗೊತ್ತಾಯಿತು. ತುಮಕೂರಿಂದ ವರ್ಗವಾಗಿ ಬಂದು, ಸೈಕಲ್ಲಿನ ಮೇಲೆ ಶಿವಪುರದಿಂದ ನಮ್ಮೂರಿನ ಸ್ಕೂಲಿಗೆ ಬಂದು ಹೋಗುತ್ತಿದ್ದ ಆ ಎಣ್ಣೆಗೆಂಪು ಬಣ್ಣದ ಪೇಟೆಯವನ ಹೆಸರು ನನಗೆ ಗೊತ್ತಿರಲಿಲ್ಲ.

ಶಾಸ್ತ್ರಿ ಚಿಟಿಕೆ ಹೊಡೆದು 'ಬ್ರಹ್ಮರಾಕ್ಷಸ ಬಂದ' ಎಂದ. ಕೂತಿದ್ದವರೆಲ್ಲ ನಿಂತು ಮೋಟು–ಗೋಡೆಯಿಂದ ಇಣಿಕಿದರು.

ಯಮುನಕ್ಕನ ಪಕ್ಕದಲ್ಲಿ ಅವನು ನಮಗೆ ಬೆನ್ನು ಮಾಡಿ ಕೂತದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. "ನೋಡು, ನೋಡು, ಸರಿಯಾಗಿ ನೋಡು – ಏ ಶುಕಮುನಿ" ಎಂದು ಶಾಸ್ತ್ರಿ ನನಗೆ ಚುಚ್ಚಿದ. ಅವನು ಯಮುನಕ್ಕನಿಗೆ ಏನೋ ಹೇಳಿದ. ಯಮುನಕ್ಕ ಗಡಗಡ ನಡುಗಿದರು. ಅವನು ಯಮುನಕ್ಕನ ಕೈಹಿಡಿದು ಕೊಂಡ. ಯಮುನಕ್ಕ ಕೈ ಕೊಸರಿಕೊಂಡು ದೂರ ಸರಿದರು.

ಶಾಸ್ತ್ರಿ ಸಿಳ್ಳೆ ಹಾಕುತ್ತ ಸಿಗರೇಟು ಹಚ್ಚಿಸಿ, ಹುಬ್ಬನ್ನು ಎತ್ತಿ ನನ್ನ ಕಡೆ ನೋಡಿದ.

ಬಿರುಕಿನಿಂದ ನೋಡುತ್ತ ಕೂತ ನನಗೆ ಒಂದು ಹಾವು ನಿಧಾನವಾಗಿ ಹರಿಯೋದು ಕಾಣಿಸಿತು. 'ಹಾವು' ಎಂದೆ. ಎಲ್ಲರೂ ಅದನ್ನು ನೋಡಿದರು – ಕೇರೆ – ಹಾವಿರಬೇಕು ಸುಮ್ಮನಿರು ಎಂದರು. ನಾನು ಕೂಗಿಕೊಳ್ಳುವುದರಲ್ಲಿದ್ದೆ. ರಂಗಣ್ಣ ಒಂದೇಟು ಹೊಡೆದು ನನ್ನ ಬಾಯಿ ಮುಚ್ಚಿದ. ಅಳುತ್ತಿದ್ದ ನನಗೆ ಶಾಸ್ತ್ರಿ, "ಅಳಬೇಡ, ಮುಂದೆ ಇನ್ನೂ ತುಂಬ ಮಜವಿದೆ. ಕಾದು ನೋಡು" ಎಂದ. ನಾನು ಸುಮ್ಮನಾದೆ.

ಕೆನ್ನೆಯನ್ನು ಉಜ್ಜಿಕೊಳ್ಳುತ್ತ ಕೂತೆ. ಹಾವು ಮೆತ್ತಗೆ ಸದ್ದುಮಾಡದೆ ಯಮುನಕ್ಕ ಕೂತ ಕಡೆ ಹರಿಯುತ್ತಿತ್ತು. ಬೆನ್ನು ಹಾಕಿ ಕೂತ ಅವರು ತಿರುಗಿ ನೋಡಲೇ ಇಲ್ಲ. ಹಾವು ಬಳುಕುತ್ತ, ಹೊಳೆಯುತ್ತ, ಮೂಸಿ ಮೂಸಿ ನೋಡುತ್ತ ಹರಿಯುತ್ತಿತ್ತು. "ಕೇರೆ–ಹಾವು ಹೆದರಬೇಡ" ಎಂದು ಶಾಸ್ತ್ರಿ ಹೇಳಿದ. "ಹಾವಿನ ಕಡೆ ನೋಡಬೇಡ. ಅದು ಹರಿದು ಹುತ್ತಕ್ಕೆ ಹೋಗುತ್ತದೆ. ಅವರಿಬ್ಬರ ಮಜ ನೋಡು" ಎಂದ. ಹಾವು ಎಡಗಡೆಗೆ ತಿರುಗಿತು. ಯಮುನಕ್ಕ ಕೂತ ಕಡೆ ಅದು ಹೋಗಲಿಕ್ಕಿಲ್ಲವೆಂದುಕೊಂಡರೆ ಮತ್ತೆ ಬಲಕ್ಕೆ ತಿರುಗಿ ಹರಿಯಿತು. ನಮ್ಮ ಜೊತೆ

ಬಂದವನೊಬ್ಬ, "ಈ ಮುಂಡೆಯಿಂದಾಗಿ ದೇವರಿಗೆ ಮೈಲಿಗೆಯಾಗಿದೆ. ಅದಕ್ಕಾಗಿ ಈ ಹಾವು" ಎಂದ. ಎಲ್ಲರೂ ನಿಜ ನಿಜವೆಂದು ತಲೆಯಾಡಿಸಿದರು. ನನಗೆ ಸುಬ್ರಹ್ಮಣ್ಯ ದೇವರನ್ನು ಮೈಲಿಗೆಯಲ್ಲಿ ಮುಟ್ಟಿದ್ದು ನೆನಪಾಗಿ ಮೈ ನಡುಗಿತು. ನನ್ನ ಸುತ್ತಲೂ ನೋಡಿಕೊಂಡೆ. ರಂಗಣ್ಣ ಹೇಳಿದ : "ದೇವರೇ ಈ ಹಾವನ್ನು ಕಳಿಸಿದ್ದರೆ ಇದು ಅವಳನ್ನು ಕಚ್ಚಿ ಸಾಯಿಸುತ್ತದೆ. ಪಾಪಕ್ಕೆ ತಕ್ಕ ಶಾಸ್ತಿ."

ಹಾವು ಸಿಂಬೆ ಸುತ್ತಿ ಕೂತುಕೊಂಡು ಹೆಡೆಯನ್ನು ಬಿಚ್ಚಿ ಸುತ್ತಲೂ ನೋಡಿತು. ನನ್ನನ್ನು ಅದು ನೋಡಬಹುದೆಂದು ನನಗೆ ದಿಗಿಲಾಯಿತು. 'ಹಾ ಸರ್ಪ ಸರ್ಪ' ಎಂದು ಎಲ್ಲರ ಬಾಯಿಂದ ಬಂದಿತು, ನಾನು ಎದ್ದು ನಿಂತೆ. ಶಾಸ್ತ್ರಿ ಜಗ್ಗಿ ನನ್ನನ್ನು ಎಳೆದು ಕೂರಿಸಿದ. ಹಾವು ಮತ್ತೆ ಹರಿಯುತ್ತ ಕಲ್ಲು – ಚಪ್ಪಡಿಯ ಕಡೆ ಹೋಯಿತು.

ಯಮುನಕ್ಕನಿಗೆ ಅವನು ಏನೋ ಹೇಳುತ್ತಲೇ ಇದ್ದ. ಆದರೆ ಯಮುನಕ್ಕ ಕೈಯ್ಯಲ್ಲಿ ಮುಖ ಮುಚ್ಚಿಕೊಂಡೇ ಕೂತಿದ್ದರು. ಅವನು ಹತ್ತಿರ ಹೋಗಿ ಅವರ ಹೆಗಲಿನ ಮೇಲೆ ಕೈಹಾಕಿದ. ಯಮುನಕ್ಕ ಮತ್ತೆ ಕೊಸರಿಕೊಂಡು, ಈ ಸಾರಿ ಎದ್ದು ನಿಂತರು.

ಗೋಡೆಯಿಂದ ಇಣುಕುತ್ತಿದ್ದವರು ಕೂತರು. ಹರಿಯುತ್ತ ತಮ್ಮ ಕಡೆ ಬರುವ ಹಾವನ್ನು ಯಮುನಕ್ಕ ನೋಡಬಹುದು ಎಂದು ನನ್ನ ಮನಸ್ಸು ತುಂಬ ಹಗುರವಾಯಿತು. ಆದರೆ ಅವರು ಅದನ್ನು ನೋಡಲೇ ಇಲ್ಲ. ಮತ್ತೆ ಅವನ ಪಕ್ಕಕ್ಕೆ ಕೂತರು. ನನಗೆ ಅಳು ಬರುವಷ್ಟು ಭಯವಾಯಿತು. ಹಾವು ಹರಿದು ಅವರು ಕೂತಿದ್ದ ಕಲ್ಲು–ಚಪ್ಪಡಿಯ ಹತ್ತಿರ ಹೋಯಿತು. 'ಸುಬ್ರಹ್ಮಣ್ಯ ಸುಬ್ರಹ್ಮಣ್ಯ' ಎಂದು ನಾನು ಕಣ್ಣುಮುಚ್ಚಿ ದೇವರನ್ನು ಪ್ರಾರ್ಥಿಸಿದೆ. ಕಲ್ಲುಚಪ್ಪಡಿಯ ಹತ್ತಿರ ಹೋದ ಹಾವು ಅದರ ಬಾಯಿಂದ ಚಪ್ಪಡಿಯನ್ನು ಮುಟ್ಟಿ ಮುಟ್ಟಿ ನೋಡಿತು. ನಾನು ನಡುಗತೊಡಗಿದೆ. ಶಾಸ್ತ್ರಿ ನನ್ನ ಕೈಹಿಡಿದು – "ತಪ್ಪಿಗೆ ತಕ್ಕ ಶಿಕ್ಷೆ" ಎಂದ.

ಹಾವು ಕಲ್ಲು–ಚಪ್ಪಡಿಯ ಸಂದಿಯಲ್ಲಿ ಹೋಯಿತು. ಯಮುನಕ್ಕ ಮತ್ತು ಅವನು ಕಾಲನ್ನು ಇಳಿಬಿಟ್ಟು ಕೂತಿದ್ದರಿಂದ ಅವರ ಕಾಲನ್ನದು ಕಡಿಯಬಹುದೆಂದು ನನಗೆ ಮೈಯ ಕೂದಲೆಲ್ಲ ಎದ್ದು ನಿಂತುಕೊಂಡಿತು.

ಕಲ್ಲು–ಚಪ್ಪಡಿಯ ಸಂದಿಯಲ್ಲಿ ಅದಕ್ಕೆ ಜಾಗ ಸಿಗಲಿಲ್ಲವೆಂದು ಕಾಣುತ್ತೆ, ಮತ್ತೆ ಹೊರಗೆ ಬಂದಿತು. ಮೋಡದಿಂದ ತೂರಿಕೊಂಡು ಹೊರಗೆ ಬಂದ ಸಂಜೆಯ ಸೂರ್ಯನ ಬೆಳಕಿನಲ್ಲಿ ಹಾವು ಪಳಪಳ ಹೊಳೆಯುತ್ತಿತ್ತು.



ಅವನು ಮತ್ತೆ ಏನೊ ಹೇಳುತ್ತ ಯಮುನಕ್ಕನ ಹೆಗಲಿನ ಮೇಲೆ ಕೈ ಹಾಕಿದ. ಅವನು ಹೆಗಲಿನ ಮೇಲೆ ಕೈಹಾಕಿದ್ದರಿಂದ ಯಮುನಕ್ಕ ಸಿಟ್ಟಿನಿಂದ ಕೊಸರಿಕೊಂಡು ಎದ್ದು ನಿಲ್ಲುತ್ತಾರೆ, ಆಗ ಹಾವು ಕಲ್ಲು–ಚಪ್ಪಡಿಯನ್ನು ಬಾಯಿಂದ ಮುಟ್ಟಿಮುಟ್ಟಿ ನೋಡುವುದನ್ನು ಕಣ್ಣಾರೆ ನೋಡುತ್ತಾರೆ, ಪರವಾಯಿಲ್ಲ, ಎಂದು ನಾನು ನಿಟ್ಟುಸಿರು ಬಿಟ್ಟೆ. ಆದರೆ ನಾನು ಎಣಿಸಿದ್ದಂತೆ ಯಮುನಕ್ಕ ಎದ್ದು ನಿಲ್ಲಲಿಲ್ಲ. ಅವನಿಗೆ ಒತ್ತಿ ಕೂತು ಅಳುತ್ತ ಅವನನ್ನು ತಬ್ಬಿಕೊಂಡರು. ಅವನ ತೊಡೆಯ ಮೇಲೆ ತಲೆಯಿಟ್ಟರು.

ನಾನು ನನ್ನ ಕೈಯನ್ನು ಕೊಸರಿಕೊಂಡು ಚಂಗನೆ ನೆಗೆದೆ. ರಂಗಣ್ಣ, ಶಾಸ್ತ್ರಿ ನನ್ನನ್ನು ಹಿಡಿಯುವುದರ ಒಳಗೆ ಮೋಟು–ಗೋಡೆಯನ್ನು ಬಳಸಿ, ಒಂದೇ ಉಸುರಿಗೆ, "ಅಯ್ಯೋ ಅಲ್ಲಿ ಹಾವಿದೆ ಯಮುನಕ್ಕಾ" ಎಂದು ಕಿರುಚುತ್ತ ಅವರ ಕಡೆ ಓಡಿದೆ.

ಯಮುನಕ್ಕ ಎದ್ದು ನಿಂತರು. ಗಾಬರಿಯಿಂದ ಹತ್ತು ಹೆಜ್ಜೆ ಓಡಿ ಕಂಗಾಲಾದವರಂತೆ ನಿಂತರು. ಮೋಟು–ಗೋಡೆಯ ಹಿಂದೆ ನಿಂತಿದ್ದವರೆಲ್ಲ ಹಾರಿ ಓಡಿದರು. ಯಮುನಕ್ಕನ ಜೊತೆಗಿದ್ದವ ಅವರನ್ನು ಕಂಡಕ್ಷಣವೇ ಇನ್ನೊಂದು ದಿಕ್ಕಿಗೆ ಪಂಚೆಯನ್ನು ಎತ್ತಿಕೊಂಡು ಓಡಿಬಿಟ್ಟ. ನಾನು ಓಡುತ್ತಿದ್ದವನು ಅಲ್ಲೆ ಬಿದ್ದಿದ್ದ ಒಂದು ಕಲ್ಲೆತ್ತಿಕೊಂಡು ಚಪ್ಪಡಿಯ ಕಡೆ ಓಡಿದೆ. ನನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಹಾವಿನ ಮೇಲೆ ಆ ಕಲ್ಲನ್ನು ಎಸೆದು, ಜಲ್ಲೆಂದು ಭಯವಾಗಿ ಮೈ ಬೆವರಲು, ಓಡಿ ಹೋಗಿ ಯಮುನಕ್ಕನನ್ನು ತಬ್ಬಿಕೊಂಡೆ. ಹಾವಿಗೆ ಏಟು ಬಿದ್ದಿರಬೇಕು; ಅದು ಹೆಡೆಯನ್ನು ಇಷ್ಟಗಲ ಬಿಚ್ಚಿ ಬುಸ್ ಎಂದು ಕಲ್ಲು–ಚಪ್ಪಡಿಯನ್ನು ಕುಟ್ಟಿತು. ಯಮುನಕ್ಕನ ಹೊಟ್ಟೆಯ ಮೇಲೆ ತಲೆಯಿಟ್ಟು ಕೈಗಳಿಂದ ಅವರನ್ನು ಬಿಗಿದು ನಿಂತಿದ್ದ ನನಗೆ ಪ್ರಾಣಾಂತಿಕ ಭಯವಾಯಿತು. ಇನ್ನೊಂದು ಕಲ್ಲನ್ನು ಎತ್ತಿ ಅದರ ಕಡೆ ಎಸೆದೆ. ಹಾವು ಸರಸರನೆ ಹರಿದು ಕಲ್ಲು–ಚಪ್ಪಡಿಯಿಂದ ಇಳಿಯಿತು. ಅಷ್ಟುದ್ದದ ತನ್ನ ನೀಳವಾದ ಮೈಯನ್ನು ಹೀಗೆ ಹೀಗೆ ಬಳುಕಿಸುತ್ತ ಬುಸ್ ಎಂದು ನಮ್ಮನ್ನು ಅಟ್ಟಿಸಿಕೊಂಡು ಬಂತು. ನಾವಿಬ್ಬರೂ ಓಡಿದೆವು. ಯಮುನಕ್ಕನ ಕೈಯನ್ನು ದರದರನೆ ಹಿಡಿದೆಳೆಯುತ್ತ ನಾನೇ ಮುಂದಾಗಿ ಅಷ್ಟು ದೂರ ಓಡಿ, ಯಮುನಕ್ಕನಿಗೆ ಸುಸ್ತಾಗಲು ನಿಂತೆ. ಯಮುನಕ್ಕ ಕುಸಿದು ಕೂತರು. ನನಗೆ ಮೈ ಬೆವೆತು ಕಣ್ಣು ಕತ್ತಲೆ ಕಟ್ಟಿ ಬಂತು. ಯಮುನಕ್ಕನ ಜೊತೆ ಕೂತು ಸುಧಾರಿಸಿಕೊಂಡು ಕಣ್ಣುಬಿಟ್ಟೆ. ನಮ್ಮ ಎದುರಿಗೇ ಇದ್ದ ಒಂದು ಹುತ್ತದ ಒಳಕ್ಕೆ ಹಾವು ತಲೆ ಹಾಕಿತು. ಮೆಲ್ಲ ಮೆಲ್ಲಗೆ ತನ್ನ ನೀಳವಾದ ಮೈಯನ್ನು ಎಳೆದುಕೊಳ್ಳುತ್ತ,

ಕೊನೆಗೊಂದು ಬಾಲ ಮಾತ್ರ ಚೂಪಾಗಿ ಉಳಿದು, ಕೊನೆಗೆ ಅದೂ ಮಾಯವಾಯಿತು. ಎವೆಯಿಕ್ಕದೆ ಇದನ್ನು ನಾನು ನೋಡುತ್ತ ಕೂತೆ. ಆ ನಿರ್ಜನವಾದ ಹಾಳು ಬಿದ್ದ ಅಗ್ರಹಾರದಲ್ಲಿ ಆಗ ಉಳಿದಿದ್ದವರು – ಯಮುನಕ್ಕ, ನಾನು, ಮತ್ತು ಯಾವ ಹುತ್ತದೊಳಗಿನ ಕತ್ತಲೆಗೊ ಮಾಯವಾದ, ಗಾಯಗೊಂಡರೂ ಸಾಯದ, ರಚ್ಚಿನಲ್ಲಿ ಬುಸುಗುಟ್ಟುವ ಹಾವು.

ಯಮುನಕ್ಕನನ್ನು ಕೈಹಿಡಿದು ಎಬ್ಬಿಸಿ ನಾನು ಕರೆದುಕೊಂಡು ಹೋಗಿ ಹಿತ್ತಲ ಬಾಗಿಲಿಂದ ಮನೆ ತಲುಪಿದೆ. ನನಗೆ ಕಾಲುಗಳು ಜಗಿಯುತ್ತಿದ್ದುವು. ಒಂದು ಸಾಹಸವನ್ನು ಮಾಡಿ ಮುಗಿಸಿದವನ ಭಾವನೆಯಲ್ಲಿ ನಾನು ಇದ್ದುದರಿಂದ ಮನೆಗೆ ಹೋದವನೆ ಅಳಲಿಲ್ಲ. ಎಲ್ಲ ಬಾಗಿಲಿನ ಅಗಳಿಗಳನ್ನೂ ಹಾಕಿ ನಡುಮನೆಗೆ ಬಂದೆ. ಅಲ್ಲಿ ಯಮುನಕ್ಕ ನೆಲದ ಮೇಲೆ ಬಿದ್ದು ಹೊರಳುತ್ತಿದ್ದರು. ಸಾಯುವವರು ಸಂಕಟ ಪಡುವ ಹಾಗೆ ನರಳುತ್ತಿದ್ದರು. ನಾನು ಸುಮ್ಮನೇ ನಿಂತೆ. ಎಲ್ಲ ಬಾಗಿಲುಗಳನ್ನೂ ನಾನು ಹಾಕಿದ್ದರಿಂದ ನಡುಮನೆಯ ತುಂಬ ಕತ್ತಲಾಗಿತ್ತು. ಯಮುನಕ್ಕ ಕಾಣಿಸುತ್ತಿರಲಿಲ್ಲ. ಅವರು ನರಳುತ್ತ ಹೊರಳುವ ಶಬ್ದ ಮಾತ್ರ ಕೇಳಿಸುತ್ತಿತ್ತು. ಬಹಳ ಹೊತ್ತು ನಾನು ಮೂಲೆಯಲ್ಲಿ ಹಾಗೇ ನಿಂತೆ.

ಹೊರಳುವುದನ್ನು ನಿಲ್ಲಿಸಿ ಯಮುನಕ್ಕ ನನ್ನನ್ನು ಬಾ ಎಂದು ಕರೆದರು. ಕತ್ತಲಿನಲ್ಲಿ ತಡಕಾಡುತ್ತ ನಾನು ಅವರಿದ್ದಲ್ಲಿಗೆ ಹೋದೆ. ನನ್ನನ್ನು ಎರಡು ಕೈಗಳಿಂದಲೂ ಬಾಚಿ ಅವಚಿಕೊಂಡರು. ಯಮುನಕ್ಕ ಸಂಪೂರ್ಣ ಬೆತ್ತಲೆಯಾಗಿದ್ದಾರೆಂದು ಆಗ ನನಗೆ ಅನುಭವವಾಯಿತು. ನನ್ನ ಮುಖವನ್ನು ಎತ್ತಿ ತನ್ನ ಹೊಟ್ಟೆಯ ಮೇಲೆ ಇಟ್ಟುಕೊಂಡು ಅಯ್ಯೋ ಉರಿ ಉರಿ ಉರಿ ಎಂದು ಅತ್ತರು. ಮೆತ್ತಗೆ ಬೆಚ್ಚಗೆ ಇದ್ದ ಹೊಟ್ಟೆಗೆ ಒತ್ತಿದ್ದ ನನ್ನ ಮುಖ ಬೆವರಿತು. ಉಸಿರಾಡುವುದು ಕಷ್ಟವಾಯಿತು. “ಅಯ್ಯೋ ನನ್ನ ಬಿಡಿ, ಬಿಡಿ” ಎದು ನಾನು ಕಷ್ಟದಿಂದ ಬಿಡಿಸಿಕೊಂಡು ಎದ್ದೆ. ಯಮುನಕ್ಕ ಸುಮ್ಮನಾಗಿಬಿಟ್ಟರು. ನಿಶ್ಚಲರಾಗಿ ಅಂಗಾತನೆ ಮಲಗಿದರು.

ನಾನು ಸ್ವಲ್ಪ ಹೊತ್ತು ಹಾಗೇ ಕೂತಿದ್ದೆ. ಗಣೇಶನ ಹಾಗೆ ನಾನೂ ಮನೆಗೆ ಹೋಗಿಬಿಡಬೇಕಿತ್ತು ಎನ್ನಿಸಿತು. ಈ ಯಮುನಕ್ಕ ಸತ್ತು ಹೋದರೆ ಸಾಕು, ನಾನು ಸೀದ ಮನೆಗೆ ಎದ್ದುಬಿಡಬಹುದು ಎಂದು ಯೋಚಿಸಿ, ಈಗಲೇ ಎಲ್ಲಾದರೂ ಯಮುನಕ್ಕ ಸತ್ತುಬಿಟ್ಟಿದ್ದಾರೊ ಎಂದು ಭಯಪಟ್ಟೆ. “ಯಮುನಕ್ಕ, ಯಮುನಕ್ಕ” ಎಂದು ಕೂಗಿದೆ. ಉತ್ತರ ಬರಲಿಲ್ಲ – ಭಯವಾಯಿತು. ‘ಯಮುನಕ್ಕ ಹಸಿವು’ ಎಂದು ಅಳತೊಡಗಿದೆ. ಯಮುನಕ್ಕ ಎದ್ದು ಸೀರೆಯನ್ನುಟ್ಟುಕೊಂಡು, ಅಡಿಗೆ



ಮನೆಗೆ ಹೋಗಿ ಅರಳು–ಹಿಟ್ಟನ್ನು ಮಜ್ಜಿಗೆಯಲ್ಲಿ ಕಲಸಿ ನನಗೆ ಕೊಟ್ಟರು. “ನಿಮಗೆ?” ಎಂದು ಕೇಳಿದೆ. “ನೀನು ತಿನ್ನು” ಎಂದು ಅವರು ಕತ್ತಲಿನಲ್ಲಿ ಕೂತರು. ಕತ್ತಲಲ್ಲೇ ಅರಳು – ಹಿಟ್ಟನ್ನು ತಿನ್ನುತ್ತ ನನಗೆ ಅಳು ಬಂತು. ‘ಅಳಬೇಡ’ ಎಂದರು ಯಮುನಕ್ಕ ಮೃದುವಾಗಿ.

ಹೊರಗೆ ಬಾಗಿಲನ್ನು ಬಡಿಯುವ ಶಬ್ದವಾಯಿತು. ಬಾಗಿಲು ಬಾಗಿಲು ಎಂದು ನಾಲ್ಕೈದು ಜನರ ಗಂಟಲು ಕೇಳಿಸಿತು. ಯಮುನಕ್ಕ ಏಳಲಿಲ್ಲ; ಮಾತೂ ಆಡಲಿಲ್ಲ. ರಂಗಣ್ಣನ ಧ್ವನಿ ಕೇಳಿಸಿತು – ನನ್ನನ್ನು ಹೊರಗೆ ಕಳಿಸುವಂತೆ ಅವನು ಹೇಳಿದ. ಯಮುನಕ್ಕ ನನಗೆ, “ಬೇಕಾದರೆ ಹೋಗು” ಎಂದರು. “ನಾನು ಹೋಗೋದಿಲ್ಲ” ಎಂದೆ; ಯಮುನಕ್ಕನ ಕೈಹಿಡಿದು ಕೂತೆ. ಮತ್ತೆ ಹೊರಗಿದ್ದವರು ಅಗಳಿ ಮುರಿಯುವ ಹಾಗೆ ಬಾಗಿಲನ್ನು ತಟ್ಟಿದರು. ಮತ್ತೆ ಎಲ್ಲ ನಿಶ್ಶಬ್ದವಾಯಿತು. ಕೊನೆಗೊಂದು ಧ್ವನಿ ಕೇಳಿಸಿತು : “ದೇವರನ್ನು ಮುಟ್ಟಿ ಮೈಲಿಗೆ ಮಾಡಬೇಡ. ದೇವಸ್ಥಾನಕ್ಕೆ ಬರಬೇಡ. ನಾಳೆಯೊ ನಾಡಿದ್ದೊ ಉಡುಪರು ಬರುತ್ತಾರೆ – ಅವರು ಬಂದ ಮೇಲೆ ವಿಚಾರವಾಗಲಿ...” ಜೀ, ಜೀ, ಬಿಕೊ ಎಂದು ಮತ್ತೆ ಮೌನ ಕವಿಯಿತು. ಕತ್ತಲೆಯಾಗಿ ತುಂಬ ಹೊತ್ತಾಗಿರಬೇಕು. ಕೂತಲ್ಲೆ ಎಷ್ಟು ಹೊತ್ತಿಗೆ ನನಗೆ ನಿದ್ದೆ ಬಂತೋ ತಿಳಿಯದು.

* * * * *

ಥಟ್ಟನೆ ಕಣ್ಣು ತೆರೆದು ನೋಡಿದಾಗ ನಾನು ಒಂದು ಹಾಸಿಗೆಯ ಮೇಲೆ ಮಲಗಿದ್ದೆ. ಮೈಮೇಲೆ ಹೊದಿಕೆ ಹೊದಿಸಿತ್ತು. ಕೈಗಳಿಂದ ತಡವಿದಾಗ ಪಕ್ಕದಲ್ಲಿ ಯಮುನಕ್ಕ ಇರಲಿಲ್ಲ. ಎದ್ದು ಭಯವಾಗಿ ಯಮುನಕ್ಕ ಎಂದು ಕರೆದೆ. ಹಿತ್ತಲಿಗೆ ಹೋಗಿ ನೋಡಿದೆ – ಇರಲಿಲ್ಲ. ಬಾವಿಕಟ್ಟೆಯ ಹತ್ತಿರ ನಿಂತು ಅಳಲು ಪ್ರಾರಂಭಿಸಿದೆ. ನನ್ನನ್ನು ಎತ್ತಿ ಹಾಸಿಗೆ ಮೇಲೆ ಮಲಗಿಸಿ ಯಮುನಕ್ಕ ಎಲ್ಲಿ ಹೋದರೆಂದು ಸಿಟ್ಟು ಬಂತು. ದೂರದಲ್ಲಿ ಒಂದು ಮನೆಯ ಚಾವಡಿಯ ಮೇಲೆ ಯಾರೋ ಲಾಟೀನಿನ ಸುತ್ತ ಕೂತು ಮಾತಾಡುತ್ತಿದ್ದರು. ಎಷ್ಟು ಹೊತ್ತೆಂದು ನನಗೆ ತಿಳಿಯಲಿಲ್ಲ. ಅರ್ಧ ರಾತ್ರೆಯೆ, ಬೆಳಗಾಗುತ್ತಿದೆಯೇ, ಇನ್ನೂ ಸಂಜೆ ಕಳೆದು ಪ್ರಾರಂಭವಾದ ರಾತ್ರೆಯೆ ? ಆಕಾಶವನ್ನು ನೋಡಿದೆ. ಬರೀ ನಕ್ಷತ್ರಗಳು. ಜಪ ಮಾಡದೆ ಬಹಳ ದಿನಗಳಾದ್ದರಿಂದ ತಿಥಿ, ವಾರ, ನಕ್ಷತ್ರ ಏನೂ ನನಗೆ ಗೊತ್ತಿರಲಿಲ್ಲ. ಅಮಾವಸ್ಯೆಯ ರಾತ್ರೆಯೆಂದು ನನಗೆ ಭಯವಾಯಿತು. ಬ್ರಹ್ಮರಾಕ್ಷಸನ ನೆನಪಾಯಿತು. ಹಾಳು ಯಮುನಕ್ಕ ಎಲ್ಲಿ ಸತ್ತರು ಎಂದು ಶಪಿಸಿಕೊಂಡೆ. ನನ್ನನ್ನು ಕೈಬಿಟ್ಟು ಹೋದರಲ್ಲ – ಎಂದು ಅತ್ತು ಅತ್ತು ಸಾಕಾಗಿ ಬಾವಿಕಟ್ಟೆಗೊರಗಿ

ನಿಂತೆ. ಹಿತ್ತಲಲ್ಲಿ ದೂರದಿಂದ ಅಮ್ಮ ಎನ್ನುವ ಶಬ್ದ ಕೇಳಿ ಬೆಚ್ಚಿದೆ ; ಅಮ್ಮ ಅಮ್ಮ ಎಂದು ಜೋರಿನಿಂದ ಕೂಗಿದ ಹಾಗಾಯಿತು. 'ಯಾರು' ಎಂದೆ. "ನಾನಯ್ಯ ಕಟೀರ. ನನಗೆ ಇವತ್ತು ಕೂಳಿಲ್ಲವ ?" ಎಂದು ಬೇಲಿಯ ಹತ್ತಿರದಿಂದ ಶಬ್ದ ಬಂತು. "ಏ ಕಟೀರ ಬಾರೊ ಇಲ್ಲಿ" ಎಂದೆ. "ಅಲ್ಲಿ ನಾನು ಬರುವ ಹಾಗಿಲ್ಲಯ್ಯ" ಎಂದ. ನಾನೇ ಅವನ ಹತ್ತಿರ ಹೋಗಿ, 'ಅಮ್ಮ ಮನೇಲಿಲ್ಲ ನನ್ನ ಜೊತೆ ಬಾ' ಎಂದೆ. ನನಗೆ ಕೂಡಲೆ, ಯಮುನಕ್ಕ ಹೊಳೆ ಬದಿಯ ಹಾಳು ಅಗ್ರಹಾರಕ್ಕೆ ಮತ್ತೆ ಹೋಗಿದ್ದಾರೆ, ಅಲ್ಲಿಗೆ ಅವರೆಲ್ಲ ಮತ್ತೆ ಬಂದಿರುತ್ತಾರೆ ಎಂದು ದುಃಖವಾಯಿತು.

ಕಟೀರ ನನಗಿಂತ ಸ್ವಲ್ಪ ಮುಂತಾಗಿ ನಡೆದ. ನನಗೆ ಕಾಡಿನಲ್ಲಿ ಕತ್ತಲಿನಲ್ಲಿ ನಿಶ್ಶಬ್ದವಾಗಿ ನಡೆಯೋದು ಭಯವಾದ್ದರಿಂದ ಗಟ್ಟಿಯಾಗಿ ಕಟೀರನ ಹತ್ತಿರ ಸಾಯಂಕಾಲ ನಡೆದದ್ದನ್ನೆಲ್ಲ ಹೇಳತೊಡಗಿದೆ. ಆದರೆ ನಾನು ಹೇಳಿದ್ದು ಏನೂ ಅವನಿಗೆ ಅರ್ಥವಾದ ಹಾಗೆ ಕಾಣಲಿಲ್ಲ. ಸುಮ್ಮನೆ, ಹೂಗುಡದೆ, ಮುಂದೆ ನಡೆದ. ಕೆರೆಯ ಹತ್ತಿರ ಬಂದೆವು. ಅಲ್ಲಿ ಒಂದಷ್ಟು ಜನ ಅವನ ಜಾತಿಯ ಹೊಲೆಯರು ಕೈಯಲ್ಲಿ ದೊಂದಿ ಹಿಡಿದು ಮೀನು ಹಿಡಿಯುತ್ತಿದ್ದರು. ಅವರ ಕೈಯಿಂದ ಕೇಳಿ ಒಂದು ದೊಂದಿಯನ್ನು ಇಸಿದುಕೊಂಡು, "ಇಲ್ಲೊಂದು ಒಳದಾರಿಯಿದೆಯಯ್ಯ ಬನ್ನಿ" ಎಂದು, ಕುರುಚಲು – ಗಿಡಗಳು ಒತ್ತಾಗಿ ಬೆಳೆದಿದ್ದ ದಾರಿಯಲ್ಲಿ ಕರೆದುಕೊಂಡು ಹೋದ. ಸ್ವಲ್ಪ ದೂರ ನಡೆದ ಮೇಲೆ ನನಗೆ ಭಯ ಹೆಚ್ಚಾಯಿತು. ಕಟೀರ ತನ್ನಷ್ಟಕ್ಕೆ ಹಾಡಿಕೊಳ್ಳಲು ತೊಡಗಿದ. ಅವನು ತುಂಬ ಮುಂದಾಗಿ ನಡೆಯುತ್ತಿದ್ದುದರಿಂದ ನನಗೆ ಹಾದಿ ಕಾಣಿಸುತ್ತಿರಲಿಲ್ಲ. ಮೊಟ್ಟಿನಲ್ಲಿ ಬಗ್ಗಿ ಕೆಲವು ಕಡೆ ತೆವಳುತ್ತ ನಡೆಯಬೇಕಾಯಿತು. ಕಟೀರ ಬಗ್ಗಿ ತೆವಳುವಾಗಲೆಲ್ಲ ಹುಷ್ ಹುಷ್ ಎನ್ನುತ್ತಿದ್ದ. ಆಗ ಸರ ಸರ ಸರ ಎಂದು ಮೊಟ್ಟಿನ ಸಂದಿಗಳಿಂದ ಏನೇನೋ ಓಡಿ ಹೋಗುತ್ತಿದ್ದುವು. "ಹಿಂದಕ್ಕೆ ಹೋಗೋಣ ಕಟೀರ" ಎಂದೆ. ಅಳಲು ಪ್ರಾರಂಭಿಸಿದೆ. "ಇಕೊ ಬಂದುಬಿಟ್ಟಿತು" ಎಂದು ಅವನು ಹೇಳಿದ. ನಾವು ಸ್ವಲ್ಪ ಬಯಲಾದ ಜಾಗದಲ್ಲಿ ಬಂದು ನಿಂತಿದ್ದೆವು. "ಕಟೀರ ನನ್ನ ಕೈ ಹಿಡಕೊ" ಎಂದೆ. "ಅದು ಹೇಗೆ ಆಗ್ತದಯ್ಯ? ನಾನು ಹೊಲೆಯನಲ್ಲವ ?" ಎಂದು ಇನ್ನಷ್ಟು ದೂರ ಹೋಗಿ ದೊಂದಿ ಹಿಡಿದು ನಿಂತ. ಕೌಪೀನ ಮಾತ್ರ ಹಾಕಿದ ಅವನ ಕಪ್ಪಾದ, ಉದ್ದಗೆ ನೀಳವಾದ ಬೆತ್ತಲೆಯ ದೇಹವನ್ನು ದೊಂದಿಯ ಬೆಳಕಿನಲ್ಲಿ ಕಂಡು ನನಗೆ ಹೆದರಿಕೆಯಾಯಿತು. ಕೆದರಿದ ಕೂದಲಿನ ಸ್ವರೂಪ ಪಂಜುರ್ಲಿಯನ್ನು ನೆನಪಿಗೆ ತಂದಿತು. "ಕಟೀರ, ಕಟೀರ,



ನೀನು ಕಟೀರನಲ್ಲವ" ಎಂದೆ. "ಹೌದಯ್ಯ" ಎಂದ. ನಾನು ಓಡಿ ಹೋಗಿ ಅವನನ್ನು ಮುಟ್ಟಲು ಪ್ರಯತ್ನಿಸಿದೆ. ಅವನು ದೊಂದಿಯನ್ನು ಕೆಳಗೆ ಹಾಕಿ ಓಡಿದ. ನಾನು ದೊಂದಿಯನ್ನು ಎತ್ತಿಕೊಂಡು ಅಳಲು ಪ್ರಾರಂಭಿಸಿದೆ. ಅವನು ಹಿಂದಿನಿಂದ ಬಂದು "ನೀವು ಮುಂದೆ ನಡೆಯಿರಿ" ಎಂದ. ದೊಂದಿಯ ಬೆಳಕಿನ ಸಣ್ಣ ವೃತ್ತದಲ್ಲಿ ನಿಂತ ನನಗೆ ಕಾಡಿನ ಎಲ್ಲ ಮೂಲೆಗಳಿಂದಲೂ ಏನೇನೋ ಪ್ರಾಣಿಗಳು, ನೆರಳುಗಳಂತಹ ದೆವ್ವಗಳು ಮೆತ್ತಗೆ ಕದ್ದು ನನ್ನ ಕಡೆಗೇ ಕೈಗಳನ್ನು ಚಾಚಿ ಬರುತ್ತಿವೆ ಎನ್ನಿಸಿತು. ಕಾಲನ್ನು ಇಟ್ಟಲ್ಲೆಲ್ಲ ಹಾವು ಇದೆ ಎನ್ನಿಸಿತು. ಮೃತ್ಯುಂಜಯ ಜಪ ಮಾಡುತ್ತ ಮುಂದೆ ನಡೆದೆ. ಇದ್ದಕ್ಕಿದ್ದಂತೆ ನನಗೆ ಭಯವೆಲ್ಲ ಮಾಯವಾಯಿತು. ಈ ಕತ್ತಲೆ ಕಳೆದ ಮೇಲೆ ಬೆಳಕಾಗಿ ಸುತ್ತಲು ಇರುವುದೆಲ್ಲ ಮರಗಳು, ಮೊಟ್ಟುಗಳು ಎಂದು ಗೊತ್ತಾಗುತ್ತದೆ, ನಾನು ಯಾಕೆ ಹೆದರಬೇಕು ಎನ್ನಿಸಿತು. ಯಮುನಕ್ಕನನ್ನು ಉಳಿಸುವುದರ ಭಾರ ನನ್ನ ಮೇಲಿದೆ, ಈಗ ನಾನು ಚಿಕ್ಕ ಮಾಣಿಯಲ್ಲ, ಉಪನಯನದಲ್ಲಿ ಗಾಯತ್ರಿಯ ಉಪದೇಶವಾದ್ದರಿಂದ ಈಗ ನಾನು ದೊಡ್ಡವನು ಎಂದು ಧೈರ್ಯ ಬಂತು. ಕಟೀರ ತನ್ನ ಪಾಡಿಗೆ ಹಾಡಿಕೊಳ್ಳುತ್ತ ನನ್ನನ್ನು ಹಿಂಬಾಲಿಸಿದ.

ಹುತ್ತವಿದ್ದಲ್ಲಿಗೆ ಬಂದು ನೋಡಿದರೆ ಅಲ್ಲಿ ಯಮುನಕ್ಕ ಒಬ್ಬರೇ ಇದ್ದರು. ಹುತ್ತಕ್ಕೆ ಮೈಯನ್ನು ಆತುಕೊಂಡಿದ್ದರು. ಅವರ ಒಂದು ಕೈ ಹುತ್ತದೊಳಗಿತ್ತು. ನೋಡಿದ ಕೂಡಲೆ ನನಗೆ ಭಯವಾಗಲಿಲ್ಲ. ಇನ್ನೇನು ಮಾಡೋದು, ಯಮುನಕ್ಕ ಸತ್ತುಹೋಗಿಬಿಟ್ಟಿದ್ದಾರೆ ಎನ್ನಿಸಿತು. ಮತ್ತೊಂದು ಕ್ಷಣದಲ್ಲಿ ಮೈಯೆಲ್ಲ ನಡುಗ ತೊಡಗಿತು. "ಕಟೀರ ಯಮುನಕ್ಕನನ್ನು ಎಬ್ಬಿಸೋ" ಎಂದು ಕೂಗಿದೆ. ಕಟೀರ ನಿಂತಲ್ಲಿಂದ ಕದಲಲಿಲ್ಲ. ನನಗೆ ಆ ಹುತ್ತದ ಒಳಗೆ ಗಾಯವಾಗಿ ಸೇರಿದ ಹಾವಿನ ನೆನಪಾಯಿತು. ಹಾವಿಗೆ ಹನ್ನೆರಡು ವರ್ಷ ರಚ್ಚೆರುತ್ತದೆ ಎಂದು ಅಮ್ಮ ಹೇಳುತ್ತಿದ್ದುದು ನೆನೆದು ಗಾಬರಿಯಾಯಿತು. ದೊಂದಿಯನ್ನು ಬೀಸುತ್ತ ನನ್ನ ಕಾಲು ಬುಡದಲ್ಲೆಲ್ಲ ನೋಡಿಕೊಂಡೆ. ಒಂದು ಉದ್ದ ಕೋಲಿನಿಂದ ಯಮುನಕ್ಕನನ್ನು ಚುಚ್ಚಿದೆ. ಅವರು ಎದ್ದು ನಿಂತು ಹೋಗು ಹೋಗು ಎಂದರು. ನಾನು, "ಹೋಗಲ್ಲ – ನನ್ನ ಜೊತೆ ಬನ್ನಿ" ಎಂದೆ. ಅವರು ಮಾತಾಡದೆ ಎದ್ದು ನಮ್ಮ ಜೊತೆ ಬಂದರು. ಕಟೀರ ಒಂದೂ ಮಾತಾಡದೆ ಅಗ್ರಹಾರದ ತನಕ ಬಂದು ನಮ್ಮನ್ನು ಮನೆಗೆ ಮುಟ್ಟಿಸಿ, ಯಾವುದೊ ಹಾಡನ್ನು ಗೊಣಗಿಕೊಳ್ಳುತ್ತ ಹೊರಟು ಹೋದ.

ಮತ್ತೆ ಮನೆಗೆ ಬಂದ ಮೇಲೆ ಯಮುನಕ್ಕ ಕತ್ತಲೆಯಲ್ಲಿ ಮಾತಾಡದೆ ಸ್ವಲ್ಪ ಹೊತ್ತು ಕೂತರು. "ನನ್ನನ್ನು ಯಾಕೆ ಸಾಯಲು ಬಿಡಲಿಲ್ಲ" ಎಂದು

ಬೈದರು. ನಾನು ಸುಮ್ಮನೆ ಕೂತೆ. "ನಿದ್ದೆ ಬರ್ತಿದೆ ಮಲಗಿಕೊಳ್ಳೋಣ ಬನ್ನಿ" ಎಂದೆ. "ಎಲ್ಲಿಗೊ ನಾನು ಹೋಗಬೇಕು" ಎಂದರು. ನನಗೆ ಸಿಟ್ಟು ಬಂದು ಅಳಲು ಪ್ರಾರಂಭಿಸಿದೆ. "ನೀನೂ ನನ್ನ ಜೊತೆ ಬಾ" ಎಂದರು. ನಾನು ಬರಲ್ಲ ಎಂದೆ. "ನನ್ನನ್ನು ಅಮ್ಮನ ಹತ್ತಿರ ಕಳಿಸಿಕೊಡಿ" ಎಂದೆ. "ಅಷ್ಟು ದೂರವಿಲ್ಲ. ನನ್ನ ಜೊತೆ ಬಾ" ಎಂದರು. "ಅಯ್ಯೊ ನನಗೆ ಕೂಡಲ್ಲ. ಕಾಲು ನೋಯುತ್ತಿದೆ" ಎಂದೆ. ನನ್ನನ್ನು ತಬ್ಬಿಕೊಂಡು ತೆಂಗಿನ ಎಣ್ಣೆಯನ್ನು ಕಾಲಿಗೆ ಹಚ್ಚಿ ಒತ್ತಿದರು. ಆಮೇಲೆ "ನೀನು ಮಲಗಿಕೊ" ಎಂದು ಒಬ್ಬರೇ ಹೊರಗೆ ಹೊರಟರು. ನನಗೆ ಒಬ್ಬನೆ ಇರಲು ಭಯವಾಗಿ ಅವರ ಜೊತೆ ಹೊರಟೆ.

ಕದ್ದಿಂಗಳಿನ ರಾತ್ರೆಯಲ್ಲಿ ಅಗ್ರಹಾರ ಹಾಳು ಸುರಿಯುತ್ತಿತ್ತು. ನರಹುಳವೂ ಕಾಣಿಸುತ್ತಿರಲಿಲ್ಲ. ಇಬ್ಬರೇ ನಡೆದುಕೊಂಡು ಹೊರಟೆವು. ಯಾವುದೋ ಕಬ್ಬಿನ ಗದ್ದೆ ಹೊಕ್ಕ ನರಿ ಕೂಗಿದ್ದು ಕೇಳಿಸಿತು. ನಾನು ನಡುಗಿದೆ. ಯಮುನಕ್ಕ ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡರು.

"ಆ ಹಾಳು ಬಿದ್ದ ಅಗ್ರಹಾರಕ್ಕಾದರೆ ನಾನು ಬರಲ್ಲ" ಎಂದು ಅತ್ತೆ. "ಅಲ್ಲಿಗಲ್ಲ. ನಿನ್ನಾಣೆ ಅಲ್ಲಿಗಲ್ಲ" ಎಂದರು. ಮತ್ತೆಲ್ಲಿಗೆ ಎಂದು ಕೇಳಿದೆ. "ಅದೊಬ್ಬನ ಮನೆಗೆ. ನಾನು ನೀನು ಅಲ್ಲಿಗೆ ಹೋಗಿದ್ದೆವೂಂತ ನೀನು ಯಾರಿಗೂ ಹೇಳಕೂಡದು. ನಾಳೆ ನನ್ನ ಅಪ್ಪಯ್ಯ ಬಂದು ಕೇಳಿದರೆ ಏನೂ ಗೊತ್ತಿಲ್ಲ ಅಂತ ಸುಮ್ಮನಿದ್ದುಬಿಡು" ಎಂದರು. ನಾನು ಹೂ ಎಂದೆ.

ತುಂಬ ದೂರ ಗಾಡಿ–ದಾರಿಯಲ್ಲಿ ನಡೆದು ಆಮೇಲೊಂದು ಸೀಳು–ದಾರಿಯನ್ನು ಹಿಡಿದು, ಒಂದು ದಿಬ್ಬವನ್ನು ಹತ್ತಿ ಇಳಿದು, ಗದ್ದೆಯ ಅಂಚಲ್ಲಿ ಅಷ್ಟು ದೂರ ನಡೆದು ಕೊನೆಗೊಂದು ಮನೆಯನ್ನು ತಲುಪಿದೆವು.

ಆ ಮನೆಯಲ್ಲಿ ಇನ್ನೂ ದೀಪ ಉರಿಯುತ್ತಿತ್ತು. ಸೈಕಲ್ಲಿನ ಮೇಲೆ ಬಂದು ಹೋಗುತ್ತಿದ್ದ ಸ್ಕೂಲಿನ ಮೇಷ್ಟ್ರು ಅಲ್ಲಿದ್ದ. ಅವನು ಮತ್ತೆ ಯಮುನಕ್ಕನ ಹೆಗಲಿನ ಮೇಲೆ ಕೈಹಾಕುತ್ತಾನೆಂದು ನನಗೆ ದಿಗಿಲಾಯಿತು. ಅವನು ಯಮುನಕ್ಕನನ್ನು ಕ್ರೂರವಾಗಿ ನೋಡಿ ಹೇಳಿದ :

"ಯಾಕೆ ಇಷ್ಟೊತ್ತು ? ಎಷ್ಟು ಹೊತ್ತೂಂತ ನಾನು ಕಾದಿರಬೇಕು ? ಕತ್ತಲಾದ ಕೂಡಲೇ ಬಾ ಅಂತ ಹೇಳಿರಲಿಲ್ಲವ ?"

ಯಮುನಕ್ಕ ಮಾತಾಡಲಿಲ್ಲ. "ಏ ಪರ್ಬು" ಎಂದು ಕೂಗಿ ಅವನು ಯಮುನಕ್ಕನನ್ನು ಒಳಗೆ ಕರೆದುಕೊಂಡು ಹೋದ. ನಾನು ಹೊರಗೇ ಕೂತೆ.

ಅದು ಬ್ರಾಹ್ಮಣರ ಮನೆಗೆ ಹಾಗೆ ಕಾಣದ್ದರಿಂದ ನನಗೆ ಹೇಸಿಗೆಯಾಯಿತು.



ಅದೇ ಮೊದಲಿನ ಸಾರಿ ನಾನು ಅಂತಹ ಮನೆಯಲ್ಲಿ ಹೋಗಿ ಕೂತಿದ್ದು. ಸ್ನಾನವಾದ ಮೇಲೆ ನಾನು ಶೂದ್ರರ ಹುಡುಗರ ಜೊತೆ ಮಾತನ್ನು ಸಹಾ ಆಡುತ್ತಿರಲಿಲ್ಲ. ನನಗೆ ಅಲ್ಲಿ ಕೂತಿರೋದಕ್ಕೆ ಒಂದು ಥರಾ ಗಾಬರಿಯಾಯಿತು. ಅಂಗಳದಲ್ಲಿ ಕೋಳಿ–ಗೂಡಿತ್ತು. ಮತ್ತೆ ಮನೆಯ ಎದುರಿಗೇ ಸ್ನಾನದ ಹಂಡೆಯಿತ್ತು. ಜಗುಲಿಯ ಮೇಲೆ ನಿಂತು ಪರ್ಬು ಪಿಚಕ್ಕನೆ ಉಗುಳಿ ಹೋದ. ಅಲ್ಲಿ ಜುಟ್ಟು ಕಟ್ಟಿಕೊಂಡು ಅಂಗವಸ್ತ್ರ ಹೊದ್ದು ಅಂಗವಸ್ತ್ರ ಉಟ್ಟು ಕೂತಿದ್ದ ನನಗೆ, ಇಲ್ಲಿಗೆ ಯಾಕೆ ಬಂದೆ, ನಾನು ಎಲ್ಲಿ ಇದ್ದೇನೆ ಎಂದು ದುಃಖವಾಯಿತು. ಈ ಯಮುನಕ್ಕನ ದೆಸೆಯಿಂದ ಇಷ್ಟೆಲ್ಲ – ಅಪ್ಪಯ್ಯ ಬರಲಿ, ಹೇಳಿ ಮಾಡಿಸುತ್ತೇನೆ ಎಂದು ಸಿಟ್ಟು ಬಂತು. ಯಾರೋ ಅಂಗಳದಲ್ಲಿ ನಿಂತು ಪರ್ಬುಗಳೇ ಎಂದು ಕೂಗಿದ. ಆಮೇಲೆ ಚಾವಡಿಗೆ ಹತ್ತಿರ ಬಂದು 'ಓ ಇದೇನು ಭಟ್ಟರು ಇಲ್ಲಿ' ಎಂದ. ಮತ್ತೆ ಒಳಗಿನಿಂದ ದೀಪ ಹಿಡಿದು ಬಂದ ಪರ್ಬುವನ್ನು ನಾನು ಗುರ್ತಿಸಿದೆ. ಮೊದಲನೆಯ ಸಾರಿ ಮೋಟು – ಗೋಡೆಯ ಬಿರುಕಿನಿಂದ ಅವನನ್ನು ಕಂಡಿದ್ದೆ. ದೊಡ್ಡ ಮೀಸೆಯ ದೊಡ್ಡಗೆ ಬೆಳೆದ ಮನುಷ್ಯ. ಬರಿ ಚೆಡ್ಡಿಯೊಂದನ್ನು ಹಾಕಿಕೊಂಡು ಬರಿ ಮೈಯಲ್ಲಿ ಇದ್ದ. ಕತ್ತಿನ ಸುತ್ತ ಏನೋ ಕಟ್ಟಿಕೊಂಡಿದ್ದ. ಪರ್ಬು ಚಾವಡಿಯ ಮೇಲಿದ್ದ ಒಂದು ದೊಡ್ಡ ಮಡಿಕೆಯಿಂದ ಹುಳಿ ವಾಸನೆ ಬರುವುದೊಂದನ್ನು ಬಗ್ಗಿಸಿ ಅಂಗಳದಲ್ಲಿ ನಿಂತವನಿಗೆ ಕೊಟ್ಟ. ಒಳಗಿನಿಂದ ಒಂದು ಹೆಂಗಸು ಎಲೆಯ ಚೂರಿನ ಮೇಲೆ ಕೆಟ್ಟ ವಾಸನೆ ಬರುತ್ತಿದ್ದ ಒಂದು ವಸ್ತುವನ್ನು ತಂದು ಕೊಟ್ಟಳು. ಕುಡುಮಲ್ಲಿಗೆ ಪೇಟೆಗೆ ಕನ್ನಡಾ ಜಿಲ್ಲೆಯಿಂದ ಗಾಡಿಗಳಲ್ಲಿ ಬರುತ್ತಿದ್ದ ಈ ಹೇಸು ವಾಸನೆಯ ವಸ್ತು ಮೀನಿರಬಹುದು, ಬಂಗಡೆ ಮೀನು ಎಂದು ಅಸಹ್ಯಪಟ್ಟೆ. ಅಂಗಳದಲ್ಲಿ ಅವನು ತಿನ್ನುತ್ತ ಕುಡಿಯುತ್ತ ಕೂತ. ಹಾಡಿಕೊಳ್ಳುತ್ತ ಅಂಗಳದಲ್ಲೆಲ್ಲ ವಾಲಾಡಿದ. ಕೂಡಲೆ ನನಗೆ ಪರ್ಬು ಅವನಿಗೆ ಬಗ್ಗಿಸಿ ಕೊಟ್ಟಿದ್ದು ಹೆಂಡವೆಂದು ತಿಳಿಯಿತು. ಅಂಗಳದಲ್ಲಿ ಕುಡಿದುಬಿಟ್ಟವ ನನ್ನ ಮೇಲೆಲ್ಲಿ ಬಂದು ಎರಗುತ್ತಾನೊ ಎಂದು ದಿಗಿಲಾಯಿತು. ಅವನು "ಭಟ್ಟರೇ, ಏ ಭಟ್ಟರೇ, ಪೂಜೆ–ಭಟ್ಟರೇ" ಎಂದು ಹಿ ಹಿ ಹಿ ಎಂದು ನಕ್ಕ. ನಾನು ಎದ್ದು ನಿಂತೆ. ಒಳಗೆ ಓಡಿ ಹೋದೆ.

ಅಲ್ಲಿ ಯಮುನಕ್ಕನನ್ನು ಬೆತ್ತಲೆಯಾಗಿ ಮಲಗಿಸಿದ್ದರು. ಉಚ್ಚೆ ಹೊಯ್ಯುವ ಜಾಗವನ್ನು ಮಾತ್ರ ಮುಚ್ಚಿದ್ದರು. ಹೊಟ್ಟೆಯ ಮೇಲೆ ಸಗಣಿಯನ್ನು ಮೆತ್ತಿ ಮೇಲೊಂದು ಹಣತೆಯಲ್ಲಿ ದೀಪವನ್ನು ಇಟ್ಟಿದ್ದರು. ನಾನು ನೋಡುತ್ತ ನಿಂತಂತೆ ಪರ್ಬು ಒಂದು ಬೋಗಣಿಯನ್ನು ಅದರ ಮೇಲೆ ನಿಧಾನಕ್ಕೆ ಮುಚ್ಚಿ, "ಹಾಗೇ ಬಿಡಿ, ಎಳೆದುಕೊಳ್ಳಲಿ" ಎಂದ. ಯಮುನಕ್ಕನ ಸುತ್ತ ಪರ್ಬು, ಮತ್ತು ಒಂದು

ಹೆಂಗಸು, ಮತ್ತು ಅವನು ಇದ್ದರು. ಕೈಗಳನ್ನು ಚಾಪೆಯ ಮೇಲೆ ಚೆಲ್ಲಿ, ಕಣ್ಣು ಮುಚ್ಚಿ ಅಂಗಾತನೆ ಮಲಗಿದ್ದ ಯಮುನಕ್ಕನನ್ನು ನೋಡಿ ನನಗೆ ಭಯವಾಯಿತು. ಅವರು ಬೆತ್ತಲೆಯಿದ್ದಿದ್ದರಿಂದ ನಾನು ಹೊದ್ದ ಅಂಗವಸ್ತ್ರವನ್ನು ಹತ್ತಿರ ಹೋಗಿ ಅವರ ಎದೆಯ ಮೇಲೆ ಹಾಕಿದೆ. ಪರ್ಬು ನನ್ನನ್ನು ದೂಡಿದ. ನಾನು ಅಳುತ್ತ ಹೇಳಿದೆ :

"ಯಮುನಕ್ಕ ಬನ್ನಿ. ಮನೆಗೆ ಹೋಗೋಣ ಬನ್ನಿ. ನಿದ್ದೆ ಮಾಡಬೇಕು... ನನಗೆ ಹೆದರಿಕೆ.... ಬನ್ನಿ."

ಯಮುನಕ್ಕ ಕಣ್ಣು ಬಿಡಲಿಲ್ಲ. 'ಅವನು' ನನ್ನನ್ನು ಎಳೆದುಕೊಂಡು ಹೋದ. ಆ ಹೆಂಗಸು ಕವಳ ತುಂಬಿದ ಬಾಯಲ್ಲಿ ಪರ್ಬುಗೆ ಏನೋ ಕೊಂಕಣಿಯಲ್ಲಿ ಹೇಳಿದಳು. ಮತ್ತೆ ಹೊರಗೆ ಹೋಗಿ ಉಗಿದು ಬಂದಳು. ಅವಳಿಗೆ ಹಣೆಯ ಮೇಲೆ ಕುಂಕುಮವಿರಲಿಲ್ಲ. ಆದರೆ ಕೆದರಿದ ಕೂದಲು ತಲೆಯ ತುಂಬ ಇತ್ತು.

ಪರ್ಬು 'ಅವನ'ನ್ನು ಹೊರಗೆ ಕರೆದುಕೊಂಡು ಹೋದ. ನಾನೂ ಹೊರಗೆ ಹೋದೆ. "ನಾನೆಲ್ಲ ಮಾಡ್ತೇನೆ. ಇನ್ನು ನೀವು ಹೋಗಿ" ಎಂದು ಪರ್ಬು ಹೇಳಿದ. 'ಅವನು' ಜೇಬಿನಿಂದ ಒಂದಷ್ಟು ದುಡ್ಡನ್ನು ತೆಗೆದು ಕೊಡುತ್ತ,

"ನಾನು ಈಗಲೇ ಕುಡುಮಲ್ಲಿಗೆಗೆ ಸೈಕಲ್ ಮೇಲೆ ಹೋಗಬೇಕು. ಅಲ್ಲಿಂದ ಮುಂದೆ ಬಸ್ ಹತ್ತಿ ಹೊರಟು ಹೋಗ್ತೇನೆ" ಎಂದು ಕಿವಿಯಲ್ಲಿ ಇನ್ನೇನೊ ಹೇಳಿದ. ಅವನು ಕುಡುಮಲ್ಲಿಗೆ ಎಂದ ಕೂಡಲೆ ನನಗೆ ನನ್ನ ಮನೆಯ ನೆನಪಾಗಿ ನನಗೂ ಅಲ್ಲಿಗೆ ಹೋಗಬೇಕೆಂದು ಅಳು ಬಂತು.

'ಅವನು' ಸೈಕಲ್ ಹಿಡಿದು ಹೊರಟವನು 'ಗುಟ್ಟಾಗಿರಲಿ, ಮತ್ತೆ' ಎಂದು ಪರ್ಬುವಿಗೆ ಹೇಳಿದ. 'ನಾನೂ ಬರುತ್ತೇನೆ' ಎಂದು ನಾನು ಕೂಗಿದೆ. 'ಅವನು' ನನ್ನ ಮಾತನ್ನು ಗಮನಿಸದೆ ಹೊರಟು ಹೋದ.

ಅಂಗಳದಲ್ಲಿ ಕುಡಿಯುತ್ತಿದ್ದವನು ಮತ್ತೆ ನಗಲು ಹಾಡಲು ಪ್ರಾರಂಭಿಸಿದ. ಒಳಗಿನಿಂದ ಯಮುನಕ್ಕ ನರಳುತ್ತಿದ್ದರು. 'ಆಹಾ ಭಟ್ಟರೇ' ಎಂದು ಕುಡಿದವನು ಕಿರುಚುತ್ತ ಹಾಡಿದ. ಪರ್ಬು ಅವನನ್ನು ಗದರಿಸಿ, ಅಳುತ್ತಿದ್ದ ನನಗೆ ಸುಮ್ಮನಿರು ಎಂದ. ಒಳಗೆ ನರಳುತ್ತಿದ್ದ ಯಮುನಕ್ಕನಿಗೆ "ಯಮುನಕ್ಕಾ ನಾನು ಹೋಗಬೇಕು" ಎಂದು ಕೂಗಿ ಹೇಳಿದೆ. ಪರ್ಬು ನನಗೆ ಗದರಿಸಿದ.

ಇನ್ನೊಂದು ಧ್ವನಿ ಅಂಗಳದಲ್ಲಿ ಕೇಳಿಸಿತು. ಆ ಧ್ವನಿ ಕಟೀರನದ್ದೆಂದು ಗೊತ್ತಾಗಿ ನನಗೆ ಜೀವ ಬಂದ ಹಾಗಾಯಿತು. "ಏ ಕಟೀರ" ಎಂದು ಕೂಗಿಕೊಂಡೆ. ಪರ್ಬು ಮತ್ತೆ ನನಗೆ ಗದರಿಸಿ ಹೊಡೆಯಲು ಬರುವವನಂತೆ ಕೈ ತೋರಿಸಿದ.



ನಾನು ಸುಮ್ಮನೇ ಕೂತೆ. ಆಮೇಲೆ ಸ್ವಲ್ಪ ಹೊತ್ತಿನ ಮೇಲೆ ಕಟೀರನೂ ಹಾಡಲು, ತನ್ನಷ್ಟಕ್ಕೆ ಗಟ್ಟಿಯಾಗಿ ಹರಟಿಕೊಳ್ಳಲು ಪ್ರಾರಂಭಿಸಿದ. 'ಏ ಕಟೀರ' ಎಂದು ಮತ್ತೆ ಕೂಗಿದೆ. ಕಟೀರ 'ಓ' ಎಂದು ಹತ್ತಿರ ಬಂದು, "ಎಲ್ಲಿ ಇನ್ನೊಂದಷ್ಟು ಹಾಕಿ" ಎಂದ. "ಏ ಕಟೀರ ನಾನು ಕಣೊ" ಎಂದು ಹೇಳಿದೆ. ಅವನು ಅದಕ್ಕೆ "ಯಾರೊ!" ಎನ್ನುತ್ತ ವಾಲಾಡಿಕೊಂಡು ತೂರಾಡಿಕೊಂಡು ಹೋದ. ಕಟೀರನೂ ಹೀಗೆ ಮಾಡಿದನೆಂದು ನನಗೆ ಕಸಿವಿಸಿಯಾಯಿತು. ಎಷ್ಟು ಕರೆದು ಹೇಳಿದರೂ ಅವನಿಗೆ ನನ್ನ ಗುರುತೇ ಸಿಗಲಿಲ್ಲ.

ಒಳಗಿನಿಂದ ಯಮುನಕ್ಕ ಅಯ್ಯೋ ಅಯ್ಯೋ ಅಯ್ಯೋ ಎಂದು ಕೂಗಿದರು. ಅಮ್ಮಾ ಎಂದು ಕೂಗಿದರು. ನಾನು ಹೊರಗಿನಿಂದ "ಯಮುನಕ್ಕಾ ಯಮುನಕ್ಕಾ, ಇಲ್ಲಿ ನಾನಿದ್ದೇನೆ, ಬನ್ನಿ, ಹೋಗೋಣ" ಎಂದು ಕಿರುಚುತ್ತ ಅತ್ತೆ. ಪರ್ಬು ಬಂದು, "ಮಲಗಿಕೊ – ಬೆಳಗ್ಗೆ ಎದ್ದು ಹೋದರೆ ಸರಿ" ಎಂದು ಒಂದು ಬಟ್ಟಲನ್ನು ತಂದು ನನ್ನ ಎದುರು ಇಟ್ಟು 'ಕುಡಿ' ಎಂದ. ನಾನು 'ಊಹೂ' ಎಂದೆ. "ಇದು ಹೆಂಡವಲ್ಲ – ಹಾಲು" ಎಂದು ಅವನು ನಕ್ಕ. ನಾನು ಒಪ್ಪಲಿಲ್ಲ. ಎಣ್ಣಿ ಎಣ್ಣಿ ಅಳುತ್ತ, ಕೂತೆ.

ಮತ್ತೆ ನನಗೆ ಎಚ್ಚರವಾದಾಗ ಬೆಳಗ್ಗೆ. ಎಷ್ಟು ಬೆಳಗ್ಗೆಯೊ, ನಾನೆಲ್ಲಿ ಇದ್ದೇನೊ, ಇಲ್ಲಿಗೆ ಹೇಗೆ ಬಂದೆನೊ – ಎಂದು ಗಾಬರಿಯಾಯಿತು. ನಡೆದದ್ದನ್ನೆಲ್ಲ ನೆನಸಿಕೊಳ್ಳಲು ಪ್ರಯತ್ನಿಸಿದೆ. ಯಾವತ್ತೊ ಉಪನಯನವಾದ ಮೇಲೆ ಕುಡುಮಲ್ಲಿಗೆಯಿಂದ ಒಂದು ಎತ್ತಿನ ಗಾಡಿಯಲ್ಲಿ ಅಮ್ಮ ಬೆಳ್ಳಂಬೆಳಗಿನ ಹೊತ್ತು... ಉಡುಪರ ಮನೆಗೆ ಮಂತ್ರ ಕಲಿಯಲೆಂದು ಕಳಿಸಿದ್ದು ಮಾತ್ರ ನೆನಪಿಗೆ ಬರುತ್ತಿತ್ತು. ಗಾಡಿಯಲ್ಲಿ ಹೊರಟವನು ಮತ್ತೆ ಇಲ್ಲಿಗೆ ಬಂದುಬಿಟ್ಟೆನೆ ಎಂದು ಅಳು ಬಂದಿತು. ಎಲ್ಲಿ ನೋಡಿದರೂ ಕೋಳಿಗಳು ಓಡಾಡುತ್ತಿದ್ದವು ; ಹೆಂಡದ ಹುಳಿ ವಾಸನೆ ಬರುತ್ತಿತ್ತು. ಕಣ್ಣುಜ್ಜಿಕೊಳ್ಳುತ್ತ ಚಾವಡಿಯ ಮೇಲೆ ಕೂತಿದ್ದ ನನ್ನ ಎದುರು ನನ್ನ ವಾರಿಗೆಯ ಒಬ್ಬ ಹುಡುಗನಿದ್ದ. ಅವನು ಕ್ರಾಪು ಬಿಡಿಸಿ, ಕೊಳಕಾದ ಅಂಗಿ ಚಡ್ಡಿಯನ್ನು ಹಾಕಿಕೊಂಡಿದ್ದ. ಅಂಗವಸ್ತ್ರವನ್ನು ಉಟ್ಟು, ಜುಟ್ಟು ಕಟ್ಟಿ ಕೂತಿದ್ದ ನನ್ನನ್ನು ಕಂಡು,

"ಭಟ್ಟ, ಭಟ್ಟ, ಕೋಳಿ ಸುಟ್ಟ – ನೆರಮನೆಗೆಲ್ಲ ನಾತ ಕೊಟ್ಟ." ಎಂದು ಗೇಲಿಮಾಡಿದ. ನಾನು ತಬ್ಬಿಬ್ಬಾಗಿ ಕೂತೆ.

ಹಿಂದಿನ ರಾತ್ರೆ ನಾನು ನೋಡಿದ ಹೆಂಗಸು ಅವನಿಗೆ ಕೊಂಕಣಿಯಲ್ಲಿ ಏನೋ ಹೇಳಿದಳು. ಆ ಹುಡುಗ ಅಂಗಳಕ್ಕಿಳಿದು ಒಂದು ಕೋಳಿಯನ್ನು

ಅಟ್ಟುತ್ತ ಓಡಿದ. ಕ್ಕೊ ಕ್ಕೊ ಕ್ಕೊ ಎನ್ನುತ್ತ ಕೋಳಿ ಸಂದಿ–ಮೂಲೆಗಳಲ್ಲಿ ಓಡುತ್ತ, ರೆಕ್ಕೆ ಬಡಿಯುತ್ತ ಅವನಿಂದ ತಪ್ಪಿಸಿಕೊಳ್ಳುತ್ತಿತ್ತು. ಕೊನೆಗೆ ವನು ಅದನ್ನು ಹಿಡಿದ ತಳಕಾ–ಪಳಕ ಎತ್ತಿಕೊಂಡ. ಆದರೂ ಅದು ಒದ್ದಾಡಿತು. ಕೊನೆಗೆ ತಲೆಯನ್ನು ಕೆಳಗೆ ಹಾಕಿ 'ಕೊಕ್ ಕೊಕ್' ಎನ್ನತೊಡಗಿತು. ಅದನ್ನು ಅವನು ಒಳಗೆ ತೆಗೆದುಕೊಂಡು ಹೋದ. ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಆ ಕೋಳಿ ಬಡಿದುಕೊಳ್ಳುವ, ಜೀವ ಹೋಗುವ ಹಾಗೆ ಕೂಗುತ್ತ ಒದ್ದಾಡುವ ಶಬ್ದ ಕೇಳಿಸಿತು. ಮತ್ತೆ ಎಲ್ಲ ನಿಶ್ಶಬ್ದವಾಯಿತು. ನಾನು ಗಡಗಡ ನಡುಗಿದೆ.

"ಯಮುನಕ್ಕ, ಯಮುನಕ್ಕ" ಎಂದು ಕೂಗುತ್ತ ಅತ್ತೆ. 'ಮನೆಗೆ ಹೋಗಬೇಕು' ಎಂದು ಒಂದೇ ಮಾತನ್ನು ಹೇಳುತ್ತ ಕೂತೆ.

ಯಮುನಕ್ಕ ಗೋಡೆಯನ್ನು ಹಿಡಿದು ತಡವುತ್ತ ಬಂದರು. ಅವರ ಮುಖ ಬಿಳಚಿಗೊಂಡಿತ್ತು. ನಾನು ಅವನ್ನು ಹೋಗಿ ತಬ್ಬಿಕೊಂಡೆ. ಅವರು ಅಳಲು ಪ್ರಾರಂಭಿಸಿದರು. ಪರ್ಬು ಅವರಿಗೆ,

"ಸ್ವಲ್ಪ ಹೊತ್ತು ಇದ್ದು ಸುಧಾರಿಸಿಕೊಂಡು ಹೋಗಿ" ಎಂದ. ಆದರೆ ಯಮುನಕ್ಕ "ಹೋಗೋಣ ಬಾ" ಎಂದು ನನ್ನ ಕೈಹಿಡಿದರು.

ಆ ಹೊತ್ತಿಗೆ ಸರಿಯಾಗಿ ಅಲ್ಲಿಗೊಬ್ಬ ಉದ್ದ ಅಂಗಿ ಹಾಕಿಕೊಂಡು ಗಡ್ಡಬಿಟ್ಟಿದ್ದ ಮನುಷ್ಯ ಬಂದ. ಅವನಿಗೆ ಪರ್ಬು ಏನೋ ಕೊಂಕಣಿಯಲ್ಲಿ ಹೇಳಿ ಒಳಗೆ ಕರೆದು ಕೊಂಡು ಹೋದ. ನಾವು ಮೆಲ್ಲಗೆ ಅಂಗಳಕ್ಕೆ ಇಳಿದೆವು. ಆ ಮನುಷ್ಯ ಒಳಗಿನಿಂದ ಏನೋ ಕೆಂಪನೆಯ ತುಂಡುಗಳನ್ನು ಎಲೆಯಲ್ಲಿ ಕಟ್ಟಿಕೊಂಡು ಹೊರಗೆ ಬಂದ. ಎಲೆಯಿಂದ ಹೊರಗೆ ಕಾಣಿಸುತ್ತಿದ್ದ ಕೆಂಪನೆಯ ತುಂಡುಗಳನ್ನು ನೋಡಿ ನನಗೆ ಮತ್ತು ಯಮುನಕ್ಕನಿಗೆ ವಾಂತಿ ಬರುವ ಹಾಗಾಯಿತು. ಇಬ್ಬರೂ ಮುಖವನ್ನು ತಿರುಗಿಸಿದೆವು.

ಹೊರಗೆ ಬಂದ ಅವನು ಯಮುನಕ್ಕನಿಗೆ "ಸ್ವಲ್ಪ ನಿಲ್ಲಿ" ಎಂದು ಹತ್ತಿರ ಬಂದ. ಬಿಡಿಸಿ ಬಿಡಿಸಿ ಮಾತಾಡಿದ :

"ಪಾಪಿಗಳನ್ನು ದೇವರು ರಕ್ಷಿಸುತ್ತಾನೆ. ನೀವು ಹೆದರುವುದು ಬೇಡ."

ಯಮುನಕ್ಕ ಹೆದರಿ ನಡೆಯತೊಡಗಿದರು. ಅವನು ನಮ್ಮ ಹಿಂದಕ್ಕೆ ಬಂದು ಹೇಳಿದ:

"ಭಯಪಡಬೇಡಿ. ನಿಮ್ಮ ಅಗ್ರಹಾರದ ಜನ ನಿಮ್ಮನ್ನು ದೂರ ಹಾಕುತ್ತಾರೆ. ಆದರೆ ನಮ್ಮ ಕರ್ತನನ್ನು ನೀವು ನಂಬಿದರೆ ಅವನು ನಿಮ್ಮನ್ನು ಕಾಪಾಡುತ್ತಾನೆ. ಇಗರ್ಜಿಗೆ ನನ್ನ ಜೊತೆ ಬನ್ನಿ. ಅಲ್ಲಿ ನಿಮಗೆ ರಕ್ಷಣೆ ಕೊಡುತ್ತೇನೆ."



ಯಮುನಕ್ಕ ಎಲ್ಲಿ ಅವನ ಜೊತೆಯೂ ಹೋಗಿಬಿಡುತ್ತಾರೊ ಎಂದು ನಾನು ಕಂಗಾಲಾದೆ. ಆದರೆ ಯಮುನಕ್ಕ ಗಡ್ಡದವನನ್ನು ಭಯದಿಂದ ನೋಡಿ, ತಲೆತುಂಬ ಸೆರಗು ಹೊದ್ದು ಮಾತಾಡದೆ ನನ್ನ ಜೊತೆ ನಡೆದರು. ಅವನು ಮತ್ತೆ ಹೇಳಿದ :

"ನಿಮ್ಮ ಕಲ್ಲಿನ ದೇವರಿಗೆ ಕಲ್ಲಿನ ಹೃದಯ. ಆದರೆ ನಮ್ಮ ದೇವರು ಏಸುವನ್ನು ನಂಬಿದವರನ್ನು ಕಾಪಾಡುತ್ತಾನೆ. ನಾನು ಹೇಳಿದ ಹಾಗೆ ಕೇಳಿ ಇಗರ್ಜಿಗೆ ಬನ್ನಿ."

ಯಮುನಕ್ಕ ಮತ್ತು ನಾನು ಅವಸರವಾಗಿ ನಡೆದುಬಿಟ್ಟೆವು. ಪರ್ಬು ಮತ್ತು ಅವನು ಕೊಂಕಣಿಯಲ್ಲಿ ಮಾತಾಡಿಕೊಳ್ಳುತ್ತಿದ್ದುದು ದೂರದಿಂದ ಕೇಳಿಸಿತು.

ನನಗೆ ತಿರುಗಿ ಮನೆಗೆ ಹೋಗುತ್ತಿದ್ದೇವೆಂದು ತುಂಬ ಸಂತೋಷವಾಗಿ ಹುಮ್ಮಸ್ಸು ಬಂದಿತು. ಯಮುನಕ್ಕ ಏದುತ್ತ ನರಳುತ್ತ ನಡೆದರು. ಅವರ ಮಾಸಿದ ಕೆಂಪು ಸೀರೆಯ ಮೇಲೆ ರಕ್ತ ಕಾಣಿಸಿಕೊಂಡಿತೆಂದು ನನಗೆ ಭಯವಾಯಿತು. "ಯಮುನಕ್ಕ ನಿಮ್ಮ ಹಿಂದೆ ಸೀರೆಯ ಮೇಲೆಲ್ಲ ರಕ್ತ" ಎಂದೆ. ಯಮುನಕ್ಕ ಕುಸಿದು ಕೂತುಬಿಟ್ಟರು. ನಾನು ಅವರ ಜೊತೆ ಕೂತು ಅವರನ್ನು ಹಿಡಿದುಕೊಂಡೆ. ಮುಚ್ಚಿದ್ದ ಕಣ್ಣನ್ನು ಅವರು ಬಿಟ್ಟರು.

"ಏಳಿ ಯಮುನಕ್ಕ ಮನೆಗೆ ಹೋಗೋಣ"

ಎಂದೆ. ಅವರು ನಿಟ್ಟುಸಿರಿಟ್ಟು,

"ನನಗೆ ಕೂಡುತ್ತಿಲ್ಲಪ್ಪ. ನೀನು ಹೋಗು"

ಎಂದರು.

"ಏಳಿ, ಏಳಿ. ಯಮುನಕ್ಕ"

ಎಂದು ಕೈ ಹಿಡಿದು ಎಲೆಯುತ್ತ ಚಂಡಿ ಮಾಡಿದೆ.

"ನನಗೆ ದಾಹವಾಗುತ್ತಿದೆಯಪ್ಪ. ಬರಲಾರೆ. ನೀನು ಹೋಗು"

ಎಂದರು. 'ನೀವು ಜೊತೆಗೆ ಬರದ ಹೊರ್ತು ನಾನು ಹೋಗೋದಿಲ್ಲ"

ಎಂದೆ.

"ಮನೆಗೆ ಇನ್ನೆಷ್ಟು ದೂರವಿದೆಯಪ್ಪ" ಎಂದರು. ನನಗೆ ದೂರದಿಂದ ಅಗ್ರಹಾರದ ಬ್ರಾಹ್ಮಣರ ಜೊತೆ ಶಾಸ್ತ್ರಿ, ರಂಗಣ್ಣ ಬರೋದು ಕಾಣಿಸಿತು.

"ಯಮುನಕ್ಕ – ಅವರೆಲ್ಲ ಬರುತ್ತಿದ್ದಾರೆ, ಯಮುನಕ್ಕ. ನಾವು ಪಕ್ಕನೆ ಹೋಗಿಬಿಡೋಣ ಯಮುನಕ್ಕ. ನಿಮ್ಮನ್ನು ನಮ್ಮ ಮನೆಗೆ ಕರಕೊಂಡು ಹೋಗ್ತೀನಿ ಯಮನಕ್ಕ."

ಎಂದೆ. ನನಗೆ ಅಳು ಬಂತು. ಯಮುನಕ್ಕ ಏಳಲಿಲ್ಲ. ನಿಧಾನವಾಗಿ ಉಸಿರು ಬಿಡುತ್ತ ಮಾತಾಡಿದರು :

"ಬಂದರೆ ಬರಲಿ ಪುಟ್ಟ. ನನಗೆ ಎದ್ದು ನಡೆಯಲು ಕೂಡೋದಿಲ್ಲ. ಯಾರು ಬೇಕಾದರೂ ಬಂದು ನೋಡಲಿ. ನಾನು ಇಲ್ಲೇ..."

ನಾನು ಯಮುನಕ್ಕನ ಮೈ ಅಲುಗಿಸುತ್ತ ಮಾತಾಡಿದೆ. 'ನನಗೆ ಹೋಗಬೇಕೆಂ'ದು ಹಠ ಮಾಡಿದೆ. ಯಮುನಕ್ಕ ನನ್ನನ್ನು ತಬ್ಬಿಕೊಂಡು ಬೆನ್ನಿನ ಮೇಲೆ ಕೈಯಾಡಿಸಿದರು.

ಅವರೆಲ್ಲ ಬಂದು ಸುತ್ತುಗಟ್ಟಿ ನಿಂತರು. ನನ್ನನ್ನು ಶಾಸ್ತ್ರಿ ಎಳೆದ. ನಾನು ಅವನಿಗೆ ಹೊಡೆದು, ಅವನ ಕೈಯನ್ನು ಬಲವಾಗಿ ಕಚ್ಚಿ ಅಳತೊಡಗಿದೆ. ಯಮುನಕ್ಕ, ಯಮುನಕ್ಕ ಎಂದೆ. ಯಮುನಕ್ಕ ಎತ್ತಲೋ ದೃಷ್ಟಿಯನ್ನು ಹರಿಸಿ ಯಾರ ಕಡೆಗೂ ನೋಡದೆ ಕೂತಿದ್ದರು. ಅವರ ಕಣ್ಣಿನ ತುಂಬ ನೀರು ತುಂಬಿ ಕೆನ್ನೆಯ ಮೇಲೆ ಹರಿಯುತ್ತಿತ್ತು.

* * * * *

ಅಪ್ಪಯ್ಯ ಬಂದು ನನ್ನನ್ನು ಕರೆದುಕೊಂಡು ಹೋದರೆಂದು ನನಗೆ ತುಂಬ ಖುಷಿಯಾಯಿತು. ಮನೆಗೆ ಹೋದ ಕೂಡಲೆ ನನಗೆ ಬೇರೆ ಜನಿವಾರ ಹಾಕಿಸಿ ಪಂಚಗವ್ಯ ಮಾಡಿಸಿ ಶುದ್ಧ ಮಾಡಿದರು. ಅಮ್ಮ ಕೇಳಿದ್ದಕ್ಕೆ ಅಲ್ಲಿ ನಡೆದದ್ದನ್ನೆಲ್ಲ ಹೇಳಿದೆ. "ಹಾಳು ಮುಂಡೆ ಯಾಕೆ ಬಸುರಿಯಾಗಬೇಕಿತ್ತು" ಎಂದು ಅಮ್ಮ ಹೇಳಿದಳು. ಅಮ್ಮ ಬಸುರಿಯಾಗಲ್ಲವೆ ; ಯಮುನಕ್ಕನೂ ಯಾಕೆ ಬಸುರಿಯಾಗಬಾರದು ; ಇಷ್ಟೆಲ್ಲ ಯಾಕೆ ಅವಾಂತರ ಎಂದು ನಾನು ಆಶ್ಚರ್ಯಪಟ್ಟೆ. ಸ್ವಲ್ಪ ದಿನಗಳಾದ ಮೇಲೆ ಯಮುನಕ್ಕನಿಗೆ ಜೀವವಿದ್ದಂತೆಯೆ ಉಡುಪರು ಶ್ರಾದ್ಧ ಮಾಡಿ ಜಾತಿಯಿಂದ ಹೊರಗೆ ಹಾಕಿದರೆಂದು ಸುದ್ದಿ ಬಂತು. ಅಪ್ಪಯ್ಯ ಅಮ್ಮ, 'ಉಡುಪರು ಎಷ್ಟು ಒಳ್ಳೆಯವರೆಂ'ದು ಹೊಗಳಿ, ಯಮುನಕ್ಕನನ್ನು 'ನೀತಿಗೆಟ್ಟವಳೆಂ'ದು ಬೈದರು. ಇನ್ನೊಂದು ದಿನ ಉಡುಪರಿಗೆ ಮದುವೆಯೆಂದು ನಮಗೆ ಅಕ್ಷತೆ ಬಂತು. ಅಪ್ಪಯ್ಯನಿಗಿಂತ ಮುದುಕರಾದ ಉಡುಪರು ಒಂದು ಪುಟ್ಟ ಹುಡುಗಿಯ ಜೊತೆ ಹಸೆಮಣೆಯ ಮೇಲೆ ಕೂತು ಆರತಿ ಎತ್ತಿಸಿಕೊಳ್ಳುತ್ತಾರೆಂದು ಯೋಚಿಸಿ ನಾನು 'ಥತ್' ಎಂದೆ. ಅಪ್ಪಯ್ಯ ನನಗೆ "ಯಾಕೊ" ಎಂದರು. ಇವಳು ನೀತಿಗೆಟ್ಟ ಮೇಲೆ ಉಡುಪರಿಗೆ ಸಂಸಾರ ನಡೆಯೋದು ಬೇಡವೆ, ಬೇಯಿಸಿ ಹಾಕಲೊಂದು ಜನ ಬೇಡವೆ, ಅಂತೂ ಕಾಲ ಕೆಟ್ಟಿತು – ಎಂದು ಅಮ್ಮ ಹೇಳಿದಳು.

೩೧–೩–೧೯೬೨.